
ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 3 ಮೇ 2026
ಸಂಪುಟ 16, ಸಂಚಿಕೆ 39, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಲೇಖಕ ಪ್ರಸೂನ್ ಜೋಶಿ ಪ್ರಸಾರ ಭಾರತಿ ಅಧ್ಯಕ್ಷ

೦೭

ಭಾರತದತ್ತ ಅನಿಲ ಹೊತ್ತ ಹಡಗು



೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ವಿಶಾಖೆ

ದಿನದ ಮಾತು

ಹಿಂದೆ ದೂಷಿಸಿ ಮುಂದೆ ಕಪಟದಿಂದ ಹುಸಿನಗೆ ಬೀರುವುದು ಕೆಟ್ಟದ್ದು.
▲ ನೀತಿಮಂಜರಿ

ನನ್ನ ಮುಂಜಿಯ ನಂತರದ ಪ್ರಕರಣಗಳು

ವಕ್ರದೃಷ್ಟಿ
• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ವಿನಯ್ ಕುಲಕರ್ಣಿ ಶಾಸಕ ಸ್ಥಾನ ರದ್ದು

• **ಬೆಂಗಳೂರು:** ಧಾರವಾಡದ ಬಿಜೆಪಿ ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್‌ಗೌಡ ಅವರ ಹತ್ಯೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅವರ ಶಾಸಕ ಸ್ಥಾನ ರದ್ದುಗೊಂಡಿದೆ. ಈ ಸಂಬಂಧ ಕರ್ನಾಟಕ ವಿಧಾನಸಭೆ ಶನಿವಾರ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಮಾಜಿ ಸಚಿವ ವಿನಯ್ ಕುಲಕರ್ಣಿ ಸದ್ಯ ಜೈಲಿನಲ್ಲಿದ್ದು, ಕೇಸ್‌ನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ. ➡ ಪುಟ ೪

ಮರು ಎಣಿಕೆ: ಟಿ.ಡಿ. ರಾಜೇಗೌಡ ಗೆಲುವು ಖಚಿತ!

• **ಚಿಕ್ಕಮಗಳೂರು:** ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣೆಯ ಅಂಚೆ ಮತಗಳ ಮರು ಎಣಿಕೆಯಲ್ಲೂ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರಿಗೆ ಗೆಲುವಾಗಿರುವುದು ಖಚಿತವಾಗಿದೆ. ಈ ಮೂಲಕ ಮೂರು ವರ್ಷಗಳ ಕಾನೂನು ಹೋರಾಟಕ್ಕೆ ತೆರೆಬಿದ್ದಂತಾಗಿದೆ.

• ಪುಟ ೪

ನಾಸಿಕ್ ಮತಾಂತರ ಪ್ರಕರಣ: ನಿದಾಗೆ ಇಲ್ಲ ಜಾಮೀನು

• ಪುಟ ೭

ಎಲ್‌ಪಿಜಿ ಅನಿಲ ದರ: ಕೇಂದ್ರ ಸರ್ಕಾರದ ಪಾತ್ರವಿಲ್ಲ: ಜೋಶಿ

• ಪುಟ ೫

ಕೃಷಿಯತ್ತ ಯುವಕರು ಮುಖ ಮಾಡಲಿ: ಸಿಎಂ

• ಪುಟ ೫

ಲಕ್ಕುಂಡಿಗೆ ರಾಷ್ಟ್ರಮಟ್ಟದ ಸ್ಥಾನ

• ಪುಟ ೫



ಅಲೆಗಳ ಮೇಲೆ ವಿಮಾನಯಾನ

• ಪುಟ ೭

ಸುದ್ದಿ ಸಮಗ್ರ

ಆಯೋಗದ ಸುತ್ತೋಲೆ ಸರಿ: ಕೋರ್ಟ್ | ಟಿಎಂಸಿ ಅರ್ಜಿ ತಿರಸ್ಕೃತ

ದೀದಿಗೆ ಸುಪ್ರೀಂ ಶಾಖ



> ನಿಯಮಾವಳಿಯ ಪ್ರಕಾರ ಚುನಾವಣಾ ಆಯೋಗಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಬಳಸುವ ಸಂಪೂರ್ಣ ಅಧಿಕಾರವಿದೆ. ಕೇಂದ್ರ ಸಿಬ್ಬಂದಿಯನ್ನೇ ನಿಯೋಜಿಸಿದರೂ ಅದನ್ನು ಕಾನೂನುಬಾಹಿರ ಎಂದು ಹೇಳಲು ಸಾಧ್ಯವಿಲ್ಲ.
> ■ ಸುಪ್ರೀಂಕೋರ್ಟ್

• **ಹೊಸದಿಲ್ಲಿ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ(ಪಿಎಸ್‌ಯು) ಸಿಬ್ಬಂದಿ ನಿಯೋಜಿಸುವ ಚುನಾವಣಾ ಆಯೋಗದ ನಿರ್ಧಾರಕ್ಕೆ



ಸುಪ್ರೀಂ ಕೋರ್ಟ್ ಶನಿವಾರ ಹಸ್ತಕ್ಷೇಪ ಮಾಡಲು ನಿರಾಕರಿಸಿದೆ. ಇದರಿಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಮುಖಭಂಗವಾಗಿದ್ದು, ತೃಣಮೂಲ ಕಾಂಗ್ರೆಸ್‌ಗೆ(ಟಿಎಂಸಿ) ದೊಡ್ಡ ಹಿನ್ನಡೆಯಾಗಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜಾಯ್ಮಲ್ಯ ಬಾಗ್ಚಿ ಅವರ ವಿಶೇಷ ದ್ವಿಸದಸ್ಯ ಪೀಠವು, ಮತ ಎಣಿಕೆಗೆ ಯಾರನ್ನು ನಿಯೋಜಿಸಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ ಎಂದು ಸ್ಪಷ್ಟಪಡಿಸಿತು. ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಿಬ್ಬಂದಿ ಎಂಬ ವ್ಯತ್ಯಾಸ ಇಲ್ಲದೆ, ಮತ ಎಣಿಕೆ ಕರ್ತವ್ಯ ನಿರ್ವಹಿಸುವ ಎಲ್ಲರೂ ಚುನಾವಣಾ ಆಯೋಗದ ನಿಯಂತ್ರಣದಲ್ಲಿರುತ್ತಾರೆ ಎಂದು ನ್ಯಾಯಪೀಠ ಹೇಳಿತು.

ಏ.13ರಂದು ಚುನಾವಣಾ ಆಯೋಗ ಹೊರಡಿಸಿದ್ದ ಸುತ್ತೋಲೆಯಲ್ಲಿ ಮತ ಎಣಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಿಬ್ಬಂದಿ ಬಳಸುವ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಈ ನಿರ್ಧಾರವನ್ನು ಟಿಎಂಸಿ ಪ್ರಶ್ನಿಸಿ ಕಲ್ಕತ್ತಾ ಹೈಕೋರ್ಟ್ ಮೊರೆಹೋಗಿತ್ತು. ➡ ಪುಟ ೪

ಶೇ.90 ಮತದಾನ



ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಮಗ್ರಾಹಾಟ್ ಪಶ್ಚಿಮ ಮತ್ತು ಡೈಮಂಡ್ ಹಾರ್ಬರ್ ವಿಧಾನಸಭಾ ಕ್ಷೇತ್ರಗಳ 15 ಮತಗಟ್ಟೆಗಳಲ್ಲಿ ನಡೆದ ಮರುಮತದಾನ ಶನಿವಾರ ಸಂಜೆ 6ಕ್ಕೆ ಅಂತ್ಯಗೊಂಡಿದ್ದು, ಸುಮಾರು ಶೇ.90 ಮತದಾನ ದಾಖಲಾಗಿದೆ.

15 ಮತಗಟ್ಟೆಗಳಲ್ಲಿ ಮರುಮತದಾನ

ಸಂಜೆ 5 ಗಂಟೆ ವೇಳೆಗೆ ಡೈಮಂಡ್ ಹಾರ್ಬರ್‌ನಲ್ಲಿ ಶೇ.87.60 ಹಾಗೂ ಮಗ್ರಾಹಾಟ್ ಪಶ್ಚಿಮದಲ್ಲಿ ಶೇ.86.11 ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಏ.29ರಂದು ನಡೆದ 2ನೇ ಹಂತದ ಮತದಾನದ ವೇಳೆ ಅಕ್ರಮಗಳ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಮರುಮತದಾನಕ್ಕೆ ಆದೇಶಿಸಿತ್ತು. ➡ ಪುಟ ೪

ಹೆಚ್ಚುವರಿ ವೀಕ್ಷಕರ ನೇಮಿಸಿದ ಇಸಿ

ಪಶ್ಚಿಮ ಬಂಗಾಳದಲ್ಲಿ ಮೇ 4ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಮುನ್ನ, ಚುನಾವಣಾ ಆಯೋಗವು ಹೆಚ್ಚುವರಿಯಾಗಿ 165 ಮತ ಎಣಿಕೆ ವೀಕ್ಷಕರು ಹಾಗೂ 77 ಪೊಲೀಸ್ ವೀಕ್ಷಕರನ್ನು ನಿಯೋಜಿಸಿದೆ. ಈಗಾಗಲೇ ಪ್ರತಿ ಕ್ಷೇತ್ರಕ್ಕೂ ನಿಯೋಜಿಸಲಾದ 294 ಮತ ಎಣಿಕೆ ವೀಕ್ಷಕರಿಗೆ ಇವರು ಸಹಕಾರ ನೀಡಲಿದ್ದಾರೆ. ➡ ಪುಟ ೪

ಮೇ 21ಕ್ಕೆ ಫಾಲ್ಟಾ ಕ್ಷೇತ್ರದಲ್ಲಿ ಮರುಮತದಾನ!

ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭೆ ಕ್ಷೇತ್ರದ ಎಲ್ಲಾ 285 ಮತಗಟ್ಟೆಗಳಲ್ಲಿ ಮೇ 21ರ ಬೆಳಗ್ಗೆ 7ರಿಂದ ಸಂಜೆ 6ರೊಳಗೆ ಮರುಮತದಾನ, ಮೇ 24ರಂದು ಮತ ಎಣಿಕೆ ನಡೆಸಬೇಕೆಂದು ಚುನಾವಣಾ ಆಯೋಗ ಶನಿವಾರ ಆದೇಶ ಹೊರಡಿಸಿದೆ. ಏ.29ರಂದು ಎರಡನೇ ಹಂತದ ಮತದಾನ ಸಂದರ್ಭ ಫಾಲ್ಟಾ ಕ್ಷೇತ್ರದ ಮತಗಟ್ಟೆಗಳಲ್ಲಿ ಹಲವೆಡೆ ಚುನಾವಣಾ ಅಪರಾಧಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಮರುಮತದಾನ ನಡೆಸಲು ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಟಿಎಂಸಿ-ಬಿಜೆಪಿ ನಡುವೆ ಘರ್ಷಣೆ

• ಪುಟ ೪

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚನೆ

ಅಧಿಕಾರಿಗಳಿಂದ ತಪ್ಪು ಮಾಹಿತಿ ಬೇಡ: ಸಿಎಂ

• **ಬೆಂಗಳೂರು:** ಪ್ರಸಕ್ತ ಬಜೆಟ್‌ನಲ್ಲಿನ ಘೋಷಣೆಗಳ ಪೈಕಿ ಕೇವಲ 5 ಘೋಷಣೆಗಳ ಬಗ್ಗೆ ಮಾತ್ರ ಸರ್ಕಾರಿ ಆದೇಶ ಮಾಡಲಾಗಿದೆ. ಮೇ ತಿಂಗಳೊಳಗಾಗಿ ಎಲ್ಲಾ ಸರ್ಕಾರಿ ಆದೇಶಗಳನ್ನು ಜಾರಿಗೊಳಿಸಿ, ಅನುಷ್ಠಾನ ಕಾರ್ಯ ಆರಂಭಿಸಬೇಕು ಇಲ್ಲದಿದ್ದರೆ ಆಯಾ ಕಾರ್ಯದರ್ಶಿಗಳೇ ಜವಾಬ್ದಾರರು ಎಂದು ಸಿಎಂ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ವಿಧಾನಸೌಧದ ಸಭಾಂಗಣದಲ್ಲಿ ಶನಿವಾರ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಜತೆಗೆ ಪ್ರಗತಿ ಪರಿಶೀಲನಾ ಸಭೆ



ನಡೆಸಿದ ಸಿಎಂ ಸಿದ್ದರಾಮಯ್ಯ ಅವರು, ಅಧಿಕಾರಿಗಳಿಗೆ ಹಲವು ಸೂಚನೆ ನೀಡಿದರು.

ಅಧಿಕಾರಿಗಳು ಯಾವತ್ತೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಬಾರದು ಹಾಗೂ ತಪ್ಪು ಹಾದಿಗೆ ಎಳೆಯಬಾರದು. ನಮ್ಮ ನಿಲುವುಗಳು, ತೀರ್ಮಾನಗಳು ಯಾವತ್ತೂ ಜನಪರವಾಗಿರಬೇಕು. ಅಧಿಕಾರಿಗಳು 30-35 ವರ್ಷ ಕಾಲ ಆಡಳಿತ ವ್ಯವಸ್ಥೆಯಲ್ಲಿದ್ದರೆ, ಜನಪ್ರತಿನಿಧಿಗಳು ಕೇವಲ 5 ವರ್ಷ ಕಾಲ ಮಾತ್ರ ಇರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಾಗಿದೆ ಎಂದು ಕಿವಿಮಾತು ಹೇಳಿದರು.

ಬಜೆಟ್ ಘೋಷಣೆಗಳ ಜಾರಿ ಅಧಿಕಾರಿಗಳದ್ದು: ಬಜೆಟ್‌ನಲ್ಲಿನ ಘೋಷಣೆಗಳನ್ನು ಜಾರಿಗೊಳಿಸುವ ಕಾರ್ಯ ಅಧಿಕಾರಿಗಳದ್ದು. ➡ ಪುಟ ೪

> **ಅಧಿಕಾರಿಗಳು ರಾಜಕಾರಣಿಗಳ ಓಲೈಕೆ ಮಾಡಬಾರದು. ಇದು ಸರ್ವಾಧಿಕಾರಕ್ಕೆ ಹಾದಿ ಮಾಡುತ್ತದೆ. ಅಧಿಕಾರಿಗಳು ಕಾನೂನಿನ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಿ. ಸಚಿವರಿಗೆ ಕಾನೂನಿನ ವ್ಯಾಪ್ತಿಯೊಳಗೆ ಸಲಹೆಗಳನ್ನು ನೀಡಿ. ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದು ಕಾರ್ಯದರ್ಶಿಗಳ ಕಾರ್ಯಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಸರ್ಕಾರಿ ಆದೇಶ ಅನುಷ್ಠಾನಗೊಳಿಸದಿದ್ದರೆ ಕಾರ್ಯದರ್ಶಿಗಳೇ ಹೊಣೆ



ಕುಡಿಯುವ ನೀರಿನ ಪರಿಸ್ಥಿತಿ ನಿಗಾ ವಹಿಸಿ

ಈ ವರ್ಷ ಮಳೆ ಶೇ.5ರಷ್ಟು ಮಳೆ ಕಡಿಮೆಯಾಗುವ ಸಾಧ್ಯತೆಯಿದ್ದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು




ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಸಿಇಒಗಳ ಜತೆ ಸಭೆ ನಡೆಸಬೇಕು. ತಮ್ಮ ಉಸ್ತುವಾರಿಯಲ್ಲಿನ ಜಿಲ್ಲೆಯ ಸಮಸ್ಯೆ ಬಗೆಹರಿಸುವುದು ಆಯಾ ಕಾರ್ಯದರ್ಶಿಗಳ ಜವಾಬ್ದಾರಿಯಾಗಿದೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗಬಾರದು.

ಅಭಿಮಾನೋತ್ಸವ ಸಿದ್ಧತೆ ಪರಿಶೀಲಿಸಿದ ಕೇಂದ್ರ ಸಚಿವ ಜೋಶಿ

ಬಿಜೆಪಿ ಬೆಳೆಯಲು ಬಿಎಸ್‌ವೈ ಕಾರಣ

• **ಚಿತ್ರದುರ್ಗ:** ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಹೆಮ್ಮರವಾಗಿ ಬೆಳೆದು ಅಧಿಕಾರ ಹಿಡಿಯುವಲ್ಲಿ ಬಿ.ಎಸ್. ಯಡಿಯೂರಪ್ಪನವರ ಪಾತ್ರ ಬಹಳ ದೊಡ್ಡದು ಎಂದು ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.



ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ಮೇ 9ರಂದು ನಡೆಸಲುದ್ದೇಶಿಸಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪೆಂಡಾಲ್ ನಿರ್ಮಾಣ ಕಾಮಗಾರಿ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ➡ ಪುಟ ೪



> **ದಕ್ಷಿಣ ಭಾರತದ ಯಾವ ರಾಜ್ಯದಲ್ಲೂ ಅಧಿಕಾರ ಬಾರದ, ಉತ್ತರ ಭಾರತದ, ವ್ಯಾಪಾರಿಗಳ, ಮೇಲ್ವರ್ಗದವರ ಪಕ್ಷವೆಂದು ಕರೆಯುತ್ತಿದ್ದ ವೇಳೆ ಯಡಿಯೂರಪ್ಪ ಅವರು ತಥಾಕಥಿತ ವರ್ಗಾತೀತ, ರೈತಪರ ಕಾಳಜಿಯೊಂದಿಗೆ ರಾಜ್ಯದಲ್ಲಿ ಆಡಳಿತ ನೀಡಿದ್ದಾರೆ.**
> ■ ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ವಿಪತ್ತು ನಿರ್ವಹಣಾ ಸನ್ನದ್ಧತೆ ಬಲಪಡಿಸಲು ಕೇಂದ್ರ ಕ್ರಮ

ತುರ್ತು ಎಚ್ಚರಿಕೆ ವ್ಯವಸ್ಥೆ ಪರೀಕ್ಷೆ

• **ಹೊಸದಿಲ್ಲಿ:** ದೇಶದ ವಿಪತ್ತು ನಿರ್ವಹಣಾ ಸನ್ನದ್ಧತೆಯನ್ನು ಬಲಪಡಿಸಲು ಮೊಬೈಲ್ ಆಧಾರಿತ ತುರ್ತು ಎಚ್ಚರಿಕೆ ವ್ಯವಸ್ಥೆಯ



ರಾಷ್ಟ್ರವ್ಯಾಪಿ ಪರೀಕ್ಷೆ ಆರಂಭಿಸಿರುವ ಕೇಂದ್ರ ಸರ್ಕಾರ, ದೇಶಾದ್ಯಂತ ಮೊಬೈಲ್ ಬಳಕೆದಾರರಿಗೆ ಪ್ರಾಯೋಗಿಕ ಸಂದೇಶಗಳನ್ನು ರವಾನಿಸುತ್ತಿದೆ.

ದೂರಸಂಪರ್ಕ ಇಲಾಖೆ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ವಿಪತ್ತುಪೀಡಿತ ಪ್ರದೇಶಗಳಲ್ಲಿ ನೈಜ-ಸಮಯದ ಎಚ್ಚರಿಕೆಗಳನ್ನು ನೀಡಲು ಈ ಪ್ರಯೋಗ ನಡೆಸುತ್ತಿವೆ. ಪ್ರಸ್ತುತ ಮೊಬೈಲ್‌ಗಳಿಗೆ ಬರುತ್ತಿರುವ ಸಂದೇಶಗಳು ಕೇವಲ ತಾಂತ್ರಿಕ ಪರೀಕ್ಷೆಯ ಭಾಗವಾಗಿದ್ದು, ಇವು ನೈಜ ಎಚ್ಚರಿಕೆಗಳಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 'ಸಚೇತ್' ಎಂಬ ಸಂಯೋಜಿತ ಎಚ್ಚರಿಕೆ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ➡ ಪುಟ ೪

ಹಿನ್ನೆಲೆ ಮತ್ತು ತಂತ್ರಜ್ಞಾನ

ಈ ವ್ಯವಸ್ಥೆಯನ್ನು ಔಪಚಾರಿಕವಾಗಿ ರಾಷ್ಟ್ರಕ್ಕೆ ಸಮರ್ಪಿಸುವ ಮೊದಲು ಅದರ ಕಾರ್ಯಕ್ಷಮತೆ ಮತ್ತು ವಿಶ್ವಾಸಾರ್ಹತೆ ಮೌಲ್ಯಮಾಪನ ಮಾಡಲು ಈ ರಾಷ್ಟ್ರವ್ಯಾಪಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸಿ-ಡಾಟ್ ಸಂಸ್ಥೆ, ಈ ಸೆಲ್ ಬ್ರಾಡ್‌ಕಾಸ್ಟ್ ಆಧಾರಿತ ತುರ್ತು ಎಚ್ಚರಿಕೆ ವ್ಯವಸ್ಥೆಯ ಸ್ವದೇಶಿ ಅಭಿವೃದ್ಧಿಯ ಜವಾಬ್ದಾರಿ ಹೊತ್ತಿದೆ. ಈ ಸಂದೇಶಗಳಿಗೆ ಪ್ರತಿಕ್ರಿಯೆ ನೀಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾಣಿಜ್ಯ ಸಿಲಿಂಡರ್ ದುಬಾರಿ ಜಿಎಸ್ಟಿ ಶೇ.5ಕ್ಕಿಳಿಸಲು ಮನವಿ

• **ಬೆಂಗಳೂರು:** ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಹೋಟೆಲ್ ಉದ್ಯಮಕ್ಕೆ ಬರ ಸಿಡಿಲಿನಂತಾಗಿದ್ದು, ಉದ್ಯಮ ರಕ್ಷಣೆಗೆ 19 ಕೆ.ಜಿ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು ತಕ್ಷಣ ಶೇ.18ರಿಂದ 5ಕ್ಕೆ ಇಳಿಸಲು ಕರ್ನಾಟಕ ರಾಜ್ಯ ಹೋಟೆಲ್ ಅಸೋಸಿಯೇಷನ್ (ಕೆಎಸ್‌ಎಚ್‌ಎ) ಅಧ್ಯಕ್ಷ ಜಿ.ಕೆ.ಶೆಟ್ಟಿ ಮನವಿ ಮಾಡಿದ್ದಾರೆ. ಈ ಕುರಿತು ಶನಿವಾರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವ ಅವರು, ಸರ್ಕಾರವು ತೈಲ ಮಾರಾಟ ಕಂಪನಿಗಳ ಮೂಲಕ ಕಳೆದ 60 ದಿನಗಳಲ್ಲಿ ಸಿಲಿಂಡರ್ ಬೆಲೆಯನ್ನು 1,308 ರೂ. ಹೆಚ್ಚಿಸಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಮಾಡಲಾದ ಅತಿ ದೊಡ್ಡ ಏರಿಕೆಯಾಗಿದೆ. ➡ ಪುಟ ೪

ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಹೋಟೆಲ್ಸ್ ಅಸೋಸಿಯೇಷನ್ ಪತ್ರ

ರಾಜ್ಯದ ಎಂಟು ಆಸ್ಪತ್ರೆಗಳ ರೋಗಿಗಳಿಗೆ ವಿತರಣೆ

ಇಸ್ಕಾನ್‌ನಿಂದ ಪೌಷ್ಟಿಕ ಆಹಾರ

▶ ನಂದಿನಿ ಎನ್.

• **ಬೆಂಗಳೂರು:** ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗಳಿಗೆ ಪೌಷ್ಟಿಕ ಆಹಾರ ಒದಗಿಸುವ ನಿಟ್ಟಿನಲ್ಲಿ ಇಸ್ಕಾನ್ ಸಂಸ್ಥೆ ರಿಯಾಯಿತಿ ದರದಲ್ಲಿ ಉಪಾಹಾರ ವಿತರಣಾ ಯೋಜನೆ ಜಾರಿಗೊಳಿಸಿದೆ.

ಕಳೆದ ಜನವರಿಯಿಂದ ಮಂಗಳೂರು ಮತ್ತು ಧಾರವಾಡ ಜಿಲ್ಲಾಸ್ಪತ್ರೆಗಳನ್ನು ಒಳಗೊಂಡಂತೆ ನಗರದ ಎಂಟು ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು 14.23 ಕೋಟಿ ರೂ. ವೆಚ್ಚದಲ್ಲಿ ಪಥ್ಯಾಹಾರ ಪದ್ಧತಿ ಅನ್ವಯ ಈ ಯೋಜನೆ ಆರಂಭಿಸಿದೆ.

ದಿಗಂತ ವಿಶೇಷ

ರೋಗಿಗಳಿಗೆ ಪೌಷ್ಟಿಕ ಹಾಗೂ ಶುದ್ಧ ಆಹಾರ ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಇಸ್ಕಾನ್ ಸಂಸ್ಥೆಗೆ 14,00,23,800 ರೂ. ವೆಚ್ಚದಲ್ಲಿ ಅನುದಾನ ಮಂಜೂರು ಮಾಡಿದೆ. ಈ ಯೋಜನೆಯಲ್ಲಿ ಎಂಟೂ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಅವರ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಪೌಷ್ಟಿಕ, ಆರೋಗ್ಯಕರ ಆಹಾರ ಒದಗಿಸುತ್ತಿದೆ. ➡ ಪುಟ ೪



ತಂಡ ನಿಯೋಜನೆ

ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಉಪಾಹಾರ ವಿತರಿಸುವ ವ್ಯವಸ್ಥೆ ಕಲ್ಪಿಸಲಾಗಿದ್ದು, ಯಾವುದೇ ತೊಂದರೆ ಆಗದಂತೆ ನಿರ್ವಹಣೆಗೆ ವಿಶೇಷ ತಂಡಗಳನ್ನು ನಿಯೋಜಿಸಲಾಗಿದೆ. ಈ ಯೋಜನೆ ಯಶಸ್ವಿಯಾದಲ್ಲಿ ರಾಜ್ಯದ ಮತ್ತಷ್ಟು ಸರ್ಕಾರಿ ಆಸ್ಪತ್ರೆಗಳಿಗೆ ವಿಸ್ತರಿಸುವ ಸಾಧ್ಯತೆಯಿದೆ.

ಇರಾನ್-ಅಮೆರಿಕ ಯುದ್ಧಕ್ಕೆ ಸನ್ನದ್ಧತೆ

• **ಟೆಹ್ರಾನ್:** ಯುದ್ಧ ಕೊನೆಗೊಳಿಸಲು ಇರಾನ್‌ನ ಹೊಸ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಹಿನ್ನೆಲೆಯಲ್ಲಿ ಅಮೆರಿಕ-ಇರಾನ್ ಕದನ ವಿರಾಮ ಬೂದಿಮುಚ್ಚಿದ ಕೆಂಡದಂತಾಗಿದ್ದು, ಯುದ್ಧ ಪುನರಾರಂಭ ಆಗುವುದು ಬಹುತೇಕ ಖಚಿತವಾಗಿದೆ. ಅಮೆರಿಕ-ಇರಾನ್ ನಡುವಿನ ಮೂರು ವಾರಗಳ ತಾತ್ಕಾಲಿಕ ಕದನ ವಿರಾಮ ಒಪ್ಪಂದವು ಮುಂದುವರಿಯುವ ಸಾಧ್ಯತೆಯಿಲ್ಲ. ಪಾಕಿಸ್ತಾನಿ ಮಧ್ಯವರ್ತಿಗಳ ಮೂಲಕ ಯುದ್ಧ ಕೊನೆಗೊಳಿಸಲು ಅಮೆರಿಕ ಅಧ್ಯಕ್ಷರಿಗೆ ಇರಾನ್ ಪ್ರಸ್ತಾವನೆ ಕಳುಹಿಸಿತ್ತು. ಇರಾನ್ ನಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬಯಸಿದೆ. ಆದರೆ ಇರಾನ್‌ನವರ ಪಸ್ತಾವದಲ್ಲಿ ನನಗೆ ಸಮಾಧಾನವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

• ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,65,000 (2,55,000) ಅಪರಂಜಿ ಚಿನ್ನ: 1,50,930 (1,50,380) ಆಭರಣ ಚಿನ್ನ: 1,38,350 (1,38,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.92

ಕಿರುಸುದ್ದಿ

ಶೇ.98.8ರಷ್ಟು ಅಂಕ

◆**ಕುಂದಗೋಳ:** ತಾಲೂಕಿನ ಕುಬಿಹಾಳ ಗ್ರಾಮದ ಎಸ್.ಯು.ಎಸ್. ಪ್ರೌಢಶಾಲೆಯ ವಿದ್ಯಾರ್ಥಿನಿ ವೈಷ್ಣವಿ ಜಗದೀಶ ಬಾಗಲ್ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.98.8 ಅಂಕಗಳನ್ನು ಪಡೆದಿದ್ದಾಳೆ. ಈ ಸಾಧನೆಗೆ ಶಾಲೆಯ ಶಿಕ್ಷಕ ವೃಂದ ಹಾಗೂ ಗ್ರಾಮಸ್ಥರು ಹರ್ಷವ್ಯಕ್ತಪಡಿಸಿದ್ದಾರೆ.



ರಂಗಚಂದ್ರ ಪ್ರಶಸ್ತಿ ಪ್ರದಾನ ನಾಳೆ

◆**ಧಾರವಾಡ:** ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಂಗಚಂದ್ರ ಪ್ರಶಸ್ತಿ ಪ್ರದಾನ ಮತ್ತು ರಂಗ ಸಂಭ್ರಮ ಸಮಾರಂಭ ಮೇ 3ರ ಬೆಳಗ್ಗೆ 10.30ಕ್ಕೆ ಆಲೂರು ವೆಂಕಟರಾವ್ ಭವನದಲ್ಲಿ ಜರುಗಲಿದೆ.

ಕಲಾವಿದರಾದ ಪ್ರಮೀಳಾ ಜಕ್ಕಣ್ಣವರ ಹಾಗೂ ಭೀಮಗೊಂಡ ಖಟಾವಿ ಅವರಿಗೆ 2026ನೇ ಸಾಲಿನ ರಂಗಚಂದ್ರ ಪ್ರಶಸ್ತಿ ನೀಡಿ ಗೌರವಿಸಲಿದೆ. ಅಖಿಲ ಭಾರತ ಶಿಕ್ಷಕರ ಫೆಡರೇಷನ್ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಕೀಲರಾದ ಪ್ರಕಾಶ ಉಡಕೇರಿ, ಪಿ.ಎಚ್.ನೀರಲಕೇರಿ, ಗಣ್ಯರಾದ ಡಾ.ಉದಯ ರಾಯ್ಕರ್, ಡಾ.ಸಂಗಮನಾಥ ಲೋಕಾಪುರ, ಡಾ.ವೀಣಾ ಬಿರಾದಾರ, ಕುಮಾರ ಬೆಕ್ಕೇರಿ ಭಾಗವಹಿಸಲಿದ್ದು, ಪ್ರತಿಷ್ಠಾನದ ಅಧ್ಯಕ್ಷ ಎಂ.ಎಸ್.ಫರಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಭಿಯಂತರ ಸುನೀಲ ಬಾಗೇವಾಡಿ, ನೌಕರರ ಸಂಘದ ಅಧ್ಯಕ್ಷ ಸಿದ್ದನಗೌಡರ ಪಾಲ್ಗೊಳ್ಳಲಿದ್ದು, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರಿಗೆ ಸನ್ಮಾನಿಸಿ ಗೌರವಿಸಲಿದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ ಎಂದು ಮಾರ್ತಾಂಡಪ್ಪ ಕತ್ತಿ ತಿಳಿಸಿದ್ದಾರೆ.

ಅವ್ಯವಹಾರ ಆಗಿಲ್ಲ: ವೀರಣ್ಣ

ಹುಬ್ಬಳ್ಳಿ: ಹಾವೇರಿ ಜಿಲ್ಲೆಯ ಹೊಸರಿತ್ತಿಯಲ್ಲಿನ ರಾಷ್ಟ್ರೀಯ ಶಿಕ್ಷಣ ಸಮಿತಿಯ ಜಾಗವನ್ನು ನಿಯಮಾವಳಿ ಪ್ರಕಾರ ಮತ್ತೊಮ್ಮೆ ಹರಾಜು ಹಾಕಲಾಗುವುದು ಎಂದು ಸಮಿತಿಯ ಕಾರ್ಯದರ್ಶಿ ವೀರಣ್ಣ ಚಕ್ಕಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೊಸರಿತ್ತಿಯಲ್ಲಿನ ಸಮಿತಿಯ ಒಟ್ಟು 12 ನಿವೇಶನಗಳನ್ನು ಸಮಿತಿಯ ಏಳು ಜನ ಮತ್ತು ಇತರ ಇಬ್ಬರು ಖರೀದಿಸಿದ್ದರು. ಅವರು ಸಹ ಈಗ ಹರಾಜು ಮಾಡಲು ಒಪ್ಪಿದ್ದಾರೆ. ಸಮಿತಿಯಿಂದ ಪದವಿ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಹುಬ್ಬಳ್ಳಿಯಲ್ಲಿನ ಸಮಿತಿಯ ಜಾಗವನ್ನು ಮಾರಾಟ ಮಾಡಲು ಉದ್ದೇಶಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಹೀಗಾಗಿ ಹೊಸರಿತ್ತಿಯ ಜಾಗವನ್ನು ಮಾರಾಟ ಮಾಡಿ, ಆ ಹಣದಲ್ಲಿ ಕಟ್ಟಡ ನಿರ್ಮಿಸಲಾಗಿದೆ ಎಂದರು. ಸಂಸ್ಥೆಯ ಆಸ್ತಿ ಮಾರಾಟ ಸಂಬಂಧ ದರ ನಿಗದಿ ಸಮಿತಿ ರಚಿಸಲಾಗಿತ್ತು. ಸಮಿತಿಯವರು ಚದರ ಅಡಿಗೆ 3 ಸಾವಿರ ದರ ನಿಗದಿಪಡಿಸಿದ್ದರು. ಆದರೆ ಜಾಗದ ದರ ಹೆಚ್ಚಿದ್ದು, ಸಂಸ್ಥೆಯ ಸದಸ್ಯರೇ ಕಡಿಮೆ ದರಕ್ಕೆ ಖರೀದಿಸಿದ್ದಾರೆ ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಿ, ಜಿಲ್ಲಾಧಿಕಾರಿಗೆ ಆಕ್ಷೇಪಣೆ ಸಲ್ಲಿಸಿದ್ದಾರೆ. ಆದರೆ ಜಾಗದ ಮಾರಾಟ ವಿಷಯದಲ್ಲಿ ಯಾವುದೇ ಅವ್ಯವಹಾರ ಆಗಿಲ್ಲ ಎಂದರು. ಜಾಗದ ಮಾರಾಟದಿಂದ 2.30 ಕೋಟಿ ಬಂದಿತ್ತು. ಅದರಲ್ಲಿ 91 ಲಕ್ಷವನ್ನು ಕಾಲೇಜು ಕಟ್ಟಡ ನಿರ್ಮಾಣಕ್ಕೆ ಬಳಸಲಾಗಿದೆ. ಅಲ್ಲದೆ, ಸಮಿತಿಯ ಪದವಿಪೂರ್ವ ಕಾಲೇಜು ಅಭಿವೃದ್ಧಿಗೆ 4 ಲಕ್ಷ, ಗಾಂಧಿ ಗ್ರಾಮೀಣ ಗುರುಕುಲ ವಸತಿ ಶಾಲೆ ಅಭಿವೃದ್ಧಿಗೆ 10 ಲಕ್ಷ ರೂ. ನೀಡಲಾಗಿದೆ. ಉಳಿದ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದ್ದು, ಅದರಿಂದ ಬಡ್ಡಿ ಸಹ ಬಂದಿದೆ ಎಂದರು. ಸಮಿತಿ ಅಧ್ಯಕ್ಷ ರಾಜೇಂದ್ರಪ್ರಸಾದ ಹಳ್ಳಿಕೇರಿ, ಉಪ ಕಾರ್ಯದರ್ಶಿ ಗಿರೀಶ ಅಂಕಲಕೋಟಿ, ಪ್ರಭಣ್ಣ ಗೌರಿಮನಿ, ಸೋಮನಾಥ ಮಹಾಜನಶೆಟ್ಟರ, ರಮೇಶ ಏಕಬೋಟೆ ಇದ್ದರು.

ವ್ಯಕ್ತಿ ನಾಪತ್ತೆ

◆**ಧಾರವಾಡ:** ಮನೆಯಿಂದ ಹೊರಗೆ ಹೋದ ವೃದ್ಧನೊಬ್ಬ ನಾಪತ್ತೆಯಾದ ಘಟನೆ ತಾಲೂಕಿನ ಕ್ಯಾರಕೊಪ್ಪ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಚನ್ನಪ್ಪ ಬಸಪ್ಪ ಪೂಜಾರ (76) ಎಂಬ ವ್ಯಕ್ತಿ ನಾಪತ್ತೆಯಾಗಿದ್ದು, 5 ಅಡಿ ಎತ್ತರ, ಕೋಲು ಮುಖ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಖಾಕಿ ಬಣ್ಣದ ಅಂಗಿ, ಬಿಳಿ ಬಣ್ಣದ ಲುಂಗಿ ಧರಿಸಿರುವ ಇವರು, ಕನ್ನಡ ಭಾಷೆ ಮಾತನಾಡುತ್ತಾರೆ. ಕಾಣೆಯಾದ ತಂದೆ ಹುಡುಕಿಕೊಡುವಂತೆ ಮಗ ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಈತನ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಗ್ರಾಮೀಣ ಪೊಲೀಸ್ ಠಾಣೆ (0836-2233215) ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ (2233201) ಇಲ್ಲಿಗೆ ತಿಳಿಸಬೇಕು ಎಂದು ಪೊಲೀಸರು ತಿಳಿಸಿದ್ದಾರೆ.





ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘ ಹಮ್ಮಿಕೊಂಡ ರಂಗ ತರಬೇತಿ ಶಿಬಿರವನ್ನು ಡಾ.ಶಿವಾನಂದ ಶೆಟ್ಟರ್ ಉದ್ಘಾಟಿಸಿದರು. ಶಿಬಿರದ ನಿರ್ದೇಶಕ ಲಕ್ಷ್ಮಣ ಪೀರಗಾರ, ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಇದ್ದರು. ಶಂಭಯ್ಯ ಹಿರೇಮಠ, ಸಂಗಡಿಗರು ಹಾಡುಗಾರಿಕೆ ಪ್ರಾತ್ಯಕ್ಷಿಕೆ ನೀಡಿದರು.

ರಂಗಭೂಮಿಗೆ ಸಂಘಟಿಕರ ಕೊರತೆ

◆**ಧಾರವಾಡ:** ರಂಗ ಸಂಘಟಿಕರ ಕೊರತೆಯಿಂದ ಇಂದು ಕಾಲೇಜುಗಳಲ್ಲಿ ರಂಗ ಚಟುವಟಿಕೆಗಳು ಕ್ಷೀಣಿಸುತ್ತಿವೆ ಎಂದು ಡಾ.ಶಿವಾನಂದ ಶೆಟ್ಟರ್ ಅಭಿಪ್ರಾಯವ್ಯಕ್ತಪಡಿಸಿದರು. ನಗರದ ಕರ್ನಾಟಕ ವಿದ್ಯಾವರ್ಧಕ ಸಂಘ ಹಮ್ಮಿಕೊಂಡ ರಂಗ ತರಬೇತಿ ಶಿಬಿರ ಉದ್ಘಾಟಿಸಿ, ರಂಗಭೂಮಿಗೆ ಇರುವ ಹಲವು ಆಯಾಮಗಳ ಕುರಿತು ತಿಳಿಸಬೇಕಿದೆ ಎಂದರು. ಕವಿಸಂ ಹಮ್ಮಿಕೊಂಡ ರಂಗ ಶಿಬಿರದಿಂದ ಧಾರವಾಡದ ಹಳೆಯ ದಿನಗಳು ಪುನಃ ಮರುಗಳಿಸಬೇಕು. ರಂಗಭೂಮಿ ಮತ್ತೊಮ್ಮೆ ವಿಜೃಂಭಿಸಬೇಕು ಎಂದು ಆಶಿಸಿದರು. ಅಧ್ಯಕ್ಷತೆ ವಹಿಸಿದ್ದ ಡಾ.ಬಾಳಣ್ಣ ಶೀಗಿಹಳ್ಳಿ, ಗಾಂಧೀಜಿ ಜೀವನ ಆರಂಭ ಆಗದ್ದೇ ಸತ್ಯಹರಿಶ್ಚಂದ್ರ ನಾಟಕದಿಂದ. ಈ ನಾಟಕ ಹಲವು ರೀತಿಯಲ್ಲಿ ಪ್ರೇರಣೆ ನೀಡಿತು ಎಂದರು. ಭಾಷೆ ಹುಟ್ಟದ ಕಾಲದಲ್ಲಿ ಸಂತೋಷ ಹಂಚಿಕೊಳ್ಳಲು ಅಭಿನಯ ಮತ್ತು ಸಂಜ್ಞಾ ಭಾಷೆ ರೂಢಿಸಿಕೊಂಡಿದ್ದರು. ಭಾಷೆ ಕಲಿತು, ರಂಗಭೂಮಿ ರೂಪಿಸಿಕೊಂಡಿದ್ದಾಗಿ ತಿಳಿಸಿದರು. ಕೇವಲ ಮಾತು ಹೇಳುವುದು ನಾಟಕ ಆಗುವುದಿಲ್ಲ, ಬದಲಿಗೆ ಭಾಷೆಗೆ ಅಭಿನಯ ಸೇರಿದಾಗ ಮಾತ್ರವೇ ನಾಟಕವಾಗಲಿದೆ. ಹವ್ಯಾಸ ರಂಗಭೂಮಿಗೆ ವಿಶಿಷ್ಟಯ ಶಕ್ತಿ ಇದೆ ಎಂದರು. ಮನುಷ್ಯನಿಗೆ ರಂಗಭೂಮಿ ಮಾತನಾಡುವ ಶಕ್ತಿ ಹಾಗೂ ಮನುಷ್ಯ ಕಲಿಸಲಿದೆ. ಬಿ.ವಿಕಾರಂತ ಮತ್ತು ಬಸಲಿಂಗಯ್ಯ ರಂಗಭೂಮಿಗೆ ಹೊಸ ದಿಕ್ಕು ತೋರಿಸಿದರು ಎಂದರು. ಶಿಬಿರದ ನಿರ್ದೇಶಕ ಲಕ್ಷ್ಮಣ ಪೀರಗಾರ, ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಇದ್ದರು. ಶಂಭಯ್ಯ ಹಿರೇಮಠ, ಸಂಗಡಿಗರು ಹಾಡುಗಾರಿಕೆ ಪ್ರಾತ್ಯಕ್ಷಿಕೆ ನೀಡಿದರು.



ಹುಬ್ಬಳ್ಳಿ: ನಗರದ ಗಣೇಶ ಪೇಟನಲ್ಲಿರುವ ಸ್ಮಾರ್ಟ್ ಸಿಟಿ ಯೋಜನೆಯಡಿ ಪುನರಭಿವೃದ್ಧಿ ಪಡಿಸಲಾದ ಮೀನು ಮಾರುಕಟ್ಟೆಗೆ ಶಾಸಕ ಪ್ರಸಾದ ಅಬ್ಬಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪಾಲಿಕೆ ಆಯುಕ್ತ ರುದ್ರೇಶ್ ಗಾಳಿ, ಅಧಿಕಾರಿಗಳಾದ ವಿಜಯಕುಮಾರ, ಮಾಲೀ ಪಾಟೀಲ್, ಪಾಲಿಕೆ ಸದಸ್ಯ ಇಲಿಯಾಸ್ ಮನಿಯಾರ, ಮುಖಂಡ ಆಶೀಫ್ ಬಳ್ಳಾರಿ, ನಾಸೀರ್ ಅಸುಂಡಿ ಇದ್ದರು.

ಪ್ರತ್ಯೇಕ ಪಾಲಿಕೆ ರಚನೆ ಬೇಡ | ಈರೇಶ ಅಂಚಟಗೇರಿ ಅಭಿಮತ

ಬೃಹತ್ ಪಾಲಿಕೆಯಿಂದ ವಿಕಾಸ



◆**ಧಾರವಾಡ:** ಭವಿಷ್ಯದಲ್ಲಿ ಧಾರವಾಡದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಹುಬ್ಬಳ್ಳಿ-ಧಾರವಾಡ ಬೃಹತ್ ಮಹಾನಗರ ಪಾಲಿಕೆ ರಚನೆ ನಿರ್ಣಯಕ್ಕೆ ಬದ್ಧ. ಧಾರವಾಡ ಪ್ರತ್ಯೇಕ ಪಾಲಿಕೆ ಅವಶ್ಯವಿಲ್ಲ ಎಂದು ಸಭಾನಾಯಕ ಈರೇಶ ಅಂಚಟಗೇರಿ ಸ್ಪಷ್ಟಪಡಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹು-ಧಾ ಬೃಹತ್ ಪಾಲಿಕೆಯಾದರೆ ಕೇಂದ್ರ-ರಾಜ್ಯ ಸರ್ಕಾರಗಳ ಮೆಗಾಸಿಟಿ ಯೋಜನೆಯಡಿ ಹೆಚ್ಚಿನ ಅನುದಾನ ಹರಿದು ಬರಲಿದೆ. ಇದು ಉಭಯ ನಗರಗಳ ಮೂಲಸೌಕರ್ಯ ವೃದ್ಧಿಗೆ ಸಹಕಾರಿ ಎಂದರು. ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಯಿಂದ ಕೇಂದ್ರ ಸರ್ಕಾರದ 16ನೇ ಹಣಕಾಸಿನಡಿ ಲಭಿಸುವ ರೂ.18 ಸಾವಿರ ಕೋಟಿ ಅನುದಾನ ಕೈತಪ್ಪಲಿದೆ. ಇದು ರಸ್ತೆ, ನೀರು ಮೂಲಭೂತ ಸೌಕರ್ಯ ಒದಗಿಸಲು ಅನುಕೂಲವಾಗಲಿದೆ. ಅವಳಿ ನಗರಗಳು ಒಂದೇ ಆಡಳಿತ ವ್ಯವಸ್ಥೆಯಡಿ ಇದ್ದಾಗ ಮಾತ್ರವೇ ಬೃಹತ್ ಕೈಗಾರಿಕೆಗಳು ಮತ್ತು ಐಟಿ ಕಂಪನಿಗಳನ್ನು ಕೂಡ ಆಕರ್ಷಿಸಲು ಸಾಧ್ಯ. ಪ್ರತ್ಯೇಕವಾದರೆ ನಗರದ ಪ್ರಭಾವ ಕುಗ್ಗುವ ಆತಂಕ ವ್ಯಕ್ತಪಡಿಸಿದರು. ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಯ ಹೋರಾಟಗಾರರ ಬೇಡಿಕೆಗೆ ಪ್ರತಿಕ್ರಿಯಿಸಿದ ಅವರು, ವಿಭಜನೆಯಿಂದ ಆಡಳಿತಾತ್ಮಕ ವೆಚ್ಚಗಳು ಹೆಚ್ಚಾಗುತ್ತವೆಯೇ ಹೊರತು ಜನಸಾಮಾನ್ಯರಿಗೆ ತಕ್ಷಣದ ಲಾಭ ಸಿಗುವುದು ಸಹ ಬಹಳ ಕಷ್ಟದ ಕೆಲಸ ಎಂದು ಹೇಳಿದರು. ಧಾರವಾಡಕ್ಕೆ ಅನ್ಯಾಯ ಆಗಲು ಬಿಟ್ಟಿಲ್ಲ. ಹೋರಾಟಗಾರರು ಸುಳ್ಳು ಹೇಳುತ್ತಿದ್ದಾರೆ ಎಂದ ಅಂಚಟಗೇರಿ, ಬೃಹತ್ ಪಾಲಿಕೆ ವ್ಯಾಪ್ತಿಯಲ್ಲಿ ಧಾರವಾಡಕ್ಕೆ ಹೆಚ್ಚಿನ ಆದ್ಯತೆ, ಸಮಾನ ಅನುದಾನ ಸಿಗುವಂತೆ ನೋಡಿಕೊಳ್ಳುವುದು ನನ್ನ ಗುರಿ ಎಂದರು. ಪಾಲಿಕೆಯ ಈ ನಿರ್ಣಯ ನಗರದ ಭವಿಷ್ಯದ ದೃಷ್ಟಿಯಿಂದ ಐತಿಹಾಸಿಕವಾಗಿದೆ. ಜನರಲ್ಲಿನ ಗೊಂದಲಗಳು ನಿವಾರಿಸಲು ಬೃಹತ್ ಪಾಲಿಕೆ ಪ್ರಯೋಜನೆ ಜನರಿಗೆ ತಿಳಿಸಲಿದೆ. ಈ ಕುರಿತಂತೆ ಹೋರಾಟಗಾರರ ಜೊತೆಗೆ ಚರ್ಚಿಸಲು ಸಿದ್ಧ ಎಂದು ಹೇಳಿದರು. ವಾರ್ಡ್‌ಗಳು ಸಮನವಾಗಿ ಹಂಚಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚಿಸುವಂತೆ ಈ ಹಿಂದೆ ನಿರ್ಣಯ ಕೈಗೊಂಡಿತ್ತು. 16ನೇ ಹಣಕಾಸು ಕೇಂದ್ರದ ಲಾಭ ಪಡೆಯಲು ಸಿದ್ದರಾಮಯ್ಯ ಅವರು ಮೈಸೂರು ಬೃಹತ್ ಮಹಾನಗರ ಪಾಲಿಕೆಯ ರಚನೆಗೆ ಮುಂದಾದರು. ಹುಬ್ಬಳ್ಳಿ ಪಾಲಿಕೆ ದೊಡ್ಡದು. ಧಾರವಾಡ ಪಾಲಿಕೆ ಸಣ್ಣದು ಮಾಡಿ ತರಾತುರಿಯಲ್ಲಿ ನೋಟಿಫಿಕೇಷನ್ ಹೊರಡಿಸಿ, ರಾಜ್ಯಪಾಲರ ಕಳಿಸುತ್ತು. ಅಲ್ಲದೇ ಪ್ರತ್ಯೇಕ ಪಾಲಿಕೆಯ ವ್ಯಾಪ್ತಿಗೆ ಸೇರಲು ಕೆಲ ಹಳ್ಳಿಗಳು ನಿರಾಕರಿಸಿದ ತಕರಾರು ಅರ್ಜಿಗಳು ಸಹ ರಾಜ್ಯಪಾಲರ ಬಳಿಯಲ್ಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹು-ಧಾ ಮಹಾನಗರ ಪಾಲಿಕೆಯ ಸದಸ್ಯ ಶಂಕರ ಶೇಳಕೆ, ಮಂಜುನಾಥ ಹಿರೇಮಠ, ಶ್ರೀನಿವಾಸ ಕೋಟ್ಯಾನ, ಸಮ್ಮೀರ ಜೋಶಿ, ಉದಯ ಯಂಡಿಗೇರಿ, ಶಕ್ತಿ ಹಿರೇಮಠ ಇದ್ದರು.

ಪಾಲಿಕೆ ವಿಚಾರದಲ್ಲಿ ಬಿಜೆಪಿ ದ್ರೋಹ: ಏಗನಗೌಡರ

◆**ಧಾರವಾಡ:** ಪ್ರತ್ಯೇಕ ಮಹಾನಗರ ಪಾಲಿಕೆ ವಿಚಾರದಲ್ಲಿ ಬಿಜೆಪಿಯ ನಾಯಕರು ದ್ವಂದ್ವ ನೀತಿ ಅನುಸರಿಸುವ ಮೂಲಕ ಧಾರವಾಡದ ಜನತೆಗೆ ದ್ರೋಹ ಬಗೆದಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಆರೋಪಿಸಿದ್ದಾರೆ.



ಪ್ರಕಟಣೆ ನೀಡಿದ ಅವರು, ಧಾರವಾಡ ಪ್ರತ್ಯೇಕ ಪಾಲಿಕೆ ದಶಕಗಳ ಕೂಗು. ಈ ವಿಷಯದಲ್ಲಿ ಶಾಸಕ ವಿನಯ ಕುಲಕರ್ಣಿ ಅವರ ನಿರಂತರ ಪ್ರಯತ್ನ ಮತ್ತು ಸರ್ಕಾರದ ಒತ್ತಡದಿಂದ ಪ್ರತ್ಯೇಕ ಪಾಲಿಕೆ ಪ್ರಸ್ತಾವನೆ ರಾಜ್ಯಪಾಲರಿಗೆ ತಲುಪಿತ್ತು ಎಂದಿದ್ದಾರೆ.

ಧಾರವಾಡ ಅಭಿವೃದ್ಧಿ ಸಹಿಸದ ಬಿಜೆಪಿ ನಾಯಕರು ರಾಜಕೀಯ ಪ್ರಭಾವ ಬಳಸಿ, ಅದನ್ನು ತಡೆ ಹಿಡಿದಿರುವುದು ಹಾಗೂ ಹಿಂದೆ ಪ್ರತ್ಯೇಕ ಪಾಲಿಕೆ ಮಾಡಿರುವುದು ನಾವೇ ಅಂತಲೂ ಬ್ಯಾನರ್ ಹಾಕಿಕೊಂಡಿರುವುದು ನಾಚಿಗೇಡಿನ ಸಂಗತಿ. ಅಂದು ಪ್ರಚಾರಕ್ಕೆ ಬ್ಯಾನರ್ ಹಾಕಿದ ಬಿಜೆಪಿಗರು ಇಂದು ಬೇಡಿಕೆ ಅನುಷ್ಠಾನಕ್ಕೆ ತರುತ್ತಿಲ್ಲ ಏಕೆ?

ಬಿಜೆಪಿ ನಾಯಕರಿಗೆ ಧಾರವಾಡ ಅಭಿವೃದ್ಧಿಗಿಂತ ರಾಜಕೀಯವೇ ಮುಖ್ಯವಾಗಿದೆ. ರಾಜ್ಯಪಾಲರ ಹಂತದಲ್ಲಿದ್ದ ಪ್ರಕ್ರಿಯೆಗೆ ಅಡ್ಡಗಾಲು ಹಾಕುವ ಮೂಲಕ ಧಾರವಾಡ ಅಸ್ಮಿತೆ ಹತ್ತಿಕ್ಕಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಆತ್ಮದ ಕನ್ನಡಿ ಬಿಂಬಿಸುವುದೇ ಅಧ್ಯಾತ್ಮ: ಶ್ರೀ

◆**ನವಲಗುಂದ:** ಮನುಷ್ಯ ತನ್ನನ್ನು ತಾನು ಅರಿತು ಬದುಕುವುದರೊಂದಿಗೆ ತನ್ನೊಳಗಿನ ಆತ್ಮದಲ್ಲಿರುವ ಕನ್ನಡಿಯನ್ನು ತೆರೆದುಕೊಳ್ಳುವುದೇ ಅಧ್ಯಾತ್ಮ ಎಂದು ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಅವರು ನಗರದ ಹಿರೇಮಠದ ನೂತನ ಪೀಠಾಧಿಕಾರಿಗಳ ಗುರು ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಆಯೋಜಿಸಲಾಗಿದ್ದ 11 ದಿನಗಳ ನಿತ್ಯ ಧಾರ್ಮಿಕ ಪ್ರವಚನ, ಧರ್ಮ ಜಾಗೃತ ಜಾಥಾ ಹಾಗೂ ಬೈಕ್ ರ‍್ಯಾಲಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂತರು, ಶರಣರು ನಡೆಸುವ ಪ್ರವಚನಗಳು ಮಾನವ ಕುಲ ಧರ್ಮದ ಹಾದಿಯಲ್ಲಿ ನಡೆಸುಂತಹ ಪ್ರೇರಣಾದಾಯಕವಾಗಿದೆ ಎಂದರು.

ಗುರು ಪಟ್ಟಾಧಿಕಾರ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿ, ಪಟ್ಟಣದಲ್ಲಿ 34 ವರ್ಷಗಳ ನಂತರ ಪಂಚಪೀಠಾಧ್ಯಕ್ಷರ ಸಮ್ಮುಖದಲ್ಲಿ ನೂತನ ಪೀಠಾಧಿಕಾರ ಮಹೋತ್ಸವ ನಿಮಿತ್ತ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಪಟ್ಟಣವೂ ಸೇರಿದಂತೆ ತಾಲೂಕಿನ ಭಕ್ತರು ಜಾತಿ, ಮತಗಳನ್ನೂ ಮೀರಿ ಬೃಹತ್ ಪ್ರಮಾಣದ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಿದ್ದು ಸೌಹಾರ್ದತೆಗೆ ಸಾಕ್ಷಿಯಾಗಿದೆ ಎಂದರು.

ಯುವ ಮುಖಂಡ ವಿನೋದ ಅಸೂಟಿ ಮಾತನಾಡಿ, ಮನುಕುಲವನ್ನು ಮುನ್ನಡೆಸಲು ಎಲ್ಲವನ್ನೂ ತ್ಯಾಗ ಮಾಡಿ ಸಮಾಜಕ್ಕಾಗಿ ಸನ್ಯಾಸ ಸ್ವೀಕಾರ ಮಾಡಿ ಸಮಾಜವನ್ನು ಧರ್ಮದ ದಾರಿಗೆ ಕೊಂಡೊಯ್ಯಲು ತಮ್ಮನ್ನು ಮುಡಿಪಾಗಿ ಇಟ್ಟುಕೊಂಡು ಸನ್ಮಾರ್ಗ ತೋರುವ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ನಡೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಗವಿಮಠದ ಬಸವಲಿಂಗ ಸ್ವಾಮೀಜಿ, ಶಿರಕೋಳ ಹಿರೇಮಠದ ಸಿದ್ಧರಾಮ ಸ್ವಾಮೀಜಿ, ತುಪ್ಪದಕುರಟ್ಟಿಯ ಡಾ.ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,, ಅಭಿನವ ಸಿದ್ಧಾರೂಢ ಸ್ವಾಮೀಜಿ, ಅಮ್ಮಿನಭಾವಿ ಹಿರೇಮಠದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ನರಗುಂದ ಹಿರೇಠದ ಸಿದ್ದಲಿಂಗ ಸ್ವಾಮೀಜಿ, ನಾಗಲಿಂಗ ಮಠದ ವೀರಯ್ಯ ಸ್ವಾಮೀಜಿ, ವೀರಬಸವದೇವರು ನೇತೃತ್ವ ವಹಿಸಿದ್ದರು. ವಿರೇಶ ಕೂಗುಮಠ, ಪಿ.ಜಿ.ಕೋನರಡ್ಡಿ, ಸಿದ್ದಲಿಂಗಯ್ಯ ಹಿರೇಮಠ, ಗಂಗಪ್ಪ ಹಳ್ಳದ, ಅದಾನಯ್ಯ ಹಿರೇಮಠ, ಬಿ.ಬಿ.ಗಂಗಾಧರಮಠ, ಶಿವಾಜಿ ಕಲಾಲ, ಅಂಜುಮನ್ ಅಧ್ಯಕ್ಷ ಅಲ್ಲಾಸಾಬ್ ಕಲಕುಟ್ರಿ ಇದ್ದರು. ಅಣ್ಣಪ್ಪ ಬಾಗಿ ಸ್ವಾಗತಿಸಿದರು. ಎ.ಬಿ.ಕೊಪ್ಪದ ಹಾಗೂ ಆರ್.ಎಸ್.ನೇಗಲಿ ನಿರೂಪಿಸಿದರು. ಇದಕ್ಕೂ ಮೊದಲು ಶ್ರೀಮಠದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಧರ್ಮ ಜಾಗೃತಿ ಜಾಥಾ ನಡೆಯಿತು. ಸಿದ್ದೇಶ್ವರ ಶಿವಾಚಾರ್ಯರನ್ನು ಸಾರೋಟದಲ್ಲಿ ಮೆರವಣಿಗೆ ನಡೆಸಲಾಯಿತು.



ಬುದ್ಧನ ಮಾರ್ಗಗಳು ಸಮಾಜಕ್ಕೆ ದಾರಿದೀಪ

◆**ಧಾರವಾಡ:** ಭಗವಾನ್ ಗೌತಮ ಬುದ್ಧ ಅವರು ಬೋಧಿಸಿದ ಅಹಿಂಸೆ, ಕರುಣೆ ಮತ್ತು ಸತ್ಯದ ಮಾರ್ಗಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ ಸನದಿ ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಭವನದಲ್ಲಿ ನಡೆದ ಭಗವಾನ್ ಗೌತಮ ಬುದ್ಧನ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ದೇಶದದಲ್ಲಿ ಶಾಂತಿ, ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಸಾರಿದ ಧರ್ಮ ಪ್ರಚಾರಕರಲ್ಲಿ ಗೌತಮ ಬುದ್ಧ ಪ್ರಮುಖರು. ಬುದ್ಧ, ಬಸವ ಮತ್ತು ಅಂಬೇಡ್ಕರ್ ಸಮಾನತೆ, ಶಿಕ್ಷಣ ಮತ್ತು ನ್ಯಾಯಕ್ಕಾಗಿ ಹೋರಾಡಿದ್ದಾರೆ ಎಂದರು.

ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಆದರ್ಶಗಳು ಯುವಜನತೆ ಪ್ರೇರಣೆ. ಉತ್ತಮ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶನವಾಗಿವೆ. ಇವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಮಾತನಾಡಿ, ಗೌತಮ ಬುದ್ಧರ ವಿಚಾರಗಳು ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯವಾಗಿದೆ. ಕರುಣೆ, ಪ್ರೀತಿ, ವಾತ್ಸಲ್ಯ ಹಾಗೂ ಅಹಿಂಸೆಯ ಅಂತಹ ಸಂದೇಶ ಹೊಂದಿದ ತತ್ವಗಳು ಜಗತ್ತಿಗೆ ನೀಡಿದ್ದಾರೆ ಎಂದರು. ಬುದ್ಧಿಷ್ಟ ಪಾಲಿ ಎಜ್ಯುಕೇಷನ್ ಮತ್ತು ರಿಸರ್ಚ್ ಟ್ರಸ್ಟ್ ಅಧ್ಯಕ್ಷ ಪಬ್ಬಜ್ಜೋರವಿತಿ ಪಾಲಿವಿಜ್ಞಾಮುನಿಯೋ ಮಾತನಾಡಿ, ಭಗವಾನ್ ಬುದ್ಧ ಅವರ ದಮ್ಮ ಸಂದೇಶ ಮಾನವ ಸಮಾಜದಲ್ಲಿ ಶಾಂತಿ, ಕರುಣೆ, ಸಹಬಾಳ್ವೆ ಮೌಲ್ಯವನ್ನು ಬಲಪಡಿಸಿದೆ ಎಂದರು.

ಗೌತಮ ಬುದ್ಧನ ಜೀವನ-ಸಾಧನೆ ಕುರಿತು ಕವಿವಿಯ ಇತಿಹಾಸದ ಪ್ರಾಧ್ಯಾಪಕ ಡಾ.ಶಿಲಾಧರ ಮುಗಳಿ ಉಪನ್ಯಾಸ ನೀಡಿದರು. ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಪ್ರಕಾಶ ಹಳಿಯಾಳ, ಮಾರುತಿ ಹೆಬ್ಬಳ್ಳಿ, ಲಕ್ಷ್ಮಣ ಬಕ್ಕಾಯಿ, ಸಿದ್ದರಾಮ ಹಿಪ್ಪರಗಿ ಇದ್ದರು. ಕಾರ್ಯಕ್ರಮಕ್ಕೂ ಮೊದಲು ವಿವಿಧ ಕಲಾ ತಂಡಗಳು, ಸಮೂಹ ನೃತ್ಯದೊಂದಿಗೆ ಭಗವಾನ್ ಗೌತಮ ಬುದ್ಧರ ಭಾವಚಿತ್ರದ ಭವ್ಯ ಮೆರವಣಿಗೆ ಕಲಾಭವನದಿಂದ ಪ್ರಾರಂಭವಾಗಿ, ಜ್ಯುಬ್ಲಿ ವೃತ್ತದ ಮೂಲಕ ಹಾಯ್ದು, ಆಲೂರು ವೆಂಕಟರಾವ್ ಭವನದಲ್ಲಿ ಮುಕ್ತಾಯಗೊಂಡಿತು.



ನಾರೀಶಕ್ತಿ ವಂದನ್ ಅಧಿನಿಯಮಕ್ಕೆ ಕಾಂಗ್ರೆಸ್ ದ್ರೋಹ: ವೆಂಕಟೇಶ್ ಕಾಟವೆ

◆**ಹುಬ್ಬಳ್ಳಿ:** ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುವುದು ಕೇವಲ ತೋರಿಕೆಗಾಗಿ ಎಂಬುದು ನಾರೀ ಶಕ್ತಿ ವಂದನ್ ಅಧಿನಿಯಮದ ವಿರುದ್ಧ ಅವರು ತೋರಿದ ನಿಲುವಿನಿಂದ ಸಾಬೀತಾಗಿದೆ ಎಂದು ಬಿಜೆಪಿ ಯುವ ಮುಖಂಡ ವೆಂಕಟೇಶ್ ಕಾಟವೆ ಆರೋಪಿಸಿದರು.



ದಶಕಗಳ ಕಾಲ ಮಹಿಳೆಯರನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಂಡ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು, ಇಂದು ಮಹಿಳೆಯರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಶೇ.33ರಷ್ಟು ರಾಜಕೀಯ ಮೀಸಲಾತಿ ನೀಡುವ ಐತಿಹಾಸಿಕ ಮಸೂದೆಯನ್ನು ಬೆಂಬಲಿಸುವ ಬದಲು ಅದರ ವಿರುದ್ಧ ನಿಂತಿರುವುದು ಅತ್ಯಂತ ಖಂಡನೀಯ. ವಿರೋಧ ಪಕ್ಷಗಳು ಮಸೂದೆಯ ವಿರುದ್ಧ ಮತ ಚಲಾಯಿಸುವ ಮೂಲಕ ತಾವು ಮಹಿಳಾ ವಿರೋಧಿಗಳು ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿವೆ. ಮಹಿಳೆಯರಿಗೆ ನಿಜವಾದ ಅಧಿಕಾರ ಸಿಗುವುದನ್ನು ಸಹಿಸದ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಈ ಧೋರಣೆಯು ಅವರ ಸಂಕುಚಿತ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಈ ಹಿಂದೆ ಇದೇ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಹಿಳಾ ಮೀಸಲಾತಿಯನ್ನು ಜಾರಿಗೆ ತರದೆ ಕಾಲಹರಣ ಮಾಡಿತ್ತು. ಈಗ ಅದನ್ನು ಜಾರಿಗೆ ತರಲು ಮುಂದಾದಾಗ ಕ್ಷುಲ್ಲಕ ಕಾರಣಗಳನ್ನು ನೀಡಿ ವಿರೋಧಿಸುತ್ತಿದೆ. ಸ್ತ್ರೀ ಶಕ್ತಿಯ ಗೌರವಕ್ಕಾಗಿ ತಂದ ಈ ಅಧಿನಿಯಮಕ್ಕೆ ಅಡ್ಡಿಪಡಿಸಿದ ಕಾಂಗ್ರೆಸ್ ಮತ್ತು ವಿಪಕ್ಷಗಳ ಈ ನಡೆಯು ಕೋಟ್ಯಂತರ ಮಹಿಳೆಯರ ಕನಸಿಗೆ ಮಾಡಿದ ದ್ರೋಹವಾಗಿದೆ. ನಾರೀ ಶಕ್ತಿಯ ಪ್ರಗತಿಗೆ ಕಂಟಕವಾಗಿರುವ ಇಂತಹ ಮಹಿಳಾ ವಿರೋಧಿ ರಾಜಕಾರಣಕ್ಕೆ ದೇಶದ ಮಹಿಳೆಯರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸುವುದು ಖಚಿತ ಎಂದಿದ್ದಾರೆ.

ಶ್ರೀ ಕೃಷ್ಣ ಮಂದಿರದ ವಾರ್ಷಿಕೋತ್ಸವ



◆**ಕಲಘಟಗಿ:** ತಾಲೂಕಿನ ಮಾಚಾಪುರದ ಬೇಡ್ತಿ ನದಿ ತಟನಿವಾಸ ಶ್ರೀಕೃಷ್ಣ ಮಂದಿರದ 17ನೇ ವಾರ್ಷಿಕೋತ್ಸವದ ನಿಮಿತ್ತವಾಗಿ ಬೆಳಗ್ಗೆ ಶ್ರೀಕೃಷ್ಣನಿಗೆ ವಿಶೇಷ ಪಂಚಾಮೃತ ಅಭಿಷೇಕ ಅಲಂಕಾರ ಸಹಸ್ರ ತುಳಸಿ ಅರ್ಚನೆ ನಂತರ ಲೋಕಕಲ್ಯಾಣಾರ್ಥವಾಗಿ ಪುರುಷ ಸೂಕ್ತ ಹವನವನ್ನು ನೆರವೇರಿಸಲಾಯಿತು.

ದೇವಸ್ಥಾನದ ಧರ್ಮದರ್ಶಿ ವೇ. ಮೂ. ಪಾಂಡುರಂಗ ಭಟ್ ಜೋಶಿ, ದೇವಸ್ಥಾನದ ನಿರ್ಮಾತೃ ವಿನಾಯಕ ಚೌದರಿ, ಅರ್ಚಕ ಚಿದಂಬರ ಜೋಶಿ, ಮುರಳಿಧರ್ ಪೂಜಾರ, ಧೀರೇಂದ್ರ ಸತ್ತಿಗೇರಿ, ವಾದಿರಾಜ ಬೇಗೂರ, ಸತ್ಯಮೂರ್ತಿ ಜೋಶಿ, ಪಾರ್ಥ ಜೋಶಿ, ಶ್ರೀವಾಣಿ ಜೋಶಿ, ಪದ್ಮಾವತಿ ಜೋಶಿ, ಸಂತೋಷ ಮೋಟೆ ಹಾಗೂ ನಗರದ ಭಗವದ್ ಭಕ್ತರು ಪಾಲ್ಗೊಂಡಿದ್ದರು.

ಭಗವಾನ್ ಬುದ್ಧನ ತತ್ವ ಇಂದಿಗೂ ದಾರಿದೀಪ

◆**ನವಲಗುಂದ:** ಬುದ್ಧ ಜಯಂತಿಯು ಕೇವಲ ಧಾರ್ಮಿಕ ಆಚರಣೆಯಲ್ಲ, ಬದಲಾಗಿ ಅಂತರಿಕ ಶಾಂತಿ ಮತ್ತು ಸತ್ಯದ ಹಾದಿಯಲ್ಲಿ ನಡೆಯಲು ಪ್ರೇರೇಪಿಸುವ ದಿನವಾಗಿದೆ ಎಂದು ತಹಶೀಲ್ದಾರ್ ಸುಧೀರ ಸಾವಕಾರ ಹೇಳಿದರು.

ಅವರು ಶುಕ್ರವಾರ ತಾಲೂಕು ಆಡಳಿತ ವತಿಯಿಂದ ಜರುಗಿದ ಭಗವಾನ್ ಗೌತಮ ಬುದ್ಧರ ಜಯಂತ್ಯುತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಗೌತಮ ಬುದ್ಧರ ಭಾವಚಿತ್ರಕ್ಕೆ ಪೂಜೆ ಪುಷ್ಪನಮನ ಸಲ್ಲಿಸಿ ಉದ್ಘಾಟಿಸಿ ಮಾತನಾಡಿ, ಗೌತಮ ಬುದ್ಧರು ಜಗತ್ತಿಗೆ ಶಾಂತಿ, ಅಹಿಂಸೆ, ಕರುಣೆ ಮತ್ತು ಸಮಾನತೆಯ ಮಾರ್ಗವನ್ನು ಬೋಧಿಸಿ, ಅಷ್ಟಾಂಗ ಮಾರ್ಗ ಮತ್ತು ಚತುರಾರ್ಯ ಸತ್ಯಗಳ ತತ್ವಗಳು ಇಂದಿಗೂ ಮಾನವಕುಲಕ್ಕೆ ದಾರಿದೀಪವಾಗಿವೆ ಎಂದರು. ನಾಗರಾಜ ಕರಿಸಕ್ಕಣ್ಣವರ, ಸಿ.ಆರ್. ನಮುಸ್ತೆಮಠ, ರವಿ ಕಿರೇಸೂರ, ಅಶೋಕ ಮದಗುಣಕಿ, ನಿಂಗಪ್ಪ ಕೆಳಗೇರಿ, ರಾಜು ನಡುವಿನಮನಿ, ರಾಜು ದೊಡಮನಿ, ರವಿ ಬೆಂಡಿಗೇರಿ, ಕೃಷ್ಣಾ ದೊಡಮನಿ, ವಿರೇಶ ಬೆಂಡಿಗೇರಿ ಸೇರಿದಂತೆ ಸಮಾಜದ ಪದಾಧಿಕಾರಿಗಳು, ಸದಸ್ಯರು ಸಮಾಜದ ಪ್ರಮುಖರು, ತಾಲೂಕು ಮಟ್ಟದ ಅಧಿಕಾರಿಗಳು, ತಹಶೀಲ್ದಾರ್ ಕಾರ್ಯಾಲಯದ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಹಾಗೂ ಮಾಧ್ಯಮದವರು ಇದ್ದರು.



ದ್ಯಾಮವ್ವ-ದುರ್ಗವ್ವ ಜಾತ್ರೆಗೆ ಅದ್ದೂರಿ ಚಾಲನೆ

◆**ಧಾರವಾಡ:** ಹಾವೇರಿಪೇಟೆಯಲ್ಲಿ ಬರೋಬ್ಬರಿ 30 ವರ್ಷಗಳ ನಂತರ ನಡೆದ ದ್ಯಾಮವ್ವ ಹಾಗೂ ದುರ್ಗವ್ವ ದೇವಿಯರ ಜಾತ್ರಾ ಮಹೋತ್ಸವಕ್ಕೆ ಸಂಭ್ರಮದಿಂದ ಚಾಲನೆ ದೊರೆಯಿತು.



ದೇವಿಯರ ಮೂರ್ತಿಗಳಿಗೆ ಪೂಜೆ ಸಲ್ಲಿಸಿ ಜಾತ್ರೆಗೆ ಚಾಲನೆ ನೀಡಿದ ಮಲ್ಲಿಕಾರ್ಜುನ ಶ್ರೀ, ಜಾತ್ರೆಗಳು ಕೇವಲ ಮನರಂಜನೆಯಲ್ಲ, ಅವು ನಮ್ಮ ಸಂಸ್ಕೃತಿ ಮತ್ತು ಒಗ್ಗಟ್ಟಿನ ಸಂಕೇತ. 30 ವರ್ಷಗಳ ನಂತರ ನಡೆಯುತ್ತಿರುವ ಜಾತ್ರೆ ಭಕ್ತರಲ್ಲಿ ಹೊಸ ಚೈತನ್ಯ ಮೂಡಿಸಲಿ ಎಂದರು. 1990ರ ದಶಕದ ನಂತರ ವಿವಿಧ ಕಾರಣಗಳಿಂದ ನಿಂತುಹೋಗಿದ್ದ ಈ ಜಾತ್ರೆಯನ್ನು ಈ ಬಾರಿ ಇಡೀ ಹಾವೇರಿಪೇಟೆಯ ಜನತೆ ಒಗ್ಗೂಡಿ ಆಯೋಜಿಸಿದ್ದಾರೆ. ಬೆಳಗ್ಗೆ ಹೆಬ್ಬಳ್ಳಿ ಗ್ರಾಮದ ಚೈತನ್ಯ ಆಶ್ರಮದ ದತ್ತಾವಧೂತ ಶ್ರೀಗಳ ಸಾನ್ನಿಧ್ಯದಲ್ಲಿ ದೇವಿಯರ ಪೂಜಾ ವಿಧಾನಗಳು, ಮಧ್ಯಾಹ್ನ ದೇವಿಯರ ವಿವಾಹ ಕೈಂಕರ್ಯ ನೆರವೇರಿದವು. ಇದಕ್ಕೂ ಮುನ್ನ ಮೊರೆ ಅವರ ಮನೆತನಕ್ಕೆ ಉಡಿ ತುಂಬುವ ಕಾರ್ಯವೂ ಜರುಗಿತು. ಅಲಂಕರಿಸಲ್ಪಟ್ಟ ದೇವಿಯರ ಮೂರ್ತಿಗಳ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದ್ದು, ಕಲಾತಂಡಗಳ ಪ್ರದರ್ಶನ ಮೆರುಗು ನೀಡುತ್ತಿದೆ. ಜಾತ್ರೆಯ ಹಿನ್ನೆಲೆ ಇಡೀ ಬಡಾವಣೆಯನ್ನು ತಳಿರು ತೋರಣಗಳಿಂದ ಶೃಂಗರಿಸಲಾಗಿದ್ದು, ದೂರದ ಊರುಗಳಿಂದ ಬಂಧು-ಬಳಗದವರು ಜಾತ್ರೆ ಆಚರಿಸಿದರು. ಹಲವು ವರ್ಷಗಳ ನಂತರ ತಾಯಿ ದ್ಯಾಮವ್ವ-ದುರ್ಗವ್ವನ ಜಾತ್ರೆ ಕಣ್ಣಾರೆ ಕಾಣುವ ಭಾಗ್ಯ ಸಿಕ್ಕಿದ್ದಕ್ಕೆ ಸ್ಥಳೀಯರು ಸಂತಸ ವ್ಯಕ್ತಪಡಿಸಿದ್ದಾರೆ. ಹರಕೆ ಹೊತ್ತ ಭಕ್ತರು ದೇವಿಯರಿಗೆ ಉಡಿ ತುಂಬಿ, ವಿಶೇಷ ಪೂಜೆ ಸಲ್ಲಿಸುತ್ತಿದ್ದಾರೆ. ಸಂಚೆ ಲಕ್ಷ್ಮೀ ನರಸಿಂಹ ಭಜನಾ ಮಂಡಳಿ ವತಿಯಿಂದ ಲಲಿತ ಸಹಸ್ರ ನಾಮಾವಳಿ ಪಠಣ ಮಾಡಲಾಯಿತು. ಮುಂದಿನ ಮೂರು ದಿನಗಳು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜಾತ್ರೆ ಜರುಗಲಿದ್ದು, ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಕೆ.ಎಸ್.ಭೀಮಣ್ಣವರ, ಗಂಗಣ್ಣ ಜಮದಾಳೆ, ಗೌರವ ಕಾರ್ಯದರ್ಶಿ ವಿಜಯ ಬೋಸ್ಲೆ, ಖಜಾಂಚಿ ಆರ್.ಜಿ.ಕೆಲಗೇರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ದುಶ್ಚಟಗಳಿಗೆ ಬಲಿಯಾಗಬೇಡಿ: ಕುಲಕರ್ಣಿ

◆**ಅಳ್ನಾವರ:** ಸಾಧನೆ ಹಾದಿಯಲ್ಲಿ ಸಾಗಬೇಕಾದ ಯುವ ಸಮುದಾಯ ತಮ್ಮ ಅಮೂಲ್ಯ ಕ್ಷಣ ಕಳೆದುಕೊಳ್ಳುತ್ತಿರುವುದು ದೇಶದ ಅಭಿವೃದ್ಧಿ ದೃಷ್ಟಿಯಿಂದ ಹಿನ್ನಡೆಯುಂಟಾಗುತ್ತಿದೆ ಎಂದು ಕವಿವ ಸಂಘದ ಉಪಾಧ್ಯಕ್ಷ ಹಾಗೂ ವೈದ್ಯ ಡಾ.ಸಂಜೀವ ಕುಲಕರ್ಣಿ ಹೇಳಿದರು.

ಇಲ್ಲಿನ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪದವರು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಹದಿಹರೆಯದವರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು ಕುರಿತು ಮಾತನಾಡಿ, ದೇಶದ ಮುಂದಿನ ಭವಿಷ್ಯ ರೂಪಿಸಬೇಕಾದಂತಹ ಯುವ ಜನಾಂಗದವರು ಹದಿಹರೆಯದ ಸಮಯದಲ್ಲಿ ದುಶ್ಚಟಗಳಿಗೆ ಬಲಿಯಾಗಬೇಡಿ ಎಂದರು. ಕವಿವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ದೇಶದ ಒಟ್ಟು ಜನಸಂಖ್ಯೆಯ ಶೇ.60ಕ್ಕಿಂತ ಹೆಚ್ಚು ಯುವ ಸಮುದಾಯವಿದ್ದು, ಅವರಲ್ಲಿ ಶೇ.25 ರಷ್ಟು 20 ವರ್ಷದೊಳಗಿನವರಿದ್ದು ಅವರೆಲ್ಲರ ಮನಸ್ಸುಗಳು ಚಂಚಲತೆಯಿಂದ ಕೂಡಿರುವ ವಯಸ್ಸಾಗಿರುವದು ಸಹಜ. ಆದರೆ ಅವರನ್ನು ಸರಿದಾರಿಗೆ ಕರೆದುಕೊಂಡು ಹೋದಾಗ ಮಾತ್ರ ಬದಲಾವಣೆ ಕಾಣಲು ಸಾಧ್ಯವಿದೆ ಎಂದರು.

ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಸಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯೆ ಡಾ.ಉಮಾ ಪೂಜಾರ ವಹಿಸಿದ್ದರು. ಕವಿವ ಸಂಘದ ಕಾನೂನು ಮಂಟಪದ ಶಿವಾನಂದ ಭಾವಿಕಟ್ಟಿ, ಕಸಾಪ ತಾಲೂಕಾಧ್ಯಕ್ಷ ಗುರುರಾಜ ಸಬನೀಸ, ಡಾ.ಆರ್.ಬಿ.ಸೋನೆಖಾನ್, ಡಾ.ಪರ್ವಿನ್ ಶೇಖ, ಸುರೇಶ ದೊಡಮನಿ, ಅಶ್ವಿನಿ ನಿಪ್ಪಾಣಿ, ಡಾ.ಸುಮಾ ಸಾವಂತ, ತೇಜಸ್ವಿನಿ ಇತರರಿದ್ದರು.



ಆ.21ರಿಂದ ಸಮಾಧಾನ ಸಮಾರೋಹ ವಿಶೇಷ ಲೋಕ ಅದಾಲತ್

◆**ಹುಬ್ಬಳ್ಳಿ:** ಸಮಾಧಾನ ಸಮಾರೋಹ ವಿಶೇಷ ಲೋಕ ಅದಾಲತ್‌ನ್ನು 2026ರ ಆಗಸ್ಟ್ 21, 22 ಮತ್ತು 23 ರಂದು ನಡೆಸಲಾಗುವುದು. ಸರ್ವೋಚ್ಚ ನ್ಯಾಯಾಲಯದಲ್ಲಿ ಧಾರವಾಡ ಜಿಲ್ಲೆಯ 188 ಪ್ರಕರಣಗಳು ಬಾಕಿಯಿವೆ ಎಂದು ಹುಬ್ಬಳ್ಳಿ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಹಾಗೂ ಪ್ರಧಾನ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶೆ ವೀಣಾ ನಾಯ್ಕರ ಹೇಳಿದರು.

ಹುಬ್ಬಳ್ಳಿಯ ನ್ಯಾಯಾಲಯದ ಸಭಾಭವನದಲ್ಲಿ ವಿಶೇಷ ಲೋಕ ಅದಾಲತ್ ಕುರಿತು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿ, ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು. ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಟ್ಟು 4,328 ಪ್ರಕರಣಗಳನ್ನು ಪೂರ್ವ ಸಮಾಧಾನ ಪ್ರಕ್ರಿಯೆಗೆ ಗುರುತಿಸಿದೆ. ಬ್ಯಾಂಕಿಂಗ್, ಆಸ್ತಿ ತೆರಿಗೆ, ಕೌಟುಂಬಿಕ ವಿವಾದಗಳು ಸೇರಿದಂತೆ ವಿವಿಧ ಪ್ರಕರಣಗಳನ್ನು ಜಿಲ್ಲಾವಾರು ವಿಂಗಡಿಸಿ, ಎಲ್ಲಾ ಜಿಲ್ಲಾ ಮತ್ತು ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ ಎಂದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಇತರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳೊಂದಿಗೆ ಸಂಯೋಜನೆ ಮಾಡಿಕೊಂಡು, ಪಕ್ಷಗಾರರು ಇತರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದರೆ, ಜಿಲ್ಲಾ ಮತ್ತು ತಾಲೂಕು ಕಾನೂನು ಸೇವಾ ಸಮಿತಿಗಳು ಪೂರ್ವ ಸಮಾಧಾನ ಪ್ರಕ್ರಿಯೆಗೆ ಅವಕಾಶ ಕಲ್ಪಿಸುತ್ತವೆ ಎಂದರು.



ಪಕ್ಷಗಾರರಿಗೆ ನೋಟಿಸ್ ಜಾರಿಯಾದ ನಂತರ ಪೂರ್ವ ಸಮಾಧಾನ ಪ್ರಕ್ರಿಯೆಗಳು ಸ್ಥಳೀಯ ಜಿಲ್ಲಾ, ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಭೌತಿಕ ಅಥವಾ ವರ್ಚುವಲ್ ವಿಧಾನದಲ್ಲಿ ನಡೆಸಲಾಗುತ್ತದೆ. ಸಮಾಧಾನ ಸಮಾರೋಹ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದು ಅಗತ್ಯವಿದೆ. ಪ್ರತಿ ವರ್ಷ ನಾಲ್ಕು ಬಾರಿ ಲೋಕ ಅದಾಲತ್ ಹಮ್ಮಿಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಹುಬ್ಬಳ್ಳಿ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶ ವಿಶ್ವನಾಥ ಯಮಕನಮರಡಿ ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ವಿಶೇಷ ಲೋಕ ಅದಾಲತ್ ಬಗ್ಗೆ ಜನರಿಗೆ ಪರಿಚಯ ಮಾಡುವುದು ಅವಶ್ಯಕವಾಗಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಪರಿಹರಿಸಿಕೊಳ್ಳಲು ಸಾರ್ವಜನಿಕರಿಗೆ ದೊರೆತಿರುವ ಒಂದು ಮಹತ್ವದ ಅವಕಾಶವಾಗಿದೆ ಎಂದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿಕೆ

ಅಂತರ್ಜಲ ಅಭಿವೃದ್ಧಿಯಲ್ಲಿ ದೇಶಕ್ಕೆ ಮಾದರಿಯಾಗಿಸಲು ಪಣ

ದೇವರ ಹಿಪ್ಪರಗಿ: ವಿಜಯಪುರ ಜಿಲ್ಲೆಯನ್ನು ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿಯಲ್ಲಿ ಇಡೀ ದೇಶಕ್ಕೆ ಮಾದರಿ ಜಿಲ್ಲೆಯನ್ನಾಗಿ ರೂಪಿಸುವ ಗುರಿ ಹೊಂದಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಪಟ್ಟಣದ ಮೇಲ್ದರ್ಜೆಗೇರಿಸಿದ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪಟ್ಟಣ ಪಂಚಾಯತ ನೂತನ ಕಟ್ಟಡಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ನೂತನವಾಗಿ ಸುಮಾರು 3 ಕೋಟಿ ರೂ. ವೆಚ್ಚದ ಪ.ಪಂ ಹಾಗೂ 8.30 ಕೋಟಿ ರೂ. ವೆಚ್ಚದ ಸಮುದಾಯ ಆರೋಗ್ಯ ಕೇಂದ್ರದ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಾಗಿದೆ ಬರುವಂತ ದಿನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ನೀಡುವ ಮೂಲಕ, ಶಿಕ್ಷಣ, ಆರೋಗ್ಯ, ನೀರಾವರಿ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿ ಮಾದರಿಯ ಕೆಲಸ ಮಾಡಲಾಗಿದೆ. ಗ್ಯಾರಂಟಿ ಜೊತೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

ಅಧ್ಯಕ್ಷತೆಯನ್ನು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ವಹಿಸಿ ಮಾತನಾಡಿ, ಪಟ್ಟಣದಲ್ಲಿ ನೂತನವಾಗಿ ನಿರ್ಮಾಣವಾದ ಸುಸಜ್ಜಿತ ಪಟ್ಟಣ ಪಂಚಾಯಿತಿ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡಗಳನ್ನು ಉಸ್ತುವಾರಿ ಸಚಿವರು ಲೋಕಾರ್ಪಣೆ ಮಾಡುವುದರ ಜೊತೆ ಪಟ್ಟಣದ ಜೋತೆ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರದ ಮಟ್ಟದಲ್ಲಿ ಹೆಚ್ಚಿನ ಅನುದಾನವನ್ನು ನೀಡಲು ಸಹಕಾರ ನೀಡಬೇಕು. ಅಭಿವೃದ್ಧಿಪರ ಚಿಂತನೆಯುಳ್ಳ ಉಸ್ತುವಾರಿ ಸಚಿವರು ನಮ್ಮ ಜಿಲ್ಲೆಗೆ ಸಿಕ್ಕಿರುವುದು ಪುಣ್ಯ, ಬೂದಿಹಾಳ ಪೀರಾಪುರ ಕಾಮಗಾರಿ ಪೂರ್ಣಗೊಳಿಸಲು ಒತ್ತಾಯಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿ ಸಂಪತ್ ಗುಣಾರಿ ಹಾಗೂ ಜಿಲ್ಲಾ ಪಿಡಿಡಿಸಿ ಬಿ.ಎ. ಸೌದಾಗರ, ಇಲಾಖೆಯ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ನೀಡಲು ಸಚಿವರಲ್ಲಿ ಮನವಿ ಮಾಡಿದರು.

ಯಶಸ್ವಿ ಯೋಜನೆ ಅಡಿ 5 ಜನರಿಗೆ ಸಾಂಕೇತಿಕವಾಗಿ ಕನ್ನಡಕ ವಿತರಣೆ, ವಿವಿಧ ಸಂಘಟನೆಗಳಿಂದ ಮನವಿ ಹಾಗೂ ಕಾನಿಪ ತಾಲೂಕು ಘಟಕದಿಂದ ನಿವೇಶನ ಸಹಿತ ಅನುದಾನ ನೀಡಲು ಸಚಿವರಿಗೆ ಮನವಿ ಸಲ್ಲಿಸಿದ್ದು ವಿಶೇಷವಾಗಿತ್ತು.

ಇದೇ ಸಂದರ್ಭದಲ್ಲಿ ಪಪಂ ಅಧ್ಯಕ್ಷೆ ಜಯಶ್ರೀ ದೇವಣಗಾಂವ, ಮಾಜಿ ಶಾಸಕರಾದ ಶರಣಪ್ಪ ಸುಣಗಾರ, ಉಪಾಧ್ಯಕ್ಷರಾದ ರಮೇಶ ಮಸಿಬಿನಾಳ, ತಹಶೀಲ್ದಾರ್ ನಿಂಗಪ್ಪ ಬಿರಾದಾರ, ಮುಖ್ಯಾಧಿಕಾರಿ ಅಫ್ರೋಜ ಅಹ್ಮದ ಪಟೇಲ, ಅಭಿಯಂತರರಾದ ಪ್ರಶಾಂತ ವಲ್ಲಾಪೂರ, ಮಹೇಶ ಜಾಧವ ಸೇರಿದಂತೆ ಪಟ್ಟಣದ ಪ್ರಮುಖರು, ಗಣ್ಯರು ಇಲಾಖೆಯ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.



ನೀರಾವರಿ ನಿರ್ವಹಣೆಯಲ್ಲಿ ಹೊಸ ದಿಕ್ಸೂಚಿ

ಆಲಮಟ್ಟಿ ಅಣೆಕಟ್ಟೆಯ ನೀರನ್ನು 524 ಗೆಜೆಟ್ ನೋಟಿಫಿಕೇಶನ್‌ಗೆ ಬೇಕಾದ ತಯಾರಿ ರಾಜ್ಯ ಸರ್ಕಾರ ಮಾಡಿಕೊಂಡಿದ್ದು, ಸುಮಾರು 1ಸಾವಿರ ಕಿ.ಮೀ ವಿಜಯಪುರ ಮುಖ್ಯ ಕಾಲುವೆಯಲ್ಲಿ 200 ಕಿ.ಮೀ ಉದ್ದದ ಕಾಲುವೆಯ 4 ಟಿಎಂಸಿ ನೀರು ಬಳಕೆ ಮಾಡಿಕೊಳ್ಳುವ ಮೂಲಕ ಕೆರೆ, ಹಳ್ಳಗಳು ಭರ್ತಿ ಮಾಡಿ, 1ಸಾವಿರ ಮೀಟರ್‌ಗೆ ಒಂದರಂತೆ ಹಂತ ಹಂತವಾಗಿ ಬಾಂದರ್ ನಿರ್ಮಾಣ ಮಾಡಿ ಸುಮಾರು 178 ಹಳ್ಳಿಗಳ ರೈತರ ಹೊಲಗಳಿಗೆ ಹಾಗೂ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆ ನೀಗಿಸುವ ಮೂಲಕ ಭಾರತ ದೇಶದಲ್ಲಿ ಸಂಪತ್ಭರಿತ ನೀರಿನ ಅಂತರ್ಜಲ ಹೆಚ್ಚಿಸುವ ಮೂಲಕ ರಾಷ್ಟ್ರಕ್ಕೆ ಮಾದರಿಯ ಇದರಿಂದ ಸದಾ ಕಾಲ ನೀರಿನಿಂದ ಕಂಗೊಳಿಸುವಂತೆ ಮಾಡಿ 'ಅಂತರ್ಜಲದ ಹೊಳೆ'ಯನ್ನೇ ಹರಿಸಲಾಗುವುದು. ಈ ಅಭಿವೃದ್ಧಿ ಕಾರ್ಯಗಳು ಒಂದು ಪ್ರಾಯೋಗಿಕ ಯೋಜನೆಯಾಗಿದ್ದು, ಇದು ಯಶಸ್ವಿಯಾದಲ್ಲಿ ಇಡೀ ರಾಷ್ಟ್ರಕ್ಕೆ ವಿಜಯಪುರ ಜಿಲ್ಲೆಯು ನೀರಾವರಿ ನಿರ್ವಹಣೆಯಲ್ಲಿ ಹೊಸ ದಿಕ್ಸೂಚಿಯಾಗಲಿದೆ ಎಂದು ಸಚಿವರು ಭರವಸೆ ನೀಡಿದರು.

ಗುಣಾತ್ಮಕ ಶಿಕ್ಷಣದೊಂದಿಗೆ ಐತಿಹಾಸಿಕ ಫಲಿತಾಂಶಕ್ಕೆ ಸಾಕ್ಷಿ

ಮೂಡಲಗಿಯ ಚೈತನ್ಯ ಶಿಕ್ಷಣ ಸಂಸ್ಥೆ

ಮೂಡಲಗಿ: ಮೂಡಲಗಿ ಭಾಗದಲ್ಲಿ ಜ್ಞಾನ ಜ್ಯೋತಿ ಬೆಳಗಲು 1997ರಲ್ಲಿ ದಿ.ಸಿದ್ದಣ್ಣ ಹೊರಟ್ಟಿಯವರು ಚೈತನ್ಯ ಆಶ್ರಮ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಸತಿ ಶಾಲೆಗಳನ್ನು ಹುಟ್ಟುಹಾಕಿ ಗ್ರಾಮೀಣ ಭಾಗದ ಬಡ ಪ್ರತಿಭಾನ್ವಿತ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಸಂಪೂರ್ಣ ವ್ಯಕ್ತಿತ್ವ ವಿಕಸನದ ಜವಾಬ್ದಾರಿ ಹೊತ್ತು ಇಂದು ಹತ್ತು-ಹಲವಾರು ಸಾಧನೆಗಳ ಶಿಖರ ಏರಿದ್ದು ಹೆಮ್ಮೆಯ ಸಂಗತಿ.

ಕೇವಲ 16 ವಿದ್ಯಾರ್ಥಿಗಳಿಂದ ಆರಂಭಗೊಂಡ ಈ ವಿದ್ಯಾಸಂಸ್ಥೆ ಮೂಡಲಗಿ ಅಷ್ಟೆ ಅಲ್ಲದೇ ಪಾಲಕರ ಹಾಗೂ ಶಿಕ್ಷಣ ಪ್ರೇಮಿಗಳ ಬೇಡಿಕೆಯ ಮೇರೆಗೆ ಹುಣಶ್ಯಾಳ, ಬೆಟಗೇರಿ, ಕಟಕೋಳ ಗ್ರಾಮಗಳಲ್ಲಿ ಅಂಗ ಸಂಸ್ಥೆಗಳನ್ನು ತೆರೆಯುವ ಮೂಲಕ ಇಂದು 5000ಕ್ಕೂ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿಯೊಂದಿಗೆ ತನ್ನ ಶಿಕ್ಷಣ ಪ್ರಸರಣದ ವ್ಯಾಪ್ತಿಯನ್ನು ಇಮ್ಮಡಿಗೊಳಿಸುತ್ತಾ ಬರುತ್ತಿದೆ.

ಚೈತನ್ಯ ಸಂಸ್ಥೆಯು ಕನ್ನಡ ಮತ್ತು ಆಂಗ್ಲ ಮಾಧ್ಯಮಗಳಲ್ಲಿ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಐಟಿಐ ತಾಂತ್ರಿಕ ಶಿಕ್ಷಣಗಳ ಜೊತೆಗೆ ನವೋದಯ, ಸೈನಿಕ, ಮೂರಾರ್ಜಿ ವಸತಿ ಶಾಲೆಗಳಿಗೆ ಹಾಗೂ ಮಂಗಳೂರಿನ ಆಳ್ವಾಸ್-ಅಳಿಕೆಯಂತಹ ರಾಜ್ಯಮಟ್ಟದ ಉತ್ಕೃಷ್ಟ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಹತ್ತಾರು ವರ್ಷಗಳಿಂದ ವ್ಯವಸ್ಥಿತವಾದ ತರಬೇತಿ ನೀಡುತ್ತಾ ದಾಖಲೆ ಫಲಿತಾಂಶ ಪಡೆದಿರುತ್ತದೆ. ಪ್ರತಿವರ್ಷ ನಮ್ಮ ಸಂಸ್ಥೆಗೆ ಕನಿಷ್ಠ 500 ವಿದ್ಯಾರ್ಥಿಗಳು ಕೋಚಿಂಗ್ ಪಡೆಯುತ್ತಿರುವುದು ನಮ್ಮ ಗುಣಾತ್ಮಕತೆಗೆ ಹಿಡಿದ ಕೈಗನ್ನಡಿಯಾಗಿದೆ.



ವರ್ಷ	ನವೋದಯ	ಸೈನಿಕ	ಮೊರಾರ್ಜಿ	ಒಟ್ಟು
2022-23	11	08	97	116
2023-24	19	15	88	122
2024-25	16	63	95	174
2025-26	16	68	54	138



ನಮ್ಮ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ಮಕ್ಕಳು ಮುಂದೆ ವೈದ್ಯಕೀಯ, ತಾಂತ್ರಿಕ ಹಾಗೂ ಇತರೆ ಉನ್ನತ ಕೋಸ್‌ಗಳಿಗೆ ಸೇರಲು ಉತ್ತಮ ಯೋಚನೆಯೊಂದಿಗೆ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿ ಅದ್ಭುತ ಫಲಿತಾಂಶ ನೀಡಲು ಶ್ರಮಿಸುತ್ತಿದ್ದೇವೆ.

■ ವಿಜಯ ಎಸ್.ಹೊರಟ್ಟಿ, ಆಡಳಿತ ಮಂಡಳಿ ಸದಸ್ಯರು

ವಿಶೇಷ ಸಾಧನೆ

ರಾಷ್ಟ್ರೋತ್ಥಾನದ ತಪಸ್ಸು, ಸಾಧನಾ ಪರೀಕ್ಷೆಗಳಲ್ಲಿ ಚೈತನ್ಯದ ಮಕ್ಕಳು ಉತ್ತಮ ಸಾಧನೆ ತೋರುತ್ತಿದ್ದು, 2023-24ನೇ ಸಾಲಿನಲ್ಲಿ ಸೃಷ್ಟಿ ನಾಶಿ ಫೌಉಉಖ ವಿಭಾಗಕ್ಕೆ ಆಯ್ಕೆಯಾಗಿದ್ದಳು. ಪ್ರಸಕ್ತ ಸಾಲಿನಲ್ಲಿ ವೈಷ್ಣವಿ ಕುಳ್ಳೋಳ್ಳಿ ಐಐಖತ್ ಒಉಉ ಪ್ರಥಮ ಪಿಯುಸಿ ವಿಭಾಗಕ್ಕೆ ಉಚಿತವಾಗಿ ಆಯ್ಕೆಯಾಗಿದ್ದು ಹೆಮ್ಮೆಯ ಸಂಗತಿ. ಮಕ್ಕಳ ಭವಿಷತ್ತಿನ ಶಿಕ್ಷಣವೂ ಸುಗಮವಾಗಿ ಸಾಗಲು ಸನ್ 2026-27 ಸಾಲಿನಿಂದ 8,9,10ನೇ ತರಗತಿ ವಿದ್ಯಾರ್ಥಿಗಳಿಗೆ ಐಐಖತ್ ಒಉಉ/ಫೌಉಉಖ ಫೌಂಡೇಶನ್ ವಿಶೇಷ ತರಗತಿಗಳನ್ನು ನುರಿತ ಪಿಯು ಕಾಲೇಜಿನ ಉಪನ್ಯಾಸಕರಿಂದ ನಿರಂತರವಾಗಿ ಬೋಧಿಸಿ ಸಮಾಜಕ್ಕೆ ವೈದ್ಯರನ್ನು, ತಾಂತ್ರಿಕರನ್ನು ಹಾಗೂ ಜವಾಬ್ದಾರಿಯುತ ಪ್ರಜೆಗಳನ್ನು ನೀಡುವ ಕನಸ್ಸು ನಮ್ಮ ಸಂಸ್ಥೆಯದಾಗಿದೆ.

'ಬಿಎಸ್‌ವೈ ಅಭಿಮಾನೋತ್ಸವ'ದ ಪೋಸ್ಟರ್ ಬಿಡುಗಡೆ

ಬೆಳಗಾವಿ: ಗೋಮಟೇಶ ವಿದ್ಯಾಪೀಠದಲ್ಲಿ ಶನಿವಾರ ನಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ ಪಾದಾರ್ಪಣೆ ಮಾಡಿ 50 ವರ್ಷಗಳಾದ ಪ್ರಯುಕ್ತ ಮೇ 9ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ 'ಬಿಎಸ್‌ವೈ ಅಭಿಮಾನೋತ್ಸವ' ಪೂರ್ವಭಾವಿ ಸಭೆಯಲ್ಲಿ ಮುಖಂಡರು 'ಬಿಎಸ್‌ವೈ ಅಭಿಮಾನೋತ್ಸವ'ದ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿದರು.

ಪೂರ್ವಭಾವಿ ಸಭೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಅವರು ಮಾತನಾಡಿ, ಯಡಿಯೂರಪ್ಪ ಅವರ ಸುದೀರ್ಘ ರಾಜಕೀಯ ಹೋರಾಟವನ್ನು ಮೆಲುಕು ಹಾಕುವುದು ಮತ್ತು ರಾಜ್ಯ ಬಿಜೆಪಿಗೆ ಹೊಸ ಶಕ್ತಿ ತುಂಬುವುದು ಈ ಸಮಾವೇಶದ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.

ವಿಭಾಗ ಪ್ರಭಾರಿ ಸಂಜಯ್ ಪಾಟೀಲ ಹಾಗೂ ಶಾಸಕ ವಿಠ್ಠಲ ಹಲಗೇಕರ ಮಾತನಾಡಿ, ಇದು ಪಕ್ಷಾತೀತ ಕಾರ್ಯಕ್ರಮ. ಇದು ಕೇವಲ ಒಂದು ಪಕ್ಷಕ್ಕೆ ಸೀಮಿತವಾಗದೇ ಎಲ್ಲಾ ವರ್ಗದ ಜನರು ಮತ್ತು ಮಠಾಧೀಶರನ್ನು ಒಳಗೊಂಡ ಐತಿಹಾಸಿಕ ಕಾರ್ಯಕ್ರಮವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಮಹಾಂತೇಶ ದೊಡ್ಡಗೌಡ್ರ, ಅರವಿಂದ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಂದೀಪ ದೇಶಪಾಂಡೆ, ಮಲ್ಲಿಕಾರ್ಜುನ ಮಾದಮ್ಮನವರ, ಪ್ರಕೋಷ್ಠಗಳ ಜಿಲ್ಲಾ ಸಂಯೋಜಕ ಮಹೇಶ ಮೋಹಿತೆ ಹಾಗೂ ಪ್ರಮುಖ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಆದಾಯ ತೆರಿಗೆ: ಮಠದ ಪರ ತೀರ್ಪು

•**ಗೋಕರ್ಣ:** ಇಲ್ಲಿನ ಮಹಾಬಲೇಶ್ವರ ದೇವಾಲಯವನ್ನ ರಾಮಚಂದ್ರಾಪುರ ಮಠದ ಆಡಳಿತ ಅವಧಿಯಲ್ಲಿನ ಆದಾಯ ತೆರಿಗೆ ಕಟ್ಟುವ ಕುರಿತು ಆದಾಯ ತೆರಿಗೆ ಕಮಿಷನರ್ ನ್ಯಾಯಾಲಯ ದಲ್ಲಿ ಮಾಡಿಕೊಂಡಿದ್ದ ಮೇಲ್ಮನವಿ ಪುರಸ್ಕರಿಸಿ ಮಠದ ಪರವಾಗಿ ತೀರ್ಪು ನೀಡಿದೆ.

ಮಠದ ನಿರ್ವಹಣೆಯ ಮೌಲ್ಯಮಾಪನ ವರ್ಷ 2016-17 ಸಾಲಿಗೆ ರೂ.13 ಲಕ್ಷ ಮತ್ತು 2019-20ನೇ ಸಾಲಿಗೆ ರೂ.90 ಲಕ್ಷ ತೆರಿಗೆ ಬಾಕಿ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯು ಆದೇಶಿಸಿತ್ತು. ಈ ಆದೇಶದ ವಿರುದ್ಧವಾಗಿ ಮೇಲ್ಮನವಿ ಮಾಡಲಾಗಿ; ಇದೀಗ ಮೇಲ್ಮನವಿಯ ಆದೇಶ ಬಂದಿದ್ದು, ದೇವಾಲಯಕ್ಕೆ ಜಯ ಲಭಿಸಿದೆ. ಇದಕ್ಕೂ ಮುನ್ನ 2015-16ನೇ ವರ್ಷದ ಪ್ರಕರಣ ದಲ್ಲಿಯೂ ರೂ.1.42 ಕೋಟಿ ತೆರಿಗೆ ಬಾಕಿ ಪ್ರಕರಣದಲ್ಲೂ ದೇವಸ್ಥಾನದ ಆಡಳಿತಕ್ಕೆ ಜಯ ಲಭಿಸಿದ್ದನ್ನು ಸ್ಮರಿಸಬಹುದಾಗಿದ್ದು, ಇದೀಗ ದೇವಾಲಯದ ಆಡಳಿತದ ವಿರುದ್ಧದ ಎಲ್ಲಾ ಆದಾಯ ತೆರಿಗೆ ಪ್ರಕರಣಗಳೂ ಮುಕ್ತಾಯಗೊಂಡಿವೆ. ಇದೀಗ ಮೇಲ್ಮನವಿ ಆದೇಶದನ್ವಯ ತೆರಿಗೆ ಬಾಕಿ ಶೂನ್ಯವಾಗಿರುವುದು ಭಕ್ತಾದಿಗಳ ಗೊಂದಲಗಳನ್ನು ನಿವಾರಿಸಿದ್ದು ಮಾತ್ರವಲ್ಲದೇ, ದೇಗುಲದ ಇಂದಿನ ಆಡಳಿತ ಮಂಡಳಿಯ ಸ್ಪಷ್ಟೀಕರಣವನ್ನು ಆದಾಯ ತೆರಿಗೆ ಇಲಾಖೆ ಮಾನ್ಯ ಮಾಡಿರುವುದು ಅಂದಿನ ಶ್ರೀ ರಾಮಚಂದ್ರಾಪುರಮಠದ ಮಾದರಿ ಆಡಳಿತ ವ್ಯವಸ್ಥೆಗೆ ಸಂದ ಜಯವಾಗಿದೆ.

ದೀದಿಗೆ ಸುಪ್ರೀಂ ಶಾಖ

ಪುಟ 1ರಿಂದ→ ಹೈಕೋರ್ಟ್ ಅರ್ಜಿ ತಳ್ಳಿಹಾಕಿದ ಬಳಿಕ ಟಿಎಂಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಟಿಎಂಸಿ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿ, ಕೇಂದ್ರ ಸಿಬ್ಬಂದಿ ನೇಮಿಸುವ ನಿರ್ಧಾರ ನಮಗೆ ಏ.29ರಂದು ಗೊತ್ತಾಗಿದೆ. ಈಗಾಗಲೇ ಪ್ರತಿ ಎಣಿಕೆ ಮೇಜಿನಲ್ಲೂ ಕೇಂದ್ರ ಸೂಕ್ಷ್ಮ ವೀಕ್ಷಕರಿದ್ದಾರೆ. ಹಾಗಿದ್ದರೂ ಹೆಚ್ಚುವರಿ ಕೇಂದ್ರ ಸಿಬ್ಬಂದಿ ಏಕೆ ಬೇಕು ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ನಿಯಮಾವಳಿಯ ಪ್ರಕಾರ ಚುನಾವಣಾ ಆಯೋಗಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಬಳಸುವ ಸಂಪೂರ್ಣ ಅಧಿಕಾರವಿದೆ ಎಂದು ತಿಳಿಸಿತು. 'ಕೇಂದ್ರ ಸಿಬ್ಬಂದಿಯನ್ನೇ ನಿಯೋಜಿಸಿದರೂ ಅದನ್ನು ಕಾನೂನುಬಾಹಿರ ಎಂದು ಹೇಳಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರು. ಚುನಾವಣಾ ಆಯೋಗ ಪರ ಹಿರಿಯ ವಕೀಲ ಡಿ.ಎಸ್. ನಾಯ್ಡು ವಾದ ಮಂಡಿಸಿ, ಮತ ಎಣಿಕೆಯಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿಯೂ ಭಾಗಿಯಾಗುತ್ತಾರೆ ಎಂದು ಭರವಸೆ ನೀಡಿದರು. ಪ್ರತಿ ಅಭ್ಯರ್ಥಿಗೂ ತಮ್ಮದೇ ಮತ ಎಣಿಕೆ ಪ್ರತಿನಿಧಿಗಳು ಇರುವುದರಿಂದ ಅಕ್ರಮದ ಭೀತಿ ಅಸಂಬದ್ಧ ಎಂದು ಹೇಳಿದರು. ಇದನ್ನೆಲ್ಲ ಪರಿಗಣಿಸಿದ ಸುಪ್ರೀಂ ಕೋರ್ಟ್, ಚುನಾವಣಾ ಆಯೋಗ ತನ್ನ ಸುತ್ತೋಲೆಯನ್ನು 'ಅಕ್ಷರಶಃ ಮತ್ತು ಆತ್ಮಸ್ಫೂರ್ತಿಯಿಂದ' ಜಾರಿಗೆ ತರುತ್ತದೆ ಎಂಬ ಭರವಸೆಯನ್ನು ದಾಖಲಿಸಿ ಅರ್ಜಿಯನ್ನು ಇತ್ಯರ್ಥ ಮಾಡಿತು.

ಶೇಕಡ 90 ಮತದಾನ

ಪುಟ 1ರಿಂದ→ ಬಿಜೆಪಿ ಹಲವು ಮತಗಟ್ಟೆಗಳಲ್ಲಿ ಅಕ್ರಮ ನಡೆದಿರುವುದಾಗಿ ದೂರು ನೀಡಿದ್ದರಿಂದ ಆಯೋಗ ವಿಶೇಷ ವೀಕ್ಷಕ ಸುಬ್ರತ ಗುಪ್ತರನ್ನು ನಿಯೋಜಿಸಿತ್ತು. ಫಲ್ತಾ ಕ್ಷೇತ್ರದಲ್ಲಿ ಮರುಮತದಾನ ನಡೆಸುವ ಕುರಿತು ಆಯೋಗ ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಿದೆ.

ಹೆಚ್ಚುವರಿ ವೀಕ್ಷಕರ ನೇಮಿಸಿದ ಇಸಿ

ಪುಟ 1ರಿಂದ→ ಚುನಾವಣಾ ಆಯೋಗದ ಪ್ರಕಾರ, ಮತ ಎಣಿಕೆ ಪ್ರಕ್ರಿಯೆ ಸುರಕ್ಷಿತ, ಶಾಂತಿಯುತ, ಪಾರದರ್ಶಕ ಹಾಗೂ ಬೆದರಿಕೆರಹಿತ ವಾತಾವರಣದಲ್ಲಿ ನಡೆಯಲು ಈ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚುವರಿ ವೀಕ್ಷಕರನ್ನು ಸಂವಿಧಾನದ ವಿಧಿ 324 ಮತ್ತು ಜನಪ್ರತಿನಿಧಿಗಳ ಕಾಯ್ದೆಯಲ್ಲಿ ನಿಯೋಜಿಸಲಾಗಿದೆ. ಒಂದಕ್ಕಿಂತ ಹೆಚ್ಚು ಮತ ಎಣಿಕೆ ಸಭಾಂಗಣಗಳಿರುವ 165 ಕ್ಷೇತ್ರಗಳಲ್ಲಿ ಹೆಚ್ಚುವರಿ ಮತ ಎಣಿಕೆ ವೀಕ್ಷಕರು ಕಾರ್ಯನಿರ್ವಹಿಸಲಿದ್ದಾರೆ. ಪೊಲೀಸ್ ವೀಕ್ಷಕರು ಮತ ಎಣಿಕೆ ಕೇಂದ್ರಗಳ ಹೊರಭಾಗದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಭದ್ರತೆ ಮೇಲ್ವಿಚಾರಣೆ ಮಾಡಲಿದ್ದಾರೆ. ಅವರಿಗೆ ಮತ ಎಣಿಕೆ ಸಭಾಂಗಣ ಪ್ರವೇಶಕ್ಕೆ ಅನುಮತಿ ಇರುವುದಿಲ್ಲ. ಇದರ ಜತೆಗೆ, ಮತ ಎಣಿಕೆ ವೇಳೆ ಕೇವಲ ಮತ ಎಣಿಕೆ ವೀಕ್ಷಕರು ಮತ್ತು ರಿಟರ್ನಿಂಗ್ ಅಧಿಕಾರಿಗಳಿಗೆ ಮಾತ್ರ ಮೊಬೈಲ್ ಫೋನ್ ತೆಗೆದುಕೊಂಡು ಹೋಗಲು ಅವಕಾಶ ಇದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

ಟಿಎಂಸಿ-ಬಿಜೆಪಿ ನಡುವೆ ಘರ್ಷಣೆ

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ 15 ಮತಗಟ್ಟೆಗಳಲ್ಲಿ ನಡೆದ ಮರುಮತದಾನದ ವೇಳೆ ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿಗರ ನಡುವೆ ಘರ್ಷಣೆ ಸಂಭವಿಸಿದೆ. ಘಟನಾ ಸ್ಥಳದ ದೃಶ್ಯಗಳಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ಗಲಾಟೆ ನಡೆಸುತ್ತಿರುವುದು ಕಂಡುಬಂದಿದೆ. ಮಗ್ರಾಹಾಟ್ ಪಶ್ಚಿಮದ 11 ಮತ್ತು ಡೈಮಂಡ್ ಹಾರ್ಬರ್‌ನ 4 ಮತಗಟ್ಟೆಗಳಲ್ಲಿ ಮರುಮತದಾನ ಶಾಂತಿಯುತವಾಗಿ ಆರಂಭ ವಾಗಿದ್ದರೂ ನಂತರ ಉದ್ವಿಗ್ನತೆ ಹೆಚ್ಚಾಯಿತು. ಡೈಮಂಡ್ ಹಾರ್ಬರ್‌ನ ಚಂದಾ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ವಿಶಿಷ್ಟಚೇತನ ಮತದಾರ, ಅವರ ತಾಯಿ ಯನ್ನು ಕೇಂದ್ರ ಭದ್ರತಾ ಪಡೆಗಳು ಕಿರುಕುಳ ನೀಡಿದರೆಂದು ಟಿಎಂಸಿ ಆರೋಪಿಸಿ ಪ್ರತಿಭಟಿಸಿತು. ನಂತರ ಅಧಿಕಾರಿಗಳು ಪರಿಸ್ಥಿತಿ ನಿಯಂತ್ರಿಸಿದರು. ಇದೇ ವೇಳೆ, ಫಾಲ್ತಾ ಪ್ರದೇಶದ ನಿವಾಸಿಗಳು ಟಿಎಂಸಿ ಕಾರ್ಯಕರ್ತರಿಂದ ಬೆದರಿಕೆ ರಾಜಕೀಯ ನಡೆಯುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

ಮೇ 20ರಿಂದ ಸಾರಿಗೆ ನೌಕರರ ಮುಷ್ಕರ

•**ಬೆಂಗಳೂರು:** ಸಾರಿಗೆ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದ ಹಿನ್ನೆಲೆಯಲ್ಲಿ ಮೇ 20ರಿಂದ ರಾಜ್ಯಾದ್ಯಂತ ಬಸ್ ಸೇವೆ ರಹಿತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಸಂಚಾಲಕ ಬಿ.ಜಯದೇವರಾಜೇ ಅರಸು ಹೇಳಿದರು

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿಗಳು, ಸಾರಿಗೆ ಸಚಿವರ ನೇತೃತ್ವದಲ್ಲಿ 12 ಸಭೆಗಳನ್ನು ಮಾಡಲಾಗಿದೆ. 38 ತಿಂಗಳ ವೇತನ ಬಾಕಿ ನೀಡಬೇಕು. 2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇ.25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ಸಾರಿಗೆ ಸಚಿವರಿಗೆ ಮನವಿ ಮಾಡಿದೆವು. ಅವರು ಶೇ.7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏಪ್ರಿಲ್ 1ರಿಂದ ಪರಿಗಣಿಸುವುದಾಗಿ ಹೇಳಿದರು. ಹಾಗಾಗಿ, ಮಾತುಕತೆ ಫಲಪ್ರದವಾಗಲಿಲ್ಲ. ಜತೆಗೆ ಸರ್ಕಾರ 38 ತಿಂಗಳ ಬದಲು 26 ತಿಂಗಳ ಹಿಂಬಾಕಿ ನೀಡಲು ಮುಂದಾಗಿದ್ದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ಮನಸ್ಸು ಮಾಡಿಲ್ಲ. ಈ ಹಿನ್ನಲೆಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿದೆ ಎಂದು ರಾಹುಲ್ ಗಾಂಧಿ ಹೇಳಿರುವುದು ಸತ್ಯವೇ ಆಗಿದೆ, ಆದರೆ ಅದು ಆಗಿರುವುದು ಪಾಕಿಸ್ತಾನದಲ್ಲಿ – ಅಮಿತ್ ಶಾ

- ನಾನು ಇರುವುದು ಭಾರತದಲ್ಲಿ ಎಂಬುದೇ ಅವರಿಗೆ ಮರೆತು ಹೋಗಿರಬಹುದಾ?

ದಿನ ಭವಿಷ್ಯ

ಮೇಷ
ಮನಸ್ಸಿನ ಶಾಂತಿ ಕಾಯ್ದುಕೊಳ್ಳಲು ಆದ್ಯತೆ ಕೊಡಿ. ಸಂಘರ್ಷಕ್ಕೆ ಇಳಿಯದಿರಿ. ಹೊಸ ವ್ಯವಹಾರ ಆರಂಭಕ್ಕೆ ಕಾಲ ಸುಸೂತ್ರವಾಗಿದೆ.

ವೃಷಭ
ನಿಮ್ಮ ಮೃದು ಸ್ವಭಾವ ಇತರರು ನಿಮ್ಮನ್ನು ದುರ್ಬಳಕೆ ಮಾಡಲು ಅವಕಾಶ ನೀಡುತ್ತದೆ. ಕಠಿಣವಾಗಿ ವರ್ತಿಸಲು ಕಲಿಯಿರಿ.

ಮಿಥುನ
ಕೆಲ ಅಹಿತಕರ ಪ್ರಸಂಗದಿಂದಾಗಿ ನಿಮ್ಮ ಆತ್ಮವಿಶ್ವಾಸ ಕುಸಿತ. ಹೋರಾಟ ಮನೋಭಾವ ಬಿಡಬೇಡಿ. ಇತರರ ಒಲೈಕೆ ಕಾರ್ಯ ಬಿಟ್ಟುಬಿಡಿ.

ಕಟಕ
ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಸಂಭ್ರಮ. ಆರೋಗ್ಯ ಸಮಸ್ಯೆ ನಿವಾರಣೆ. ನಿಮ್ಮ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಯೋಜಿಸಿ.

ಸಿಂಹ
ಹಳಬರ ಭೇಟಿ ಸಂಭವ. ಹಳೆ ನೆನಪು ಕೆದುಕುವಿರಿ. ನಿಮ್ಮ ವ್ಯವಹಾರದಲ್ಲಿ ಅಡ್ಡಿ ಒದಗೀತು. ಸಹನೆಯ ನಡೆ ಒಳ್ಳೆಯದು.

ಕನ್ಯಾ
ಅಹಿತಕರ ಪ್ರಸಂಗ ಎದುರಿಸುವಿರಿ. ಜಾಣ್ಮೆಯಿಂದ ನಿಭಾಯಿಸಿ. ವ್ಯಕ್ತಿಯೊಬ್ಬರ ಜತೆ ಸ್ನೇಹ ಬೆಳೆದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿ.

ತುಲಾ
ಸಂಘಟಿತ ಕಾರ್ಯದಿಂದ ಯಶಸ್ಸು. ಏಕಾಂಗಿ ಪ್ರಯತ್ನ ಫಲ ನೀಡದು. ಕೇಳಿದವರಿಗೆಲ್ಲ ಹಣ ನೀಡಬೇಡಿ. ಕೌಟುಂಬಿಕ ಹೊಣೆ ಹೆಚ್ಚಳ.

ವೃಶ್ಚಿಕ
ಕಲಾವಿದರಿಗೆ ಉತ್ತಮ ದಿನ. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ನೆಂಟರಿಷ್ಟರ ಸಮ್ಮುಖ ಆತ್ಮೀಯ ಕಾಲಕ್ಷೇಪ. ಆರ್ಥಿಕ ಉನ್ನತಿ.

ಧನು
ಸ್ಪಷ್ಟವಾಗಿ ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ. ಕಹಿಸತ್ಯ ಹೇಳಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ತುಸು ಹಿನ್ನಡೆ ಉಂಟಾದೀತು.

ಮಕರ
ಮುತುವರ್ಜಿಯಿಂದ ಕೆಲಸ ನಿರ್ವಹಿಸಿ. ಉದಾಸೀನತೆ ಕಾರ್ಯ ಕೆಡಿಸಬಹುದು. ಸಂಬಂಧ ಪಡದ ವಿಚಾರದಲ್ಲಿ ಹಸ್ತಕ್ಷೇಪ ಮಾಡಬೇಡಿ.

ಕುಂಭ
ಹಣದ ವಿವಾದ ಪರಿಹಾರ. ಸಂಬಂಧದಲ್ಲಿ ಯಾವುದೇ ಅನುಮಾನ ಇಟ್ಟುಕೊಳ್ಳದಿರಿ. ಸಂವಹನ ಕೊರತೆಯಿಂದ ಆಪ್ತರ ಜತೆ ಮುನಿಸು ಸಂಭವ.

ಮೀನ
ಕಠಿಣ ಪರಿಸ್ಥಿತಿ ಒದಗಿದರೂ ಆತ್ಮವಿಶ್ವಾಸ ಬಿಡಬೇಡಿ. ಎಲ್ಲ ಕಷ್ಟವೂ ತಾತ್ಕಾಲಿಕ. ಅನಿರೀಕ್ಷಿತ ನೆರವು ಒದಗಲಿದೆ. ಬಂಧು ಭೇಟಿಯಿಂದ ಸಂತಸ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,7,4,6

ಮೇ 6ಕ್ಕೆ ಪ್ರಶಸ್ತಿ ಪ್ರದಾನ

•**ಬೆಂಗಳೂರು:** ಕಾಯಕಯೋಗಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ 2026 ಮತ್ತು 2025-26 ನೇ ಸಾಲಿನ ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ ಪ್ರದಾನ ಸಮಾರಂಭವು ಮೇ 6ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ತಿಳಿಸಿದ್ದಾರೆ. ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅವರಿಗೆ ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ ಪ್ರದಾನ ಮತ್ತು ಸಿದ್ಧರಾಮೇಶ್ವರರ ವಚನಗಳ ಪುಸ್ತಕ ಬಿಡುಗಡೆ ಸಮಾರಂಭ ನಡೆಯಲಿದೆ. ಚಿತ್ರದುರ್ಗ ಭೋವಿ ಗುರುಪೀಠಾಧ್ಯಕ್ಷ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರು ದಿವ್ಯ ಸಾನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಶಿವರಾಜ್ ತಂಗಡಗಿ, ಭಾಗವಹಿಸಲಿದ್ದಾರೆ. ಶಾಸಕ ಕೆ.ಹರೀಶ್ ಗೌಡ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.


ಅರ್ಜಿ ಸಲ್ಲಿಕೆ ಆರಂಭ

•**ಬೆಂಗಳೂರು:** ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯಲು ಕೃಷಿ ಇಲಾಖೆ ಕೋರಿರುವ ಕಾರಣ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಪರಿಶಿಷ್ಟ ಜಾತಿಗೆ ಶೇ.15ರಷ್ಟು ಮೀಸಲಾತಿ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

450 ಎಕರೆ ಭೂಮಿ ಸ್ವಾಧೀನ: ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ

ಎಪಿಎಂಸಿ ಪರವಾಗಿ ತೀರ್ಪು

•**ಬೆಂಗಳೂರು:** ಮೂರು ಪ್ರಮುಖ ಭೂಸ್ವಾಧೀನ ಪ್ರಕರಣಗಳಲ್ಲಿ ಸುದೀರ್ಘ ಕಾನೂನು ಹೋರಾಟದ ಬಳಿಕ ಎಪಿಎಂಸಿ ಪರವಾಗಿ ತೀರ್ಪು ಬಂದಿದ್ದು, ಒಟ್ಟು 410 ಕೋಟಿ ರೂ. ಪರಿಹಾರ ಧನ ಪಾವತಿಸಿ ಸುಮಾರು 450 ಎಕರೆ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗಿದೆ ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.



ಕರ್ನಾಟಕ ರಾಜ್ಯ ಕೃಷಿ ಮಾರಾಟಮಂಡಳಿಕಚೇರಿಯಲ್ಲಿನಡೆದಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದಿನ ಸರ್ಕಾರದ ಎಪಿಎಂಸಿ ಕಾಯ್ದೆ ತಿದ್ದುಪಡಿ ಪರಿಣಾಮವಾಗಿ ಅನೇಕ ಎಪಿಎಂಸಿಗಳು ದುರ್ಬಲ ಸ್ಥಿತಿಗೆ ತಲುಪಿದ್ದವು. ಆಸ್ತಿಗಳು ಕೈತಪ್ಪುವ ಪರಿಸ್ಥಿತಿಯೂ ನಿರ್ಮಾಣವಾಗಿತ್ತು. ಇಲಾಖೆಯ ಜವಾಬ್ದಾರಿ ಸ್ವೀಕರಿಸಿದ ತಕ್ಷಣ ಎಪಿಎಂಸಿಗಳ ಪುನಶ್ಚೇತನ ಹಾಗೂ ಆಸ್ತಿಗಳ ರಕ್ಷಣೆಗೆ ಆದ್ಯತೆ ನೀಡಲಾಗಿದ್ದು, ರೈತ ಸ್ನೇಹಿ ಮಾರುಕಟ್ಟೆ ವ್ಯವಸ್ಥೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇದರ ಪರಿಣಾಮವಾಗಿ ಮೂರು ಭೂಸ್ವಾಧೀನ ಪ್ರಕರಣಗಳಲ್ಲೂ ಎಪಿಎಂಸಿ ಪರವಾಗಿ ತೀರ್ಪು ಬಂದು, ಮೆಗಾ ಮಾರುಕಟ್ಟೆ ಸೇರಿದಂತೆ ಯೋಜನೆಗಳಿಗೆ ಇದ್ದ ಅಡ್ಡಿಗಳು ನಿವಾರಣೆಯಾಗಿದೆ ಎಂದು ವಿವರಿಸಿದರು.

ಪ್ರಕರಣಗಳು ಯಾವುವು?: 1994ರಲ್ಲಿ ಯಶವಂತಪುರ ಎಪಿಎಂಸಿಯಿಂದ ಶ್ರೀಗಂಧ ಕಾವಲು ಗ್ರಾಮದ 172 ಎಕರೆ 22 ಗುಂಟೆ ಹಾಗೂ ಹೇರೋಹಳ್ಳಿ ಗ್ರಾಮದ 100 ಎಕರೆ 11 ಗುಂಟೆ ಭೂಮಿಯನ್ನು ಮೆಗಾ ಮಾರುಕಟ್ಟೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಕುರಿತು ಜಮುನ್ ಲಾಲ್ ಬಜಾಜ್ ಸೇವಾ ಟ್ರಸ್ಟ್ ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದು, ಬಳಿಕ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಎಪಿಎಂಸಿ ಪರ ತೀರ್ಪು ನೀಡಿದ್ದು, 186 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ.

2003ರಲ್ಲಿ ಸರ್ಜಾಪುರ ಹೋಬಳಿಯ ಗೂಳಿ ಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಮಾರುಕಟ್ಟೆ ಯೋಜನೆಗಾಗಿ 42 ಎಕರೆ 31 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಪ್ರಕರಣವೂ ಸುಪ್ರೀಂ ಕೋರ್ಟ್‌ವರೆಗೆ ಹೋಗಿದ್ದು, ನಂತರ ಹೈಕೋರ್ಟ್‌ನಲ್ಲಿ ಇತ್ಯರ್ಥಗೊಂಡು ಎಪಿಎಂಸಿ ಪರ ತೀರ್ಪು ಬಂದಿದೆ. ಈ ಹಿನ್ನೆಲೆಯಲ್ಲಿ 211.37 ಕೋಟಿ ರೂ. ಪರಿಹಾರ ನ್ಯಾಯಾಲಯಕ್ಕೆ ಪಾವತಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಕಾರಟಗಿಯಲ್ಲಿ 2012ರಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕಾಗಿ 136 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು.

ಜಿಲ್ಲಾ ನ್ಯಾಯಾಲಯದ ತೀರ್ಪು ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಅಂತಿಮವಾಗಿ ಎಪಿಎಂಸಿ ಪರ ತೀರ್ಪು ಬಂದಿದೆ. ಈ ಪ್ರಕರಣದಲ್ಲಿ 12 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ.

ಸ್ವಾಧೀನಗೊಂಡ ಭೂಮಿ ವಿವರ

ಒಟ್ಟು ಮೂರು ಪ್ರಕರಣಗಳಲ್ಲಿ 450 ಎಕರೆ ಎಪಿಎಂಸಿ ಸ್ವಾಧೀನಕ್ಕೆ 410 ಕೋಟಿ ರೂ. ಪರಿಹಾರ ಪಾವತಿಸಲಾಗಿದೆ. ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿಯಲ್ಲಿ 272 ಎಕರೆ 33 ಗುಂಟೆಗೆ 186 ಕೋಟಿ ರೂ. ಪರಹಾರ, ಗೂಳಿ ಮಂಗಲದಲ್ಲಿ 42 ಎಕರೆ 31 ಗುಂಟೆಗೆ 211.37 ಕೋಟಿ ರೂ. ಪರಿಹಾರ ಹಾಗೂ ಗಂಗಾವತಿ ತಾಲೂಕು ಕಾರಟಗಿಯಲ್ಲಿ 136 ಎಕರೆಗೆ 12 ಕೋಟಿ.ರೂ. ಪರಿಹಾರ ನೀಡಲಾಗಿದೆ. ಒಟ್ಟಾರೆ, ಭೂಸ್ವಾಧೀನ ಪ್ರಕರಣಗಳ ಅಂತ್ಯದಿಂದ ಎಪಿಎಂಸಿ ಅಭಿವೃದ್ಧಿ ಯೋಜನೆಗಳಿಗೆ ಹೊಸ ವೇಗ ದೊರಕಿದೆ ಎಂದು ಸಚಿವರು ಹೇಳಿದರು.

ಮುಂದಿನ ಯೋಜನೆಗಳೇನು

ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿ ಪ್ರದೇಶದಲ್ಲಿ ಮೆಗಾ ಮಾರುಕಟ್ಟೆ, ಗೂಳಿಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಮಾರುಕಟ್ಟೆ ಹಾಗೂ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಭೂಸ್ವಾಧೀನ ಪ್ರಕರಣಗಳಲ್ಲಿ ತೀರ್ಪು ಬಂದಿರುವುದರಿಂದ ಈ ಯೋಜನೆಗಳಿಗೆ ಇದ್ದ ಅಡ್ಡಿಗಳು ನಿವಾರಣೆಯಾಗಿದೆ.

ರಾಜೇಗೌಡ ಗೆಲುವು?

ಚಿಕ್ಕಮಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣೆಯ ಅಂಚೆ ಮತಗಳ ಮರು ಎಣಿಕೆಯಲ್ಲೂ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರಿಗೆ ಗೆಲುವಾಗಿರುವುದು ಖಚಿತವಾಗಿದೆ. ಈ ಮೂಲಕ ಮೂರು ವರ್ಷಗಳ ಕಾನೂನು ಹೋರಾಟಕ್ಕೆ ತೆರೆಬಿದ್ದಂತಾಗಿದೆ.



ಅಂಚೆ ಮತಗಳ ಎಣಿಕೆಯಲ್ಲಿ ವ್ಯತ್ಯಾಸವಾಗಿದೆ ಎಂದು ಪರಾಜಿತ ಅಭ್ಯರ್ಥಿ ಬಿಜೆಪಿಯ ಡಿ.ಎನ್.ಜೀವರಾಜ್ ತಕರಾರರು ಅರ್ಜಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ತಿರಸ್ಕೃತ ಅಂಚೆ ಮತ ಮರು ಎಣಿಕೆ ಮಾಡುವಂತೆ ಉಚ್ಚನ್ಯಾಯಾಲಯ ಆದೇಶಿಸಿತ್ತು.

ಅದರಂತೆ ಚುನಾವಣಾ ಆಯೋಗವು ಇಂದು ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಮರು ಮತ ಎಣಿಕೆ ಪ್ರಕ್ರಿಯೆ ಕೈಗೊಂಡಿತು. ಜಿಲ್ಲಾ ಚುನಾವಣಾಧಿಕಾರಿ ಗೌರವ ಶೆಟ್ಟಿ, ಜಿಲ್ಲಾಧಿಕಾರಿ ಎನ್.ಎಂ.ನಾಗರಾಜು ಅವರ ನೇತೃತ್ವದಲ್ಲಿ ಮರು ಎಣಿಕೆ ಕಾರ್ಯ ನಡೆದಿದ್ದು, ಹಾಲಿ ಶಾಸಕ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ, ಪರಾಜಿತ ಅಭ್ಯರ್ಥಿಗಳಾದ ಬಿಜೆಪಿಯ ಡಿ.ಎನ್.ಜೀವರಾಜ್, ಜೆಡಿಎಸ್ ಪರಾಜಿತ ಅಭ್ಯರ್ಥಿ ಸುಧಾಕರ ಶೆಟ್ಟಿ, ಅವರ ಚುನಾವಣಾ ಏಜೆಂಟರುಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಕೈ ವಿಜಯೋತ್ಸವ

ತಿರಸ್ಕೃತಗೊಂಡಿದ್ದ 279 ಮತಗಳ ಮರು ಎಣಿಕೆ ವೇಳೆ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರಿಗೆ ಹೆಚ್ಚುವರಿಯಾಗಿ 2 ಮತಗಳು ಹಾಗೂ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರಿಗೆ ಹೆಚ್ಚುವರಿಯಾಗಿ 1 ಮತ ಲಭಿಸಿತ್ತು. ಇದರ ಆಧಾರದಲ್ಲಿ ಟಿ.ಡಿ.ರಾಜೇಗೌಡ ಅವರ ಗೆಲುವಿನ ಅಂತರ 201 ರಿಂದ 203 ಕ್ಕೆ ಏರಿಕೆಯಾಗಿದೆ ಎಂದು ಹೇಳಿಕೊಂಡ ಶಾಸಕ ಟಿ.ಡಿ.ರಾಜೇಗೌಡ ಮತ್ತು ಬೆಂಬಲಿಗರು ವಿಜಯೋತ್ಸವ ಆಚರಿಸಿದರು.

ಶೃಂಗೇರಿ ಕ್ಷೇತ್ರದಲ್ಲಿ ಒಟ್ಟು 1,822 ಅಂಚೆ ಮತಗಳು ಚಲಾವಣೆಯಾಗಿದ್ದವು. ಈ ಪೈಕಿ ಆರಂಭದಲ್ಲಿ 279 ಮತಗಳನ್ನು ವಿವಿಧ ತಾಂತ್ರಿಕ ಕಾರಣಗಳಿಂದ ತಿರಸ್ಕರಿಸಲಾಗಿತ್ತು. ಈ ತಿರಸ್ಕೃತ ಮತಗಳ ಮರು ಎಣಿಕೆಯಲ್ಲೇ ಗೊಂದಲ ಸೃಷ್ಟಿಯಾಗಿದ್ದು, ಅವುಗಳಲ್ಲಿ 12 ಮತಗಳು ನಾಪತ್ತೆಯಾಗಿರುವುದಾಗಿ ವರದಿಯಾಗಿದೆ. ಉಳಿದಂತೆ 3 ಮತಗಳು ನೋಟಾಗೆ ಚಲಾವಣೆಯಾಗಿದ್ದು, ಅಂತಿಮವಾಗಿ 1,540 ಅಂಚೆ ಮತಗಳನ್ನು ಮರು ಎಣಿಕೆಗೆ ಪರಿಗಣಿಸಲಾಗಿತ್ತು. ಸಂಪೂರ್ಣ ಪ್ರಕ್ರಿಯೆಯನ್ನು ವೀಡಿಯೋ ಚಿತ್ರೀಕರಣ ಮಾಡಲಾಯಿತು.

ಬಿಜೆಪಿ ಬೆಳೆಯಲು ಬಿಎಸ್‌ವೈ ಕಾರಣ

ಪುಟ 1ರಿಂದ→ ದಕ್ಷಿಣ ಭಾರತದ ಯಾವ ರಾಜ್ಯದಲ್ಲೂ ಅಧಿಕಾರ ಬಾರದ, ಉತ್ತರ ಭಾರತದ, ವ್ಯಾಪಾರಿಗಳ, ಮೇಲ್ವರ್ಗದವರ ಪಕ್ಷವೆಂದು ಕರೆಯುತ್ತಿದ್ದ ವೇಳೆ ಯಡಿಯೂರಪ್ಪ ಅವರು ತಥಾಕಥಿತ ವರ್ಗಾತೀತ, ರೈತಪರ ಕಾಳಜಿಯೊಂದಿಗೆ ರಾಜ್ಯ ದಲ್ಲಿ ಆಡಳಿತ ನೀಡಿದ್ದಾರೆ ಎಂದರು.

ಅಂತಹ ಧೀಮಂತ ನಾಯಕರ ರಾಜಕೀಯ ಜೀವನ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅವರಿಗೆ ಅಭೂತಪೂರ್ವ ಸತ್ಕಾರ, ಸನ್ಮಾನ ಮಾಡಲಾಗುತ್ತಿದೆ. ಯಾರೂ ಇಲ್ಲದ ಸಂದರ್ಭದಲ್ಲಿ ಪಕ್ಷ ಕಟ್ಟಿ ಬೆಳೆಸಿ, ತಾನು ಯಾವ ರೀತಿ ಎತ್ತರಕ್ಕೆ ಬೆಳೆಯಬಲ್ಲೆ ಎಂಬುದಕ್ಕೆ ಬಿಎಸ್‌ವೈ ಉತ್ತಮ ನಿದರ್ಶನ. ಅದು ಈಗಿನ ಹಾಗೂ ಮುಂದಿನ ಪೀಳಿಗೆಗೆ ತಿಳಿಸಲು ಈ ಬೃಹತ್ ಅಭಿಮಾನೋತ್ಸವ ನಡೆಸಲಾಗುತ್ತಿದೆ ಎಂದರು.

ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ವಿಪ ಮಾಜಿ ಸದಸ್ಯ ವೈ.ಎ.ನಾರಾಯಣಸ್ವಾಮಿ, ರಾಜ್ಯ ಕಾರ್ಯದರ್ಶಿ ತಮೇಶ್ ಗೌಡ್ರು, ಶರಣು ತಳ್ಳಿಕೆರೆ, ವಿಭಾಗ ಸಹ ಪ್ರಭಾರಿ ಎ.ಮುರಳಿ, ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ ಇದ್ದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮೈಸೂರಿನ ಸುತ್ತೂರು ಮಠಕ್ಕೆ ಶನಿವಾರ ಭೇಟಿ ನೀಡಿ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸುತ್ತೂರು ದೇಶೀಕೇಂದ್ರ ಶ್ರೀಗಳನ್ನು ಆಹ್ವಾನಿಸಿದರು.

ಕುಲಕರ್ಣಿ ಶಾಸಕ ಸ್ಥಾನ ರದ್ದು

ಪುಟ 1ರಿಂದ→ ಧಾರವಾಡ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭೆಯ ಸದಸ್ಯ ವಿನಯ್ ಕುಲಕರ್ಣಿ ಅವರನ್ನು ಬೆಂಗಳೂರು ನಗರದ (CCH&82) LXXXI ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರು ವಿಶೇಷ ಇಇ ಸಂಖ್ಯೆ 565/2021 ರಲ್ಲಿ ದೋಷಾರೋಪಣೆ ಮಾಡಿದ ಪರಿಣಾಮವಾಗಿ ಅವರು ಶಿಕ್ಷೆಗೊಳಗಾದ ದಿನಾಂಕದಿಂದ ಅಂದರೆ ಏಪ್ರಿಲ್ 15, 2026 ರಿಂದ ಕರ್ನಾಟಕ ವಿಧಾನಸಭೆಯ ಸದಸ್ಯತ್ವದಿಂದ ಅನರ್ಹರಾಗಿದ್ದಾರೆ ಎಂದು ತಿಳಿಸಲಾಗಿದೆ.

ಬಿಡುಗಡೆ ಬಳಿಕವೂ 6 ವರ್ಷ ಅನರ್ಹತೆ ಮುಂದುವರಿಕೆ: 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8 ಮತ್ತು ಭಾರತ ಸಂವಿಧಾನದ 191(1)(e) ವಿಧಿಯ ನಿಬಂಧನೆಗಳ ಪ್ರಕಾರ ಮತ್ತು ಅಂತಹ ಅನರ್ಹತೆಯು ಅವರ ಬಿಡುಗಡೆಯ ನಂತರ ಆರು ವರ್ಷಗಳ ಅವಧಿಗೆ ಮುಂದುವರಿಯುತ್ತದೆ. ಸಂಬಂಧಿಸಿದ ನ್ಯಾಯಾಲಯವು ಶಿಕ್ಷೆಯನ್ನು ತಡೆಹಿಡಿಯದ ಹೊರತು ಅನರ್ಹತೆ ಮುಂದುವರಿಯಲಿದೆ. ಆದ್ದರಿಂದ, ಕರ್ನಾಟಕ ವಿಧಾನಸಭೆಯ ಒಂದು ಸ್ಥಾನ ಖಾಲಿಯಾಗಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ವಾಣಿಜ್ಯ ಸಿಲಿಂಡರ್ ದುಬಾರಿ ಜಿಎಸ್ಟಿ ಶೇ.5ಕ್ಕಿಳಿಸಲು ಮನವಿ

ಪುಟ 1ರಿಂದ→ ಮಾರ್ಚ್‌ನಲ್ಲಿ ಸುಮಾರು 1,800ರಿಂದ 2 ಸಾವಿರ ರೂ. ಇದ್ದ ಬೆಲೆಗಳು ಈಗ 3,100ಕ್ಕೂ ಅಧಿಕಮಟ್ಟಕ್ಕೆ ಏರಿವೆ ಎಂದು ಹೇಳಿದ್ದಾರೆ. ಜಾಗತಿಕ ವಿಕೋಪ-ಯುದ್ಧಗಳ ನೇರ ಪರಿಣಾಮ ಹೋಟೆಲ್ ಮತ್ತು ರೆಸ್ಟೋರೆಂಟ್ ಉದ್ಯಮದ ಮೇಲೆ ಬಿದ್ದಿದೆ. ವಾಣಿಜ್ಯ ಎಲ್‌ಪಿಜಿಯ ಕೊರತೆ ಹಾಗೂ ಬೆಲೆಗಳ ಭಾರೀ ಏರಿಕೆ ರಾಜ್ಯದಾದ್ಯಂತ ಹೋಟೆಲ್‌ಗಳ ಕಾರ್ಯಾಚರಣಾ ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ವಾಣಿಜ್ಯ ಎಲ್‌ಪಿಜಿ ಬೆಲೆಯಲ್ಲಿ ಇತ್ತೀಚಿನ ಏರಿಕೆ ಹಣದುಬ್ಬರದ ಒತ್ತಡವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಜಿ.ಕೆ.ಶೆಟ್ಟಿ ಹೇಳಿದರು. ಈ ಬೆಲೆ ಏರಿಕೆಯ ದುಷ್ಪರಿಣಾಮ ತಡೆಯಲು ಸರ್ಕಾರಗಳು ತಕ್ಷಣ ಮಧ್ಯಪ್ರವೇಶಿಸದಿದ್ದರೆ, ಬೆಲೆ ಏರಿಕೆಯ ಒತ್ತಡವನ್ನು ಗ್ರಾಹಕರ ಮೇಲೆ ವರ್ಗಾಯಿಸುವುದರ ಹೊರತಾಗಿ ಇತರ ಯಾವುದೇ ಮಾರ್ಗೋಪಾಯವಿಲ್ಲ. ಇದರಿಂದ ಜನಸಾಮಾನ್ಯರ ಮೇಲೆ ಅಧಿಕ ಒತ್ತಡ ಬೀಳಲಿದ್ದು, ಉದ್ಯಮದ ಮೇಲೆ ಕೂಡಾ ದುಷ್ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದ್ದಾರೆ.

ತುರ್ತು ಎಚ್ಚರಿಕೆ ವ್ಯವಸ್ಥೆ ಪರೀಕ್ಷೆ

ಪುಟ 1ರಿಂದ→ ಇದನ್ನು ಸಿ-ಡಾಟ್ ಸಂಸ್ಥೆ ಅಭಿವೃದ್ಧಿಪಡಿಸಿದೆ.

ಕಾರ್ಯಾಚರಣೆ ವ್ಯಾಪ್ತಿ: ಈ ವ್ಯವಸ್ಥೆ, ಅಂತಾರಾಷ್ಟ್ರೀಯ ದೂರಸಂಪರ್ಕ ಒಕ್ಕೂಟದ ಶಿಫಾರಸಿನಂತೆ ಸಾಮಾನ್ಯ ಎಚ್ಚರಿಕೆಯ ಶಿಷ್ಟಾಚಾರ ಆಧರಿಸಿದೆ. ಇದು ಭಾರತದ ಎಲ್ಲಾ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಹವಾಮಾನ ವೈಪರೀತ್ಯ ಮತ್ತು ಚಂಡಮಾರುತದ ಸಂದರ್ಭಗಳಲ್ಲಿ 19ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ 134 ಶತಕೋಟಿಗೂ ಹೆಚ್ಚು ಎಸ್‌ಎಂಎಸ್ ಎಚ್ಚರಿಕೆಗಳನ್ನು ರವಾನಿಸಲಾಗಿದೆ. ಭೂಕಂಪ, ಸುನಾಮಿ ಮತ್ತು ಅನಿಲ ಸೋರಿಕೆಯಂತಹ ತುರ್ತು ಸಂದರ್ಭಗಳಲ್ಲಿ ಪ್ರತಿಕ್ರಿಯಿಸುವ ಸಮಯ ಸುಧಾರಿಸಲು ಈಗ ಸೆಲ್ ಬ್ರಾಡ್‌ಕಾಸ್ಟ್ ತಂತ್ರಜ್ಞಾನ ಸಂಯೋಜಿಸಲಾಗುತ್ತಿದೆ.

ಪರೀಕ್ಷಾ ವಿಧಾನಗಳು: ಸೆಲ್ ಬ್ರಾಡ್‌ಕಾಸ್ಟ್ ತಂತ್ರಜ್ಞಾನ, ನಿರ್ದಿಷ್ಟ ಭೌಗೋಳಿಕ ಪ್ರದೇಶದ ಎಲ್ಲಾ ಮೊಬೈಲ್ ಸಾಧನಗಳಿಗೆ ಏಕಕಾಲದಲ್ಲಿ ಸಂದೇಶಗಳನ್ನು ತಲುಪಿಸಲು ಅನುವು ಮಾಡಿಕೊಡುತ್ತದೆ. ಪರೀಕ್ಷಾ ಹಂತದಲ್ಲಿ ಬಳಕೆದಾರರು ಇಂಗ್ಲಿಷ್, ಹಿಂದಿ, ಪ್ರಾದೇಶಿಕ ಭಾಷೆಗಳಲ್ಲಿ ಸಂದೇಶಗಳನ್ನು ಸ್ವೀಕರಿಸಬಹುದು. ಮೊಬೈಲ್‌ನ ಸುರಕ್ಷತಾ ಸೆಟ್ಟಿಂಗ್‌ಗಳಲ್ಲಿ ಟೆಸ್ಟ್ ಅಲರ್ಟ್ ಆಯ್ಕೆಯನ್ನು ಸಕ್ರಿಯಗೊಳಿಸಿದ ಸಾಧನಗಳಿಗೆ ಮಾತ್ರ ಈ ಸಂದೇಶಗಳು ಬರುತ್ತವೆ.

ಇಸ್ಕಾನ್‌ನಿಂದ ಪೌಷ್ಟಿಕ ಆಹಾರ

ಪುಟ 1ರಿಂದ→ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಆರೋಗ್ಯಪೂರಕ, ಸ್ವಚ್ಛತೆ ಹಾಗೂ ಸಮತೋಲನಯುತ ಪಥ್ಯಾಹಾರವನ್ನು ನಿಯಮಿತವಾಗಿ ಒದಗಿಸುವುದು ಈ ಯೋಜನೆಯ ಉದ್ದೇಶ.

ಇಸ್ಕಾನ್ ಸಂಸ್ಥೆ ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಅನ್ನದಾನ ಮತ್ತು ಪೌಷ್ಟಿಕ ಆಹಾರ ವಿತರಣೆಯಲ್ಲಿ ಅನುಭವ ಹೊಂದಿರುವುದರಿಂದ, ಈ ಜವಾಬ್ದಾರಿಯನ್ನು ಇಸ್ಕಾನ್‌ಗೆ ವಹಿಸಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಬೆಳಗಿನ ಉಪಾಹಾರದಲ್ಲಿ ಉಪ್ಪಿಟ್ಟು, ಪೊಂಗಲ್, ಗೋಧಿ ಪಾಯಸ, ಮೊಳಕೆ ಕಾಳುಗಳು, ಪ್ರತಿದಿನ ಬಾಳೆಹಣ್ಣು ಅಥವಾ ಮಜ್ಜಿಗೆ, ಮಧ್ಯಾಹ್ನ ರಾಗಿ ಮುದ್ದೆ-ಅನ್ನಸಾರು ಹಾಗೂ ಸೋಯಾಚಂಕ್ಸ್, ಸಂಜೆ ಲಘು ಆಹಾರವಾಗಿ ಕಾಫಿ-ಬಿಸ್ಕೆಟ್ ಮತ್ತು ರಾತ್ರಿ ಚಪಾತಿ-ಅನ್ನಸಾರು, ಮೊಳಕೆ ಕಾಳುಪಲ್ಯ-ಸೋಯಾಚಂಕ್ಸ್ ಆಹಾರವನ್ನು ಪಥ್ಯಾಹಾರ ಮಾನದಂಡಗಳಿಗೆ ಅನುಗುಣವಾಗಿ ತಯಾರಿಸಿ ವಿತರಿಸಲಾಗುತ್ತದೆ.

ವಿವಿಧ ಕಾಯಿಲೆಗಳ ಪ್ರಕಾರ ವಿಶೇಷ ಆಹಾರ ಕ್ರಮಗಳನ್ನು ಸಹ ಅನುಸರಿಸುವ ವ್ಯವಸ್ಥೆ ಮಾಡಲಾಗಿದೆ.

ಆಸ್ಪತ್ರೆಗಳ ಹೆಸರು	ವೆಚ್ಚ
ಕೆ.ಸಿ. ಜನರಲ್ ಆಸ್ಪತ್ರೆ	1,83,27,600 ರೂ.
ಜಯನಗರ ಜನರಲ್ ಆಸ್ಪತ್ರೆ	1,83,27,600 ರೂ.
ಸರ್ ಸಿ.ವಿ.ರಾಮನ್ ಆಸ್ಪತ್ರೆ	1,83,27,600 ರೂ.
ಮಂಗಳೂರಿನ ವೆನ್‌ಲಾಕ್ ಜಿಲ್ಲಾಸ್ಪತ್ರೆ	5,13,17,280 ರೂ.
ಧಾರವಾಡ ಜಿಲ್ಲಾಸ್ಪತ್ರೆ	2,19,93,120 ರೂ.
ಯಲಹಂಕ ಸಾರ್ವಜನಿಕ ಆಸ್ಪತ್ರೆ	36,65,520 ರೂ.
ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ	36,65,520 ರೂ.
ನೆಲಮಂಗಲದ ಸಾರ್ವಜನಿಕ ಆಸ್ಪತ್ರೆ	43,99,560 ರೂ.
ಒಟ್ಟು	14,00,23,800 ರೂ.

ಸ್ವಯಂ ದೂರು ದಾಖಲಿಸಲು ಸಿಜೆಐಗೆ ಪತ್ರ

•**ಬೆಂಗಳೂರು:** ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದೆ ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಲಾಗುತ್ತಿದೆ. ಈ ಸಂಬಂಧ ಕೂಡಲೇ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಜೆಡಿಎಸ್ ಕಾನೂನು ಘಟಕದ ಮುಖ್ಯಸ್ಥ ಎ.ಪಿ. ರಂಗನಾಥ್ ಪತ್ರ ಬರೆದಿದ್ದಾರೆ.

ದೇಶದ ಐಟಿ ಹಬ್ ಬೆಂಗಳೂರಿನಲ್ಲಿ ಸುಮಾರು 1.3 ಕೋಟಿ ಜನಸಂಖ್ಯೆ ಇದ್ದರೂ, ಕಳೆದ 2020 ಸೆಪ್ಟೆಂಬರ್‌ನಿಂದ ಚುನಾಯಿತ ಪ್ರತಿನಿಧಿ ಇಲ್ಲದಿರುವುದು ದುರದೃಷ್ಟಕರ. ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ಕ್ಕೆ ಚುನಾವಣೆ ನಡೆದು ಹತ್ತು ವರ್ಷಗಳೇ ಕಳೆಯುತ್ತಾ ಬಂದಿದೆ. ಪ್ರಸ್ತುತ ನಗರವನ್ನು ಕೇವಲ ಅಧಿಕಾರಿಗಳ ಮೂಲಕ ಆಳಲಾಗುತ್ತಿದ್ದು, ಇದು ಪ್ರಜಾಪ್ರಭುತ್ವ ವಿರೋಧಿ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಹಿಂದೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹಲವು ಬಾರಿ ಗಡುವು ನೀಡಿದರೂ, ವಾರ್ಡ್ ವಿಂಗಡಣೆ ಮತ್ತು ಮೀಸಲಾತಿಯ ನೆಪವೊಡ್ಡಿ ರಾಜ್ಯ ಸರ್ಕಾರಗಳು ಚುನಾವಣೆ ಮುಂದೂಡುತ್ತಾ ಬಂದಿವೆ. 2026ರ ಜೂನ್ 30ರೊಳಗೆ ಚುನಾವಣೆ ನಡೆಸಬೇಕೆಂಬ ಸುಪ್ರೀಂ ಕೋರ್ಟ್ ನಿರ್ದೇಶನವಿದ್ದರೂ, ಪ್ರಸ್ತುತ ಸರ್ಕಾರದ ನಡವಳಿಕೆಗಳು ನ್ಯಾಯಾಂಗ ನಿಂದನೆಯಂತಿವೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯಕ್ಕೆ 6,000 ಕೋಟಿ ರೂ. ಆರ್ಥಿಕ ನಷ್ಟದ ಭೀತಿ: ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದಿದ್ದರೆ 16ನೇ ಹಣಕಾಸು ಆಯೋಗದ ಅನುದಾನದಲ್ಲಿ ಭಾರಿ ಕಡಿತವಾಗಲಿದೆ. ಚುನಾಯಿತ ಸಂಸ್ಥೆಗಳ ಅನುಪಸ್ಥಿತಿಯಲ್ಲಿ ಕರ್ನಾಟಕವು ವಾರ್ಷಿಕ ಸುಮಾರು 6,000 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕಳೆದುಕೊಳ್ಳುವ ಭೀತಿಯಲ್ಲಿದೆ. ಇದು ರಾಜ್ಯದ ಮೂಲಸೌಕರ್ಯ ಮತ್ತು ಅಭಿವೃದ್ಧಿಗೆ ಮಾರಕವಾಗಲಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಪ್ರಜೆಗಳ ಸಾಂವಿಧಾನಿಕ ಹಕ್ಕಿನ ಹರಣ

ಸುಪ್ರೀಂ ಕೋರ್ಟ್ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ವಿಚಾರಣೆ ನಡೆಸಬೇಕು. ನ್ಯಾಯಾಲಯದ ಆದೇಶವನ್ನು ಪದೇ ಪದೇ ಉಲ್ಲಂಘಿಸುತ್ತಿರುವ ಅಧಿಕಾರಿಗಳು ಮತ್ತು ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಯಾವುದೇ ನೆಪಕ್ಕೂ ಅವಕಾಶ ನೀಡದೆ, ಜೂನ್ 30, 2026ರೊಳಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ನಿರ್ದೇಶಿಸಬೇಕೆಂದು ಪತ್ರದಲ್ಲಿ ಮನವಿ ಮಾಡಲಾಗಿದೆ. ಜಿಬಿಎ ಮಾತ್ರವಲ್ಲದೆ ವಿವಿಧ ಹಂತದ ಪಂಚಾಯತ್ ಹಾಗೂ ಇತರ ಸ್ಥಳೀಯ ಸಂಸ್ಥೆ ಚುನಾವಣೆಗಳು ಸರಿಯಾಗಿ ನಡೆಯದೆ ಸ್ವರಾಜ್ಯ ಕನಸು ಭಗ್ನಗೊಂಡಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದಿರುವುದು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ, ಇದು ಪ್ರಜೆಗಳ ಸಾಂವಿಧಾನಿಕ ಹಕ್ಕಿನ ಹರಣವಾಗಿದೆ. ನ್ಯಾಯಾಂಗವು ಈಗ ಅಂತಿಮ ಭರವಸೆಯಾಗಿದ್ದು, ಸಂವಿಧಾನದ ರಕ್ಷಣೆಗಾಗಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಬೇಕೆಂದು ಪತ್ರದಲ್ಲಿ ವಿನಂತಿಸಲಾಗಿದೆ.

ಅಧಿಕಾರಿಗಳಿಂದ ತಪ್ಪು ಮಾಹಿತಿ ಬೇಡ: ಸಿಎಂ

ಪುಟ 1ರಿಂದ→ ಕಳೆದ ವರ್ಷದ ಬಜೆಟ್‌ನ 15 ಘೋಷಣೆ ಜಾರಿ ಇನ್ನೂ ಆಗಿಲ್ಲ, ಇದಕ್ಕೆ ಯಾರು ಹೊಣೆ? ಈ ವರ್ಷದ ಬಜೆಟ್‌ನಲ್ಲಿ 218 ಹೊಸ ಘೋಷಣೆಗಳು ಸೇರಿದಂತೆ ಒಟ್ಟಾರೆ 565 ಘೋಷಣೆ ಮಾಡಿದ್ದೇವೆ. ಈ ಘೋಷಣೆಗಳನ್ನು ಅದೇ ವರ್ಷ ಜಾರಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ ಯಾಗಿದೆ. ಬಜೆಟ್ ಘೋಷಣೆಗಳು ಯಾವುದೇ ಕಾರಣಕ್ಕೂ ಅನುಷ್ಠಾನಗೊಳ್ಳದೆ ಇರಬಾರದು. ಅನುಷ್ಠಾನದಲ್ಲಿನ ಪ್ರಾಯೋಗಿಕ ತೊಡಕುಗಳನ್ನು ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಬೇಕು ಎಂದು ಸಿಎಂ ಸೂಚಿಸಿದರು.

ಅಧಿಕಾರಕ್ಕೆ ಬಂದ ಬಳಿಕ ರಾಜ್ಯಮಟ್ಟದಲ್ಲಿ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15,334 ಸ್ವೀಕೃತಿಗಳ ಪೈಕಿ 15,295 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಬಾಕಿಯಿರುವ 45 ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕ ಕುಂದುಕೊರತೆಯಲ್ಲಿ 3,27,052 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, 3,17,576 ವಿಲೇವಾರಿ ಮಾಡ ಲಾಗಿದೆ. 1828 ಅರ್ಜಿಗಳ ವಿಲೇವಾರಿ ನಿಗದಿತ ಕಾಲಾವಧಿ ಮುಗಿದಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ ಎಂದರು.

ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೆ ಬಾಕಿಯಿರುವ 32,132 ಹುದ್ದೆಗಳಿವೆ. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿಯಿದ್ದು, ಇದನ್ನು ಆದಷ್ಟು ಬೇಗ ಮುಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು. ವಿವಿಧ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ 2025-26ನೇ ಸಾಲಿನಲ್ಲಿ ರಾಜ್ಯ ಸರ್ಕಾರ ತನ್ನ ಪಾಲಿನ 22,768 ಕೋಟಿ ರೂ. ಬಿಡುಗಡೆ ಮಾಡಿದ್ದು, ಕೇಂದ್ರ ಸರ್ಕಾರ 16,729 ಕೋಟಿ ರೂ. ಬಿಡುಗಡೆ ಮಾಡಿದೆ. ಕೇಂದ್ರದಿಂದ 11,367 ಕೋಟಿ ರೂ. ಅನುದಾನ ಬಿಡುಗಡೆಗೆ ಬಾಕಿಯಿದೆ.

ಸಿಎಂ ಬದಲಾವಣೆ ಶೀಘ್ರ: ಬಿವೈವಿ

•**ಮೈಸೂರು:** ಎಐಸಿಸಿ ಮಲ್ಲಿಕಾರ್ಜುನ ಖರ್ಗೆಯವರು ಸಿಎಂ ಬದಲಾವಣೆ ಕುರಿತು ನೀಡಿರುವ ಹೇಳಿಕೆ ಗಮನಿಸಿದರೆ ರಾಜ್ಯದಲ್ಲಿ ಶೀಘ್ರದಲ್ಲೇ ಸಿಎಂ ಬದಲಾವಣೆ ಆಗಬಹುದೆಂದು ಅನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.


ಶನಿವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡಿ, ಮಠದ ಪೀಠಾಧಿಪತಿಗಳಾದ ಶ್ರೀಶಿವರಾತ್ರಿದೇಶಿಕೇಂದ್ರಸ್ವಾಮಿಯವರ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿರುವ ಕೆಲವರು ಮಲ್ಲಿಕಾರ್ಜುನ ಖರ್ಗೆಯವರೇ ಸಿಎಂ ಆಗಲಿ ಎನ್ನುತ್ತಾರೆ ಮತ್ತೆ ಕೆಲವರು ಡಿಸಿಎಂ ಡಿ. ಕೆ. ಶಿವಕುಮಾರ್ ಮೇ 15ಕ್ಕೆ ಸಿಎಂ ಆಗುತ್ತಾರೆ ಎನ್ನುತ್ತಾರೆ ಎಂದರು.

ಚುನಾವಣೆ ಸಮೀಪ ಕಾರ್ಯಕ್ರಮ ಆಯೋಜನೆ ಮಾಡಿದರೆ, ವಿಜಯೇಂದ್ರ ಅಥವಾ ಬಿಜೆಪಿಗೆ ಬೂಸ್ಟ್ ಆಗುತ್ತಿತ್ತು. ಈಗ ಯಾವುದೇ ಚುನಾವಣೆ ಇಲ್ಲ, ಚಿತ್ರದುರ್ಗದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮ. ಈ ರಾಜ್ಯದಲ್ಲಿ ಅನೇಕರು ಅದೃಷ್ಟದ ಸಿಎಂ ಆಗಿದ್ದಾರೆ. ಆದರೆ, ಬಿ.ಎಸ್. ಯಡಿಯೂರಪ್ಪನವರು ಅದೃಷ್ಟದ ಸಿಎಂ ಅಲ್ಲ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇದ್ದವರು. ಅದಕ್ಕಾಗಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಗೋವಿಂದ ಕಾರಜೋಳ ಅವರ ಅಪೇಕ್ಷೆಯಂತೆ ಚಿತ್ರದುರ್ಗದಲ್ಲಿ ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದರು.

ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಳ: ವಿಜಯೇಂದ್ರ

ಮೈಸೂರು ಉಡ್ತಾ ಪಂಜಾಬ್ ಆಗಿದೆ, ಇಲ್ಲಿ ಡ್ರಗ್ಸ್ ಹಾವಳಿ ವಿಪರೀತವಾಗಿ ಜಾಸ್ತಿಯಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಮನುಷ್ಯತ್ವ ಇಲ್ಲದ ಸರ್ಕಾರ. ಮೈಸೂರಿನಲ್ಲಿ 3 ವರ್ಷದಿಂದ ಒಂದೇ ಒಂದು ಅಭಿವೃದ್ಧಿ ಕೆಲಸ ಆಗಿಲ್ಲ. ರಾಜ್ಯದ ಅಭಿವೃದ್ಧಿಗೆ ಕಾಂಗ್ರೆಸ್ ಮನಸ್ಸು ಮಾಡಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕೇವಲ ಕುರ್ಚಿ ಉಳಿಸಿಕೊಳ್ಳುವ ಹಪಾಹಪಿ ಅಷ್ಟೇ ಕಾಣಿಸುತ್ತಿದೆ. ದೆಹಲಿಗೆ ಒಬ್ಬರ ಹಿಂದೆ ಒಬ್ಬರು ಹೋಗ್ತಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದರು.

ಬಿಎಸ್‌ವೈಗೆ ಶುಭಾಶಯ



ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮನೆಗೆ ಭೇಟಿ ನೀಡಿ 50 ವರ್ಷಗಳ ಯಶಸ್ವಿ ರಾಜಕೀಯ ಪಯಣಕ್ಕೆ ಶುಭಾಶಯ ಕೋರಿದರು.

ಎಲ್‌ಪಿಜಿ ಅನಿಲ ದರ: ಕೇಂದ್ರ ಸರ್ಕಾರದ ಪಾತ್ರವಿಲ್ಲ: ಜೋಶಿ

•**ದಾವಣಗೆರೆ:** ಜಾಗತಿಕ ಮಾರುಕಟ್ಟೆಯಲ್ಲಿನ ಏರಿಳಿತ ಹಾಗೂ ಯುದ್ಧದ ಸನ್ನಿವೇಶದಿಂದಾಗಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಅನಿಲ ದರದಲ್ಲಿ ಏರಿಕೆಯಾಗಿದೆಯೇ ಹೊರತು ಇದರಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಪಷ್ಟಪಡಿಸಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯನ್ನು ತೈಲ ಕಂಪನಿಗಳೇ ನಿರ್ಧರಿಸುತ್ತವೆ. ಈ ಹಿಂದೆ ಯುಪಿಎ ಸರ್ಕಾರವಿದ್ದಾಗಲೇ ಬೆಲೆ ನಿರ್ಧಾರದ ಪ್ರಕ್ರಿಯೆಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಜೋಡಿಸಲಾಗಿತ್ತು. ಹಾಗಾಗಿ ಮಾರುಕಟ್ಟೆಯ ಸ್ಥಿತಿಗತಿಗಳಿಗೆ ಅನುಗುಣವಾಗಿ ದರಗಳು ನಿಗದಿಯಾಗುತ್ತವೆ. ನೆರೆಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ಸ್ಥಿತಿ ಉತ್ತಮವಾಗಿದೆ. ಪಾಕಿಸ್ತಾನದಂತಹ ದೇಶಗಳಲ್ಲಿ ಇಂಧನ ಕೊರತೆಯಿಂದಾಗಿ ಇಡೀ ವ್ಯವಸ್ಥೆಯೇ ಸ್ಥಗಿತಗೊಳ್ಳುವ ಹಂತಕ್ಕೆ ತಲುಪಿದೆ. ಆದರೆ, ನಮ್ಮಲ್ಲಿ ಎಷ್ಟೇ ಕಷ್ಟವಿದ್ದರೂ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಸಮರ್ಥಿಸಿಕೊಂಡರು.

ಭಾರತವು ತನ್ನ ಅಗತ್ಯದ ಶೇ.50ರಷ್ಟು ಅಡುಗೆ ಅನಿಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಪ್ರಸ್ತುತ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧಗಳಿಂದಾಗಿ ಪೂರೈಕೆ ಸರಪಳಿಯಲ್ಲಿ ವ್ಯತ್ಯಯ ಉಂಟಾಗಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಅನಿಲ ಪೂರೈಕೆಯಾಗುವುದರಿಂದ ಅಲ್ಲಿನ ಅಸ್ಥಿರತೆಯು ಬೆಲೆಯ ಮೇಲೆ ಪ್ರಭಾವ ಬೀರಿದೆ. ಜಾಗತಿಕವಾಗಿ ಬೆಲೆ ಇಳಿಕೆಯಾದ ತಕ್ಷಣ ದೇಶೀಯವಾಗಿಯೂ ದರ ತಗ್ಗಲಿದೆ. ದೇಶದ ಇಂಧನ ಭದ್ರತೆಯನ್ನು ಕಾಪಾಡಲು, ಆಮದು ಮೇಲಿನ ಅವಲಂಬನೆ ಕಡಿಮೆಗೊಳಿಸಲು ನಮ್ಮ ಸರ್ಕಾರವು ದೇಶೀಯ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ಕಿರುಸುದ್ದಿ

ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರ ಆರಂಭ

•**ಬೆಂಗಳೂರು:** ವ್ಯಾಪಕವಾಗಿ ಬೆಳೆಯುತ್ತಿರುವ ದೇಶದ ಬಾಹ್ಯಾಕಾಶ ಆರ್ಥಿಕತೆಗೆ ಗಮನಾರ್ಹ ಉತ್ತೇಜನ ನೀಡಲು ರಾಜ್ಯ ಸರ್ಕಾರದ ನೇತೃತ್ವದಲ್ಲಿನ ದೇಶದ ಮೊಟ್ಟ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವು ಬೆಂಗಳೂರಿನಲ್ಲಿ ಕಾರ್ಯಾರಂಭ ಮಾಡಿದೆ. ಬಾಹ್ಯಾಕಾಶ ವಲಯದಲ್ಲಿನ ನಾವೀನ್ಯತೆಯ ಪ್ರಯೋಜನವನ್ನು ವಿವಿಧ ವಲಯಗಳಲ್ಲಿ ಬಳಕೆಗೆ ತರಲು ಹಾಗೂ ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕೆ ದೇಶದ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ ಈ ಉಪಕ್ರಮವು ಒಂದು ಪ್ರಮುಖ ಹೆಜ್ಜೆಯಾಗಿದೆ. ರಾಜ್ಯ ಸರ್ಕಾರವು ಎಸ್‌ಐಎ ಇಂಡಿಯಾ ಸಹಯೋಗದಲ್ಲಿ ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸಂಸ್ಥೆ (ಕೆಐಟಿಎಸ್) ಮೂಲಕ ಸ್ಥಾಪಿಸಿರುವ ಕೇಂದ್ರವನ್ನು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು. ದೇಶದ ತಂತ್ರಜ್ಞಾನ ಮತ್ತು ನಾವೀನ್ಯತೆಯ ಪಯಣದಲ್ಲಿ ಕರ್ನಾಟಕವು ನಿರಂತರವಾಗಿ ಮುಂಚೂಣಿಯಲ್ಲಿದೆ. ಈ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವನ್ನು ಪ್ರಾರಂಭಿಸುವುದರೊಂದಿಗೆ, ನಾವು ರಾಜ್ಯದ ನಾಯಕತ್ವವನ್ನು ಭವಿಷ್ಯದ ಅತ್ಯಂತ ಮಹತ್ವದ ಕ್ಷೇತ್ರಗಳಲ್ಲಿ ಒಂದಾಗಿರುವ ಬಾಹ್ಯಾಕಾಶ ತಂತ್ರಜ್ಞಾನಕ್ಕೆ ವಿಸ್ತರಿಸುತ್ತಿದ್ದೇವೆ ಹೇಳಿದರು. ಸಂಶೋಧನೆಗಳನ್ನು ಮುಂದುವರಿಸುವುದರ ಬಗ್ಗೆ ಮಾತ್ರ ನಾವು ಗಮನ ಕೇಂದ್ರೀಕರಿಸಿಲ್ಲ ಎಂದರು.

ಲಕ್ಕುಂಡಿ ಪುರಾತತ್ವ ಕೇಂದ್ರವಾಗಿಸಲು ಯೋಜನೆಗೆ ಸಿದ್ಧತೆ: ಸಚಿವ ಎಚ್.ಕೆ. ಪಾಟೀಲ

ಲಕ್ಕುಂಡಿಗೆ ರಾಷ್ಟ್ರಮಟ್ಟದ ಸ್ಥಾನ

•**ಗದಗ:** ಐತಿಹಾಸಿಕ ಲಕ್ಕುಂಡಿಯನ್ನು ರಾಷ್ಟ್ರ ಮಟ್ಟದಲ್ಲಿ ಅಗ್ರ ಪುರಾತತ್ವ ಕೇಂದ್ರವನ್ನಾಗಿ ರೂಪಿಸಲು ರಾಜ್ಯ ಸರ್ಕಾರ ಸಮಗ್ರ ಯೋಜನೆ ರೂಪಿಸುತ್ತಿದೆ. ಮುಂದಿನ ಒಂದು ವರ್ಷದಲ್ಲಿ 100ಕ್ಕೂ ಹೆಚ್ಚು ದೇವಾಲಯಗಳು ಮತ್ತು ಬಾವಿಗಳನ್ನು ಅನಾವರಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ತಾಲೂಕಿನ ಲಕ್ಕುಂಡಿಯಲ್ಲಿ ಶನಿವಾರ ಏರ್ಪಡಿಸಿದ್ದ 6 ಸ್ಮಾರಕಗಳ ಸಂರಕ್ಷಣೆ, ಅಭಿವೃದ್ಧಿ ಕಾಮಗಾರಿ ಶಿಲಾನ್ಯಾಸ, ದಶ ಬಾವಿ, ದಶ ದೇವಾಲಯ ಅನಾವರಣ, ಪ್ರಾಚ್ಯವಶೇಷಗಳ ಅನ್ವೇಷಣಾ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಈಗಾಗಲೇ ಪಂಚ ದೇವಾಲಯ ಮತ್ತು ಪಂಚಬಾವಿಗಳ ಅನಾವರಣ ಯಶಸ್ವಿಯಾಗಿ ನಡೆದಿದೆ. ಇದೀಗ 10 ಬಾವಿ, ದೇವಾಲಯಗಳನ್ನು ಸಾರ್ವಜನಿಕರಿಗೆ ಪರಿಚಯಿಸಲಾಗಿದೆ. ಈ ಮೂಲಕ ಪುರಾತತ್ವ ಸ್ಮಾರಕಗಳ ಸಂಖ್ಯೆ 70ರ ಗಡಿ ದಾಟಿದೆ ಎಂದು ಹೇಳಿದರು.

ಲಕ್ಕುಂಡಿಯ ಅನೇಕ ದೇವಾಲಯಗಳು ಮತ್ತು ಬಾವಿಗಳು ಕಾಲಕ್ರಮೇಣ ನಿರ್ಲಕ್ಷ್ಯದಿಂದ ತಮ್ಮ ಗುರುತನ್ನು ಕಳೆದುಕೊಂಡಿದ್ದವು. ಅವುಗಳನ್ನು ಪತ್ತೆ ಹಚ್ಚಿ ಪುನರುಜ್ಜೀವನಗೊಳಿಸುವ ಕಾರ್ಯವನ್ನು ಸರ್ಕಾರ ಮತ್ತು ಸ್ಥಳೀಯರ ಸಹಕಾರದಿಂದ ಯಶಸ್ವಿಯಾಗಿ ಕೈಗೊಳ್ಳಲಾಗಿದೆ. 2026ರೊಳಗೆ ಕನಿಷ್ಠ 50 ಬಾವಿ ಮತ್ತು 50 ದೇವಾಲಯಗಳನ್ನು ಅನಾವರಣಗೊಳಿಸಿ 100ರ ಗಡಿಯನ್ನು ದಾಟುವ



ಗುರಿ ಹೊಂದಲಾಗಿದೆ. ಇದಕ್ಕೆ ಲಕ್ಕುಂಡಿ ಜನರ ಸಹಕಾರ ಅತ್ಯಗತ್ಯ ಎಂದು ಮನವಿ ಮಾಡಿದರು.

ಶಾಸಕ ಸಿ.ಸಿ.ಪಾಟೀಲ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಪುರಾತತ್ತವ ಇಲಾಖೆ ಆಯುಕ್ತ ಎ.ದೇವರಾಜು, ಲಕ್ಕುಂಡಿ ಪ್ರಾಧಿಕಾರ ಆಯುಕ್ತ ಡಾ. ಶರಣು ಗೋಗೇರಿ, ಜಿಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಉಪ ವಿಭಾಗಾಧಿಕಾರಿ ಎಂ.ಗಂಗಪ್ಪ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ, ಸಲಹಾ ಸಮಿತಿ ಸದಸ್ಯರಾದ ಜಿ.ಸಿ. ಬೆಟಸೂರುಮಠ, ಸಿದ್ದು ಪಾಟೀಲ ಇದ್ದರು.

10 ಕೋಟಿ ರೂ.ಬಿಡುಗಡೆ

ಸ್ಮಾರಕಗಳ ಅಭಿವೃದ್ಧಿಗೆ ಪ್ರಸ್ತುತ 10.16 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಹಾಲಗುಂಡಿಯಲ್ಲಿ ಬಸವೇಶ್ವರ ದೇವಾಲಯಕ್ಕೆ 1.58 ಕೋಟಿ, ಕನ್ನೇರ ಬಾವಿಗೆ 1.70 ಕೋಟಿ, ಮಲ್ಲಿಕಾರ್ಜುನ ದೇವಾಲಯಕ್ಕೆ 1.67 ಕೋಟಿ, ವೀರೂಪಾಕ್ಷೇಶ್ವರ ದೇವಾಲಯಕ್ಕೆ 1.81 ಕೋಟಿ, ಚಂದ್ರಮೌಳೇಶ್ವರ ದೇವಾಲಯಕ್ಕೆ 1.80 ಕೋಟಿ, ಕಲ್ಮಠ ದ್ವಾರಬಾಗಿಲು ಮತ್ತು ಬಾವಿಗೆ 1.50 ಕೋಟಿ ಮಂಜೂರಾಗಿದೆ. ಲಕ್ಕುಂಡಿಯಲ್ಲಿ ದೇಶದಲ್ಲೇ ಅತ್ಯುತ್ತಮ ಬಯಲು ವಸ್ತು ಸಂಗ್ರಹಾಲಯ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ ಈಗಾಗಲೇ 1200ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳಿಗೆ ಸಂಖ್ಯೆ ನೀಡಲಾಗಿದೆ. ಶೀಘ್ರದಲ್ಲೇ ಈ ಸಂಖ್ಯೆ 2000 ದಾಟುವ ನಿರೀಕ್ಷೆಯಿದೆ ಎಂದು ಹೇಳಿದರು.

ಕೃಷಿಯತ್ತ ಯುವಕರು ಮುಖ ಮಾಡಲಿ: ಸಿಎಂ

•**ಬೆಂಗಳೂರು:** ಕೃಷಿಯನ್ನು ಲಾಭದಾಯಕವಾಗಿಸಲು ವೈಜ್ಞಾನಿಕ ನೆರವನ್ನು ನೀಡಲು ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.



ಶನಿವಾರ ಓಕಳೀಪುರಂನಲ್ಲಿ ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಾಗೂ ಇ-ರೇಷ್ಮೆ ಪೋರ್ಟಲ್ ಬಿಡುಗಡೆ ನೆರವೇರಿಸಿ ಮಾತನಾಡಿದರು. ರೇಷ್ಮೆ ಮೇಲೆ 1.50 ಲಕ್ಷ ಕುಟುಂಬಗಳು ಇದರ ಮೇಲೆ ಅವಲಂಬಿಸಿದ್ದು, ರೇಷ್ಮೆ ಲಾಭದಾಯಕವಾದ ಕಸುಬು. ಅದಕ್ಕಾಗಿಯೇ ಹೆಚ್ಚು ಜನ ವ್ಯವಸಾಯದ ಜೊತೆಗೆ ಉಪಕಸುಬು ಮಾಡಬೇಕು ಎಂದರು. ಕೃಷಿಯಿಂದ ವಿಮುಖರಾಗುತ್ತಿರುವ ಯುವ ಜನಾಂಗವನ್ನು ಪುನ: ಸೆಳೆಯಲು ರೇಷ್ಮೆ ತೋಟಗಾರಿಕೆ, ಪಶುಸಂಗೋಪನೆಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದರು.

ಬೈವೋಲ್ಟೀನ್ ರೇಷ್ಮೆಗೆ ಬೇಡಿಕೆ: ಬೈವೋಲ್ಟೀನ್ ರೇಷ್ಮೆಗೆ ಬೇಡಿಕೆ ಹೆಚ್ಚಾಗಿದ್ದು, ನಮ್ಮ ಸರ್ಕಾರದ ಅವಧಿಯಲ್ಲಿ ಸಾಗಾಣಿಕೆ ವೆಚ್ಚವನ್ನು 10 ರಿಂದ 20. ರೂ. ಗಳಿಗೆ ಹೆಚ್ಚಿಸಲಾಯಿತು ಮತ್ತು ಬೈವೋಲ್ಟೀನ್ ಬೆಳೆಯಲು ಹೆಚ್ಚಿನ ನೆರವನ್ನು ನೀಡಲು ಬದ್ಧವಾಗಿದೆ ಎಂದರು. ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಹಾಲು ಉತ್ಪಾದನೆಯಲ್ಲಿ ಎರಡನೇ ಸ್ಥಾನ ಹಾಗೂ ಕಾಫಿ ಉತ್ಪಾದನೆಯಲ್ಲಿಯೂ ಮೊದಲ ಸ್ಥಾನದಲ್ಲಿದ್ದೇವೆ. ಒಂದು ದಿನಕ್ಕೆ 1 ಕೋಟಿ ಲೀ. ಹಾಲು ಹಾಲು ಉತ್ಪಾದನೆಯಲ್ಲಿ 1.22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ ಹಾಕಲಾಗಿದೆ ಎಂದು ವಿವರಿಸಿದರು.

ಇತರೆ ಇಲಾಖೆಗಳಿಗೂ ಸ್ಥಳಾವಕಾಶ: ಓಕಳೀಪುರಂನಲ್ಲಿರುವ 4 ಎಕರೆ 25 ಗುಂಟೆ ವಿಸ್ತೀರ್ಣದ ಈ ಸ್ಥಳ ರೇಷ್ಮೆ ಇಲಾಖೆಗೆ ಸೇರಿದ್ದು 1995 ರಲ್ಲಿ ಇದನ್ನು ಖರೀದಿಸಲಾಗಿತ್ತು ಎಂದರು. ಸಚಿವರಾದ ದಿನೇಶ್ ಗುಂಡೂರಾವ್, ವೆಂಕಟೇಶ್, ಖನಿಜ ನಿಗಮದ ಅಧ್ಯಕ್ಷ ಜಿ.ಎಸ್ .ಪಾಟೀಲ್, ಉಪಾಧ್ಯಕ್ಷ ಹೆಚ್. ಲಕ್ಷ್ಮಣ್, ರೇಷ್ಮೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು

ಬಿ.ಎಸ್. ಯಡಿಯೂರಪ್ಪ ಮತ್ತು ಬಸವ ಪ್ರಜ್ಞೆ

▸**ಬಿ. ವಿ. ವಸಂತಕುಮಾರ್**, ಪ್ರಾಧ್ಯಾಪಕರು

1026ರಲ್ಲಿ ಘಜ್ನಿ ಮಹಮದ್ ಗುಜರಾತಿನ ಸೋಮನಾಥ ದೇವಾಲಯವನ್ನು ಅಲ್ಲಿರುವ ಲಿಂಗವನ್ನು ಭಂಜಿಸಿ ಹಿಂದೂ ಧರ್ಮ, ಹಿಂದೂ ಸಮಾಜಕ್ಕೆ ಕಂಟಕಪ್ರಾಯವಾದನು. ಅದರ ಪರಿಣಾಮ ಗುಜರಾತಿನ ಓಹಿಲಯ್ಯ, ಒರಿಸ್ಸಾದ ಉದ್ಭವಯ್ಯ ಮೊದಲಾದ ಶಿವಭಕ್ತರು ಕರ್ನಾಟಕಕ್ಕೆ ಬಂದರು.

ಲಕುಳೇಶ್ವರ ಪಂಡಿತ ಎಂಬ ಕಾಳಾ ಮೂರ್ಖ ಗುರು ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯನ್ನು ತನ್ನ ಕರ್ಮ ಭೂಮಿಯನ್ನಾಗಿಸಿಕೊಂಡರು. ಅದರ ಪರಿಣಾಮ ಎರಡು ನೂರು ವರ್ಷ ಬಳ್ಳಿಗಾವೆಯ ಕೋಡಿಮಠ ಕಾಳಾಮುಖ ಕೇಂದ್ರವಾಗಿ ಒಂದು ಶ್ರೇಷ್ಠ ವಿಶ್ವವಿದ್ಯಾಲಯವಾಗಿ ಕರ್ನಾಟಕವನ್ನೂ, ಭಾರತವನ್ನೂ, ಹಿಂದೂ ಧರ್ಮವನ್ನೂ, ಹಿಂದೂ ಸಮಾಜವನ್ನೂ, ಹಿಂದೂ ದರ್ಶನವನ್ನೂ ಉಳಿಸಿ ಬೆಳೆಸುವ ಶಿವಪ್ರಜ್ಞೆಗೂ, ಬಸವಪ್ರಜ್ಞೆಗೂ ವೀರಶೈವ ಲಿಂಗಾಯತ ಚಳವಳಿಗೂ ಕಾರಣವಾಗಿದೆ. ಮಧ್ಯಕಾಲೀನ ಭಾರತದ ಇತಿಹಾಸದ ಶುಭಪ್ರಜ್ಞೆಯನ್ನು ಬಸವಪ್ರಜ್ಞೆಯನ್ನು ಮತ್ತೆ ಮತ್ತೆ ನಾಡಿನಾದ್ಯಂತ ಎಚ್ಚರಿಸುತ್ತಿರುವವರು ಶರಣರು. ಅವರ ವಿಶಿಷ್ಟ ಪ್ರತಿನಿಧಿ ಶಿವಪ್ರಜ್ಞೆಯ, ಹೊಸ ಪ್ರಜ್ಞೆಯ, ಕಾಯಕದಾಸೋಹಿ ಹೋರಾಟಗಾರರು ಬಿ. ಎಸ್. ಯಡಿಯೂರಪ್ಪ ಇವರೂ ಕೂಡಾ ಮಂಡ್ಯ ಜಿಲ್ಲೆಯಿಂದ ಬಂದು ಶಿಕಾರಿಪುರ ತಾಲೂಕನ್ನು ಕರ್ಮ ಭೂಮಿಯನ್ನಾಗಿಸಿಕೊಂಡವರು. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಿಜೆಪಿ ಸರ್ಕಾರವನ್ನು ಕರ್ನಾಟಕದಲ್ಲಿ ತಂದವರು. ಆ ಮೂಲಕ 'ಅಹಿಂದು' ಮಾನಸಿಕತೆಯನ್ನು ಬಿತ್ತಿ ಬೆಳೆಯುತ್ತಿದ್ದ ದಕ್ಷಿಣ ಭಾರತದಲ್ಲಿ ಶಿವ ಪ್ರಜ್ಞೆಯ, ಬಸವಪ್ರಜ್ಞೆಯ 'ಹಿಂದುತ್ವ'ವನ್ನು ಜಾಗೃತಗೊಳಿಸಿದವರು. ಜಾತಿಯತೆ, ಅಸ್ಪೃಶ್ಯತೆ, ಅಸಮಾನತೆಗಳಿಲ್ಲದ ಹಿಂದೂ ಧರ್ಮವನ್ನು, ಹಿಂದೂ ಸಮಾಜವನ್ನು ಕಟ್ಟಬಯಸಿದವರು, ಕಟ್ಟಿದವರು. ಶಿಕಾರಿಪುರ ತಾಲೂಕಿನ ಸಾವಿರಾರು ವರ್ಷಗಳ ಸಂಸ್ಕೃತಿಯೇ ಮೈವೆತ್ತಂತೆ ಮೈದಾಳಿದವರು ಬಿಎಸ್ ಯಡಿಯೂರಪ್ಪ. ತಾಳಗುಂದದ ಮಯೂರ ಶರ್ಮನ ಸ್ವಾಭಿಮಾನದ ಕ್ಷಾತ್ರಗುಣ, ಬಳ್ಳಿಗಾವೆಯ ದೀನ ದಲಿತೋದ್ಧಾರಕ ಜ್ಞಾನ ಯೋಗಿ ಅಲ್ಲಮ ಪ್ರಭುವಿನ ಸಂಘಟನಾ ಶಕ್ತಿ, ಉಡುತಡಿಯ ವೀರ ವಿರಾಗಿಣಿ ಅಕ್ಕಮಹಾದೇವಿಯ ನಿರ್ಭೀತ ನಿಷ್ಕಾಮ ಪ್ರೇಮದ ಹೃದಯವಂತ ಮುಗ್ಧತೆ ಮುಪ್ಪುರಿಗೊಂಡವರಂತೆ ಗೋಚರಿಸುವವರು ಬಿ.ಎಸ್. ಯಡಿಯೂರಪ್ಪ. ಅವರ ಪ್ರಜ್ಞೆ ಔಪಚಾರಿಕ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳಿಂದ ರೂಪುಗೊಂಡದ್ದಲ್ಲ. ಅವರ ಪ್ರಜ್ಞೆ ಅವರ ತಾಯಿ ಪುಟ್ಟ ತಾಯಮ್ಮ, ತಂದೆ ಸಿದ್ದಲಿಂಗಪ್ಪ, ಅಜ್ಜ ಸಂಗಪ್ಪ, ಪತ್ನಿ ಮೈತ್ರಿದೇವಿ ಹಾಗೂ ಅವರನ್ನು ಬೆಳೆಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ,ಶಿಕಾರಿಪುರ ತಾಲೂಕಿನ ಕರ್ನಾಟಕದ ಶ್ರೀಸಾಮಾನ್ಯರ ಜೀವನಾನುಭವಿಗಳಿಂದ ರೂಪುಗೊಂಡ ಪ್ರಜ್ಞೆ. ಅದು ಶಿವಪ್ರಜ್ಞೆ.ಅದು ಬಸವಪ್ರಜ್ಞೆ. ಅದು ಯಡಿಯೂರಪ್ಪ ಪ್ರಜ್ಞೆ.

ಬಿಎಸ್ ಯಡಿಯೂರಪ್ಪ ಅವರನ್ನು ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ನೌಕರರ ಮಗನಲ್ಲ ಎಂಬ ಕಾರಣಕ್ಕೆ ಹಿಂದಿನ ಬೆಂಚಿಗೆ ಕಳಿಸಿದ ಘಟನೆಯನ್ನು ಅವರ ಸಹಪಾಠಿ ಎಸ್. ಶಂಕರರಾವ್ ಅವರು 'ನಾ ಬಲ್ಲ ಯಡಿಯೂರಪ್ಪ' ಎಂಬ ಲೇಖನದಲ್ಲಿ ದಾಖಲಿಸಿದ್ದಾರೆ. ಐದು ಆರನೆಯ ತರಗತಿಯಿಂದಲೇ ಇಂಥ ಅಪಮಾನವನ್ನು ಶಾಲೆಯಿಂದ, ಉಪಾಧ್ಯಾಯರಿಂದಲೇ ಅನುಭವಿಸುತ್ತಾ ಜೀವನ ಪಾಠ ಕಲಿತ ಯಡಿಯೂರಪ್ಪನವರು ಅಪಮಾನಗಳಿಂದ ಕೊರಗುತ್ತಾ ಕುಳಿತು ಶರಣಾಗತಿ ಅಥವಾ ಪಲಾಯನವಾದವನ್ನು ಮಾಡಿದವರಲ್ಲ. ಅಪಮಾನಗಳನ್ನು ಮೆಟ್ಟಿಲುಗಳನ್ನಾಗಿಸಿಕೊಂಡು ಸಿಡಿಲಿನಂತೆ ಘರ್ಜಿಸಿ ಸ್ವಯಂ ಮೇವ ಮೃಗೇಂದ್ರತಾ ಅಂದರೆ ನಿನಗೆ ನೀನೇ ಸಿಂಹನಾಗು, ನಿನಗೆ ನೀನೇ ಶಿಲ್ಪಿ ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಬೆಳದು ನಿಂತವರು. ಒಂದು ಸರ್ಕಾರವನ್ನೇ ಮುನ್ನಡೆಸುವ ಮುಖ್ಯಮಂತ್ರಿ ಪಟ್ಟದಲ್ಲಿ ನಾಲ್ಕು ಬಾರಿ ಕುಳಿತವರು. ಅವರ ಶುಭ್ರವಾದ ಬಿಳಿಯ ಸಫಾರಿ ಅಂಗಿಯಲ್ಲಿ ಯಾವಾಗಲೂ ಒಂದು ಪೆನ್ನು ಮತ್ತು ಒಂದು ಹಾಳೆ ಇದ್ದೇ ಇರುತ್ತದೆ. ಮಾಡಬೇಕಾದ ಕೆಲಸಗಳ ಪಟ್ಟಿ ಆ ಹಾಳೆಯನ್ನು ತುಂಬಿರುತ್ತದೆ. ಆದ ಕೆಲಸವನ್ನು ತಕ್ಷಣವೇ ಸಂಬಂಧಪಟ್ಟವರಿಗೆ ಮರೆಯದೆ ತಿಳಿಸುವ ತಾಯ್ತನದ ಸೇವಾ ತುಡಿತ ಅವರ ಎದೆ- ಮೆದುಳು- ಕಣ್ಣು -ಕೈಕಾಲುಗಳಲ್ಲಿದೆ. ಇದು ಅವರ ಬಸವ ಪ್ರಜ್ಞೆಯ ಭಕ್ತಿ ಭಂಡಾರಿತನ. ಬಿಎಸ್ ಯಡಿಯೂರಪ್ಪನವರ ಎದೆ ಸೀಳಿದರೆ ಬಸವಣ್ಣ ಕಾಣುವುದಿಲ್ಲ ಏಕೆಂದರೆ ಸ್ವತಹ ಅವರೇ ಆಧುನಿಕ ಬಸವಣ್ಣ . ಅವರ ಎದೆ ಸೀಳಿದರೆ ಅಲ್ಲಿ ಜನ ,ಜನ, ಜನ, ನೊಂದ ಜನರು ಮಾತ್ರ ಕಾಣಿಸುತ್ತಾರೆ. ಜನಸೇವೆಯನ್ನೇ ಜನಾರ್ದನ ಸೇವೆ ಎಂದು ಭಾವಿಸಿ ಬದುಕಿದವರು ಯಡಿಯೂರಪ್ಪ.

ಯಡಿಯೂರಪ್ಪನವರು ಸಿಟ್ಟು ಮಾಡಿಕೊಂಡು ಯಾರಿಗೆ ಎಷ್ಟೇ ಏನೇ ಗದರಿದರೂ ಎಂದೂ ಅವರು ಶಿಕ್ಷಕರಿಗೆ ಮತ್ತು ಮಹಿಳೆಯರಿಗೆ ಬೈದಿರುವುದನ್ನು ನಾನು ಕಂಡಿಲ್ಲ. ಪೊಲೀಸರ, ಇಂಜಿನಿಯರ್‌ಗಳ ಮೇಲೆ ಅವರ ಅನ್ಯಾಯಗಳ ಕಂಡು ಕೆಂಡದುಂಡೆಯಾಗುವ ಯಡಿಯೂರಪ್ಪನವರು ಶಿಕ್ಷಕರು ಮತ್ತು ಮಹಿಳೆಯರನ್ನು ಅತೀವವಾಗಿ ಗೌರವಿಸುತ್ತಾರೆ. ಅವರ ಕೆಲಸಗಳನ್ನು ಮೊದಲ ಆದ್ಯತೆಯಿಂದ ಆಗು ಮಾಡಿದ್ದಾರೆ. ಶಿಕ್ಷಕ ಪ್ರೇಮಿ, ಮಾತೃ ಪ್ರೇಮಿ ಬಿಎಸ್ ಯಡಿಯೂರಪ್ಪ. ಶಿಕಾರಿಪುರ ತಾಲೂಕಿನಾದ್ಯಂತ ಶಿಕ್ಷಣ ಸಂಸ್ಥೆಗಳು ಸರ್ವಾಂಗೀಣವಾಗಿ ಬೆಳೆಯಲು ಬೇಕಾದ ಎಲ್ಲಾ ಅತ್ಯಗತ್ಯವಾದ ಕ್ರಮಗಳನ್ನು 1975ರಿಂದಲೇ ನೀಡುತ್ತಾ ಬಂದವರು. ಅವರಿಗೆ ಭೌತಿಕ ಪ್ರಗತಿ ಎಷ್ಟು ಮುಖ್ಯವೋ ಸಾಂಸ್ಕೃತಿಕ ಸಮೃದ್ಧಿಯು ಅಷ್ಟೇ ಮುಖ್ಯ.

ಬಿಎಸ್ ಯಡಿಯೂರಪ್ಪನವರ ಮೈ ಮತ್ತು ಮಾತು ಎಷ್ಟು ಗಟ್ಟಿಯೋ ಅವರ ಮನಸ್ಸು ಮತ್ತು ಆತ್ಮ ಅಷ್ಟೇ ಮೃದು ಮತ್ತು ಕಾಂತಿಮಯ. ಗಟ್ಟಿಗುಂಡಿಗೆ ಇರೋ ವ್ಯಕ್ತಿ ಯಡಿಯೂರಪ್ಪ ಎನ್ನುವ ಗುರುಮೂರ್ತಿ ಅವರು 'ಎಲ್ಲಿಯವರೆಗೆ ಹೋರಾಟ, ಗೆಲ್ಲುವವರೆಗೂ ಹೋರಾಟ' ಎಂಬ ತಮ್ಮ ಲೇಖನದಲ್ಲಿ "ನಾನು ಗಮನಿಸಿದ ಹಾಗೆ ಯಡಿಯೂರಪ್ಪನವರು ತಮ್ಮ ಭಾಷಣಗಳಲ್ಲಿ ರೈತರ, ಮಹಿಳೆಯರ, ದಲಿತ- ದಮನಿತರ ವಿಷಯಗಳ ಬಗ್ಗೆ ಬಹಳ ಒತ್ತುಕೊಡುತ್ತಾರೆ. ಅದರ ಪರಿಣಾಮವೇ ಅವರು ಒಬ್ಬ ಜನನಾಯಕನಾಗಿ ಬೆಳೆದಿದ್ದು" ಎಂದು ಬರೆಯುತ್ತಾ ಯಡಿಯೂರಪ್ಪನವರ ತೀವ್ರವಾದ ಹೃದಯವಂತಿಕೆಗೆ ಸಾಕ್ಷಿಯಾದ ಒಂದು ಘಟನೆ ಬಗ್ಗೆ ಬರೆಯುತ್ತಾ "ತಮ್ಮ ಕ್ಷೇತ್ರದಲ್ಲಿ ಸಂಚರಿಸುವಾಗ ದಾರಿಯಲ್ಲಿ ಸಿಕ್ಕ ತಬ್ಬಲಿ ನಾಯಿಮರಿಯನ್ನು ತಮ್ಮ ಕಾರಿನಲ್ಲಿ ಮನೆಗೆ ತಂದವರು ಯಡಿಯೂರಪ್ಪ. ಅದನ್ನು ತಮ್ಮ ಸೊಸೆಯ ಸುಪರ್ದಿಗೆ ಬಿಟ್ಟು ಅದರ ಆರೈಕೆಯ ಕಾಳಜಿ ವಹಿಸಿದ್ದರು ಎಂಬುದು ಬಹಳ ಜನರಿಗೆ ಗೊತ್ತಿರದ ಸಂಗತಿ" ಎಂದಿದ್ದಾರೆ. ಹೌದು ಜೀತ ವಿಮುಕ್ತಿ ಬಗರ್ ಹುಕುಂ ಹೋರಾಟಗಳಾದಿಯಾಗಿ ತಬ್ಬಲಿ ನಾಯಿಮರಿಯ ಆರೈಕೆವರೆಗೆ ಸ್ಪಂದಿಸಿರುವ ಪ್ರಜ್ಞೆ ಬಿ.ಎಸ್. ಯಡಿಯೂರಪ್ಪನವರ ಪ್ರಜ್ಞೆ. ಇದು ಕೇವಲ ಬೌದ್ಧಿಕವಾದ ವಿಚಾರವಾದಿ ಆಷಾಢಭೂತಿ ಪ್ರಜ್ಞೆಯಲ್ಲ. ಇದು ಸಾಮಾಜಿಕ ಕಳಕಳಿ, ಜೀವನಾನು ಭವ, ರಾಷ್ಟ್ರ ಪುನರ್ ನಿರ್ಮಾಣದ ಧ್ಯೇಯವಾದದ ಕಿಚ್ಚಿನಿಂದ ಬಸವಾದಿ ಶರಣರ ನಡೆನುಡಿ ಒಂದಾದ ಸಿದ್ಧಾಂತದಿಂದ ಪಡಿ ಮೂಡಿದ ಪ್ರಜ್ಞೆ. ಹಾಗಾಗಿಯೇ ಇದರ ಮೂಲ ಶಿವಪ್ರಜ್ಞೆ, ಬಸವ ಪ್ರಜ್ಞೆಯಲ್ಲಿದೆ.



ಬಿಎಸ್ ಯಡಿಯೂರಪ್ಪನವರಿಗೆ ಶಿಕ್ಷಣ ಮತ್ತು ಸಂಸ್ಕೃತಿಯ ಬಗ್ಗೆ ಅಪಾರವಾದ ಪ್ರೀತಿ. ಅವರ ನಡೆ-ನುಡಿಯಲ್ಲಿ ಅದು ಎದ್ದು ಕಾಣುತ್ತದೆ. ಅವರ ಒಡನಾಟ ಸಿಕ್ಕವರಿಗೆಲ್ಲ ಅವರ ಹೃದಯಸ್ಪರ್ಶಿ ಅಂತಃಕರಣದ ಮಾನವೀಯ ಸ್ಪರ್ಶ ಆಗಿಯೇ ಇರುತ್ತದೆ. ಅವರನ್ನು ಕುರಿತು ಚಿಕ್ಕಣ್ಣ ಜೋಯಿಸ್ ಎಸ್. ಕೆ. ಅವರು "ಸಂಕಷ್ಟದಲ್ಲಿದ್ದವರ ಸಹಾಯಕ್ಕೆ ಸದಾ ಸಿದ್ಧ" ಎಂಬ ಲೇಖನದಲ್ಲಿ ಬರೆಯುತ್ತಾ- ಯಡಿಯೂರಪ್ಪನವರ ಆತ್ಮೀಯರಲ್ಲಿ ನಾನು ಒಬ್ಬನಾಗಿದ್ದೆ . ಒಂದು ಸಾರಿ ಒಂದು ಪ್ರಶ್ನೆಯನ್ನು ಮುಂದಿಟ್ಟರು. ಏನೆಂದರೆ ಭವಾನಿ ರಾವ್ ಕೇರಿಯಲ್ಲಿ ಒಂದು ಶಾಲೆ ಮಾಡಬೇಕೆಂದು ಕೊಂಡಿದ್ದೇನೆ. ಮಾಡಲೋ, ಬೇಡವೋ ಎಂದು. ಆಗ ನಾನು ಹೇಳಿದೆ ಬೇಡವೇ ಬೇಡ ಎಂದು, ಏಕೆ ? ಎಂದು ಪ್ರಶ್ನಿಸಿದರು. ಮುಂದೆ ಸಂಸ್ಥೆ ಬೆಳೆದಂತೆಲ್ಲಾ ಸತ್ಯಾಗ್ರಹ ಚಳುವಳಿ ಪ್ರಾರಂಭವಾಗಬಹುದು ಎಂದು ಹೇಳಿದೆ. ಆದರೆ ಅವರು ನನ್ನ ಮಾತನ್ನು ಕೇಳದೆ ಹಠದಿಂದ ಶಾಲೆಯನ್ನು ಬಿಟ್ಟರು. ಹೀಗೆ ಯಾವುದೇ ಕೆಲಸ ಬಂದರೂ ಚಾಲೆಂಜ್ ಆಗಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದುದರಿಂದ ಮುಂದೆ ಯಶಸ್ವಿಯಾದರು.

ಹೀಗೆ ಭವಾನಿರಾವ್ ಕೇರಿಯಲ್ಲಿ ಅಕ್ಕಮಹಾದೇವಿ ಪ್ರಾಥಮಿಕ ಶಾಲೆಯನ್ನು 1990ರ ದಶಕದಲ್ಲಿ ಪ್ರಾರಂಭಿಸಿದ ಬಿಎಸ್ ಯಡಿಯೂರಪ್ಪನವರು ಮುಂದೆ ಶಿಕಾರಿಪುರದಲ್ಲಿ ಕುಮದ್ವತಿ ಬಿಎಡ್ ಕಾಲೇಜು ತೆರೆದರು. ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ ಹೆಸರಿನಲ್ಲಿ ಶಿಕಾರಿಪುರವನ್ನು ಇಂದು ಶಿಕ್ಷಣ ಕಾಶಿಯನ್ನಾಗಿಸಿದ್ದಾರೆ. ಶಿವಮೊಗ್ಗ ನಗರದಲ್ಲೂ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಿದ್ದಾರೆ. ಆ ದಿನಗಳಲ್ಲಿ ಶಿಕಾರಿಪುರದಲ್ಲಿ ಮಂಗಳ ಭವನವನ್ನು ನಿರ್ಮಾಣ ಮಾಡಿ ಶಿಕಾರಿಪುರದ ಜನತೆಗೆ ಒಂದು 'ಸೌರಭ' ಎಂಬ ಹೆಸರಿನ ಸಾಂಸ್ಕೃತಿಕ ಸಂಸ್ಥೆಯನ್ನೂ ಕಟ್ಟಿ ಬೆಳೆಸಿದರು. ತಾಲೂಕಿನಾದ್ಯಂತ ಸರ್ಕಾರಿ ಶಾಲಾ ಕಾಲೇಜುಗಳನ್ನೂ ಸರ್ವಾಂಗೀಣವಾಗಿ ಬಲಗೊಳಿಸಿದರು. ಯಾವುದೇ ವರ್ಗಾವಣೆಯಾದಾಗಲೂ ತಾಲೂಕಿಗೆ ಶಿಕ್ಷಕರ ಕೊರತೆ ಆಗದಂತೆ ನೋಡಿಕೊಂಡರು. ಉತ್ತಮ ಶಿಕ್ಷಕರಿಗೆ ಪ್ರೀತಿ, ಪ್ರೋತ್ಸಾಹ ನೀಡಿ ಬೆನ್ನು ತಟ್ಟಿ ಬೆಳೆಸಿದರು. ಉತ್ತಮ ಶಿಕ್ಷಕರು, ಶೈಕ್ಷಣಿಕ ಆಡಳಿತಗಾರರು ಎಲ್ಲೇ ಇದ್ದರೂ ಗುರುತಿಸಿ ತಾಲೂಕಿಗೆ ಕರೆತರುವ ಕೆಲಸ ಮಾಡಿದರು. ಇದೆಲ್ಲದರ ಪರಿಣಾಮ ಶಿಕಾರಿಪುರ ತಾಲೂಕು ಭೌತಿಕವಾಗಿ ಎಷ್ಟು ಪ್ರಗತಿ ಸಾಧಿಸಿದೆಯೋ ಅಷ್ಟೇ ಪ್ರಗತಿಯನ್ನು ಶೈಕ್ಷಣಿಕ -ಸಾಂಸ್ಕೃತಿಕವಾಗಿಯೂ ಸಾಧಿಸಿದೆ. ಕಣ್ಣು ಬಿಟ್ಟಾಗಲೂ ಕಣ್ಣು ಮುಚ್ಚಿದಾಗಲೂ ಲೋಕ ಕಲ್ಯಾಣದ ಕನಸುಗಳನ್ನು ಕಾಣುವ ಅಪರೂಪದ ವ್ಯಕ್ತಿ ಬಿಎಸ್ ಯಡಿಯೂರಪ್ಪ .ಆದಕ್ಕೆ ಅವರು ಉಪಮುಖ್ಯಮಂತ್ರಿ ,ಮುಖ್ಯಮಂತ್ರಿಗಳಾದಾಗ ಸಾಧಿಸಿರುವ ಸಾಧನೆಗಳೇ ಸಾಕ್ಷಿ.

ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ತರಲು ಕೇಂದ್ರ ಸರ್ಕಾರದ ಎದುರು ಧರಣಿಗೆ ಮುಂದಾದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ. ಶಾಸ್ತ್ರೀಯ ಸ್ಥಾನಮಾನ ತಂದ ಬಳಿಕ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ತಲ ಎರಡೆರಡು ಕೋಟಿ ರೂಪಾಯಿಗಳನ್ನು ನೀಡಿ ಕನ್ನಡ ಭಾಷೆಯ ಆಳವಾದ ಸಂಶೋಧನೆಗೆ ಪುಸ್ತಕಗಳ ಪ್ರಕಟಣೆಗೆ ಕಾರಣರಾದವರು ಶಿಕ್ಷಣ- ಸಂಸ್ಕೃತಿ ಪ್ರೇಮಿ ಯಡಿಯೂರಪ್ಪ. ಯಡಿಯೂರಪ್ಪನವರು ಉಪಮುಖ್ಯಮಂತ್ರಿ ಡಿ. ಎಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಮಂತ್ರಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಅವರೆಲ್ಲ ಸೇರಿ ಕರ್ನಾಟಕ ರಾಜ್ಯದಲ್ಲಿ 167ಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಿದರು. ಗ್ರಾಮಗಳ ಮಟ್ಟಕ್ಕೆ ಬಡವರ ಮನೆ ಬಾಗಿಲಿಗೆ ಉನ್ನತ ಶಿಕ್ಷಣ ಕೊಂಡೊಯ್ದ ಕೀರ್ತಿ ಇವರದು.

ರಾಜ್ಯದಲ್ಲಿ ಅನೇಕ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳನ್ನು ತೆರೆದರು. ಪುಸ್ತಕ ಖರೀದಿ, ಗ್ರಂಥಾಲಯಗಳ ಬಲವರ್ಧನೆಗೆ ಆದ್ಯತೆ ನೀಡಿದರು. ಹತ್ತಾರು ಮಹಾಪುರುಷರ ಜಯಂತಿಗೆ ರಜೆ ನೀಡಿ ಸರ್ಕಾರ- ಸಮುದಾಯ- ಸಮಾಜ ಒಟ್ಟಾಗಿ ಜಯಂತಿಗಳನ್ನು ಹಬ್ಬವನ್ನಾಗಿ ಸಾಂಸ್ಕೃತಿಕ ಶೈಕ್ಷಣಿಕ ಆದರ್ಶವನ್ನಾಗಿ ಆಚರಿಸಲು ಬಿಎಸ್ ಯಡಿಯೂರಪ್ಪನವರು ಕಾರಣರಾದರು. ಜಾತಿ, ಮತ ,ಪಂಥವನ್ನು ಮೀರಿ ಎಲ್ಲಾ ಜಾತಿ, ಮತ, ಪಂಥಗಳಿಗೂ ಸೇರಿದ ಸಾವಿರಾರು ಮಠಮಾನ್ಯಗಳಿಗೆ ಅನುದಾನ ನೀಡಿ ಕರ್ನಾಟಕ ರಾಜ್ಯದ ಧರ್ಮ- ಸಂಸ್ಕೃತಿ ಅಧ್ಯಾತ್ಮವನ್ನು ಬಲಪಡಿಸಿದರು.

ನಾಡೋಜ ಹಂಪನಾ ಅವರು "ಹೊಸ ಯುಗ ಪುರುಷ" ಎಂದು ಕರೆಯುತ್ತಾ ಅದೇ ಹೆಸರಿನ ತಮ್ಮಲ್ಲಿ ಲೇಖನದಲ್ಲಿ ಬಿಎಸ್ ಯಡಿಯೂರಪ್ಪನವರ ಗುರುಪ್ರೀತಿ ಎಂಥದ್ದು ಎಂಬುದನ್ನು ಕುರಿತು "ಉಪಮುಖ್ಯಮಂತ್ರಿಯವರು (ಯಡಿಯೂರಪ್ಪ) ಸೀದಾ ನಾನು ಕುಳಿತಿದ್ದ ಸ್ಥಳಕ್ಕೆ ಬಂದು 2 ಕೈ ಜೋಡಿಸಿ ತಲೆಬಾಗಿ ನಮಸ್ಕರಿಸುತ್ತಾ "ಸರ್ ನಾನು ಮಂಡ್ಯದಲ್ಲಿ ತಮ್ಮ ವಿದ್ಯಾರ್ಥಿ, ನೆನಪಿದೆಯಾ ಸಾರ್, ಆಶೀರ್ವದಿಸಬೇಕು" ಎಂದು ವಿನಯ ಮೂರ್ತಿಯಾಗಿ ನುಡಿದರು" ಎಂದು ನೆನೆದಿದ್ದಾರೆ, ದಾಖಲಿಸಿದ್ದಾರೆ. ಇದು ಬಿಎಸ್ ಯಡಿಯೂರಪ್ಪನವರ ವ್ಯಕ್ತಿತ್ವ, ಎಲ್ಲಾ ಕಾಲದ ಎಲ್ಲಾ ತಲೆಮಾರಿನ ಅಧಿಕಾರಿ ವರ್ಗ, ಮಂತ್ರಿ ಮಹೋದಯರು ತಮ್ಮ ತಮ್ಮ ಗುರುಗಳ ಬಗ್ಗೆ ತಾವು ತಾಳಬೇಕಾದ ಅನುಕರಣೆಯ ಜೀವನ ಆದರ್ಶ. ಇದು ಭಾರತೀಯ ಹಿಂದೂ ಸಂಸ್ಕೃತಿಯ ಜೀವಾಳ. ಅರಮನೆಯ ಮೇಲೆ ಗುರು ಮನೆ, ರಾಜ ದಂಡದ ಮೇಲೆ ಗುರುದಂಡ. "ಶಿವಪಥವನರಿವದೆ ಗುರುಪಥವೇ ಮೊದಲು ' ಎಂಬ ಆದರ್ಶ ಗುರು ಹುಟ್ಟಿನಿಂದ, ಜಾತಿಯಿಂದ, ಅಂತಸ್ತಿನಿಂದ ಆಗುವುದಿಲ್ಲ . ತನ್ನ ನೈತಿಕ ನಡವಳಿಕೆಯಿಂದಾಗುತ್ತಾನೆ. ಇದು ಗುರುಶಿಷ್ಯರ ಭೇಟಿಯ ಭೇಟಿಯ ಅಪೂರ್ವ ಸಂದರ್ಭ. ಬಿಎಸ್ ಯಡಿಯೂರಪ್ಪನವರು ಅಂದಿನ ಬಸವಣ್ಣನವರಂತೆ ಗುರು-ಲಿಂಗ-ಜಂಗಮ ಪ್ರೇಮಿ ಎಂಬುದು ಗಮನಾರ್ಹ ಅಂಶ. 'ಹೈದರಾಬಾದ್ ಕರ್ನಾಟಕ ' ಹೆಸರನ್ನು ಬದಲಾಯಿಸಿ 'ಕಲ್ಯಾಣ ಕರ್ನಾಟಕ' ಎಂದು ಮರುನಾಮಕರಣ ಮಾಡಿದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಬೀದರಿನ ಕಲ್ಯಾಣ, ಬಸವಕಲ್ಯಾಣ ಮೃಣ್ಮಯವನ್ನು ಚಿನ್ಮಯವನ್ನಾಗಿಸಿರುವ ಪುಣ್ಯಭೂಮಿ 'ಕಲ್ಯಾಣ' ಎಂಬುದು ಕೇವಲ ಹೆಸರಲ್ಲ, ಅದೊಂದು ಪ್ರಜ್ಞೆ, ಆ ಪ್ರಜ್ಞೆಯೇ ಬಿಎಸ್ ಯಡಿಯೂರಪ್ಪನವರನ್ನು ಕೈಹಿಡಿದು ಮುನ್ನಡೆಸಿರುವ ಪ್ರಜ್ಞೆ. ಅದನ್ನು ಅವರು ಪುರಸಭಾ ಸದಸ್ಯ ಸ್ಥಾನದಿಂದ ಹಿಡಿದು ಮುಖ್ಯಮಂತ್ರಿ ಸ್ಥಾನದಲ್ಲಿದ್ದಾಗಲೂ ತಪ್ಪದೆ ಅನುಸರಿಸುತ್ತಾ ಬಂದಿದ್ದಾರೆ. ಶಿಕಾರಿಪುರ ಶರಣರ ನಾಡು. ಕರ್ನಾಟಕವನ್ನೂ ಶರಣರ ನಾಡನ್ನಾಗಿ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಆ ಪರಂಪರೆಯ ವಾರಸುದಾರರು ಬಿ ಎಸ್ ಯಡಿಯೂರಪ್ಪ.

ಮುಕುಡಪ್ಪನವರು ತಮ್ಮ "ನಂಬಿಕಸ್ಥ ನಾಯಕ" ಎಂಬ ಲೇಖನದಲ್ಲಿ "ಯಡಿಯೂರಪ್ಪನವರು ಕನಕ ಜಯಂತಿಯ ದಿನ ಸಾರ್ವಜನಿಕ ರಜ ಘೋಷಣೆ ಮಾಡಿದ್ದಲ್ಲದೆ ಸರ್ಕಾರವೇ ಕನಕ ಜಯಂತಿಯನ್ನು ಆಚರಿಸಲು ಆದೇಶ ನೀಡಿದ, ಸಮಾಜಮುಖಿ ಕಾಗಿನೆಲೆ ಗುರುಪೀಠಕ್ಕೆ ಧನಸಹಾಯ ಮಾಡಿದ ಧೀಮಂತ ನಾಯಕ" ಎಂದು ಬರೆಯುತ್ತಾ ಮುಂದುವರೆದು "ನಾವು ಬಿಜೆಪಿ ಸೇರದೆ ಭಿನ್ನ ನಿಲುವು ವ್ಯಕ್ತಪಡಿಸಿದಾಗ, ಎಂ. ಡಿ. ಲಕ್ಷ್ಮೀನಾರಾಯಣ ಮೂಲಕ ನನ್ನನ್ನು ಯಡಿಯೂರಪ್ಪನವರ ಮನೆಗೆ ಕರೆಸಿಕೊಂಡು ನನ್ನ ಜೊತೆಯಲ್ಲಿರಿ. ನಿಮ್ಮಂಥವರು ಇರಬೇಕು ಎಂದು ನನ್ನನ್ನು ಕೇಳಿಕೊಂಡಾಗ ನಾನು ಅವರ ಜೊತೆಯಲ್ಲಿ ಹೋಗಬೇಕಿತ್ತು, ಹೋಗಲಿಲ್ಲ, ಅದರಿಂದ ಅವರಿಗಲ್ಲ ನಷ್ಟವಾಗಿದ್ದು, ನನಗೆ ಮತ್ತು ನನ್ನ ಕುರುಬ ಸಮಾಜಕ್ಕೆ (ಧಣಿವರಿಯದ ಧೀಮಂತ ಪುಟ ಸಂಖ್ಯೆ 387) ಎಂದಿದ್ದಾರೆ.

ಹೌದು ಬಿ ಎಸ್ ಯಡಿಯೂರಪ್ಪನವರ ಜೊತೆ ಹೋದರೆ ಎಲ್ಲಾ ಸಮಾಜಗಳಿಗೆ ಎಲ್ಲಾ ಜಾತಿ, ಮತ, ಪಂಥ, ಪ್ರದೇಶಗಳಿಗೆ ಒಳಿತಾಗುತ್ತದೆ. ಏಕೆಂದರೆ ಅವರದು ಶಿವಪ್ರಜ್ಞೆ, ಬಸವ ಪ್ರಜ್ಞೆ, ಕಲ್ಯಾಣ ಪ್ರಜ್ಞೆ. ಅದನ್ನು ರೂಪಿಸಿದ್ದು ದೇಶ ಮತ್ತು ದೇಶದ ಸಂಸ್ಕೃತಿ. ಡಿ.ಎಸ್. ವೀರಯ್ಯನವರು ಬಿಎಸ್ ಯಡಿಯೂರಪ್ಪನವರನ್ನು ಕುರಿತು ಬರೆಯುತ್ತಾ "ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಪಾಸಾದವರಿಗೆ ಮೆರಿಟ್ ಸ್ಕಾಲರ್‌ಶಿಪ್‌ನಲ್ಲಿ ಕ್ರಮವಾಗಿ 5000 ಮತ್ತು 5000 ರೂ. ಗಳನ್ನು ನೀಡಿ ಶಿಕ್ಷಣಕ್ಕೆ ಒತ್ತು. ಗುಲ್ಬರ್ಗಾದಲ್ಲಿರುವ ಬುದ್ಧ ವಿಹಾರದ ಅಭಿವೃದ್ಧಿಗಾಗಿ ಧನ ಸಹಾಯ. ವೀರ ಮಹಿಳೆ "ಒನಕೆ ಓಬವ್ವ" ಜನ್ಮ ಜಯಂತಿ ಆಚರಿಸಲು ಅನುದಾನ. ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಪೂರ್ಣ ವೆಚ್ಚ ಭರಿಸುವುದು, ಪರಿಶಿಷ್ಟರು ಪ್ರಕಟಿಸುವ ಪುಸ್ತಕ, ಗ್ರಂಥ ಇತ್ಯಾದಿಗಳಿಗೆ ಧನಸಹಾಯ ನೀಡುವ ಕಾರ್ಯಕ್ರಮ ಜಾರಿ. ಇಂಥ ಅನೇಕ ಕಾರ್ಯಕ್ರಮಗಳು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ತಂದ ವಿಶೇಷ ಕಾರ್ಯಕ್ರಮಗಳು. ಈ ಕಾರ್ಯಕ್ರಮಗಳು ಹಿಂದಿನ ಸರ್ಕಾರಗಳ ಎಲ್ಲಾ ದಾಖಲೆಗಳನ್ನು ಮುರಿದಿವೆ. ಈ ಕಾರ್ಯಕ್ರಮಗಳು ಯಡಿಯೂರಪ್ಪನವರಿಗೆ ಪರಿಶಿಷ್ಟರ ಬಗ್ಗೆ ಇರುವ ಬದ್ಧತೆ, ಇಚ್ಛಾಶಕ್ತಿ, ದೂರ ದೃಷ್ಟಿಗೆ ಸಾಕ್ಷಿಯಾಗಿವೆ. ಈ ಕಾರ್ಯಕ್ರಮಗಳು ಪರಿಶಿಷ್ಟರ ಖಾಯಂ ಪುನಶ್ಚೇತನಕ್ಕೆ. ಈ ವರ್ಗದ ಆರ್ಥಿಕ ಸಬಲೀಕರಣಕ್ಕೆ ,ಈ ವರ್ಗವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶಕ್ಕಾಗಿ ತಂದಹುವು ಹಾಗೂ ಡಾ. ಬಿ. ಆರ್. ಅಂಬೇಡ್ಕರ್‌ರವರ ಸಮಾನತೆ, ಬಸವಣ್ಣನವರ ಜಾತ್ಯಾತೀತ ಸಮಾಜ ನಿರ್ಮಾಣ, ಬುದ್ಧನ ಕರುಣೆ ಮತ್ತು ಕಣ್ಣೀರೊರೆಸುವ ಆದರ್ಶಗಳಿಗಾಗಿ ಪೂರಕವಾಗಿವೆ" ಎಂದಿದ್ದಾರೆ. (ಧಣಿವರಿಯದ ಧೀಮಂತ ಪುಟ ಸಂಖ್ಯೆ 373, 374) ಈ ಮಾತುಗಳು ಬಿ ಎಸ್ ಯಡಿಯೂರಪ್ಪನವರ ಒಳಗಿರುವ ಅಂಬೇಡ್ಕರ್, ಬಸವಣ್ಣ, ಬುದ್ಧರ ಜೀವನಾದರ್ಶಗಳ ಸಂಗಮವನ್ನು ಸೂಚಿಸುತ್ತದೆ.

ಬಿಎಸ್ ಯಡಿಯೂರಪ್ಪನವರು ನಿಜವಾದ ಸಾಮಾಜಿಕ ನ್ಯಾಯದ ಹರಿಕಾರರು. ನುಡಿದಂತೆ ನಡೆದ ನಿಜಶರಣರು. ವೀರಶೈವ ಲಿಂಗಾಯತರ ಭಿನ್ನತೆ ಹೋಗಲಾಡಿಸಿ, ಏಕತೆ ಸಾಧಿಸಿ ವೀರೇಂದ್ರ ಪಾಟೀಲರ ಬಳಿಕ ವೀರಶೈವ ಲಿಂಗಾಯತರ ಆತ್ಮಗೌರವವನ್ನು ಎತ್ತಿ ಹಿಡಿದವರು. ಇಂದು ಮತ್ತೆ ವೀರಶೈವ ಲಿಂಗಾಯತ ಎಂದು ಸಮಾಜವನ್ನು ಭಂಜಿಸುತ್ತಿರುವ ವಿಗ್ರಹ ಭಂಜಕ ಸಮಾಜ ಭಂಜಕ ಶಕ್ತಿಗಳು ಎಲ್ಲೆಲ್ಲೂ ಕುಣಿದಾಡುತ್ತಿರುವಾಗ ಬಿಎಸ್ ಯಡಿಯೂರಪ್ಪನವರ ರಾಜಕೀಯ ಜೀವನದ 50 ವರ್ಷಗಳ ಅಭಿಮಾನೋತ್ಸವ ಸಂದರ್ಭದಲ್ಲಿ ವೀರಶೈವ ಲಿಂಗಾಯತ ನಾಯಕರು, ಜನಸಾಮಾನ್ಯರು ಕಲಿಯಬೇಕಾದ ಕಲಿಸಬೇಕಾದ ಪಾಠಗಳೇನು?

ಬಿಎಸ್ ಯಡಿಯೂರಪ್ಪನವರು ಹಿಂದೂ ಸಮಾಜದ ಎಲ್ಲಾ ಜಾತಿ, ಮತ, ಪಂಥ, ಪ್ರದೇಶಗಳನ್ನು ಸಮಾನವಾಗಿ ಕಂಡು "ಸರ್ವಸ್ಪರ್ಶಿ-ಸರ್ವವ್ಯಾಪ್ತಿ-ಸರ್ವಹಿತೈಷಿ" ಬಜೆಟ್, ಆಡಳಿತ, ಸಂಘಟನೆ ಮೂಲಕ ದಕ್ಷಿಣ ಭಾರತದಲ್ಲಿ ಹಿಂದುತ್ವವನ್ನು ಜನಮಾನಸದಲ್ಲಿ ಬಿತ್ತಿ ಬೆಳೆದವರು. ಇಂದು ಮತ್ತೆ ಬ್ರಾಹ್ಮಣ-ಅಬ್ರಾಹ್ಮಣ;ಶೂದ್ರ-ದಲಿತ; ಎಡಗೈ- ಬಲಗೈ ಎಂದು ಸಮಾಜವನ್ನು ಭಂಜಿಸಲು ಜಾತಿವಾದಿಗಳು ಹಾಗೂ ಜಾತ್ಯಾತೀತರು ಕೂಡಿ ಪರಮಸ್ವಾರ್ಥಿಗಳಾಗುತ್ತಿರುವಾಗ, ನನ್ನದು ಎರಡು ಕಣ್ಣುಗಳು ಹೋದರೂ ಪರವಾಗಿಲ್ಲ, ನಿನ್ನದು ಒಂದು ಕಣ್ಣು ಹೋಗಲಿ ಎಂದ ಪಕ್ಷದ ಒಳಗೇ ಒಡಕು ಒಳ ಸಂಚುಗಳಲ್ಲಿ ನಾಯಕರುಗಳೇ ತೊಡಗಿಕೊಂಡಿರುವಾಗ ಬಿಎಸ್ ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಜೀವನದಿಂದ ಯುವಕರು, ನಾಯಕರು, ಕಾರ್ಯಕರ್ತರು, ಜನಸಾಮಾನ್ಯರು ಕಲಿಯಬೇಕಾದ ಪಾಠಗಳೇನು?

ಹಿಂದೂ- ಮುಸ್ಲಿಂ- ಕ್ರಿಶ್ಚಿಯನ್ ಎಂಬ ಯಾವ ತಾರತಮ್ಯವೂ ಇಲ್ಲದಂತೆ ಬಿಎಸ್ ಯಡಿಯೂರಪ್ಪ ಅವರು ರಾಜ್ಯವನ್ನು ಮುನ್ನಡೆಸಿದರು. ಜಾತಿಗಲಭೆ, ಕೋಮು ಗಲಭೆ, ಭಯೋತ್ಪಾದನೆ ಇಲ್ಲದ ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ನೀಡಿದ ಹಿರಿಯ ಚೇತನ ನನ್ನ ಜೀವನಾದರ್ಶ ಬಿಎಸ್ ಯಡಿಯೂರಪ್ಪ ಅವರು ನನ್ನ ಬಾಳಿನಲ್ಲಿ 1989ರಿಂದ ಇಂದಿನವರೆಗೂ ಬಲವಾಗಿದ್ದಾರೆ, ಬೆಳಕಾಗಿದ್ದಾರೆ. ಅವರಿಗೆ ಅವರ ರಾಜಕೀಯ ಜೀವನದ 50ನೇ ವರ್ಷದ ಅಭಿಮಾನೋತ್ಸವ ಸಂದರ್ಭದಲ್ಲಿ ಅದು ನನ್ನೂರಾದ ಚಿತ್ರದುರ್ಗದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಆದರಣೀಯ ಬಿ.ಎಸ್. ಯಡಿಯೂರಪ್ಪನವರಿಗೆ ಅನಂತಾನಂದ ವಂದನೆಗಳನ್ನು ಅಭಿನಂದನೆಗಳನ್ನು ತುಂಬು ಹೃದಯದಿಂದ ಮನಸಾರೆ ಅರ್ಪಿಸುತ್ತೇನೆ. ಶಿಕಾರಿಪುರ ತಾಲ್ಲೂಕು ಒಂದು ಕರ್ಮ ಭೂಮಿ, ಪುಣ್ಯ ಭೂಮಿ, ಧರ್ಮಭೂಮಿ. ಅಲ್ಲಿ ಮಾಡುವ ಪ್ರತಿಯೊಂದು ಪುಣ್ಯದ ಕೆಲಸ ಸಾವಿರ ಫಲ ನೀಡುತ್ತದೆ ಎಂಬ ಶಾಸನದ ಮಾತು ಬಿ ಎಸ್ ವೈ ಜೀವನದಲ್ಲಿ ನಿಜವಾಗಿದೆ . ಪ್ರೀತಿ ಎಂದರೆ ಶಿಕಾರಿಪುರ. ಶಿಕಾರಿಪುರವೆಂದರೆ ಪ್ರೀತಿ ಎನ್ನುವಂತೆಯೇ, ಯಡಿಯೂರಪ್ಪ ಎಂದರೆ ಶಿಕಾರಿಪುರ. ಶಿಕಾರಿಪುರವೆಂದರೆ ಯಡಿಯೂರಪ್ಪ ಎನ್ನುವುದೂ ಅಷ್ಟೇ ಸತ್ಯ. ಅವರದು ಶಿವಪ್ರಜ್ಞೆ, ಬಸವ ಪ್ರಜ್ಞೆ, ಕಲ್ಯಾಣ ಪ್ರಜ್ಞೆ. ಜೀವ ಪ್ರೀತಿ, ಜೀವನ ಪ್ರೀತಿ, ಜಂಗಮ ಪ್ರೀತಿ. ಅಂಥ ಯಡಿಯೂರಪ್ಪನವರಿಗೆ ಮತ್ತೊಮ್ಮೆ ಶರಣು ಶರಣಾರ್ಥಿ.

ಕನ್ನಡ ವಿಭಾಗ,
ಶ್ರೀ ಡಿ. ದೇವರಾಜ ಅರಸು ಸ.ಪ್ರ.ದ. ಕಾಲೇಜು, ಹುಣಸೂರು

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ವಿದ್ವಾಂಸರನ್ನು ಆಕರ್ಷಿಸುವುದು ಯಾವುದು?

▸ ಒಳ್ಳೆಯ ಕವಿತೆ ಮತ್ತು ವಿದ್ಯೆಯೆಂಬ ಸ್ತ್ರೀ.

ಈ ಪ್ರಶ್ನೋತ್ತರದಲ್ಲಿ ನಾವು ಚಿಂತಿಸಬೇಕಾದ ವಿಷಯ ವಿದ್ವಾಂಸ ಎಂದರೆ ಯಾರು? ಒಳ್ಳೆಯ ಕವಿತೆ-ವಿದ್ಯೆ ಎಂದರೇನು ಎಂದು. ಯಾವನು ವಿದ್ಯೆಯನ್ನು ಉಳ್ಳವನೋ ಅವನು 'ವಿದ್ವಾನ್' ಎಂಬುದಾಗಿ ಕರೆಯುತ್ತಾರೆ. ಇಂದು ನಾವು ಯಾವ ಶಿಕ್ಷಣ ಅಥವಾ ಎಜುಕೇಶನ್ ಎಂಬುದಾಗಿ ಹೇಳುತ್ತೇವೋ ಅದನ್ನು ವಿದ್ಯೆ ಎಂಬುದಾಗಿ ಕರೆದು, ಅದನ್ನು ಉಳ್ಳವನು ವಿದ್ವಾನ್ ಎಂದು ಕರೆಯುವ ಅಭ್ಯಾಸ ಬಂದಿದೆ. ಆದರೆ ಯಾವುದು ಮುಕ್ತಿಗೆ ಸಾಧನವೋ ಅದನ್ನೇ ವಿದ್ಯೆ ಎಂಬುದಾಗಿ ಕರೆಯಬೇಕು. ''ಸಾ ವಿದ್ಯಾ ಯಾ ವಿಮುಕ್ತಯೇ'' ಎಂಬುದಾಗಿ ಉಪನಿಷತ್ತು ವಿದ್ಯೆಯ ವಿವರಣೆಯನ್ನು ಕೊಡುತ್ತದೆ. ಹಾಗಾಗಿ ಇಂತಹ ವಿದ್ಯೆ ಉಳ್ಳವನನ್ನು ವಿದ್ವಾನ್ ಎಂದು ಕರೆಯುವುದು ಸಾಧು. ಇಂತಹ ವಿದ್ವಾಂಸನಿಗೆ ಅತ್ಯಂತ ಪ್ರೀತಿಕರವಾದದ್ದು, ಆಕರ್ಷಕವಾಗಿದ್ದು ಯಾವುದು? ಎಂಬುದಕ್ಕೆ ಉತ್ತರವಾಗಿ, ಒಳ್ಳೆಯ ಕವಿತೆ ಅಥವಾ ವಿದ್ಯೆ ಎಂಬ ಸ್ತ್ರೀ ಎಂಬುದಾಗಿ ನೀಡಲಾಗಿದೆ. ವಿದ್ವಾಂಸನೇ ವಿದ್ಯೆಯ ಕಾರಣದಿಂದ ಆದವನು. ಆದ್ದರಿಂದ ಅವನು ವಿದ್ಯೆಯನ್ನು ತಾನೇ ಪ್ರೀತಿಸುತ್ತಾನೆ! ಅವನಿಗೆ ವಿದ್ಯೆ ತಾನೇ ಅತ್ಯಂತ ಆಕರ್ಷಕ ವಾಗುತ್ತದೆ!

ಒಳ್ಳೆಯ ಕವಿತೆ ಎಂದರೆ ತೋಚಿದ್ದನ್ನು, ಗೀಚಿದ್ದನ್ನು ಕವಿತೆ ಎಂದು ಕರೆಯಬಹುದೇ? ಶ್ರೀರಂಗ ಮಹಾಗುರುಗಳು ಹೇಳಿದಂತೆ ''ಮಹಾಕವಿ ಎಂದರೆ ಮಹತ್ತಿನಿಂದ ಆರಂಭಿಸಿ ಮಹತ್ತತ್ತ್ವವನ್ನು ದಾಟಿದ ಪರಮಾತ್ಮನಲ್ಲಿ ತೆಗೆದುಕೊಂಡು ಹೋಗಿ ಯಾವನು ನಿಲ್ಲಿಸಿಸುವನೋ ಅವನು'' ಎಂದು. 'ನಾನೃಷಿಃ ಕುರುತೇ ಕಾವ್ಯಂ' ಜ್ಞಾನಿಯಲ್ಲದವನು ಕಾವ್ಯವನ್ನು ಬರೆಯಲು ಸಾಧ್ಯವಿಲ್ಲ. ಅಂದರೆ ಮಹಾಕವಿಯಾದವನು ಮಾತ್ರ ಒಳ್ಳೆಯ ಕಾವ್ಯವನ್ನು ಬರೆಯಬಲ್ಲ. ಅಂತಹ ಕಾವ್ಯ ವಿದ್ವಾಂಸನಿಗಲ್ಲದೆ ಇನ್ನಾರಿಗೆ ಇಷ್ಟವಾದೀತು? ಹಾಗಾಗಿ ಅಂತಹ ಕಾವ್ಯವನ್ನು ತಿಳಿಯಲು ವಿದ್ವಾಂಸನು ಮಾತ್ರ ಇಷ್ಟಪಡುತ್ತಾನೆ. ಆದರೆ ಕವಿಯಿಂದ ಬರೆಯಲ್ಪಟ್ಟಿದ್ದಲ್ಲವೂ ಕಾವ್ಯವೇ. ಯಾರು ಮಹಾಕವಿಯಾಗಿ, ಆತ್ಮಜ್ಞಾನಿಯಾಗಿ ಈ ಸೃಷ್ಟಿಯ ಮರ್ಮವನ್ನು ಅರಿತು, ಅದನ್ನು ತನ್ನ ತಪೋಬಲದಿಂದ, ಜ್ಞಾನಬಲದಿಂದ, ಮೇಧಾಬಲದಿಂದ, ಶಬ್ದರೂಪವಾಗಿ ಹಾಗೆ ಹೊರತಂದರೆ ಅದನ್ನೇ ಕಾವ್ಯ ಎಂಬುದಾಗಿ ಕರೆಯಬೇಕು. ಆ ಕಾವ್ಯವು ಈ ಸೃಷ್ಟಿಯ ಮರ್ಮದ ಪುಸ್ತಕವಾಗಿರುತ್ತದೆ. ಅಂತಹ ಕಾವ್ಯವು ವಿದ್ವಾಂಸನಿಗಲ್ಲದೆ ಎಲ್ಲರೂ ಇಷ್ಟಪಡುವ ಸಾಹಿತ್ಯವಾಗುವುದು. ಕವಿಗಳು ಯಾರು ಎಂದು ಕವಿಗಳನ್ನು ಎಣಿಸುವಾಗ ವಾಲ್ಮೀಕಿ, ವ್ಯಾಸ, ಕಾಳಿದಾಸ ಇಂತಹ ಮೂರು ನಾಲ್ಕು ಕವಿಗಳನ್ನು ಮಾತ್ರ ಈ ಗುಂಪಿನಲ್ಲಿ ಹೆಸರಿಸಬಹುದು ಎಂದು ಒಬ್ಬ ಪ್ರಸಿದ್ಧಕವಿಯ ಮಾತು. ಅವರು ಬರೆದ ರಾಮಾಯಣ-ಮಹಾಭಾರತ ಇತ್ಯಾದಿ ಸಾಹಿತ್ಯಗಳು ಕಾವ್ಯ ಎಂಬುದಾಗಿ ಕರೆಯಲ್ಪಡುತ್ತವೆ. ಆದ್ದರಿಂದ ಇಂತಹ ಕಾವ್ಯಗಳು ಎಂದೆಂದೂ ಎಲ್ಲಾ ವಿದ್ವಾಂಸನಿಗೂ ಅತ್ಯಂತ ಆಕರ್ಷಕ. ಇಂತಹ ಕವಿತೆಯನ್ನು ವಿದ್ವಾಂಸನು ಇಷ್ಟಪಡುತ್ತಾನೆ ಎಂಬುದು ಈ ಪ್ರಶ್ನೋತ್ತರದ ತಾತ್ಪರ್ಯವಾಗಿದೆ.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಅಚ್ಚರಿಯ ತೇರಿಗೆ ಮೆರುಗಿತ್ತ ಗರುಡ

ಯಾವ ರಾಜರೂ ಆ ರಥವನ್ನು, ಅದರಲ್ಲಿ ಆಸೀನರಾಗಿರುವವರನ್ನು ಜಯಿಸುವುದು ಸಾಧ್ಯವೇ ಇರಲಿಲ್ಲ. ಹೀಗಿರುವಂತಹುದಾಗಿ ಆ ರಥವು ಕಂಗೊಳಿಸಿತು. ಎಂತಹ ರಥವದು! ಹಿಂದೆ ಆ ರಥದಲ್ಲಿ ಕುಳಿತೇ ಇಂದ್ರನೂ ವಿಷ್ಣುವೂ ಸಂಗ್ರಾಮದಲ್ಲಿ ತಾರಕಾಸುರನನ್ನು ಸಂಹಾರ ಮಾಡಿದುದು. ಅದೇ ರಥದ ಮೇಲೆ ಕುಳಿತೇ ಕೃಷ್ಣನೀಗ ಹೊರಟಿರುವುದು. ಸುವರ್ಣದ ಕಾಂತಿ ಆ ರಥಕ್ಕಿತ್ತು. ಕಿಂಕಿಣಿಗಳ ಜಾಲವನ್ನೇ ಅದು ಹೊಂದಿತ್ತು. ಮೋಡಗಳ ಗುಡುಗಿನ ನಾದವನ್ನೂ ಹೊಂದಿತ್ತು. ಶತ್ರುಘಾತಕವಾಗಿದ್ದ ಅದು ಜಯವನ್ನು ತಂದುಕೊಡುವಂತಹುದೂ ಆಗಿತ್ತು. ತೊಂಭತ್ತೊಂಭತ್ತು ದಾನವರನ್ನು ಇಂದ್ರನು ಸಂಹರಿಸಿದುದು ಆ ರಥದಲ್ಲಿ ಕುಳಿತು ಹೋಗಿದ್ದಾಗಲೇ. ಅಂತಹ ಅದ್ಭುತ ರಥವನ್ನು ಹೊಂದಿದ್ದರಿಂದಾಗಿ ಆ ಮೂವರು ಪುರುಷ ಶ್ರೇಷ್ಠರೂ ಪರಮಹರ್ಷಗೊಂಡರು.

ಮಹಾಬಾಹುವಾದ ಕೃಷ್ಣನು ಸಹೋದರರಿಬ್ಬರೊಡಗೂಡಿ ರಥದಲ್ಲಿ ಬರುತ್ತಿರುವುದನ್ನು ಕಂಡು ಮಗಧದೇಶದ ಪ್ರಜೆಗಳೆಲ್ಲರೂ ವಿಸ್ಮಿತರಾದರು. ದಿವ್ಯವಾದ ಹಯಗಳನ್ನು ಹೊಂದಿದ್ದ ಆ ರಥವು ವಾಯುವೇಗವುಳ್ಳದ್ದು. ಅಂತಹ ರಥವು ಈಗ ಕೃಷ್ಣನಿಂದ ಅಧಿಷ್ಠಿತವಾಗಿದ್ದು ಅಧಿಕವಾಗಿ ಕಂಗೊಳಿಸಿತು. ರಥದ ಮೇಲಿನ ಧ್ವಜವು ದೇವವಿಹಿತವಾಗಿದ್ದು, ಅದು ಒಂದು ಯೋಜನದಷ್ಟು ದೂರಕ್ಕೂ, ಎಂದರೆ ಸುಮಾರು ಎಂಟು ಮೈಲಿ ದೂರಕ್ಕೂ ಕಾಣಿಸುವುದಾಗಿದ್ದರೂ ಅದನ್ನು ರಥಕ್ಕೆ ಎಲ್ಲಿ ಸಿಕ್ಕಿಸಿರುವರೆಂಬುದೇ ಗೋಚರವಾಗುತ್ತಿರಲಿಲ್ಲ! ಅದು ಇಂದ್ರಾಯುಧದಂತೆ ಶೋಭಿಸುತ್ತಿತ್ತು.

ಆ ಸಮಯದಲ್ಲಿ ಕೃಷ್ಣನು ಗರುತ್ಮಂತನನ್ನು, ಎಂದರೆ ಗರುಡನನ್ನು ಸ್ಮರಿಸಿದನು. ಅದೇ ಕ್ಷಣಕ್ಕೇ ಆತನೂ ಅಲ್ಲಿಗೆ ಆಗಮಿಸಿದನು. ಮೇಲೆದ್ದ ಒಂದು ಚೈತ್ಯವೃಕ್ಷದ ಹಾಗೆ ಗರುಡನು ತೋರಿದನು. ಬಾಯ್ದೆರೆದು ಮಹಾನಾದವನ್ನು ಮಾಡುತ್ತಿದ್ದ ಹಾಗೂ ಧ್ವಜವನ್ನು ಆಶ್ರಯಿಸಿದ್ದ ಭೂತಗಳೊಂದಿಗೆ, ಸರ್ಪಭಕ್ಷಕನೆನಿಸಿದ ಗರುಡನು ಆ ಶ್ರೇಷ್ಠರಥದ ಮೇಲೆ ಕುಳಿತುಕೊಂಡನು. ಆಗ ಹೇಗೆ ಕಂಡಿತು ಆ ಧ್ವಜ? ಯಾವುದೇ ಪ್ರಾಣಿಗಳಿಗೆ ದಿಟ್ಟಿಸಿನೋಡಲಾಗದ ಹಾಗೆ ಅಧಿಕವಾದ ತೇಜಸ್ಸಿನಿಂದಾಗಿ ಕೂಡಿದ್ದಾಗಿ ಕಂಡಿತು. ಮಧ್ಯಾಹ್ನದ ಹೊತ್ತಿನಲ್ಲಿ ತನ್ನ ಸಹಸ್ರಕಿರಣಗಳಿಂದಲೂ ಕೂಡಿದ ಆದಿತ್ಯನು ಕಣ್ಣು ಕೋರೈಸುವಂತಿರುವನಲ್ಲವೇ? ಹಾಗೆ.

ಆ ಶ್ರೇಷ್ಠಧ್ವಜದ ಮತ್ತೊಂದು ಆಶ್ಚರ್ಯವೆಂದರೆ ಅದು ಮರಗಳಿಗೆ ಸಿಕ್ಕಿಹಾಕಿಕೊಳ್ಳುತ್ತಿರಲಿಲ್ಲ. ಶಸ್ತ್ರಗಳಿಂದ ಘಾಸಿಕೊಳ್ಳುತ್ತಿರಲಿಲ್ಲ. ಆ ದಿವ್ಯವಾದ ಧ್ವಜವು ಮನುಷ್ಯರಿಗೆ ಗೋಚರವಾಗಿರುತ್ತಿತ್ತು. ಮಳೆಯ ಹಾಗೆ ಶಬ್ದ ಮಾಡುತ್ತಿದ್ದ ಆ ದಿವ್ಯರಥದಲ್ಲಿ ಆಸೀನನಾಗಿ ಭೀಮಾರ್ಜುನರೊಡನೆ ಕೃಷ್ಣನು ಆ ಊರಿನಿಂದ ನಿರ್ಗಮಿಸಿದನು. ಇಂದ್ರನಿಂದ ವಸುವಿಗೂ ಆತನಿಂದ ಬೃಹದ್ರಥನಿಗೂ ಅಲ್ಲಿಂದ ಕ್ರಮಪ್ರಾಪ್ತವಾಗಿ ಜರಾಸಂಧನಿಗೂ ಬಂದ ರಥವದು. ಗಿರಿವ್ರಜದಿಂದ ಹೊರಹೊರಟು ಈಗ ಸಮತಟ್ಟಾದ ಎಡೆಗೆ ಕೃಷ್ಣನು ಬಂದು ಸೇರಿದನು. ಬಂಧನದಿಂದ ಬಿಡುಗಡೆಯನ್ನು ಹೊಂದಿದ ರಾಜರುಗಳು ಕೃಷ್ಣನನ್ನು ಅರ್ಚಿಸಿ ಹೀಗೆ ಸ್ತುತಿಸಿದರು.

ಮಹಾಬಾಹುವಾದ ಕೃಷ್ಣನೇ, ದೇವಕಿಗೆ ಆನಂದ ತಂದವನೇ, ಭೀಮಾರ್ಜುನ ಬಲದೊಂದಿಗೆ ಕೂಡಿರುವ ನೀನು ಧರ್ಮರಕ್ಷಣೆಯನ್ನು ಮಾಡುವೆಯೆಂಬುದರಲ್ಲಿ ಆಶ್ಚರ್ಯವೇ ಇಲ್ಲ. ದುಃಖವೆಂಬ ಕೆಸರಿನ ರಾಶಿಯೇ ಆಗಿದ್ದುದು ಜರಾಸಂಧವೆಂಬ ಮಡು. ಅದರೊಳಗೆ ಸಿಲುಕಿದ್ದೆವು ನಾವು ರಾಜರುಗಳು. ಅಂತಹ ನಮ್ಮಗಳ ಉದ್ಧಾರವನ್ನು ನೀನು ಈಗ ಎಸಗಿರುವೆ. ಬೆಟ್ಟವೆಂಬ ಭಯಂಕರವಾದ ಕೋಟೆಯೊಳಗೆ ಸಿಲುಕಿ ನಲುಗಿಹೋಗಿದ್ದ ನಮಗೆ, ಅದೃಷ್ಟವಶಾತ್ ಮೋಕ್ಷವನ್ನು ದಯಪಾಲಿಸಿರುವೆ, ಓ ವಿಷ್ಣುವೇ.

ನನ್ನ ಮುಂಜಿಯ ನಂತರದ ಪ್ರಕರಣಗಳು

ಪಂಚೆಯು ನನಗೆ ಅನೇಕ ಸಂಕಷ್ಟಗಳನ್ನು ತಂದೊಡ್ಡುತ್ತಿತ್ತು. ಮಾನ ಉಳಿಸಿಕೊಳ್ಳುವ ಸಲುವಾಗಿ ಬೆನ್ನನ್ನು ತಬಲವಾಗಿಸಿಕೊಳ್ಳುವ ಪರಿಸ್ಥಿತಿಗಳೂ ಹೆಚ್ಚುತ್ತಿದ್ದವು.

ವಕ್ರದೃಷ್ಟಿ

• ಎಸ್.ರಾಮನಾಥ್
anakuramanath@gmail.com

ಕೋಳಿಯನ್ನು ಕೇಳಿ ಮಸಾಲೆ ಅರೆಯದಂತೆಯೇ ನನ್ನನ್ನೂ, ನನ್ನ ತಮ್ಮನನ್ನೂ ಕೇಳದೆಯೇ ನಮಗೆ ಮುಂಜಿಮಾಡುವುದೆಂದು ತೀರ್ಮಾನವಾಯಿತು. ''ಬೀರುವಿನಲ್ಲಿ ತಾಳಿ ಇದೆ. ನಾಳೆ ಚಿನ್ನಮ್ಮನ ಮಗಳು ಗೌರಿಯ ಕತ್ತಿಗೆ ಅದನ್ನು ಕಟ್ಟು'' ಎಂದು ಅಪ್ಪನು ಗದರುಭಾಷೆಯಲ್ಲಿ ನುಡಿದರೆ ಮಗನು 'ಬ್ಯಾಡ' ಎನ್ನಲಾಗದೆ, ಕುರಿಯಂತೆ 'ಬ್ಯಾ' ಎಂದು ಅಪ್ಪನಿಗೆ ಕೇಳಿಸದಂತೆ ಒದರಿ, ಮರುದಿನ ಹೆಣ್ಣಿನ ಕುತ್ತಿಗೆಗೆ ತಾಳಿ ಕಟ್ಟುತ್ತಿದ್ದ ಕಾಲದಲ್ಲಿ ಮುಂಜಿಗೆ ಹುಡುಗನ ಪರ್ಮಿಷನ್ ಕೇಳುವುದು ಊಹೆಗೂ ನಿಲುಕದ ಮಾತಾಗಿತ್ತು.

ಮುಂಜಿಯ ದಿನ ನಮಗೇನೂ ಬೇಜಾರಾಗಲಿಲ್ಲ ಬಿಡಿ. 'ವಟುವಿಗೆ ಎರಡು ಸಾವಿರ ವರಹಗಳು', 'ಐದು ಸಾವಿರ ವರಹಗಳು' ಎಂದೆಲ್ಲ ಪುರೋಹಿತರು ನುಡಿಯುತ್ತಿದ್ದಾಗ ನನಗೂ, ನನ್ನ ತಮ್ಮನಿಗೂ ಸ್ವರ್ಗಕ್ಕೆ ಮೂರೇಕೆ ಒಂದೇ ಗೇಣು! 'ಅಪ್ಪನಿಗೆ ಚಿಲ್ಲರೆ ನೂರೈವತ್ತು ರೂಪಾಯಿ ಸಂಬಳ. ನಮ್ಮ ಮೈಗೆ ದಾರ ಬೀಳುತ್ತಿದ್ದಂತೆಯೇ ಸಾವಿರಾರು ವರಹಗಳು' ಎಂದು ನಾನು ಬೀಗಿದೆ. ಬೀಗುತ್ತಲೇ ಪುರೋಹಿತರ ಪಕ್ಕದಲ್ಲಿ ಗುಡ್ಡೆಯಾಗಿ ಕಾಣಬರಬೇಕಾದ ವರಹಗಳ ಕಡೆಗೆ ಕಣ್ಣು ಹಾಯಿಸಿದೆ.

ಪುರೋಹಿತರ ಪಕ್ಕದಲ್ಲಿ ಯಾವುದೇ ಗುಡ್ಡವು ಕಾಣಲಿಲ್ಲ.

ಮತ್ತೊಬ್ಬ ಹಿರಿಯರು ''ದೀನ್ನಿ ಚದುವಿಚ್ಚಂಡ''(ಇದನ್ನು ಓದಿಸಿಬಿಡಿ) ಎನ್ನುತ್ತಾ ಹಣವನ್ನು ಪುರೋಹಿತರಿಗೆ ನೀಡಿದರು. ಪುರೋಹಿತರು ಪಡೆದ ಹಣದತ್ತ ಕಣ್ಣುಹಾಯಿಸಿ 'ಹತ್ತು ಸಾವಿರ ವರಹಗಳು' ಎಂದು ಘೋಷಿಸಿದರು. ಪುರೋಹಿತರ ಕೈಯಲ್ಲಿದ್ದುದು ಒಂದೇ ನೋಟು. ತಮ್ಮನತ್ತ ನೋಡಿದೆ.

''ಹತ್ತು ಸಾವಿರದ ಒಂದೇ ನೋಟು ಇದೆಯಾ?'' ಎಂದು ಕೇಳಿದನವ. ಇರಬಹುದು ಎಂದುಕೊಂಡೆ. ಆ ಸಮಯಕ್ಕೆ ಸರಿಯಾಗಿ ಪುರೋಹಿತರ ಕೈಯಿಂದ ನೋಟು ಜಾರಿ, ಕೊಂಚ ಹಾರಿ, ನನ್ನ ಮುಂದೆಯೇ ಬಿದ್ದಿತು. ನೋಟನ್ನು ಕಾತುರದಿಂದ ಈಕ್ಷಿಸಿದೆ.

ಅದು ಹತ್ತರ ನೋಟಾಗಿತ್ತು.

ಪುರೋಹಿತರ **oral scale**ನಲ್ಲಿ ಒಂದು ರೂಪಾಯಿ ಒಂದು ಸಾವಿರ ವರಹಕ್ಕೆ ಸಮನಾಗಿತ್ತು!

ಮುಂಜಿ ಮುಗಿಯಿತು. ಆ ಸಮಯದಲ್ಲಿ ನನ್ನ ತಮ್ಮನಿಗೆ ಎಂಟು ವರ್ಷ, ನನಗೆ ಹನ್ನೊಂದು. ಮುಂಜಿ ಮುಗಿದು ಹಿರಿಯರೆಲ್ಲರೂ ಹರಟುತ್ತಾ ಕುಳಿತಿದ್ದಾಗ ಮುಂಜಿಮನೆಯ ಸುತ್ತಮುತ್ತ ಇದ್ದ ಬಂಡೆಗಳನ್ನು ಏರಲೆಂದು ಹೊರಟೆವು.

''ಹಸಿ ಮೈ ಇರುವವರು ಹಾಗೆಲ್ಲ ಎಲ್ಲೆಲ್ಲೋ ಅಲೆಯಬಾರದು'' ಎಂಬ ಗುಡುಗುಧ್ವನಿ ಮುಂಜಿಮನೆಯಿಂದ ತೂರಿಬಂತು. ಮೈ ನೋಡಿಕೊಂಡೆ. ಹಿಂದಿನ ದಿನ ಎಷ್ಟು ಒಣಗಿತ್ತೋ ಅಷ್ಟೇ ಒಣಗಿತ್ತು. ಎಲ್ಲಿಯೂ ಹಸಿಹಸಿ ಎನಿಸಲಿಲ್ಲ. ಹಾಗೆಯೇ ನುಡಿದೆ.

''ಇನ್ನು ಹದಿನಾರು ದಿವಸ ನಿಮ್ಮದು ಹಸಿ ಮೈಯೇ'' ಎಂದಿತು ಸುಗ್ರೀವಾಜ್ಞೆಯ ಕಂಠ. ಬಂಡೆಯಂತಹ ಕಟ್ಟಪ್ಪಣೆಗೆ 'ಬಂಡೆ ಡೈವಿಂಗ್' ಆಸೆಯು ಕಮರಿತು.

''ನೀನು ನಾಳೆಯಿಂದ ಮನೆಯಲ್ಲಿ ಪಂಚೆ ಉಡಬೇಕು'' ಸುಗ್ರೀವಾಜ್ಞೆ ಗುಡುಗಿತು. ಆಜ್ಞೆಯೇನೋ ಸರಿ, ಆದರೆ ಉಡುವ ಪರಿ? ಉಟ್ಟು ಓಡಾಡುವ ಪರಿ? ನುಣುಪಾದ ಗಾಜಿನ ಮೇಲೆ ಸರ್ರನೆ ಸರಿಯುವ ನೀರಿನಂತೆಯೇ ನನ್ನ ಸೊಂಟವನ್ನು ಬಳಸಿದ ಪಂಚೆಯು ಜಾರಿಜಾರಿ ಹೋಗುತ್ತಿತ್ತು. ''ಜಾರುತನದಲಿ ನೋಡೆ ಪಾಚಿ ಕಟ್ಟಿದ ಬಂಡೆ; ಬಿಗಿಯಾಗಿ ಕಟ್ಟಿದರೆ ಬಾಸುಂಡೆ ಗೆರೆಯು...'' ಎಂಬ ಪರಿಸ್ಥಿತಿಯಾಗಿತ್ತು. ಇಂತಿಪ್ಪ ದಿನಗಳೊಳ್ ''ಸುತ್ತಮುತ್ತಲ ಅಂಗಡಿಗಳಿಗೆ ಹೋಗಲು ಪಂಚೆಯೇ ಸಾಕು. ಚಡ್ಡಿ, ಪ್ಯಾಂಟುಗಳೆಲ್ಲ ಸಮಾರಂಭಗಳಿಗೆ ಹೋಗಲು ಬೇಕಾಗುತ್ತದೆ'' ಎಂಬ ಆಜ್ಞೆ ಹೊರಟಿತು.

ಮರುದಿನ ಮೂರು ಕೆಜಿ ಸಕ್ಕರೆ, ದಂಟಿನ ಸೊಪ್ಪು, ಒಂದು ಲೀಟರ್ ಎಣ್ಣೆ ತರಲೆಂದು ಅಂಗಡಿಗೆ ಹೋದೆ. ಆಗೆಲ್ಲ ಅಂಗಡಿಯವರು ಕೋನಾಕಾರದಲ್ಲಿ ಕಾಗದವನ್ನು ಸುತ್ತಿ ಸಾಮಾನುಗಳನ್ನು ಕೋನದಲ್ಲಿ ತುಂಬಿ, ಕೋನದ ಬಾಯಿ ಮುಚ್ಚಿ, ಸುತ್ತಲೂ 'ದಾರಬಂಧ' ಮಾಡಿಕೊಡುತ್ತಿದ್ದರು. ಕೋನಾಕಾರದ ಸಕ್ಕರೆ ಪೊಟ್ಟಣವನ್ನು ಎದೆಗಾನಿಸಿಕೊಂಡು, ಒಂದು ಕೈಯಲ್ಲಿ ದಂಟಿನ ಸೊಪ್ಪನ್ನು ಹಿಡಿದು, ಇನ್ನೊಂದು ಕೈಯಲ್ಲಿ ಹಿಡಿದು, ಸರಿಯಾಗಿ ಒಂದೇ ಲೀಟರ್ ಹಿಡಿಯುವ ಎಣ್ಣೆಯ ಪಾತ್ರೆಯಿಂದ ತೊಟ್ಟು ಎಣ್ಣೆಯೂ ಸೋರದಂತೆ ಎಚ್ಚರ ವಹಿಸುತ್ತಾ, ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಸಾಗಿದೆ. ಅದೇ ಸಮಯದಲ್ಲಿ ಪಂಚೆಯು ಟೊಂಕಸಂಗವನ್ನು ಒಲ್ಲೆನ್ನುತ್ತಾ ದೂರ ಸರಿಯತೊಡಗಿತು. ದಂಟಿನಸೊಪ್ಪಿನ ಕೈಯಿಂದ ಹಿಡಿದರೆ ಸೊಪ್ಪು ಉಜ್ಜಿದಂತಾಗಿ ಪಂಚೆ ಹಸಿರಾಗುವುದು ನಿಶ್ಚಿತ. ಪಂಚೆ ಹಸಿರಾದರೆ ಅಪ್ಪನ ಕಣ್ಣು ಕೆಂಪಾಗುತ್ತಿದ್ದುದೂ ನಿಶ್ಚಿತ. ಜೊತೆಗೆ ಹಾಗೆ ವಾಲಿದಾಗ ಸಕ್ಕರೆಯ ಪೊಟ್ಟಣವು ಎದೆಯಿಂದ ದೂರವಾಗಿ ರಸ್ತೆಯ ಟಾರಿಗೆ ಹತ್ತಿರವಾಗುವ ಸಾಧ್ಯತೆಯೂ ಇತ್ತು. ಬಲಗೈಯನ್ನು ಬಳಸೋಣವೆಂದರೆ ಸರ್ವಂ ತೈಲಮಯಂ ವಸ್ತ್ರಂ ಆಗುವ ಸಾಧ್ಯತೆಯಿತ್ತು. ಅತ್ತ ಎಣ್ಣೆಕಲೆ, ಇತ್ತ ಸೊಪ್ಪಿನಕಲೆ ಎಂಬ ಪರಿಸ್ಥಿತಿ! ಎರಡೂ ಕೈ ಬಳಸದೆ ನಿಧಾನ ಮಾಡಿದರೆ ಖಂಡಿತವಾಗಿ **involuntary** ವಸ್ತ್ರಾಪಹರಣ!

ದಾರಿಯ ಪಕ್ಕದಲ್ಲಿ ಒಂದು ಪುಟ್ಟ ಕಟ್ಟೆ ಕಂಡಿತು. ಕಟ್ಟೆಯ ಮೇಲೆ ಎಲ್ಲ ಸಾಮಾನುಗಳನ್ನು ಇರಿಸಿ ಪಂಚೆಯನ್ನು ಭದ್ರಪಡಿಸಿಕೊಂಡು, 'ಬೇಕಾದ್ದಾಗಲಿ, ಒಂದೊಂದನ್ನೇ ಒಯ್ಯುವೆ' ಎಂದು ನಿರ್ಧರಿಸಿ ಮೊದಲಿಗೆ ಎಣ್ಣೆಯನ್ನು ಒಯ್ದು ಮನೆಗೆ ತಲುಪಿಸಿ, ಸಕ್ಕರೆ, ಸೊಪ್ಪುಗಳನ್ನು ತರಲೆಂದು ಹಿಂತಿರುಗಿದೆ.

ಆಗ ಸ್ವಾತಂತ್ರ್ಯ ಬಂದ ಹೊಸತು. ಜನಗಳಿಗೆ ಹೇಗೋ ಏನೋ, ಆದರೆ ಹಸುಗಳಿಗಂತೂ ಪೂರ್ಣ ಸ್ವಾತಂತ್ರ್ಯವಿತ್ತು. ಹಾಗೆ ಇಂಡಿಪೆಂಡೆನ್ಸ್ ಆಚರಿಸುತ್ತಿದ್ದ ಹಸುವೊಂದರ ಕಣ್ಣಿಗೆ ಈ 'ಅನಾಥ ಸೊಪ್ಪು' ಕಣ್ಣಿಗೆ ಬಿದ್ದು, ನಾನು ಕಟ್ಟೆಯನ್ನು ತಲುಪುವ ಹೊತ್ತಿಗೆ ಹಸುವಿನ ಸ್ನ್ಯಾಕ್ಸ್ ಮುಗಿದಿತ್ತು. ಅಷ್ಟೇ ಸ್ವತಂತ್ರವಾಗಿ ಓಡಾಡುತ್ತಿದ್ದ ಕೆಂಪು ಇರುವೆಗಳು ಸಕ್ಕರೆಯ ಪೊಟ್ಟಣವನ್ನು ಮುತ್ತಿ ಹಿಡಿದಿದ್ದವು. ಹಸುವು ತಿನ್ನುವಾಗ ಬಾಯಿಯಿಂದ ಉದುರಿದ್ದ ಕೆಲವು ಎಲೆಗಳನ್ನು ಪುಟ್ಟ ಗೊಂಚಲಾಗಿಸಿ ಇರುವೆಗಳನ್ನು ಪೊಟ್ಟಣದ ಹೊರಮೈಯಿಂದ ಓಡಿಸಿ ಪೊಟ್ಟಣವನ್ನು ಹೊತ್ತು ಮನೆ ಸೇರುವಷ್ಟರಲ್ಲಿ ಪೊಟ್ಟಣಸಾಮ್ರಾಜ್ಯದ ಒಳಗೆ ಸೇರಿದ್ದ ಇರುವೆಗಳು ತಮ್ಮ ಸಂಬಂಧಿಕರನ್ನು ಹೊರಗಟ್ಟಿದ ನನ್ನ ಕೈಯ ಮೇಲೆ ದಾಳಿ ಮಾಡಿ ಅಲ್ಲಲ್ಲಿ ದದ್ದೆ ಎಬ್ಬಿಸಿದ್ದವು. ಸೊಪ್ಪನ್ನು ಗೋಮಾತೆಗೆ ಅರ್ಪಿಸಿದ್ದಕ್ಕೂ, ಬಿಳಿ ಸಕ್ಕರೆಗೆ ಕೆಂಪಿರುವೆಯನ್ನು ಮಿಶ್ರಣಗೊಳಿಸಿ ತಂದುದಕ್ಕೂ ನನಗೆ ಅಷ್ಟೋತ್ತರ ನಾಮಾವಳಿಯೂ, ವಿಶೇಷ ಮಂಗಳಾರತಿಯೂ ದೊರಕಿದ್ದಲ್ಲದೆ ಕೊಂಚ ಸಮಯ ನನ್ನ ಬೆನ್ನು ಅಪ್ಪನ ತಬಲಾ ಆಗಿಯೂ ಪರಿವರ್ತನೆಗೊಂಡಿತ್ತು.

''ಪ್ಯಾಂಟ್ ಹಾಕ್ಕೊಂಡು ಹೋಗಿದ್ದಿದ್ರೆ ಸೊಪ್ಪನ್ನ ಜೇಬಿನಿಂದ ಕ್ಯಾಂಟಿಲಿವರ್ ತರಹ ಹೊರಕ್ಕೆ ಸಿಕ್ಕಿಸಿಕೊಂಡು, ಕೋನಾಕಾರವನ್ನ ಇನ್ನೊಂದು ಜೇಬಿನಿಂದ ಕ್ಯಾಂಟಿಲಿವರ್ ಮಾಡಿಸಿ, ಒಂದು ಕೈಯಲ್ಲಿ ಎಣ್ಣೆ ಪಾತ್ರೆ ಹಿಡಿದು, ಇನ್ನೊಂದು ಕೈಯಲ್ಲಿ ನಾನು ಗುನುಗುನುಗುವ ಹಾಡಿಗೆ ತಕ್ಕ ಅಭಿನಯವನ್ನು ಮಾಡುತ್ತಾ ಬರಬಹುದಾಗಿತ್ತು. ಎಲ್ಲಾ ಪಂಚೆಯದೇ ತಪ್ಪು ಅಮ್ಮ'' ಎಂದೆ. ಪಾಪ! ಅಪ್ಪನೆಂಬ ಹೈಕಮಾಂಡ್ ಮುಂದೆ ಅಮ್ಮನೆಂಬ ರಾಷ್ಟ್ರಪತಿಯ ಮಾತು ಏನೇನೂ ನಡೆಯುತ್ತಿರಲಿಲ್ಲ.

ಪಂಚೆಯು ನನಗೆ ಇಂತಹ ಅನೇಕ ಸಂಕಷ್ಟಗಳನ್ನು ತಂದೊಡ್ಡುತ್ತಿತ್ತು. ಮಾನ ಉಳಿಸಿಕೊಳ್ಳುವ ಸಲುವಾಗಿ ಬೆನ್ನನ್ನು ತಬಲವಾಗಿಸಿಕೊಳ್ಳುವ ಪರಿಸ್ಥಿತಿಗಳೂ ಹೆಚ್ಚುತ್ತಿದ್ದವು. ಆದರೆ ಇದಕ್ಕಿಂತಲೂ ಕಷ್ಟದ ಪರಿಸ್ಥಿತಿಯೊಂದು ಧುತ್ತನೆ ಎದುರಾಯಿತು.

ಅವರೆಗೆ ಬಳಸುತ್ತಿದ್ದ ಒಳಚಡ್ಡಿಯನ್ನು ಮುಂಜಿಯಾದ ನಂತರ ಬಳಸುವಂತಿಲ್ಲವೆಂದೂ, ಲಂಗೋಟಿಯನ್ನೇ ಬಳಸಬೇಕೆಂದೂ ಸುಗ್ರೀವಾಜ್ಞೆ ಹೊರಟಿತು. ನಾನು 'ರಾಮನನ್ನು ಕಾಡಿಗಟ್ಟಬೇಡವೇ...' ಎಂದು ಕೈಕೇಯಿಯ ಮುಂದೆ ರೋದಿಸಿದ ದಶರಥನ ಹತ್ತು ಪಟ್ಟು ರೋದಿಸುತ್ತಾ 'ಲಂಗೋಟಿ ಕಡ್ಡಾಯ ಎನ್ನಬೇಡಿ' ಎಂದು ಗೋಗರೆದೆ. ದಶರಥನ ಪರಿಸ್ಥಿತಿಯೇ ನನಗೂ ಆಯಿತು. ಅಂತೂ ಅಂದಿನಿಂದ ಅಪ್ಪನ ಹಳೆಯ ಪಂಚೆಗಳು 'ರೀಸೈಕಲ್' ಆಗಿ ಲಂಗೋಟಿಗಳಾಗಿ ಹಿತ್ತಲಿನ ಕಂಬಿಗಳ ಮೇಲೆ ರಾರಾಜಿಸಿದವು.

ಅಂದು ಶಾಲೆಗೆ ಹೋಗುವ ಸಮಯ ಮೀರಿತ್ತು. ದಿನವೂ ಉಡುದಾರಕ್ಕೆ ಸಿಕ್ಕಿಸಿಕೊಂಡ ಲಂಗೋಟಿಯ ಚುಂಗು ಹೊರಕಾಣದಂತೆ ಎಚ್ಚರ ವಹಿಸುತ್ತಿದ್ದ ನಾನು ಗಡಿಬಿಡಿಯಲ್ಲಿ ಬೆನ್ನುಭಾಗದಲ್ಲಿ ಚಡ್ಡಿಯಿಂದ ಲಂಗೋಟಿಯು ಹೊರಗೆ ಇಣುಕುವ ರೀತಿಯಲ್ಲಿ ಧರಿಸಿ ಹೊರಟುಬಿಟ್ಟೆ. ತರಗತಿಯಲ್ಲಿ ಪಾಠ ಶುರುವಾಯಿತು. ಒಂದು ಪೀರಿಯಡ್ ಮುಗಿಯಿತು. ಎರಡನೆಯ ಪೀರಿಯಡ್‌ನ ಮೇಷ್ಟ್ರು ಬರುವಷ್ಟರಲ್ಲಿ ನನ್ನ ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಶೇಷಗಿರಿಗೆ ಲಂಗೋಟಿಯು ಕಂಡುಬಿಟ್ಟಿತು. ಛಕ್ಕನೆ ಮುಂಬಾಗಿ ಲಂಗೋಟಿಯನ್ನು ಎಳೆದ. ಅವನ ಕೈಯನ್ನು ಬಿಡಿಸಲೆಂದು ನಾನು ಎದ್ದೆ. ಕೂಡಲೆ ಅವನ ಎಳೆತದ ರಭಸಕ್ಕೆ ಪೂರ್ಣ ಲಂಗೋಟಿ ಅವನ ಕೈ ಸೇರಿತು. ದೊಡ್ಡದೊಡ್ಡ ಪಂದ್ಯಗಳನ್ನು ಗೆದ್ದವರು ಟ್ರೋಫಿಯನ್ನು ಹಿಡಿದು ಕುಪ್ಪಳಿಸುತ್ತಾ ಸಾಗುವ ರೀತಿಯಲ್ಲಿಯೇ ಶೇಷಗಿರಿ 'ಲಂಗೋಟಿ!' 'ಲಂಗೋಟಿ!' ಎಂದರಚುತ್ತಾ, ಅದನ್ನು ಸೂರಿಗೆ ಹಾರಿಸಿ ಹಿಡಿಯುತ್ತಾ, ಡೆಸ್ಕಿನಿಂದ ಡೆಸ್ಕಿಗೆ ಹಾರತೊಡಗಿದೆ. ಮಿಕ್ಕ ಹುಡುಗರೂ ಬೆಲೂನನ್ನು ಹಿಡಿಯಲು ಧಾವಿಸುವ ಮಕ್ಕಳಂತೆ ಲಂಗೋಟಿಯ ಹಿಂದೆ ಬಿದ್ದರು. 'ಕೊಡ್ರೋ...ಲೇ...ಕೊಡ್ರೋ...' ಎಂದು ಅರಚುತ್ತಾ ಲಂಗೋಟಿಯನ್ನು ನನ್ನ ಕೈಗೆ ತೆಗೆದುಕೊಳ್ಳುವಷ್ಟರಲ್ಲಿ ಅದು ಡ್ರೈಕ್ಲೀನ್ ಆಗುವುದಕ್ಕೆ ಲಾಯಕ್ಕಾದಷ್ಟು ಕೊಳೆ, ಕರೆ ಆಗಿತ್ತು.

'ಲಂಗೋಟಿ ಬಹಳ ಒಳ್ಳೆಯದಣ್ಣ' ಎಂದು ದಾಸರೇನೋ ಹೇಳಿರಬಹುದು. ಆದರೆ ಆ ತರಗತಿಯಲ್ಲಿ ನನಗೆ ಅದು ಅಪ್ಪಟ್ಟದ ಪಟ್ಟೆಯಾಕಾರದ ವಿಲನ್ ಆಗಿ ಕಂಡುದಂತೂ ಸತ್ಯಸ್ಯ ಸತ್ಯ.

ಉತ್ತರ-ದಕ್ಷಿಣ ವಿಭಜನೆ ಸೃಷ್ಟಿ ಅಪಾಯಕಾರಿ

▸ ರಾಮ್ ಮಾಧವ್



ದಕ್ಷಿಣ ಮತ್ತು ಉತ್ತರ ಭಾರತದ ಮಧ್ಯೆ ರಾಜಕೀಯ ವಿಭಜನೆ ಸೃಷ್ಟಿಸುವ ವಿರೋಧ ಪಕ್ಷಗಳ ಪ್ರಯತ್ನವು ಅತ್ಯಂತ ಅಪಾಯಕಾರಿಯಾಗಿದೆ. ಇದು ದೇಶದ ಏಕತೆಗೇ ಕುತ್ತು ತರಬಲ್ಲುದು.

ಮಹಿಳೆಯರಿಗೆ ಲೋಕಸಭೆಯಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ. 33ರಷ್ಟು ಮೀಸಲಾತಿಗೆ ಅವಕಾಶ ಕಲ್ಪಿಸುವ ಮಸೂದೆಯನ್ನು ಸೋಲಿಸುವ ಮೂಲಕ ವಿರೋಧ ಪಕ್ಷಗಳು ಕೇವಲ ಮಹಿಳೆಯರಿಗಷ್ಟೇ ಅನ್ಯಾಯ ಮಾಡಿರುವುದಲ್ಲ, ಅದರ ಜತೆಗೇ ದಕ್ಷಿಣ ಮತ್ತು ಈಶಾನ್ಯದ ಹಲವಾರು ರಾಜ್ಯಗಳಿಗೂ ಅನ್ಯಾಯವೆಸಗಿವೆ. ಈ ಮಹಿಳಾ ಮೀಸಲಾತಿಗೆ ಅವಕಾಶ ಕಲ್ಪಿಸುವ 131ನೇ ಸಂವಿಧಾನ ತಿದ್ದುಪಡಿ ಮಸೂದೆಯು 2026ರ ಜನಗಣತಿಗಾಗಿ ಕಾಯದೆ, 2011ರ ಜನಗಣತಿಯ ಆಧಾರದಲ್ಲೇ ಕ್ಷೇತ್ರ ಪುನರ್ವಿಂಗಡಣೆ ಮಾಡುವ ಮತ್ತು ಅದಕ್ಕೆ ಪೂರಕವಾಗಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಉದ್ದೇಶ ಹೊಂದಿತ್ತು.

ಯಾವನೇ ವಿವೇಕಯುತ ರಾಜಕೀಯ ಮುಖಂಡ ಇದನ್ನು ಸ್ವಾಗತಿಸಬೇಕಿತ್ತು. ಇದು ಆಡಳಿತ ಪಕ್ಷದ ದೊಡ್ಡ ಪ್ರಮಾದವೆಂದು ಪರಿಗಣಿಸಿ ಅದರ ಲಾಭ ಪಡೆಯಲು ಪ್ರಯತ್ನಿಸಬೇಕಿತ್ತು. ಏಕೆಂದರೆ ಹೊಸ ಜನಗಣತಿ ಮುಕ್ತಾಯಗೊಂಡ ಬಳಿಕ ದೇಶದ ಜನಸಂಖ್ಯಾ ಸ್ವರೂಪವೇ ಭಾರಿ ಬದಲಾವಣೆ ಕಾಣಲಿದೆ. ಕೆಲವು ರಾಜ್ಯಗಳು ಕಡಿಮೆ ಜನಸಂಖ್ಯೆ ದಾಖಲಿಸಿದರೆ ಇನ್ನು ಕೆಲವು ರಾಜ್ಯಗಳು ಅಧಿಕ ಜನಸಂಖ್ಯೆ ದಾಖಲಿಸಲಿವೆ. ಮುಖ್ಯವಾಗಿ ದಕ್ಷಿಣ ಭಾರತ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆಯು ಕಡಿಮೆಯಾಗುವ ಸಾಧ್ಯತೆಗಳಿವೆ. ಏಕೆಂದರೆ ಈ ರಾಜ್ಯಗಳಲ್ಲಿ ಕುಟುಂಬ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಸರಿಸಲಾಗುತ್ತಿದೆ. ಕೇರಳದಲ್ಲಂತೂ ಬಹಳಷ್ಟು ಮಂದಿ ವಿದೇಶಗಳಲ್ಲಿ ನೆಲೆಸಿದ್ದು, ಅದು ಅಲ್ಲಿನ ಜನಸಂಖ್ಯೆಯ ಮೇಲೆ ಪರಿಣಾಮ ಬೀರಲಿದೆ. ಇದೇವೇಳೆ ಹಿಂದಿ ಭಾಷಿಕ ರಾಜ್ಯಗಳಲ್ಲಿ ಜನಸಂಖ್ಯೆ ಏರುಗತಿ ದಾಖಲಿಸಬಹುದು.

ಈಗಿನ ಜನಗಣತಿ ಪ್ರಕಾರವೇ ಕ್ಷೇತ್ರ ಪುನರ್ವಿಂಗಡಣೆ ನಡೆಯುತ್ತಿದ್ದರೆ ದಕ್ಷಿಣ ಮತ್ತು ಪೂರ್ವ ಭಾರತದ ಏಳು ರಾಜ್ಯಗಳು ಒಟ್ಟು 35 ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇತ್ತು. (ಆಂಧ್ರಪ್ರದೇಶ 5, ತೆಲಂಗಾಣ 3, ತಮಿಳ್ನಾಡು 10, ಕರ್ನಾಟಕ 2, ಕೇರಳ 7, ಒಡಿಶಾ 4 ಮತ್ತು ಪ.ಬಂಗಾಳ 4 ಸ್ಥಾನಗಳನ್ನು ಕಳೆದುಕೊಳ್ಳುತ್ತಿದ್ದವು). ಇದಕ್ಕೆ ವಿರುದ್ಧವಾಗಿ ಬಿಜೆಪಿ ಪ್ರಾಬಲ್ಯವಿರುವ ಹಿಂದಿ ರಾಜ್ಯಗಳಲ್ಲಿ 34 ಸ್ಥಾನಗಳು ಹೆಚ್ಚಾಗುತ್ತಿದ್ದವು. (ಉ.ಪ್ರದೇಶ 12, ಬಿಹಾರ 10, ಮಧ್ಯಪ್ರದೇಶ 5, ರಾಜಸ್ಥಾನ 7).

ಕೇಂದ್ರದ ಆಡಳಿತ ಪಕ್ಷವಾದ ಬಿಜೆಪಿ ತನ್ನ ಚುನಾವಣಾ ಲಾಭವನ್ನೇ ಗಮನದಲ್ಲಿಟ್ಟುಕೊಂಡಿದ್ದರೆ ಅದು ಕ್ಷೇತ್ರ ಪುನರ್ವಿಂಗಡಣೆಗೆ ಈಗಿನ ಜನಗಣತಿ ಮುಗಿಯುವ ತನಕ ಕಾಯುತ್ತಿತ್ತು. ಅದರಿಂದ ಬಿಜೆಪಿಗೆ ಹೆಚ್ಚು ಲಾಭವಾಗುತ್ತಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿಯವರು 2011ರ ಜನಗಣತಿಯ ಆಧಾರದಲ್ಲೇ ಕ್ಷೇತ್ರ ಪುನರ್ವಿಂಗಡಣೆ ಮಾಡುವ ಪ್ರಸ್ತಾಪ ಮುಂದಿಟ್ಟರು. ಇದರಿಂದ ಈಗಿರುವ ಕ್ಷೇತ್ರಗಳ ಯಥಾಸ್ಥಿತಿ ಮುಂದುವರಿಯುವ ಸಾಧ್ಯತೆಯೂ ಇತ್ತು. ಯಾವುದೇ ರಾಜ್ಯಕ್ಕೆ ಅನ್ಯಾಯವಾಗದಂತೆ ಅನುಪಾತದ ಆಧಾರದಲ್ಲಿ ಅವುಗಳ ಲೋಕಸಭಾ ಸ್ಥಾನಗಳಲ್ಲಿ ಗಮನಾರ್ಹ ಏರಿಕೆ ಮಾಡುವ ಆಶ್ವಾಸನೆಯನ್ನೂ ಮೋದಿಯವರು ನೀಡಿದ್ದರು. ಅದರರ್ಥವೆಂದರೆ ದಕ್ಷಿಣ ಮತ್ತು ಪೂರ್ವ ಭಾರತದ ರಾಜ್ಯಗಳು ಉತ್ತರದ ರಾಜ್ಯಗಳ ಕ್ಷೇತ್ರಗಳಿಗೆ ಸಮಾನ ಅನುಪಾತದಲ್ಲಿ ಹೆಚ್ಚು ಸ್ಥಾನಗಳನ್ನು ಪಡೆಯುತ್ತಿದ್ದವು.



ಆದರೆ ಈ ತಿದ್ದುಪಡಿ ಮಸೂದೆಯನ್ನು ತಿರಸ್ಕರಿಸುವ ಮೂಲಕ ವಿರೋಧ ಪಕ್ಷಗಳ ನಾಯಕತ್ವವು ತನ್ನ ಅಪ್ರಬುದ್ಧತೆಯನ್ನು ಹಾಗೂ ದೂರದೃಷ್ಟಿರಾಹಿತ್ಯವನ್ನು ಪ್ರದರ್ಶಿಸಿತು.

ನೂತನ ಕ್ಷೇತ್ರ ಪುನರ್ವಿಂಗಡನೆ ಸೂತ್ರವು ದಕ್ಷಿಣ ಭಾರತಕ್ಕೆ ಅನ್ಯಾಯ ಮಾಡುತ್ತದೆ ಎಂದು ಸುಳ್ಳು ಪುಕಾರು ಹಬ್ಬಿಸಲಾಯಿತು. ದಕ್ಷಿಣ ಭಾರತ ಮತ್ತು ಉತ್ತರ ಭಾರತದ ನಡುವಿನ ಲೋಕಸಭಾ ಸ್ಥಾನಗಳ ಸಂಖ್ಯೆಯಲ್ಲಿ ದೊಡ್ಡ ಅಂತರ ಉಂಟಾಗಲಿದೆ ಎಂದು ಅಪಪ್ರಚಾರ ಮಾಡಲಾಯಿತು. ಇದು ನಿಜಕ್ಕೂ ನಿರಾಧಾರಿತ ಹೇಳಿಕೆ. ನಮ್ಮ ದೇಶದಲ್ಲಿ ದಕ್ಷಿಣ ಭಾರತ ಮತ್ತು ಉತ್ತರ ಭಾರತವೆಂಬ ಕಾಲ್ಪನಿಕ ವಿಭಜನೆ ಸೃಷ್ಟಿಸುವುದೇ ತಪ್ಪು. ಉತ್ತರದವರೆಲ್ಲ ಬಿಜೆಪಿ ಬೆಂಬಲಿಗರು ಎಂದು ಬಿಂಬಿಸುವುದೂ ತಪ್ಪು. ದಕ್ಷಿಣ ಭಾರತದಲ್ಲಿ ಕೂಡಾ ಬಿಜೆಪಿ ಬಲಿಷ್ಠ ಅಸ್ತಿತ್ವ ಹೊಂದಿದೆ. ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಬಿಜೆಪಿ ಬಲಿಷ್ಠವಾಗಿದೆ. ಇದೇವೇಳೆ ಉತ್ತರ ಭಾರತದಲ್ಲಿ ವಿಪಕ್ಷ ಆಡಳಿತದ ರಾಜ್ಯಗಳೂ ಇವೆ. ಜಮ್ಮು-ಕಾಶ್ಮೀರ, ಪಂಜಾಬ್ ಮತ್ತು ಹಿಮಾಚಲಗಳಲ್ಲಿ ಬಿಜೆಪಿಯೇತರ ಸರಕಾರಗಳಿವೆ.

ದಕ್ಷಿಣ ಮತ್ತು ಉತ್ತರ ಭಾರತದ ಮಧ್ಯೆ ರಾಜಕೀಯ ವಿಭಜನೆ ಸೃಷ್ಟಿಸುವ ವಿರೋಧಪಕ್ಷಗಳ ಪ್ರಯತ್ನವು ಅತ್ಯಂತ ಅಪಾಯಕಾರಿಯಾಗಿದೆ. ಇದು ದೇಶದ ಏಕತೆಗೇ ಕುತ್ತು ತರಬಲ್ಲುದು. ಕಾಂಗ್ರೆಸ್, ಡಿಎಂಕೆ ಮತ್ತು ಎಡಪಕ್ಷಗಳು ಇಂತಹ ಅಪಪ್ರಚಾರದಲ್ಲಿ ಹೆಚ್ಚು ನಿರತವಾಗಿವೆ. ಹಾಗೆಂದು ಎಲ್ಲಾ ವಿಪಕ್ಷಗಳು ಇಂತಹ ಭಾವನಾತ್ಮಕ ಅಪಪ್ರಚಾರಕ್ಕೆ ಬಲಿಯಾಗಿಲ್ಲ. ಆಂಧ್ರಪ್ರದೇಶದ ಮೂರು ಪ್ರಮುಖ ಪಕ್ಷಗಳಾದ ತೆಲುಗುದೇಶಂ, ವೈಎಸ್‌ಆರ್ ಕಾಂಗ್ರೆಸ್ ಮತ್ತು ಜನಸೇನಾ ಪಕ್ಷಗಳು ವಿಪಕ್ಷಗಳ ವಾದವನ್ನು ತಿರಸ್ಕರಿಸಿವೆ. ಅವು ತಿದ್ದುಪಡಿಯ ಪರವಾಗಿ ಮತ ಚಲಾಯಿಸಿದ್ದವು.

ಕೇಂದ್ರ ಸರಕಾರವು ಇದೀಗ ಎಚ್ಚರಿಕೆಯಿಂದ ಮುನ್ನಡೆಯಬೇಕು. ದ.ಭಾರತದ ರಾಜ್ಯಗಳಿಗೆ ಕೇಂದ್ರದಿಂದ ಅನ್ಯಾಯವಾಗುತ್ತಿದೆ ಎಂಬ ಕಲ್ಪನೆಯನ್ನು ಬಿತ್ತಲು ವಿರೋಧ ಪಕ್ಷಗಳು ಯತ್ನಿಸುತ್ತಿವೆ. ಇಂತಹ ಪ್ರಯತ್ನವು ಅಪಾಯಕಾರಿ ಆಯಾಮ ಪಡೆಯುವ ಮೊದಲೇ ಅದನ್ನು ಮೊಳಕೆಯಲ್ಲೇ ಚಿವುಟಬೇಕು. ವಿರೋಧ ಪಕ್ಷಗಳು ಮಹಿಳೆಯರಿಗೆ ಮಾಡಿದ ಅನ್ಯಾಯವನ್ನಷ್ಟೇ ಎತ್ತಿ ತೋರಿದರೆ ಸಾಕಾಗದು. ದಕ್ಷಿಣ ಭಾರತಕ್ಕೆ ಪ್ರಸ್ತಾಪಿತ ತಿದ್ದುಪಡಿಯಿಂದ ಯಾವುದೇ ಅನ್ಯಾಯವಾಗುವುದಿಲ್ಲ ಎಂಬುದನ್ನು ಅರ್ಥ ಮಾಡಿಸಬೇಕು.

ಹಿಂದೆಯೂ ಕೆಲವೊಮ್ಮೆ ದಕ್ಷಿಣದ ರಾಜ್ಯಗಳಲ್ಲಿ ಉತ್ತರ ಭಾರತೀಯರ ವಿರುದ್ಧವಾಗಿ ಭಾವನೆಗಳು ಕೆರಳಿದ್ದಿತ್ತು. ತಮಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ಧ್ವನಿಯೆದ್ದಿತ್ತು. ಸ್ವಾತಂತ್ರ್ಯದ ಬಳಿಕ ತಮಿಳ್ನಾಡಲ್ಲಿ ಹಿಂದಿ ವಿರೋಧಿ ಆಂದೋಲನವು ತೀವ್ರವಾಗಿತ್ತು. ಅಲ್ಲಿ ಉತ್ತರ ಭಾರತ ವಿರೋಧಿ ಭಾವನೆಯೂ ಅಧಿಕವಾಗಿತ್ತು. 1980ರ ದಶಕದಲ್ಲಿ ತೆಲುಗುದೇಶಂನ ಎನ್‌ಟಿ ರಾಮರಾವ್ ತೆಲುಗು ಜನರ ಸ್ವಾಭಿಮಾನವನ್ನು ಕೆರಳಿಸಿ ಅಧಿಕಾರಕ್ಕೆ ಬಂದಿದ್ದರು. ಕೇಂದ್ರ ಸರಕಾರದ ಪರಿಕಲ್ಪನೆಯನ್ನೇ ಖಂಡಿಸಿದ ಅವರು ಕೇಂದ್ರವೆಂಬುದು ಒಂದು ಮಿಥ್ಯೆ ಎಂದು ಸಾರಿದ್ದರು.

ಇತ್ತೀಚಿನ ದಿನಗಳಲ್ಲಿ ಜಿಎಸ್‌ಟಿ ಮತ್ತು ಇತರ ಬಜೆಟ್ ಅನುದಾನಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ ಎಂಬ ಆರೋಪ ಹೊರಿಸುವುದೂ ನಡೆಯುತ್ತಿದೆ. ಆ ಮೂಲಕ ದಕ್ಷಿಣದ ರಾಜ್ಯಗಳ ಜನರಲ್ಲಿ ಉತ್ತರದವರು ತಾರತಮ್ಯ ಮಾಡುತ್ತಿದ್ದಾರೆ ಎಂಬ ಭಾವನೆ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ. ಕೇಂದ್ರ ಸರಕಾರವು ಕರ್ನಾಟಕದ ಕತ್ತು ಹಿಸುಕುತ್ತಿದೆ ಎಂಬುದಾಗಿ ಕರ್ನಾಟಕದ ಮುಖ್ಯಮಂತ್ರಿ ಇತ್ತೀಚೆಗೆ ಆರೋಪಿಸಿದ್ದರು. ಕೇಂದ್ರದ ಧೋರಣೆಯು ಏಕರಾಷ್ಟ್ರ ಕಲ್ಪನೆಯನ್ನು ಪ್ರತಿಪಾದಿಸುತ್ತಿದ್ದು, ಇದು ದಕ್ಷಿಣ ಭಾರತದ ವೈವಿಧ್ಯತೆಯ ಪರಿಕಲ್ಪನೆಗೆ ಅಪಾಯಕಾರಿಯಾಗಿದೆ ಎಂದು ತಮಿಳ್ನಾಡು ಮುಖ್ಯಮಂತ್ರಿ ಸ್ಟಾಲಿನ್ ಆರೋಪಿಸಿದ್ದರು.

ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ ಎಂಬ ಭಾವ ಹುಟ್ಟಿಸುವುದು ಈ ಎಲ್ಲಾ ಪ್ರಯತ್ನಗಳ ಮೂಲ ಉದ್ದೇಶವಾಗಿದೆ. ಆ ಮೂಲಕ ಉತ್ತರ-ದಕ್ಷಿಣ ವಿಭಜನೆ ಭಾವ ಸೃಜಿಸುವ ಯತ್ನ ನಡೆಯುತ್ತಿದೆ. ಇದು ಅಪಾಯಕಾರಿ ಮಟ್ಟ ಇನ್ನೂ ತಲುಪಿಲ್ಲ ನಿಜ. ಅಂತಹ ಹಂತ ತಲುಪಲಾರದು ಕೂಡ. ಹಾಗೆಂದು ಈ ಕುರಿತಂತೆ ನಿರಾಳವಾಗಿರುವಂತಿಲ್ಲ. ಮಹಿಳಾ ಮಸೂದೆ ಜಾರಿಯಾಗದಂತೆ ತಡೆದ ವಿಪಕ್ಷಗಳ ಕ್ರಮವು ಅಪಾಯದ ಮುನ್ಸೂಚನೆ ನೀಡುತ್ತಿವೆ. ಇನ್ನೀಗ ನೂತನ ಜನಗಣತಿ ನಡೆದ ಬಳಿಕ ಕ್ಷೇತ್ರ ಪುನರ್ವಿಂಗಡಣೆ ಡೆಯಬೇಕಾಗಿದ್ದು, ಇದು ಇನ್ನಷ್ಟು ಕಾವು ಸೃಷ್ಟಿಸುವುದು ಖಂಡಿತ.

ದಕ್ಷಿಣವು ಯಾವಾಗಲೂ ಭಾರತದ ಸಮಗ್ರತೆಯನ್ನು ಎತ್ತಿ ಹಿಡಿದಿದೆ. ಈಗ ದಕ್ಷಿಣ ಭಾರತದ ರಾಜಕೀಯ ನಾಯಕತ್ವ ಕೂಡಾ ಕ್ಷೇತ್ರ ಪುನರ್ವಿಂಗಡಣೆ ಕುರಿತಂತೆ ಹೆಚ್ಚು ರಚನಾತ್ಮಕ ಮಾತುಕತೆಗೆ ಮುಂದಾಗಬೇಕಾಗಿದೆ.

ಪತ್ರ ಮಿತ್ರ

ಜನಿವಾರ ವಿವಾದ: ನಿಯಮಗಳ ಹಿಂದೆ ಅಸಮಾನತೆಯ ನೆರಳು?

ಇತ್ತೀಚಿನ ದಿನಗಳಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಕೆಲ ವಿದ್ಯಾರ್ಥಿಗಳಿಂದ ಜನಿವಾರವನ್ನು ತೆಗೆಸಿರುವ ಘಟನೆಗಳು ಸಮಾಜದಲ್ಲಿ ಚರ್ಚೆಗೆ ಗ್ರಾಸವಾಗಿವೆ. ಈ ಕ್ರಮವನ್ನು ಕೇವಲ ಒಂದು ಜಾತಿಯನ್ನು ಅವಹೇಳನ ಮಾಡುವ ಕೃತ್ಯವೆಂದು ಮಾತ್ರ ನೋಡಿದರೆ ಅದು ಅಪೂರ್ಣ ಅರ್ಥೈಸುವಿಕೆಯಾಗಿದೆ. ವಾಸ್ತವವಾಗಿ, ಜನಿವಾರ ಧರಿಸುವವರು ಬ್ರಾಹ್ಮಣರು ಮಾತ್ರವಲ್ಲ; ಭಾರತದಲ್ಲಿ ಅನೇಕ ಜಾತಿಗಳವರು ಇದನ್ನು ಆಚಾರದ ಭಾಗವಾಗಿ ಧರಿಸುತ್ತಾರೆ. ಹೀಗಾಗಿ ಈ ರೀತಿಯ ಕ್ರಮವು ಒಂದು ಸಮುದಾಯವನ್ನಷ್ಟೇ ಅಲ್ಲದೆ, ವಿವಿಧ ಜಾತಿ-ಪಂಥಗಳ ಧಾರ್ಮಿಕ ಸಂಪ್ರದಾಯಗಳ ಮೇಲಿನ ಅವಮಾನವೆಂದು ಪರಿಗಣಿಸಬೇಕಾಗುತ್ತದೆ.

ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಜನಿವಾರಕ್ಕೆ ವಿಶಿಷ್ಟ ಸ್ಥಾನವಿದೆ. ಬ್ರಾಹ್ಮಣರು, ವೈಷ್ಣವರು, ಸ್ಮಾರ್ತರು ಮಾತ್ರವಲ್ಲದೆ, ಕೆಲವು ವೀರಶೈವ ಲಿಂಗಾಯತ ಸಮುದಾಯದವರು, ಕೆಲವು ಶೈವ ಪರಂಪರೆಯ ಅನುಯಾಯಿಗಳು, ಹಾಗೆಯೇ ಉಪನಯನ ಸಂಪ್ರದಾಯ ಅನುಸರಿಸುವ ಇತರೆ ಜಾತಿಗಳವರೂ ಜನಿವಾರವನ್ನು ಧರಿಸುತ್ತಾರೆ. ಇದು ಕೇವಲ ಅಲಂಕಾರವಲ್ಲ; ಅದು ಒಂದು ಧಾರ್ಮಿಕ ಗುರುತು, ಸಂಸ್ಕಾರ ಮತ್ತು ಆಚರಣೆಯ ಸಂಕೇತವಾಗಿದೆ.

ಪರೀಕ್ಷೆಗಳಲ್ಲಿ ನಕಲು ತಡೆಯಲು ಪರೀಕ್ಷಾ ಮಂಡಳಿಗಳು ವಿವಿಧ ನಿಯಮಗಳನ್ನು ಜಾರಿಗೆ ತರುತ್ತಿರುವುದು ಸಮಂಜಸವೇ ಸರಿ. ಆದರೆ ಆ ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು. ಕೇವಲ ಜನಿವಾರ ಧರಿಸಿರುವ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಅದನ್ನು ತೆಗೆಸುವುದು ನ್ಯಾಯೋಚಿತ ಕ್ರಮವಲ್ಲ. ಇದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಸಮಾಧಾನ ಹಾಗೂ ಭೇದಭಾವ ಮೂಡುವ ಸಾಧ್ಯತೆ ಇದೆ. ನಕಲು ಮಾಡುವ ವಿಧಾನಗಳು ತಂತ್ರಜ್ಞಾನದಿಂದ ಬದಲಾಗುತ್ತಿರುವ ಈ ಕಾಲದಲ್ಲಿ, ಒಂದು ಧಾರ್ಮಿಕ ಚಿಹ್ನೆಯನ್ನು ಮಾತ್ರ ಶಂಕೆಯ ದೃಷ್ಟಿಯಿಂದ ನೋಡುವುದು ಯುಕ್ತಿಯುತವಲ್ಲ.

ಇದೇ ಸಂದರ್ಭದಲ್ಲಿ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ದೇಹವನ್ನು ಸಂಪೂರ್ಣ ಮುಚ್ಚುವ ಉಡುಪಿಗೆ ಕೆಲವು ಸಂದರ್ಭಗಳಲ್ಲಿ ವಿನಾಯಿತಿ ನೀಡಲಾಗುತ್ತದೆ. ಆದರೆ ಅದೇ ಸಂದರ್ಭದಲ್ಲಿ ಜನಿವಾರ, ಮೂಗುತಿ, ಬಳೆ, ಓಲೆ, ತಾಳಿ, ದಾರ ಮುಂತಾದ ಸಣ್ಣ ಧಾರ್ಮಿಕ ಅಲಂಕಾರಗಳನ್ನು ಅನುಮಾನದಿಂದ ನೋಡುವುದಾದರೂ ಏಕೆ? ಈ ರೀತಿಯ ಆಯ್ಕೆ ಮಾಡಿದ ಕಠಿಣತೆ ಸಮಾಜದಲ್ಲಿ ಸಮಾನತೆ ಹಾಗೂ ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ದುರ್ಬಲಗೊಳಿಸುತ್ತದೆ.

ಇದುವರೆಗೆ ಜನಿವಾರ ಅಥವಾ ಇಂತಹ ಆಭರಣಗಳನ್ನು ಬಳಸಿಕೊಂಡು ನಕಲು ಮಾಡಿದ ಯಾವುದೇ ಸ್ಪಷ್ಟ ಉದಾಹರಣೆಗಳು ಕಂಡುಬಂದಿಲ್ಲ. ಆದರೆ ಬಟ್ಟೆ, ಎಲೆಕ್ಟ್ರಾನಿಕ್ ಸಾಧನಗಳು ಮುಂತಾದವುಗಳನ್ನು ಬಳಸಿಕೊಂಡು ನಕಲು ಮಾಡಿದ ಹಲವು ಘಟನೆಗಳು ದಾಖಲಾಗಿವೆ. ಹೀಗಾಗಿ ನಿಯಮಗಳನ್ನು ರೂಪಿಸುವಾಗ ವಾಸ್ತವದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕು, ಊಹೆಗಳ ಆಧಾರದ ಮೇಲೆ ಅಲ್ಲ.

ವಿದ್ಯಾರ್ಥಿಗಳನ್ನು ಕೇವಲ 'ವಿದ್ಯಾರ್ಥಿ' ಎಂಬ ದೃಷ್ಟಿಯಿಂದ ನೋಡುವುದು ಅತ್ಯಂತ ಮುಖ್ಯ. ಅವರ ಜಾತಿ, ಧರ್ಮ ಅಥವಾ ಆಚರಣೆಗಳನ್ನು ಆಧಾರವನ್ನಾಗಿ ಮಾಡಿಕೊಂಡು ವಿಭಿನ್ನ ರೀತಿಯ ನಿಯಮಗಳನ್ನು ಜಾರಿಗೊಳಿಸುವುದು ತಪ್ಪು. ಪರೀಕ್ಷಾ ಕೇಂದ್ರಗಳು ಸಮಾನತೆ ಮತ್ತು ನ್ಯಾಯಬದ್ಧ ಮೌಲ್ಯಗಳನ್ನು ಪ್ರತಿಬಿಂಬಿಸಬೇಕಾದ ಸ್ಥಳವಾಗಿರಬೇಕು. ಅಲ್ಲಿನ ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು.

ಸಂತ್ರಸ್ತ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸುವ ಚಿಂತನೆ ನಡೆಸುವುದಾಗಿ ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಹೀಗೆ ಮಾಡುವುದರಿಂದ ಸರಕಾರಕ್ಕೆ ಆಗುವ ಹೊರೆಯನ್ನು ತುಂಬಿಸಿ ಕೊಡುವವರ್ಯಾರು? ಜಾತಿ ಧರ್ಮಗಳ ನಡುವೆ ಸಮಾಜದಲ್ಲಿ ಮೂಡುತ್ತಿರುವ ಒಡಕನ್ನು ಹೇಗೆ ಸರಿಪಡಿಸುತ್ತಾರೆ?

ಅಂತಿಮವಾಗಿ, ಈ ವಿವಾದ ನಮಗೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ - ನಿಯಮಗಳು ಇರಲಿ, ಆದರೆ ಅವು ನ್ಯಾಯಯುತವಾಗಿರಬೇಕು. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರದಂತೆ, ಎಲ್ಲ ಸಮುದಾಯಗಳನ್ನೂ ಗೌರವಿಸುವ ರೀತಿಯಲ್ಲಿ ಪರೀಕ್ಷಾ ನಿಯಮಗಳನ್ನು ರೂಪಿಸಬೇಕಾಗಿದೆ. ಆಗ ಮಾತ್ರ ನಿಜವಾದ ಅರ್ಥದಲ್ಲಿ ನಮ್ಮ ಸಮಾಜ ಜಾತ್ಯತೀತ ಮತ್ತು ಸಮಾನತೆಯ ಮೌಲ್ಯಗಳನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

-ಜಿ.ನಾಗೇಂದ್ರ, ಕಾವೂರು, ಸಂಡೂರು

ಎಕ್ಸಿಟ್ ಪೋಲ್ಸ್ ವಿಶ್ವಾಸಾರ್ಹವೆ?

ಇತ್ತೀಚಿನ ವರ್ಷಗಳಲ್ಲಿ ಎಲ್ಲಾ ಟಿವಿ ವಾಹಿನಿಗಳೂ ಚುನಾವಣೋತ್ತರ ಸಮೀಕ್ಷೆ (ಎಕ್ಸಿಟ್ ಪೋಲ್) ನಡೆಸುವುದು ಹೆಚ್ಚುತ್ತಿದೆ. ವಿಪರ್ಯಾಸವೆಂದರೆ ಇಂತಹ ಎಕ್ಸಿಟ್ ಪೋಲ್‌ಗಳು ಎಡವಿ ಬೀಳುವುದೂ ಹೆಚ್ಚುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಎಕ್ಸಿಟ್ ಪೋಲ್‌ಗಳು ನುಡಿದ ಭವಿಷ್ಯಗಳು ಸುಳ್ಳಾಗುತ್ತಿರುವ ಪ್ರಸಂಗಗಳೂ ಅಧಿಕವಾಗುತ್ತಿವೆ. ಎಕ್ಸಿಟ್ ಪೋಲ್‌ಗಳೂ ಏಕರೀತಿಯಾಗಿರುವುದಿಲ್ಲ. ಒಂದೇ ರಾಜ್ಯದ ಚುನಾವಣಾ ಫಲಿತಾಂಶದ ಕುರಿತಂತೆ ಕೆಲವು ಎಕ್ಸಿಟ್ ಪೋಲ್‌ಗಳು ವಿಭಿನ್ನ ಫಲಿತಾಂಶದ ಚಿತ್ರಣ ನೀಡುವುದೂ ಇದೆ. ಈ ಬಾರಿ ಪಶ್ಚಿಮ ಬಂಗಾಳವು ಅದಕ್ಕೆ ಉತ್ತಮ ಉದಾಹರಣೆ. ಕೆಲವು ಪೋಲ್‌ಗಳು ಬಿಜೆಪಿಗೆ ಗೆಲುವು ಎಂದಿದ್ದರೆ, ಇನ್ನು ಕೆಲವು ತೃಣಮೂಲ ಕಾಂಗ್ರೆಸಿಗೆ ಗೆಲುವು ಎಂದಿವೆ.

ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ಜನರ ಮೂಡ್ ಅರಿಯುವುದು ಅಷ್ಟು ಸುಲಭವಲ್ಲ. ತೃಣಮೂಲ ಕಾಂಗ್ರೆಸಿನ ಗೂಂಡಾಗಿರಿಗೆ ಹೆದರುತ್ತಿರುವ ಜನರು ತಾವು ಯಾರಿಗೆ ಮತ ಹಾಕಿದ್ದೆಂದು ಬಹಿರಂಗವಾಗಿ ಹೇಳಲಾರರು. ಹಾಗಾಗಿ ಜನರ ನೈಜ ನಾಡಿಮಿಡಿತ ಅರಿಯುವುದು ಕಷ್ಟವೆ. ಬೇರೆ ಪಕ್ಷಗಳಿಗೆ ಮತ ಹಾಕಿದರೆ ಮುಂದಕ್ಕೆ ಪರಿಣಾಮ ಎದುರಿಸಬೇಕಾದೀತು ಎಂಬುದಾಗಿ ತೃಣಮೂಲ ಕಾಂಗ್ರೆಸಿನ ಮುಖಂಡರು ಬಹಿರಂಗವಾಗಿಯೇ ಬೆದರಿಕೆ ಹಾಕುತ್ತಿರುವ ವಿಡಿಯೋಗಳೂ ಕಾಣಸಿಗುತ್ತಿವೆ. ಹಾಗಾಗಿ ಎಕ್ಸಿಟ್ ಪೋಲ್‌ಗಳ ಭವಿಷ್ಯವನ್ನು ಪೂರ್ಣವಾಗಿ ನಂಬುವಂತಿಲ್ಲ.

-ಜಿ.ಕೆ. ರಾವ್, ಮೈಸೂರು

ಟೆಹ್ರಾನ್ ಹೊಸ ಪ್ರಸ್ತಾವ ತಿರಸ್ಕರಿಸಿದ ಟ್ರಂಪ್

ಇರಾನ್-ಅಮೆರಿಕ ಯುದ್ಧಕ್ಕೆ ಸನ್ನದ್ಧತೆ

ಟೆಹ್ರಾನ್: ಯುದ್ಧ ಕೊನೆಗೊಳಿಸಲು ಇರಾನ್‌ನ ಹೊಸ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ ಹಿನ್ನೆಲೆ ಅಮೆರಿಕ-ಇರಾನ್ ಕದನ ವಿರಾಮ ಬೂದಿಮುಚ್ಚಿದ ಕೆಂಡದಂತಾಗಿದ್ದು, ಯುದ್ಧ ಪುನರಾರಂಭ ಆಗುವುದು ಬಹುತೇಕ ಖಚಿತವಾಗಿದೆ. ಅಮೆರಿಕ-ಇರಾನ್ ನಡುವಿನ ಮೂರು ವಾರಗಳ ತಾತ್ಕಾಲಿಕ ಕದನ ವಿರಾಮ ಒಪ್ಪಂದವು ಮುಂದುವರಿಯುವ ಸಾಧ್ಯತೆಯಿಲ್ಲ.

ಪಾಕಿಸ್ತಾನಿ ಮಧ್ಯವರ್ತಿಗಳ ಮುಖೇನ ಯುದ್ಧ ಕೊನೆಗೊಳಿಸಲು ಅಮೆರಿಕ ಅಧ್ಯಕ್ಷರಿಗೆ ಇರಾನ್ ಪ್ರಸ್ತಾವನೆ ಕಳುಹಿಸಿತ್ತು. ಇರಾನ್ ನಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬಯಸಿದೆ. ಆದರೆ ಇರಾನ್ ನವರ ಪಸ್ತಾವದಲ್ಲಿ ನನಗೆ ಸಮಾಧಾನವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಇಸ್ರೇಲ್, ಗಲ್ಫ್ ರಾಷ್ಟ್ರಗಳು ಮತ್ತು ಯುರೋಪ್ ಮೇಲೆ ಇರಾನ್ ಪರಮಾಣು ದಾಳಿ ನಡೆಸುವ ಯೋಚನೆಯಲ್ಲಿದೆ. ನಾವದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಆರೋಪ ಮಾಡಿದ್ದಾರೆ.

ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮತಿ: ಯುದ್ಧ ಮುಂದುವರಿಯುವ ಸಾಧ್ಯತೆ ಹಿನ್ನೆಲೆಯಿಂದ ಮಿತ್ರರಾಷ್ಟ್ರಗಳಾದ ಇಸ್ರೇಲ್, ಕತಾರ್, ಕುವೈತ್ ಮತ್ತು ಯುಎಇ 8.6 ಶತಕೋಟಿ ಡಾಲರ್ ಮೌಲ್ಯದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಅಮೆರಿಕ ಅನುಮೋದನೆ ನೀಡಿದೆ.

ಇಸ್ರೇಲ್ ದಾಳಿಗೆ 12 ಸಾವು: ದಕ್ಷಿಣ ಲೆಬನಾನ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಗೆ ಒಂದು ಶಿಶು, ಇಬ್ಬರು ಮಹಿಳೆಯರ ಸಹಿತ 12 ಮಂದಿ ಮೃತಪಟ್ಟಿದ್ದಾರೆ. ತಾತ್ಕಾಲಿಕ ಕದನ ವಿರಾಮವನ್ನು ಉಲ್ಲಂಘಿಸಿ ಐಡಿಎಫ್ ದಾಳಿ ನಡೆಸಿದೆ ಎಂದು ಲೆಬನಾನ್ ಹೇಳಿದೆ. ಇದೇ ವೇಳೆ ಲೆಬನಾನ್ ನಿಂದ ಉತ್ತರ ಇಸ್ರೇಲ್‌ನತ್ತ ಹಿಜ್ಬೊಲ್ಲಾ ನಡೆಸಿದ ಡ್ರೋನ್ ದಾಳಿಯನ್ನು ಇಸ್ರೇಲ್ ಸೇನೆ (ಐಡಿಎಫ್) ಯಶಸ್ವಿಯಾಗಿ ತಡೆದಿದೆ

ಜರ್ಮನಿಯಿಂದ 5,000 ಸೇನಾ ತುಕಡಿ ವಾಪಸ್?: ಜರ್ಮನಿ ಚಾನ್ಸಲರ್ ಫ್ರೆಡರಿಚ್ ಮರ್ಚ್ ಮತ್ತು ಅಮೆರಿಕ ಅಧ್ಯಕ್ಷ ಟ್ರಂಪ್ ನಡುವಿನ ಸಾರ್ವಜನಿಕ ವಾಗ್ವಾದ ನಂತರ, ಜರ್ಮನಿಯಲ್ಲಿ ನಿಯೋಜನೆ ಮಾಡಿರುವ 5,000 ಸೇನಾ ತುಕಡಿಯನ್ನು 6 ತಿಂಗಳು ಅಥವಾ ವರ್ಷದೊಳಗೆ ಹಿಂಪಡೆಯುವುದಾಗಿ ಅಮೆರಿಕ ಬೆದರಿಸಿದೆ.

ಇರಾನ್‌ಗೆ ಟೋಲ್ ನೀಡಬೇಡಿ: ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಲು ಹಡಗುಗಳು, ತೈಲ ಕಂಪನಿ ಪಾವತಿಸುತ್ತಿದ್ದ ಟೋಲ್ ಹಣವನ್ನು ಇರಾನ್‌ಗೆ ಪಾವತಿಸದಂತೆ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ.

14 ಐಆರ್‌ಜಿಸಿ ಸಿಬ್ಬಂದಿ ಸಾವು!: ವಾಯವ್ಯ ಇರಾನ್‌ನ ಜಾಂಜನ್ ಪ್ರದೇಶದಲ್ಲಿ ಸ್ಫೋಟಕಗಳನ್ನು ತೆರವುಗೊಳಿಸುವ ವೇಳೆ ಸಂಭವಿಸಿದ ಸ್ಫೋಟದಿಂದಾಗಿ 14 ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಐಆರ್‌ಜಿಸಿ ತಿಳಿಸಿದೆ. ಸುಮಾರು 1,200 ಹೆಕ್ಟೇರ್ ಕೃಷಿ ಭೂಮಿಯಲ್ಲಿ ಹುದುಗಿಸಿಟ್ಟ ಸ್ಫೋಟಕಗಳನ್ನು ತೆರವುಗೊಳಿಸುವ ವೇಳೆ ಸ್ಫೋಟ ಸಂಭವಿಸಿದೆ.

ಇರಾನ್‌ಗೆ 4.8 ಶತಕೋಟಿ ಡಾಲರ್ ನಷ್ಟ: ಹಾರ್ಮುಜ್ ಜಲಸಂಧಿ ಮತ್ತು ಪ್ರಮುಖ ಬಂದರುಗಳ ಮೇಲೆ ಅಮೆರಿಕ ನೌಕಾಪಡೆ ಹೇರಿದ ಜಲ ದಿಗ್ಬಂಧನದ ಪರಿಣಾಮ ಇರಾನ್‌ಗೆ 4.8 ಶತಕೋಟಿ ಡಾಲರ್ ನಷ್ಟವಾಗಿದೆ. ಸುಮಾರು 53 ದಶಲಕ್ಷ ಬ್ಯಾರೆಲ್ ತೈಲ ಹೊಂದಿರುವ 31 ಟ್ಯಾಂಕರ್ ಹಡಗುಗಳು ಗಲ್ಫ್‌ನಲ್ಲೇ ಸಂಚರಿಸಲಾಗದೆ ಬಾಕಿಯಾಗಿವೆ.

ನರ್ಗಿಸ್‌ಗೆ ತೀವ್ರ ಅನಾರೋಗ್ಯ: ಕಾರಾಗೃಹ ಶಿಕ್ಷೆಯಲ್ಲಿರುವ ಇರಾನ್ ಇಸ್ಲಾಮಿಕ್ ಆಡಳಿತ ವಿರೋಧಿ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ನರ್ಗಿಸ್ ಮೊಹಮ್ಮದಿಗೆ ಕಳೆದ ವಾರ ಹೃದಯಾಘಾತಕ್ಕೆ ಒಳಗಾಗಿದ್ದು, ಅವರ ಆರೋಗ್ಯ ಕ್ಷೀಣಿಸಿದೆ ಎಂದು ತಿಳಿದುಬಂದಿದೆ.

ಭಾರತದತ್ತ ಅನಿಲ ಹೊತ್ತ ಹಡಗು

ಹೊಸದಿಲ್ಲಿ: ದೇಶದ ಇಂಧನ ಬಿಕ್ಕಟ್ಟನ್ನು ನೀಗಿಸಲು 45,000 ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ (ಎಲ್‌ಪಿಜಿ) ಹೊತ್ತ ಭಾರತದ ಸಂಪರ್ಕವಿರುವ ಸೂಪರ್ ಟ್ಯಾಂಕರ್ ಹಾರ್ಮುಜ್ ಜಲಸಂಧಿ ದಾಟಲು ಪ್ರಯತ್ನಿಸುತ್ತಿದೆ.

ಮಾರ್ಷಲ್ ಐಲೆಂಡ್ಸ್ ಧ್ವಜ ಹೊಂದಿರುವ ಸರ್ವ ಶಕ್ತಿ ನೌಕೆ, ಶನಿವಾರ ಇರಾನ್‌ನ ಲಾರಕ್ ಮತ್ತು ಖೇಶ್ಮ್ ದ್ವೀಪಗಳನ್ನು ಹಾದು ಒಮಾನ್ ಕೊಲ್ಲಿಯತ್ತ ಸಾಗಿದೆ. ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಸುರಕ್ಷತೆಯ ದೃಷ್ಟಿಯಿಂದ ಈ ನೌಕೆ ಭಾರತಕ್ಕೆ ತೆರಳುತ್ತಿರುವುದಾಗಿ ಮತ್ತು ಭಾರತೀಯ ಸಿಬ್ಬಂದಿಯನ್ನು ಹೊಂದಿರುವುದಾಗಿ ಸಂಕೇತಗಳನ್ನು ರವಾನಿಸಲಾಗುತ್ತಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಈ ಅನಿಲದ ಖರೀದಿದಾರ ಎಂದು ತಿಳಿದುಬಂದಿದೆ.

ಅಮೆರಿಕದ ದಿಗ್ಬಂಧನದಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿ ಸಂಚಾರ ಬಹುತೇಕ ಶೂನ್ಯಕ್ಕೆ ತಲುಪಿರುವ ಸಮಯದಲ್ಲಿ ಈ ನೌಕೆ ಸಂಚರಿಸುತ್ತಿದೆ. ಇರಾನ್ ಜೊತೆಗಿನ ದ್ವಿಪಕ್ಷೀಯ ಮಾತುಕತೆಗಳ ನಂತರ ಭಾರತ ಸಂಘರ್ಷದ ಅವಧಿಯಲ್ಲಿ ಎಂಟು ಅನಿಲ ನೌಕೆಗಳನ್ನು ಈ ಜಲಸಂಧಿಯ ಮೂಲಕ ಯಶಸ್ವಿಯಾಗಿ ಸಾಗಿಸಿದೆ. ಭಾರತ ವಿಶ್ವದ ಎರಡನೇ ಅತಿದೊಡ್ಡ ಅಡುಗೆ ಅನಿಲ ಬಳಕೆಯ ದೇಶ. ಮಧ್ಯಪ್ರಾಚ್ಯದ ಅಡಚಣೆಗಳಿಂದ ಉಂಟಾದ ಕೊರತೆ ನಿಭಾಯಿಸಲು ಸರ್ಕಾರ ದೇಶೀಯ ಉತ್ಪಾದನೆಯನ್ನು ಶೇ.60 ರಷ್ಟು ಹೆಚ್ಚಿಸಿ 54,000 ಟನ್‌ಗಳಿಗೆ ಏರಿಸಿದೆ. ಪ್ರಸ್ತುತ ದೈನಂದಿನ ಬಳಕೆ 80,000 ಟನ್‌ಗಳಿಗೆ ಇಳಿಕೆಯಾಗಿದೆ. ಸ್ಥಳೀಯ ಬಂದರುಗಳಲ್ಲಿ ಈ ಟ್ಯಾಂಕರ್‌ಗಳಿಗೆ ಇಳಿಸಲು ಆದ್ಯತೆ ನೀಡಲಾಗುತ್ತಿದೆ.

ಅತೀ ಕಡಿಮೆ ಪ್ರಯಾಣ ಸಮಯ

ಕೆನಡಾ ಮೂಲದ ಡಿ ಹ್ಯಾವಿಲ್ಯಾಂಡ್ ಡಿಎಚ್‌ಸಿ-6 ಟ್ವಿನ್ ಆಟರ್ ವಿಮಾನಗಳ ಬಳಕೆಯಿಂದ ಪ್ರಯಾಣದ ಸಮಯ ಗಣನೀಯವಾಗಿ ಕಡಿಮೆಯಾಗಲಿದೆ. ಈ ಹಿಂದೆ ಹಡಗಿನಲ್ಲಿ ಅರ್ಧ ದಿನ ತೆಗೆದುಕೊಳ್ಳುತ್ತಿದ್ದ ಪ್ರಯಾಣವನ್ನು ಈಗ ಕೇವಲ 20 ನಿಮಿಷಗಳಲ್ಲಿ ಪೂರೈಸಬಹುದು. ಇದು ಕೇವಲ ಸೌಕರ್ಯದ ವಿಷಯವಲ್ಲ; ತುರ್ತು ವೈದ್ಯಕೀಯ ಸೇವೆಗಳು ಮತ್ತು ದ್ವೀಪದ ಜನರಿಗೆ ಅಗತ್ಯ ವಸ್ತುಗಳ ಶೀಘ್ರ ಪೂರೈಕೆಗೂ ಇದು ಅತ್ಯಗತ್ಯ.

ಲಕ್ಷದ್ವೀಪದಲ್ಲಿ ಭಾರತದ ಮೊದಲ ಸೀಪ್ಲೇನ್ ಸೇವೆಗೆ ಚಾಲನೆ

ಅಲೆಗಳ ಮೇಲೆ ವಿಮಾನಯಾನ



ಭಾರತೀಯ ವಿಮಾನಯಾನ ರಂಗ ಒಂದು ಐತಿಹಾಸಿಕ ಬದಲಾವಣೆಗೆ ಸಾಕ್ಷಿಯಾಗುತ್ತಿದ್ದು, ಇನ್ನುಮುಂದೆ ವಿಮಾನಗಳು ಕೇವಲ ರನ್-ವೇಗಳ ಮೇಲೆ ಮಾತ್ರವಲ್ಲದೆ, ನೀಲಿ ಅಲೆಗಳ ಮೇಲೂ ಇಳಿಯಲಿವೆ. ಪ್ರಾದೇಶಿಕ ಸಂಪರ್ಕದ ದೃಷ್ಟಿಯಿಂದ ಈ ಮೈಲಿಗಲ್ಲನ್ನು ಸಾಧಿಸಿರುವುದು ಸ್ಕೈಹಾಪ್ ಏವಿಯೇಷನ್ ಸಂಸ್ಥೆ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದಿಂದ (ಡಿಜಿಸಿಎ) ಅಧಿಕೃತವಾಗಿ ಏರ್ ಆಪರೇಟರ್ ಸರ್ಟಿಫಿಕೇಟ್ (ಎಒಸಿ) ಪಡೆದುಕೊಳ್ಳುವ ಮೂಲಕ, ದೇಶದ ಮೊದಲ ಮೀಸಲಾದ ವಾಣಿಜ್ಯ ಸೀಪ್ಲೇನ್ ಸೇವೆಯನ್ನು ಪ್ರಾರಂಭಿಸಲು ಈ ಸಂಸ್ಥೆಗೆ ಹಸಿರು ನಿಶಾನೆ ಸಿಕ್ಕಿದೆ. ಇದು ಭಾರತದ ವಿಶಾಲವಾದ ಕರಾವಳಿ ಮತ್ತು ಒಳನಾಡು ಜಲಮಾರ್ಗಗಳ ಪ್ರವಾಸೋದ್ಯಮ ಹಾಗೂ ಆರ್ಥಿಕ ಸಾಮರ್ಥ್ಯವನ್ನು ಅನಾವರಣಗೊಳಿಸುವ ಭರವಸೆ ಮೂಡಿಸಿದೆ.

ತಾಂತ್ರಿಕ ಪ್ರಗತಿ ಮತ್ತು ಸಿದ್ಧತೆ

ಈ ಪರವಾನಗಿ ಪಡೆಯುವ ಪ್ರಕ್ರಿಯೆ ಸುಲಭದ್ದಾಗಿರಲಿಲ್ಲ. ಇದು ಕಳೆದ ಒಂದು ವರ್ಷದಿಂದ ನಡೆಸಲಾದ ಕಟ್ಟುನಿಟ್ಟಿನ ಸುರಕ್ಷತಾ ಮೌಲ್ಯಮಾಪನ ಮತ್ತು ತಾಂತ್ರಿಕ ಪ್ರಯೋಗಗಳ ನಂತರ ದೊರೆತ ಫಲ. ಸಾಮಾನ್ಯ ವಿಮಾನಗಳಿಗಿಂತ ಭಿನ್ನವಾಗಿ, ಸೀಪ್ಲೇನ್‌ಗಳಿಗೆ ವಿಶೇಷ ಪೈಲಟ್ ತರಬೇತಿ ಮತ್ತು ವಿಶಿಷ್ಟ ನಿರ್ವಹಣಾ ವಿಧಾನಗಳ ಅಗತ್ಯವಿರುತ್ತದೆ. ಉಪ್ಪುನೀರಿನಿಂದ ಉಂಟಾಗುವ ಸವಕಳಿ ಮತ್ತು ನೀರಿನ ಮೇಲೆ ಇಳಿಯುವಾಗ ಎದುರಾಗುವ ಸವಾಲುಗಳನ್ನು ಎದುರಿಸಲು ಇವು ಸಜ್ಜಾಗಿರಬೇಕು. 2026ರ ಆರಂಭದಲ್ಲಿ, ಸ್ಕೈಹಾಪ್ ಸಂಸ್ಥೆ, ಉತ್ತರಾಖಂಡದ ರಿಷಿಕೇಶದ ಗಂಗಾ ಬ್ಯಾರೇಜ್ ಮತ್ತು ತೆಹ್ರಿ ಸರೋವರದಲ್ಲಿ ಯಶಸ್ವಿ ಪರೀಕ್ಷಾರ್ಥ ಹಾರಾಟಗಳನ್ನು ನಡೆಸುವ ಮೂಲಕ ತನ್ನ ಸಾಮರ್ಥ್ಯ ಸಾಬೀತುಪಡಿಸಿದೆ.

ಮುಖ್ಯಾಂಶ

- ಸಂಸ್ಥೆ: ಸ್ಕೈಹಾಪ್ ಏವಿಯೇಷನ್
- ವಿಮಾನ: 19 ಆಸನಗಳ ಡಿಎಚ್‌ಸಿ-6
- ಪ್ರಯೋಗ: ಏಪ್ರಿಲ್‌ನಲ್ಲಿ ಪೂರ್ಣ
- ಮಾರ್ಗ: ಕೊಚ್ಚಿ - ಲಕ್ಷದ್ವೀಪ
- ಪ್ರಯೋಜನ: ಶೀಘ್ರ ದ್ವೀಪ ಪ್ರಯಾಣ

19 ಆಸನಗಳ ಪುಟ್ಟ ವಿಮಾನಗಳು

ಕೇವಲ 19 ಆಸನಗಳ ಪುಟ್ಟ ವಿಮಾನಗಳು ವಿವಿಧ ಜಲಮೂಲಗಳಲ್ಲಿ ಸುರಕ್ಷಿತವಾಗಿ ಕಾರ್ಯಾಚರಣೆ ನಡೆಸಬಲ್ಲವು ಎಂದು ಸಾಬೀತಾಗಿದೆ. ಇದರಿಂದ ವಿಮಾನಯಾನ ಕ್ಷೇತ್ರಕ್ಕೆ ಹೊಸ ಆಯಾಮ ದೊರೆತಿದೆ. ಸಾಂಪ್ರದಾಯಿಕ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಭೂಮಿಯ ಕೊರತೆ ಅಥವಾ ಪರಿಸರದ ಮೇಲಾಗುವ ದುಷ್ಪರಿಣಾಮಗಳಿರುವ ಪ್ರದೇಶಗಳಲ್ಲಿ ಈ ರನ್‌ವೇ ಮುಕ್ತ ವಿಧಾನವು ವರದಾನವಾಗಲಿದೆ. ನೀರಿನ ಮೇಲೆ ತೇಲುವ ಡಾಕ್‌ಗಳು ಮತ್ತು ಗೊತ್ತುಪಡಿಸಿದ ಜಲಪ್ರದೇಶಗಳನ್ನು ಬಳಸುವುದರಿಂದ, ಅತ್ಯಂತ ಕಡಿಮೆ ಮೂಲಸೌಕರ್ಯ ವೆಚ್ಚದಲ್ಲಿ ಶೀಘ್ರವಾಗಿ ಸೇವೆ ಆರಂಭಿಸಬಹುದು.

ಪ್ರವಾಸೋದ್ಯಮದ ಭವಿಷ್ಯ

ಸ್ಥಳೀಯ ನಿವಾಸಿಗಳಿಗೆ ಪ್ರಯೋಜನವಾಗುವುದರ ಜೊತೆಗೆ, ಸೀಪ್ಲೇನ್ ಸೇವೆ ಭಾರತದ ಬ್ಲೂ ಎಕಾನಮಿ(ಜಲ ಆರ್ಥಿಕತೆ) ಯೋಜನೆಯ ಪ್ರಮುಖ ಭಾಗ. ದೂರದ ಪ್ರವಾಸಿ ತಾಣಗಳನ್ನು ಸುಲಭವಾಗಿ ತಲುಪುವಂತೆ ಮಾಡುವ ಮೂಲಕ, ಭಾರತವನ್ನು ಪರಿಸರಸ್ನೇಹಿ ಪ್ರವಾಸೋದ್ಯಮದ ಕೇಂದ್ರವನ್ನಾಗಿ ಮಾಡಲು ಸರ್ಕಾರ ಯೋಜಿಸಿದೆ. ಲಕ್ಷದ್ವೀಪದ ನಂತರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಈಶಾನ್ಯ ಭಾರತದ ನದಿ ಪ್ರದೇಶಗಳಿಗೂ ಈ ಸೇವೆಯನ್ನು ವಿಸ್ತರಿಸುವ ಯೋಜನೆ ಇದೆ. ಸರ್ಕಾರದ ಮಾಡಿಫೈಡ್ ಉಡಾನ್ ಯೋಜನೆಯಲ್ಲಿ ಈ ಮಾರ್ಗಗಳಿಗೆ ಆರ್ಥಿಕ ನೆರವು ದೊರೆಯಲಿದ್ದು, ಇದರಿಂದ ಆರಂಭಿಕ ವರ್ಷಗಳಲ್ಲಿ ವಿಮಾನಯಾನ ಸಂಸ್ಥೆಗಳಿಗೆ ಹೆಚ್ಚಿನ ಹೊರೆಯಾಗುವುದಿಲ್ಲ. ಸ್ಕೈಹಾಪ್ ಸಂಸ್ಥೆಯ ಮೊದಲ ವಾಣಿಜ್ಯ ಹಾರಾಟ ಶೀಘ್ರದಲ್ಲೇ ಆರಂಭವಾಗಲಿದ್ದು, ನೀಲಿ ಸರೋವರದ ಮೇಲೆ ವಿಮಾನವೊಂದು ಇಳಿಯುವ ದೃಶ್ಯ ಇನ್ನು ಮುಂದೆ ಅಪರೂಪದ ಸಂಗತಿಯಾಗಿ ಉಳಿಯುವುದಿಲ್ಲ.

ಲಕ್ಷದ್ವೀಪ; ಮೊದಲ ಆಯಕಟ್ಟಿನ ಕೇಂದ್ರ



ವಾಣಿಜ್ಯ ಕಾರ್ಯಾಚರಣೆಯ ಮೊದಲ ಹಂತ, ಲಕ್ಷದ್ವೀಪ ದ್ವೀಪಸಮೂಹವನ್ನು ಕೇಂದ್ರೀಕರಿಸಲಿದೆ. ಈ ಪ್ರದೇಶದಲ್ಲಿ ಸಾರಿಗೆ ವ್ಯವಸ್ಥೆ ದಶಕಗಳಿಂದ ದೊಡ್ಡ ಸವಾಲಾಗಿ ಉಳಿದಿದೆ. ಪ್ರಸ್ತುತ ಇಲ್ಲಿನ ಜನರು ಮತ್ತು ಬರುವ ಲಕ್ಷಾಂತರ ಪ್ರವಾಸಿಗರು ಹಡಗು ಪ್ರಯಾಣ ಅಥವಾ ಅಗತ್ತಿಯಲ್ಲಿರುವ ಏಕೈಕ ರನ್‌ವೇ ಮೇಲೆ ಅವಲಂಬಿತರಾಗಿದ್ದಾರೆ. ಸ್ಕೈಹಾಪ್ ಸಂಸ್ಥೆ, ಕವರತ್ತಿ, ಮಿನಿಕಾಯ್ ಮತ್ತು ಕಿಲ್ತಾನ್ ಸೇರಿದಂತೆ ಐದು ಪ್ರಮುಖ ದ್ವೀಪಗಳನ್ನು ನೇರವಾಗಿ ಕೊಚ್ಚಿಯ ಮುಖ್ಯ ಭೂಭಾಗಕ್ಕೆ ಸಂಪರ್ಕಿಸುವ ಮೂಲಕ ಕ್ರಾಂತಿ ಮಾಡಲು ಸಿದ್ಧವಾಗಿದೆ.

ಜಾಗತಿಕ ಯಶಸ್ಸು ಮತ್ತು ಸ್ಫೂರ್ತಿ

ಸೀ ಪ್ಲೇನ್ ಪ್ರವಾಸೋದ್ಯಮ, ಜಾಗತಿಕವಾಗಿ ಈಗಾಗಲೇ ದೊಡ್ಡ ಮಟ್ಟದ ಯಶಸ್ಸು ಕಂಡಿದೆ. ಪ್ರಮುಖವಾಗಿ ಮಾಲ್ಡೀವ್ಸ್‌ನಲ್ಲಿ ಇದು ಪ್ರವಾಸೋದ್ಯಮದ ಬೆನ್ನೆಲುಬಾಗಿದೆ; ಅಲ್ಲಿನ ನೂರಾರು ದ್ವೀಪಗಳ ನಡುವೆ ಸಂಪರ್ಕ ಕಲ್ಪಿಸಲು ವಿಶ್ವದ ಅತಿದೊಡ್ಡ ಸೀ ಪ್ಲೇನ್ ಜಾಲವಿದೆ. ಹಾಗೆಯೇ ಕೆನಡಾ, ಅಮೆರಿಕದ ಅಲಾಸ್ಕಾ ಮತ್ತು ಆಸ್ಟ್ರೇಲಿಯಾದ ಗ್ರೇಟ್ ಬ್ಯಾರಿಯರ್ ರೀಫ್ ಪ್ರದೇಶಗಳಲ್ಲಿ ಇವು ಅತ್ಯಂತ ಜನಪ್ರಿಯ ಸಾರಿಗೆ ಮಾದರಿಗಳಾಗಿವೆ. ಕೆನಡಾದ ವ್ಯಾಂಕೋವರ್ ಮತ್ತು ವಿಕ್ಟೋರಿಯಾ ನಡುವಿನ ಸೀ ಪ್ಲೇನ್ ಸೇವೆಗಳು ವಿಶ್ವದ ಅತ್ಯಂತ ಜನನಿಬಿಡ ಮಾರ್ಗಗಳೆಂದು ಹೆಸರಾಗಿವೆ.

100ಕ್ಕೂ ಹೆಚ್ಚು ಸಂಭಾವ್ಯ ಸೀ ಪ್ಲೇನ್ ಮಾರ್ಗ

ಭಾರತದಲ್ಲಿಯೂ ಈ ಯಶಸ್ಸನ್ನು ಸಾಧಿಸಲು ಕೇಂದ್ರ ಸರ್ಕಾರ ಸಾಗರಮಾಲಾ ಯೋಜನೆಯಲ್ಲಿ ಸುಮಾರು



100ಕ್ಕೂ ಹೆಚ್ಚು ಸಂಭಾವ್ಯ ಸೀ ಪ್ಲೇನ್ ಮಾರ್ಗಗಳನ್ನು ಗುರುತಿಸಿದೆ. ಗುಜರಾತಿನ ಸಾಬರಮತಿ ರಿವರ್ ಫ್ರಂಟ್ ಮತ್ತು ಸ್ಟ್ಯಾಚ್ಯೂ ಆಫ್ ಯೂನಿಟಿ ನಡುವಿನ ಪ್ರಾಯೋಗಿಕ ಹಾರಾಟಗಳು ಈ ಹಿಂದೆ ಭರವಸೆ ಮೂಡಿಸಿದ್ದವು. ಈಗ ಸ್ಕೈಹಾಪ್ ಏವಿಯೇಷನ್‌ನ ಪ್ರವೇಶದೊಂದಿಗೆ, ಭಾರತ ಈ ಅಂತರಾಷ್ಟ್ರೀಯ ಗುಣಮಟ್ಟದ ಪ್ರವಾಸೋದ್ಯಮ ಮಾದರಿಯನ್ನು ಅಳವಡಿಸಿಕೊಳ್ಳಲು ಪೂರ್ಣ ಪ್ರಮಾಣದಲ್ಲಿ ಸಜ್ಜಾಗಿದೆ.

ಕಿರುಸುದ್ದಿ

ಬಿಜೆಪಿ ಸೇರಿದ ಪಾಠಕ್ ವಿರುದ್ಧ 2 ಎಫ್‌ಐಆರ್!

ಚಂಡೀಗಢ: ಆಮ್ ಆದ್ಮಿ ಪಕ್ಷದಿಂದ ಬಿಜೆಪಿಗೆ ವಿಲೀನಗೊಂಡಿದ್ದ ರಾಜ್ಯಸಭೆ ಸಂಸದ ಸಂದೀಪ್ ಪಾಠಕ್ ವಿರುದ್ಧ ಪಂಜಾಬ್ ಪೊಲೀಸರು ಶನಿವಾರ 2 ಜಾಮೀನು ರಹಿತ ಎಫ್‌ಐಆರ್ ದಾಖಲಿಸಿದ್ದು, ದಿಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ರಾಜಕೀಯ ದ್ವೇಷ ಸಾಧಿಸುತ್ತಿದ್ದಾರೆ ಎಂದು



ಬಿಜೆಪಿ ಆರೋಪಿಸಿದೆ. ಪಾಠಕ್ ವಿರುದ್ಧ ದಾಖಲಾದ ಎಫ್‌ಐಆರ್ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಏ.24ರಂದು ಆಪ್ ಪಕ್ಷದ 10ರಲ್ಲಿ 7 ಸಂಸದರು, ಕೇಜ್ರಿವಾಲ್ ನೇತೃತ್ವದಲ್ಲಿ ಪಕ್ಷ ತನ್ನ ಮೂಲ ಸಿದ್ಧಾಂತ ಮತ್ತು ಮೌಲ್ಯಗಳನ್ನು ಕಳೆದುಕೊಂಡು ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾರಣ ಪಕ್ಷ ತ್ಯಜಿಸಿ ಬಿಜೆಪಿ ಪಕ್ಷದಲ್ಲಿ ವಿಲೀನವಾಗುವುದನ್ನು ಘೋಷಿಸಿದ್ದರು.

ಮತ ಎಣಿಕೆ: ಹೆಚ್ಚುವರಿ ಪೊಲೀಸ್‌ಗೆ ಟಿವಿಕೆ ಮನವಿ

ಚೆನ್ನೈ: ತಮಿಳುನಾಡಿನಾದ್ಯಂತ ಎಲ್ಲಾ ಮತ ಎಣಿಕೆ ಕೇಂದ್ರಗಳಲ್ಲೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕೆಂದು ದಳಪತಿ ವಿಜಯ್ ನಾಯಕತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಚುನಾವಣಾ ಆಯೋಗಕ್ಕೆ ಮನವಿ ಮಾಡಿಕೊಂಡಿದೆ. ಏ.23ರಂದು ತಮಿಳುನಾಡಿನ 234 ವಿಧಾನಸಭೆ ಕ್ಷೇತ್ರಗಳಿಗಾಗಿ ಮತದಾನ ನಡೆದಿದ್ದು, ಮೇ 4ರಂದು ಮತ ಎಣಿಕೆಯಾಗಿ ಅಂದೇ ಫಲಿತಾಂಶ ಪ್ರಕಟವಾಗಲಿದೆ. ಶ್ರೀರಂಗಂ ಕ್ಷೇತ್ರದಲ್ಲಿ ಟಿವಿಕೆ ಪಕ್ಷದ ಎರಡು ಕಚೇರಿಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿ ಧ್ವಂಸ ಮಾಡಿದ್ದರು.



ಈ ಹಿನ್ನೆಲೆ ಎಲ್ಲಾ ಮತ ಎಣಿಕೆ ಕೇಂದ್ರಗಳಲ್ಲಿ ಸಮಾಜ ವಿರೋಧಿ ಶಕ್ತಿಗಳು ಟಿವಿಕೆ ಏಜೆಂಟುಗಳ ಮೇಲೆ ಮತ್ತು ಮತ ಎಣಿಕೆ ಪ್ರಕ್ರಿಯೆಗೆ ತೊಂದರೆ ಮಾಡುವ ಸಾಧ್ಯತೆಯಿದ್ದು, ಹೆಚ್ಚುವರಿ ಪೊಲೀಸ್ ನಿಯೋಜಿಸಬೇಕೆಂದು ಟಿವಿಕೆ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ, ಮುಖ್ಯ ಚುನಾವಣಾ ಅಧಿಕಾರಿ ಅರ್ಚನಾ ಪಟ್ನಾಯಕ್ ಅವರಿಗೆ ಮನವಿ ಸಲ್ಲಿಸಿದ್ದಾರೆ. ಇದೇ ವೇಳೆ ವೈಯಕ್ತಿಕ ಕಾರಣಗಳಿಂದ ಶನಿವಾರ ವೆಲಂಕಣಿ ಚರ್ಚ್ ಭೇಟಿಯನ್ನು ವಿಜಯ್ ಕೊನೆಯ ಕ್ಷಣದಲ್ಲಿ ರದ್ದುಗೊಳಿಸಿದ್ದು, ಅಭಿಮಾನಿಗಳಿಗೆ ನಿರಾಸೆ ಮೂಡಿಸಿದೆ. ಇತ್ತೀಚೆಗೆ ತಿರುಚೆಂದೂರ್ ಮುರುಗನ್ ಮತ್ತು ಶಿರಡಿ ಸಾಯಿಬಾಬಾ ದೇವಸ್ಥಾನಗಳಿಗೆ ವಿಜಯ್ ಭೇಟಿ ನೀಡಿದ್ದರು.

ಐಇಡಿ ಸ್ಫೋಟಗೊಂಡು ನಾಲ್ಕು ಪೊಲೀಸರ ಸಾವು

ಕಂಕೇರ್: ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯ ಆದ್ನಾರ್ ಗ್ರಾಮದ ಅರಣ್ಯ ಪ್ರದೇಶದಲ್ಲಿ ಶನಿವಾರ ಮೈನ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯ ವೇಳೆ ಸುಧಾರಿತ ಸ್ಫೋಟಕ ಸಾಧನ(ಐಇಡಿ) ಸ್ಫೋಟಗೊಂಡು ನಾಲ್ವರು ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ.

ನಾರಾಯಣಪುರ ಜಿಲ್ಲೆಯ ಗಡಿಯ ಸಮೀಪವಿರುವ ಅಡ್ನಾರ್ ಅರಣ್ಯದಲ್ಲಿ ಬೆಳಗ್ಗೆ 11:30ರ ಸುಮಾರಿಗೆ ಭದ್ರತಾ ಪಡೆಗಳ ಜಂಟಿ ತಂಡ ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಮೃತರನ್ನು ಜಿಲ್ಲಾ ಮೀಸಲು ಪಡೆಯ(ಡಿಆರ್‌ಜಿ) ಇನ್ಸ್‌ಪೆಕ್ಟರ್ ಸುಖರಾಮ್ ವಟ್ಟಿ, ಕಾನ್ಸ್‌ಟೇಬಲ್ ಕೃಷ್ಣ ಕೊಮ್ರಾ ಮತ್ತು ಬಸ್ತಾರ್ ಫೈಟರ್ಸ್‌ನ ಕಾನ್ಸ್‌ಟೇಬಲ್‌ಗಳಾದ ಸಂಜಯ್ ಗಡ್ಪಾಲೆ ಮತ್ತು ಪರಮಾನಂದ ಕೊಮ್ರಾ ಎಂದು ಗುರುತಿಸಲಾಗಿದೆ. ಈ ವರ್ಷ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಭದ್ರತಾ ಸಿಬ್ಬಂದಿ ಪ್ರಾಣ ಕಳೆದುಕೊಂಡ ಮೊದಲ ಘಟನೆ ಇದಾಗಿದೆ.

ಬಸ್ತಾರ್ ವಲಯದ ಐಜಿ ಸುಂದರರಾಜ್ ಪಟ್ಟಿಲಿಂಗಂ ಪ್ರಕಾರ, ನಕ್ಸಲರ ಅಡಗುತಾಣಗಳ ಬಗ್ಗೆ ಸಿಕ್ಕ ಮಾಹಿತಿಯ ಮೇರೆಗೆ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ನೆಲದಡಿಯಲ್ಲಿ ಬಚ್ಚಿಟ್ಟಿದ್ದ ಐಇಡಿಯನ್ನು ಹೊರತೆಗೆಯುವಾಗ ಆಕಸ್ಮಿಕವಾಗಿ ಸರ್ಕ್ಯೂಟ್ ಸಂಪರ್ಕ ಉಂಟಾಗಿ ಸ್ಫೋಟ ಸಂಭವಿಸಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಮಾ.31ರಂದು ಛತ್ತೀಸ್‌ಗಢವನ್ನು ಸಶಸ್ತ್ರ ಮಾವೋವಾದ ಮುಕ್ತ ರಾಜ್ಯ ಎಂದು ಘೋಷಿಸಿದ ನಂತರ ನಡೆದ ಮೊದಲ ನಕ್ಸಲ್ ಸಂಬಂಧಿತ ಸ್ಫೋಟ ಇದಾಗಿದೆ. ಸಿಬ್ಬಂದಿ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳ ಪ್ರಕಾರವೇ ಕೆಲಸ ಮಾಡುತ್ತಿದ್ದರು ಎಂದು ಉಪಮುಖ್ಯಮಂತ್ರಿ ವಿಜಯ ಶರ್ಮಾ ತಿಳಿಸಿದ್ದಾರೆ.

ಉಭಯ ರಂಗದ ಭವಿಷ್ಯ ಬರೆಯಲಿರುವ ಬಿಜೆಪಿ!

ತಿರುವನಂತಪುರಂ: ಕೇರಳ ವಿಧಾನಸಭೆಯ 140ಸ್ಥಾನಗಳಿಗೆ ಏ.9ರಂದು ನಡೆದ ಮತದಾನದ ಫಲಿತಾಂಶ ಬರಲು ಇನ್ನು ಎರಡೇ ದಿನ ಬಾಕಿ ಉಳಿದಿದ್ದು, ಮೇ 4ರ ಮತ ಎಣಿಕೆಯತ್ತ ಈಗ ಎಲ್ಲರ ದೃಷ್ಟಿ ನೆಟ್ಟಿದೆ. ಈ ಬಾರಿ ಆಳುವ ಸಿಪಿಎಂ ನೇತೃತ್ವದ ಎಡರಂಗ ಅಧಿಕಾರ ಕಳೆದುಕೊಳ್ಳುವುದು ಬಹುತೇಕ ನಿಶ್ಚಿತ ಎಂಬ ಮಾತು ಕೇಳಿಬಂದಿದ್ದು, ವಿಪಕ್ಷ ಯುಡಿಎಫ್ ಅಧಿಕಾರಕ್ಕೆ ಬರಲಿದೆ ಎಂದು ಸಮೀಕ್ಷೆಗಳು ತಿಳಿಸುತ್ತಿವೆ. ಈ ನಡುವೆ ಉಭಯ ರಂಗಗಳ ಭವಿಷ್ಯ ಈ ಬಾರಿ ಬಿಜೆಪಿ ಪಡೆಯುವ ಮತ-ಸ್ಥಾನಗಳನ್ನು ಅವಲಂಬಿಸಿದೆ ಎಂಬುದಾಗಿ ವಿಶ್ಲೇಷಿಸಲಾಗುತ್ತಿದೆ.

ನಾಳೆ ಕೇರಳ ವಿಧಾನಸಭಾ ಚುನಾವಣಾ ಫಲಿತಾಂಶ

ಈ ಹಿಂದಿನ ಚುನಾವಣೆಗಳಲ್ಲಿ ಬಿಜೆಪಿ ಅಷ್ಟೇನೂ ಪ್ರಭಾವಿಯಾಗಿರಲಿಲ್ಲವಾದರೂ ಪ್ರಭಾವಿಯಾಗಿದ್ದ ಕೆಲವು ಸ್ಥಾನಗಳಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಪರಸ್ಪರ ಅಡ್ಡಮತದಾನ ಮಾಡುವ ಮೂಲಕ ಬಿಜೆಪಿ ಗೆಲ್ಲದಂತೆ ನೋಡಿಕೊಳ್ಳುತ್ತಿದ್ದವು. ಆದರೆ, ಈ ಬಾರಿ ಕೆಲವೆಡೆ ಅಂತಹ ತಂತ್ರಗಳನ್ನು ಹೆಣೆಯಲಾಗಿದ್ದರೂ, ಒಟ್ಟಾರೆ ಪರಿಸ್ಥಿತಿ ಭಿನ್ನವಾಗಿದ್ದು ಬಿಜೆಪಿ ಪ್ರಬಲ ಸ್ಪರ್ಧೆ ಒಡ್ಡಿರುವುದು ಮತದಾನೋತ್ತರ ಸಮೀಕ್ಷೆಗಳಿಂದಲೂ ಸ್ಪಷ್ಟವಾಗಿದೆ. ಕೇರಳದ ಮಾಧ್ಯಮ ಸಮೀಕ್ಷೆಗಳು ಸೇರಿದಂತೆ ರಾಷ್ಟ್ರೀಯ ಮಾಧ್ಯಮಗಳು ಈ ಬಾರಿ ಕೇರಳದಲ್ಲಿ ಬಿಜೆಪಿ ಪ್ರಬಲ ಶಕ್ತಿಯಾಗಿರುವುದನ್ನು ಗುರುತಿಸಿವೆ. ಈ ಬಾರಿಯ ಚುನಾವಣೆಯಲ್ಲಿ ಯುಡಿಎಫ್ ಶೇ.37, ಎಲ್‌ಡಿಎಫ್ ಶೇ.36, ಬಿಜೆಪಿ ನೇತೃತ್ವದ ಎನ್‌ಡಿಎ ಶೇ.22 ಮತಗಳನ್ನು ಗಳಿಸಲಿದೆ ಎಂದು ಅಂದಾಜಿಸಿರುವುದು ಗಮನಾರ್ಹವಾಗಿದೆ.

ಲೇಖಕ ಪ್ರಸೂನ್ ಜೋಶಿ ಪ್ರಸಾರ ಭಾರತಿ ಅಧ್ಯಕ್ಷ

ಹೊಸದಿಲ್ಲಿ: ಖ್ಯಾತ ಗೀತರಚನೆಗಾರ, ಲೇಖಕ ಹಾಗೂ ಸಂವಹನ ತಜ್ಞರಾಗಿರುವ ಪ್ರಸೂನ್ ಜೋಶಿ ಅವರನ್ನು ಭಾರತದ ಸಾರ್ವಜನಿಕ ಪ್ರಸಾರ ಸಂಸ್ಥೆಯಾದ ಪ್ರಸಾರ ಭಾರತಿ ಅಧ್ಯಕ್ಷರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ.



ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಶನಿವಾರ ಈ ಕುರಿತು ಅಧಿಕೃತ ಪ್ರಕಟಣೆ ನೀಡಿದ್ದು, ಸಾಹಿತ್ಯ, ಜಾಹೀರಾತು, ಸಿನೆಮಾ ಮತ್ತು ಸಾರ್ವಜನಿಕ ಸಂವಹನ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಜೋಶಿ ಅವರ ನೇಮಕ ಮಹತ್ವದ್ದಾಗಿದೆ ಎಂದು ಹೇಳಿದೆ. ವಿವಿಧ ಕ್ಷೇತ್ರಗಳಲ್ಲಿ ಸೃಜನಾತ್ಮಕ ಕೊಡುಗೆ ನೀಡಿರುವ ಜೋಶಿ, ತಮ್ಮ ಗೀತರಚನೆ, ಜಾಹೀರಾತು ಅಭಿಯಾನಗಳು ಹಾಗೂ ಸಾಮಾಜಿಕ ಸಂದೇಶ ಹೊತ್ತ ಕಥನಗಳ ಮೂಲಕ ದೇಶದಾದ್ಯಂತ ಪ್ರಭಾವ ಬೀರುತ್ತಿದ್ದಾರೆ. ಅವರ ಬರಹಗಳಲ್ಲಿ ಭಾರತೀಯ ಸಂಸ್ಕೃತಿ ಮತ್ತು ಮಣ್ಣಿನ ಸುಗಂಧ ಸ್ಪಷ್ಟವಾಗಿ ಕಾಣುತ್ತದೆ ಎಂದು ಸರ್ಕಾರ ಅಭಿಪ್ರಾಯಪಟ್ಟಿದೆ. ಈ ನೇಮಕಾತಿ ಕುರಿತು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅಭಿನಂದನೆ ಸಲ್ಲಿಸಿದ್ದು, 'ಪ್ರಸೂನ್ ಜೋಶಿ ಅವರಂತಹ ಸೃಜನಾತ್ಮಕ ವ್ಯಕ್ತಿತ್ವವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದರೂ, ಅವರ ಹೃದಯ ಭಾರತಕ್ಕಾಗಿ ತುಡಿಯುತ್ತಿರುತ್ತದೆ' ಎಂದು ಹೇಳಿದ್ದಾರೆ. ಹಾಗೆಯೇ, ಪ್ರಸೂನ್ ಜೋಶಿ ಅವರ ನೇತೃತ್ವದಲ್ಲಿ ಪ್ರಸಾರ ಭಾರತಿ ಹೊಸ ಚೈತನ್ಯ, ಗಾಢ ಉದ್ದೇಶ ಮತ್ತು ಸೃಜನಾತ್ಮಕ ಧ್ವನಿಯನ್ನು ಪಡೆಯಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ನಾಸಿಕ್ ಮತಾಂತರ ಪ್ರಕರಣ: ನಿದಾಗೆ ಇಲ್ಲ ಜಾಮೀನು

ನಾಸಿಕ್: ಟಿಸಿಎಸ್ ನಾಸಿಕ್ ಲೈಂಗಿಕ ಕಿರುಕುಳ ಹಾಗೂ ಬಲವಂತದ ಮತಾಂತರ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್‌ಗೆ ನಿರೀಕ್ಷಣಾ ಜಾಮೀನು ನೀಡಲು ನಾಸಿಕ್ ನ್ಯಾಯಾಲಯ ನಿರಾಕರಿಸಿದೆ. ಈಕೆಯ ಕಸ್ಟಡಿ ವಿಚಾರಣೆ ಅಗತ್ಯವಿದ್ದು ಜಾಮೀನು ನೀಡಬಾರದು ಎಂದು ಪ್ರಾಸಿಕ್ಯೂಶನ್ ವಕೀಲರು ವಾದಿಸಿದರು. ಹೀಗಾಗಿ ಕೋರ್ಟ್, ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿ, ಅಂತಿಮ ಆದೇಶ ಶೀಘ್ರ ಪ್ರಕಟಿಸುವುದಾಗಿ ತಿಳಿಸಿದೆ. ಎಫ್‌ಐಆರ್ ಪ್ರಕಾರ, ನಿದಾ ಮಹಿಳಾ ಸಿಬ್ಬಂದಿಗೆ ಇಸ್ಲಾಮಿಕ್ ಉಡುಗೆ ಮತ್ತು ವರ್ತನೆ ಪಾಲಿಸಲು ಸಲಹೆ ನೀಡಿದ್ದಾಳೆಂಬ ಆರೋಪವಿದೆ. ನಿದಾ ಪತ್ತೆಗಾಗಿ ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಪೊಲೀಸರು ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ನಾಸಿಕ್ ಪೊಲೀಸ್ ವಿಶೇಷ ತನಿಖಾ ತಂಡ(ಎಸ್‌ಐಟಿ) ಒಟ್ಟು 9 ಪ್ರಕರಣ ದಾಖಲಿಸಿದ್ದು, ಲೈಂಗಿಕ ಕಿರುಕುಳ ಆರೋಪದಲ್ಲಿ 8 ಜನರನ್ನು ಬಂಧಿಸಿದೆ.

ದೂರಗಾಮಿ ಹಡಗು ನಿರೋಧಕ ಕ್ಷಿಪಣಿ ಪರೀಕ್ಷೆ ಯಶಸ್ವಿ

ಭಾರತದ ಸಮುದ್ರ ದಾಳಿ ಶಕ್ತಿ ವರ್ಧನೆ

ಭುವನೇಶ್ವರ: ಒಡಿಶಾ ಕರಾವಳಿಯಲ್ಲಿ ದೂರಗಾಮಿ ಹೈಪರ್ಸಾನಿಕ್ ಹಡಗು ನಿರೋಧಕ ಕ್ಷಿಪಣಿಯನ್ನು ಭಾರತ ಶುಕ್ರವಾರ ಯಶಸ್ವಿಯಾಗಿ ಪರೀಕ್ಷಿಸುವ ಮೂಲಕ ದೇಶದ ಸ್ವದೇಶಿ ರಕ್ಷಣಾ ಸಾಮರ್ಥ್ಯ ಮತ್ತು ಸಮುದ್ರದಲ್ಲಿ ದಾಳಿ ನಡೆಸಬಲ್ಲ ಶಕ್ತಿಯಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಕರಾವಳಿ ರಕ್ಷಣಾ ಸೌಲಭ್ಯ ಬಳಸಿ ಈ ದೂರಗಾಮಿ ಹಡಗು ನಿರೋಧಕ ಕ್ಷಿಪಣಿಯ ಎರಡನೇ ಹಂತದ ಪರೀಕ್ಷೆ ನಡೆಸಿತು. ಈ ಕ್ಷಿಪಣಿ, 1,500 ಕಿಮೀ ದೂರದಲ್ಲಿರುವ ನಿಗದಿತ ಗುರಿಯನ್ನು ನಿಖರವಾಗಿ ತಲುಪಿದೆ. ಇದು ಯೋಜಿತ ಪಥವನ್ನು ಅನುಸರಿಸಿದ್ದು, ಮಧ್ಯಂತರ ಚಲನೆ ಮತ್ತು ನಿಖರ ಮಾರ್ಗದರ್ಶನ ಸೇರಿದಂತೆ ಎಲ್ಲಾ ಮಿಷನ್ ಉದ್ದೇಶಗಳನ್ನು ಪೂರೈಸಿದೆ. ಇದರ ಪ್ರೊಪಲ್ಷನ್ ಸಿಸ್ಟಮ್ ಮತ್ತು ಏರ್‌ಫ್ರೇಮ್ ದೃಢತೆ ಪ್ರದರ್ಶಿಸಿದೆ.

ಅಡ್ವಾನ್ಸ್ಡ್ ಸಿಸ್ಟಮ್ಸ್ ಲ್ಯಾಬೊರೇಟರಿ ನೇತೃತ್ವದ ಈ ಯೋಜನೆ, ಸೂಪರ್ಸಾನಿಕ್ ಕ್ರೂಸ್ ಕ್ಷಿಪಣಿಗಳು ಮತ್ತು ದೂರಗಾಮಿ ಬ್ಯಾಲಿಸ್ಟಿಕ್ ಪ್ಲಾಟ್‌ಫಾರ್ಮ್‌ಗಳ ನಡುವಿನ ಕಾರ್ಯತಂತ್ರದ ಅಂತರವನ್ನು ತುಂಬುತ್ತದೆ. ಸುಧಾರಿತ ಹೈಪರ್ಸಾನಿಕ್ ದಾಳಿ ವ್ಯವಸ್ಥೆಯನ್ನು ನಿಯೋಜಿಸುವ ಸಾಮರ್ಥ್ಯವಿರುವ ವಿಶ್ವದ ಆಯ್ದ ರಾಷ್ಟ್ರಗಳ ಗುಂಪಿಗೆ ಭಾರತ ಸೇರ್ಪಡೆಯಾಗಿದೆ.



ಶತ್ರು ರಡಾರ್‌ಗೆ ಸಿಗಲ್ಲ ಸುಳಿವು!

ಈ ಸ್ವದೇಶಿ ಶಸ್ತ್ರಾಸ್ತ್ರ ವ್ಯವಸ್ಥೆ, ಎರಡು ಹಂತದ ಘನ-ಇಂಧನ ಚಾಲಿತ ಹೈಪರ್ಸಾನಿಕ್ ಗ್ಲೈಡ್ ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ಇದು ಆರಂಭಿಕ ಹಂತದಲ್ಲಿ ಮ್ಯಾಕ್ 10 ವೇಗವನ್ನು ತಲುಪಿ, ನಂತರ ಸರಾಸರಿ ಮ್ಯಾಕ್ 5 ವೇಗವನ್ನು ಕಾಯ್ದುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಈ ಕ್ಷಿಪಣಿ, ಅರೆ-ಬ್ಯಾಲಿಸ್ಟಿಕ್ ಪಥವನ್ನು ಅನುಸರಿಸುವುದರಿಂದ ಮತ್ತು ಕಡಿಮೆ ಎತ್ತರದಲ್ಲಿ ಹಾರುವುದರಿಂದ ರಡಾರ್ ಬಳಸಿ ಪತ್ತೆ ಮತ್ತು ತಡೆಯುವುದು ಕಷ್ಟ. ಇದು ಸ್ಥಿರ ಮತ್ತು ಚಲಿಸುವ ಸಮುದ್ರ ಗುರಿಗಳ ಮೇಲೆ ದಾಳಿ ಮಾಡಬಲ್ಲದು.

ಉ.ಪ್ರದೇಶದಲ್ಲಿ ಬುರ್ಖಾಧಾರಿ ಮಹಿಳೆಗೆ ದೌರ್ಜನ್ಯ

ದುಷ್ಕರ್ಮಿಗೆ ಗುಂಡಿಕ್ಕಿ ಬಂಧನ

ಮೊರದಾಬಾದ್: ಉತ್ತರಪ್ರದೇಶದ ಮೊರಾದಾಬಾದ್‌ನ ನಿರ್ಜನ ಬೀದಿಯಲ್ಲಿ ಒಂಟಿಯಾಗಿ ಸಾಗುತ್ತಿದ್ದ ಬುರ್ಖಾಧಾರಿ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಬಂಧನಕ್ಕೆ ಮುಂದಾದ ಪೊಲೀಸರ ಮೇಲೆಯೇ ಗುಂಡಿನ ದಾಳಿ ನಡೆಸಿದ್ದ ದುಷ್ಕರ್ಮಿಯೊಬ್ಬನ ಕಾಲಿಗೆ ಗುಂಡಿಕ್ಕಿ ಪೊಲೀಸರು ಬಂಧಿಸಿದ್ದಾರೆ. ಗುರುವಾರ ರಾತ್ರಿ 11 ಗಂಟೆ ಸುಮಾರಿಗೆ ಇಲ್ಲಿನ ಜಾಮಾ ಮಸೀದಿ ಬಳಿ ಪೊಲೀಸರು ಈ ಕಾರ್ಯಾಚರಣೆ ನಡೆಸಿದ್ದಾರೆ.

ಘಟನೆಯ ಎರಡು ದಿನಗಳ ನಂತರ ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ಪೊಲೀಸರು ಆರೋಪಿಯ ಬಂಧನಕ್ಕೆ ಬಲೆ ಬೀಸಿದ್ದರು, ಆತನನ್ನು ಬಂಧಿಸಲು ಐದು ತಂಡಗಳು ನಿರಂತರ ಹುಡುಕಾಟ ನಡೆಸಿದ್ದವು. ಆರೋಪಿಯು ಮೊಘಲ್‌ಪುರ ಪೊಲೀಸ್ ಠಾಣೆ ಪ್ರದೇಶದ ರಾಮಗಂಗಾ ನದಿಯ ದಡದಲ್ಲಿ ಅಡಗಿದ ಮಾಹಿತಿ ಪಡೆದ ಪೊಲೀಸರು ಆ ಪ್ರದೇಶವನ್ನು ಸುತ್ತುವರಿದು ಆತನನ್ನು ಶರಣಾಗುವಂತೆ ಸೂಚಿಸಿದ್ದಾರೆ. ಆದರೆ ಆತ ಪೊಲೀಸರತ್ತಲೇ ಗುಂಡು ಹಾರಿಸಿದ್ದಾನೆ. ಆತ್ಮರಕ್ಷಣೆಗಾಗಿ ಪೊಲೀಸರು ಆತನ ಕಾಲಿಗೆ ಪ್ರತಿ ಗುಂಡು ಹಾರಿಸಿ ಬಂಧಿಸಿದ್ದಾರೆ. ಆರೋಪಿಯು ಈ ಹಿಂದೆಯೂ ಹಲವಾರು ಮಹಿಳೆಯರಿಗೆ ಕಿರುಕುಳ ನೀಡಿದ್ದನೆಂದು ತನಿಖೆಯಲ್ಲಿ ತಿಳಿದುಬಂದಿದೆ. ಆದರೆ ಯಾರೂ ಆತನ ವಿರುದ್ಧ ಔಪಚಾರಿಕ ದೂರು ದಾಖಲಿಸಿರಲಿಲ್ಲ. ಈ ಬಾರಿ ಸಿಸಿಟಿವಿ ಪುರಾವೆಗಳು ಹೊರಬಂದ ನಂತರ ಪೊಲೀಸರು ತ್ವರಿತ ಕ್ರಮ ಕೈಗೊಂಡಿದ್ದಾರೆ. ಆರೋಪಿಯಿಂದ ಪೊಲೀಸರು ಒಂದು ಪಿಸ್ತೂಲ್ ಮತ್ತು ಮೂರು ಜೀವಂತ ಕಾರ್ಟ್ರಿಡ್ಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯ ಅಪರಾಧ ಇತಿಹಾಸವನ್ನು ಸಹ ತನಿಖೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಪೊಲೀಸರು ಸಂತ್ರಸ್ತೆಯನ್ನು ಸಹ ಪತ್ತೆಹಚ್ಚಿದ್ದು ಆಕೆ ದೂರಿನ ಆಧಾರದ ಮೇಲೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸಿಸಿಟಿವಿ ದೃಶ್ಯಗಳಲ್ಲಿ ಬುರ್ಖಾ ಧರಿಸಿದ ಮಹಿಳೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ, ಆರೋಪಿ ಇದ್ದಕ್ಕಿದ್ದಂತೆ ಹಿಂದಿನಿಂದ ಬಂದು ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದನು. ಮಹಿಳೆ ಕಿರುಚಿದಾಗ ಆರೋಪಿ ಅಲ್ಲಿಂದ ಓಡಿಹೋಗಿದ್ದನು. ಇಡೀ ಘಟನೆ ಕ್ಯಾಮೆರಾದಲ್ಲಿ ದಾಖಲಾಗಿದ್ದು, ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರಿಗೆ ಸಹಾಯ ಮಾಡುವಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ.

ಬಿಎಸ್‌ವೈ ಧಣಿವರಿಯದ ನಾಯಕ: ಶಾಹಪೂರ

ಕೊಪ್ಪಳ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಚುನಾವಣೆ ರಾಜಕೀಯಕ್ಕೆ ಪ್ರವೇಶಿಸಿ ಸುಮಾರು 50 ವರ್ಷ ಪೂರೈಸಿದ ಹಿನ್ನೆಲೆ ಚಿತ್ರದುರ್ಗದ ಶ್ರೀ ಮಾದರಚನ್ನಯ್ಯ ಗುರುಪೀಠದ ಪಕ್ಕದ ಮೈದಾನದಲ್ಲಿ ಮೇ 9ರಂದು ಅಭಿಮಾನೋತ್ಸವ ಕಾರ್ಯಕ್ರಮ ನಡೆಸಲಾಗುವುದು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಾಹಪೂರ ಮಾಹಿತಿ ನೀಡಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಬಿ.ಎಸ್.ಯಡಿಯೂರಪ್ಪ ರೈತರ ಮುಖ್ಯಮಂತ್ರಿ ಎಂದು ಹೆಸರು ಪಡೆದ ಧೀಮಂತ ನಾಯಕರು. ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಒಂದು ಸಮಿತಿ ರಚಿಸಿ, ಅಚ್ಚುಕಟ್ಟಾಗಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಅವರು ಸಾರ್ವಜನಿಕ ಪ್ರತಿನಿಧಿಯಾಗಿ ಅನೇಕ ಜನಪ್ರಿಯ ಕೆಲಸ ಮಾಡಿದ್ದಾರೆ. ಬಿ.ಎಸ್. ವೈ ಧಣಿವರಿದ ನಾಯಕ ಎಂದೇ ಹೆಸರು ಪಡೆದವರು. ಪ್ರತ್ಯೇಕವಾಗಿ ಕೃಷಿ ಬಜೆಟ್ ಕೊಟ್ಟಂತ ರೈತ ನಾಯಕ.

ಮೊದಲ ಬಾರಿಗೆ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಹಸಿರು ಶಾಲು ಹಾಕಿಕೊಂಡು ರೈತಪರಮುಖ್ಯಮಂತ್ರಿ ಎಂದು ತೋರಿಸಿಕೊಂಡವರು. ಹೆಣ್ಣು ಮಕ್ಕಳಿಗಾಗಿ ಭಾಗ್ಯಲಕ್ಷ್ಮೀ ಬಾಂಡ್ ಮಾಡಿದ್ದಲ್ಲದೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮುನ್ನುಡಿ ಬರೆದವರು. ಮಕ್ಕಳಿಗೆ ಸೈಕಲ್ ವಿತರಣೆ ಹೀಗೆ ಅನೇಕ ಜನಪರ ಕೆಲಸವನ್ನು ಮಾಡಿದ್ದಾರೆ ಎಂದು ಶ್ಲಾಘಿಸಿದರು.



ಯಡಿಯೂರಪ್ಪನವರು ಕೊಪ್ಪಳದ ಅಭಿವೃದ್ಧಿಗೆ ಅನೇಕ ಕೊಡುಗೆ ನೀಡಿದ್ದಾರೆ. ಅವರ ಕೆಲಸಗಳು ಮತ್ತು ಅವರ ರಾಜಕೀಯ ಜೀವನ ಮುಂದಿನ ಪೀಳಿಗೆಗೆ ಮಾದರಿಯಾಗಲಿ ಎನ್ನುವ ಉದ್ದೇಶದಿಂದ ಈ ಒಂದು ಅಭಿಮಾನೋತ್ಸವ ಕಾರ್ಯಕ್ರಮ ಒಂದು ಪ್ರತ್ಯೇಕ ಸಮಿತಿ ಮಾಡಿ ಆ ಸಮಿತಿಯಲ್ಲಿ ಗೌರವ ಅಧ್ಯಕ್ಷರಾಗಿ ಮಾಜಿ ಉಪ ಮುಖ್ಯಮಂತ್ರಿ, ಗೋವಿಂದ ಕಾರಜೋಳ, ಅಧ್ಯಕ್ಷರಾಗಿ ಮಾಜಿ ರಾಜ್ಯಸಭಾ ಸದಸ್ಯ ಪ್ರಭಾಕರ ಕೋಣಿ, ಕಾರ್ಯಾಧ್ಯಕ್ಷರಾಗಿ ಮಾಜಿ ಸಚಿವ ಶ್ರೀರಾಮುಲ, ಉಪಾಧ್ಯಕ್ಷರಾಗಿ ಸಂಸದ ಸಚಿವ ಕೋಟಾ ಶ್ರೀನಿವಾಸ ಅವರಿಂದ ಈ ಕಾರ್ಯಕ್ರಮ ಸುಸುತ್ರವಾಗಿ ಜರುಗಲಿದೆ.

ಯಡಿಯೂರಪ್ಪನವರು 1983ರಲ್ಲಿ ಅವರು ಮೊದಲು ಗೆದ್ದರು. ಅವರು ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮ ಬಾಳು, ಎನ್ನುವ ಸಿದ್ಧಾಂತವನ್ನು ನೆಚ್ಚಿಕೊಂಡವರು. ಅವರು ಎಲ್ಲಾ ಸಮಾಜದ ಬಹಳಷ್ಟು ನಾಯಕರನ್ನು ಬೆಳಿಸಿದವರು. ವಿಶೇಷವಾಗಿ ಸ್ಥಳಿಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿಯನ್ನು 2009ರಲ್ಲಿ ಜಾರಿಗೆ ತಂದದ್ದು ಅವಿಸ್ಮರಣೀಯವಾಗಿದೆ ಎಂದರು.

ಈ ಕಾರ್ಯಕ್ರಮಕ್ಕೆ ಸರ್ವ ಸಮುದಾಯದ ಮಠಾಧೀಶರು ಭಾಗವಹಿಸುವರು. ದೇಶದ ಗೃಹ ಮಂತ್ರಿ ಅಮಿತ್ ಶಾ ಯಡಿಯೂರಪ್ಪನವರಿಗೆ ಅವರಿಗೆ ಅಭಿನಂದನಾ ಸಲ್ಲಿಸುವರು. ಜಿಲ್ಲೆಯ ಎಲ್ಲಾ ನಾಯಕರು ಬಹಳ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಈ ಒಂದು ಸಮಾರಂಭಕ್ಕೆ ಕರೆ ತರಬೇಕು. ಈ ಕಾರ್ಯಕ್ರಮದಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಜನ ಸೇರುವ ಭರವಸೆ ಇದೆ ಎಂದರು.

ವಿಪ ಸದಸ್ಯೆ ಹೇಮಲತಾ ನಾಯಕ, ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಡಾ.ಬಸವರಾಜ ಕ್ಯಾವಟರ್, ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣವರ ಇದ್ದರು.

ಸಂಭ್ರಮದ ತೆಂಕಣಕೇರಿ ಬಂಡಿಹಬ್ಬ

ಅಂಕೋಲಾ: ಇಲ್ಲಿಯ ಪ್ರಸಿದ್ಧ ತೆಂಕಣಕೇರಿಯ ಶ್ರೀ ಬೊಮ್ಮಯ್ಯ ದೇವರ ಬಂಡಿಹಬ್ಬವು ಶನಿವಾರ ಸಂಭ್ರಮದಿಂದ ನಡೆಯಿತು.

ಸಂಜೆ ಸೇರಿದ್ದ ಸಹಸ್ರಾರು ಭಕ್ತರ ಹರ್ಷೋದ್ಗಾರ, ಜೈಕಾರದ ನಡುವೆ ಶ್ರೀ ಬೊಮ್ಮಯ್ಯ ದೇವರ ಕಲಶವು ಉಲಿ ಚಪ್ಪರ ಏರುವ ವೈಭವವನ್ನು ಕಣ್ತುಂಬಿಕೊಂಡರು.

ಇದಕ್ಕೂ ಮೊದಲು ಬೊಮ್ಮಯ್ಯ ದೇವಸ್ಥಾನದಿಂದ ವಾದ್ಯ ಘೋಷ, ಛತ್ರ, ಚಾಮರಗಳೊಂದಿಗೆ ಭಕ್ತ ಜನರ ಪೂಜೆ ಸ್ವೀಕರಿಸುತ್ತ ಕಲಶ ದೇವಸ್ಥಾನಕ್ಕೆ ಬಂದು ಅಲ್ಲಿಂದ ಶ್ರೀ ಶಂಕರನಾರಾಯಣ ದೇವಸ್ಥಾನಕ್ಕೆ ಹೋಗಿ ಮರಳಿ ಆಡುಕಟ್ಟೆಗೆ ಬಂದಿತು. ಅಲ್ಲಿ ವಿಧಿ ವಿಧಾನ ಪೂರೈಸಿ ಉಲಿ ಚಪ್ಪರಕ್ಕೆ ಆಗಮಿಸಿ ಸಾಂಪ್ರದಾಯಿಕ ಉಲಿ ಬಂಡಿಯೇರಿತು. ಸುಮಾರು 10 ಸಾವಿರಕ್ಕೂ ಹೆಚ್ಚು ಜನ ಬಂಡಿಹಬ್ಬದ ಸೊಬಗನ್ನು ಸವಿದರು. ಬಂಡಿಹಬ್ಬದ ಪ್ರಯುಕ್ತ ದೇವಾಲಯದಲ್ಲಿ ಹಣ್ಣು ಕಾಯಿ, ತುಲಾಬಾರ, ಗಿಂಡಿ ತುಂಬುವ ಸೇವೆಗಳು ನಡೆದವು.



ಕಿರುಸುದ್ದಿ

ಕೆಪಿಎಸ್‌ಸಿ ಅಕ್ರಮ ಸಿಬಿಐ ತನಿಖೆಗೆ ಆಗ್ರಹ

ಧಾರವಾಡ: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದಲ್ಲಿ ನಡೆದ ಅಕ್ರಮಗಳ ತನಿಖೆಯನ್ನು ಸಿಬಿಐಗೆ ವಹಿಸಲು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗೌರವಾಧ್ಯಕ್ಷ ಶಶಿಕಾಂತ ಪಡಸಲಗಿಮಠ ಆಗ್ರಹಿಸಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮೇ 6ರಂದು ನಡೆಯುವ ಕೆಎಎಸ್ ಹುದ್ದೆಗಳ ಸಂದರ್ಶನ ಐವರು ನ್ಯಾಯಾಧೀಶರ ಸಮ್ಮುಖದಲ್ಲಿ ನಡೆಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು. ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ಒಂದೇ ಗ್ರಾಮದ 15 ಜನ ಪಿಡಿಒಗಳಾಗಿ ಆಯ್ಕೆ ಬಗ್ಗೆ ಶಂಕೆ ವ್ಯಕ್ತಪಡಿಸಿದ ಅವರು, ಈ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಆಗ್ರಹ ಮಾಡಿದರು. ಕೆಪಿಎಸ್‌ಸಿಯಿಂದ ಬಡ ವಿದ್ಯಾರ್ಥಿಗಳು ಮೋಸ ಹೋಗುತ್ತಿದ್ದಾರೆ. ಹೀಗಾಗಿ ಕೆಪಿಎಸ್‌ಸಿ ಸಂಪೂರ್ಣ ರದ್ದು ಮಾಡಬೇಕು. ಕೆಪಿಎಸ್‌ಸಿ ಸದಸ್ಯರು ಕೋಟಿಗಟ್ಟಲೆ ಹಣ ಗಳಿಸಿದ್ದು, ಅವರ ಆಸ್ತಿಗಳ ಕುರಿತು ತನಿಖೆಗೆ ಒತ್ತಾಯಿಸಿದರು. ರಾಜ್ಯದಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆ ಭರ್ತಿ ಮಾಡಬೇಕು. ಇದಕ್ಕೆ ಸ್ಪಂದಿಸದಿದ್ದರೆ 31 ಜಿಲ್ಲೆಗಳ ರೈತ ಮುಂಡರ ನೇತೃತ್ವದಲ್ಲಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಅನಿಲ್ ಕಾಂಬಳೆ, ನಿತೀನ್ ಮ್ಯಾಕೇರಿ, ಸುಭಾಷ ಮಾದಣ್ಣವರ, ಈರಣ್ಣ ಕಂಕೊಳ್ಳಿ, ಉಳವಪ್ಪ ದಿವಟಗಿ, ಅಮೃತ ಕಮ್ಮಾರ, ಅಂಬರೀಶ ಕಾಡಮಗಿರಿ ಇದ್ದರು.

ತೆಂಗಿನ ಮರದಿಂದ ಬಿದ್ದು ರೈತ ಸಾವು

ಹೊನ್ನಾವರ: ತಾಲೂಕಿನ ಹೊಸಾಕುಳಿ ಗ್ರಾಮದ ದೊಡ್ಡಹಿತ್ತಲ್ ನಿವಾಸಿ ಶ್ರೀಪಾದ ನಾಯ್ಕ (52) ಶನಿವಾರ ಮಧ್ಯಾಹ್ನ ತೆಂಗಿನ ಮರದಿಂದ ಆಯ ತಪ್ಪಿ ಬಿದ್ದು ಮೃತಪಟ್ಟಿದ್ದಾರೆ. ಮನೆಯ ಸಮೀಪದಲ್ಲೇ ಇರುವ ತೋಟದಿಂದ ತೆಂಗಿನ ಮರದಿಂದ ಕಾಯಿ ಕೊಯ್ಯುವಾಗ ಆಯತಪ್ಪಿ ಬಿದ್ದು ಗಂಭೀರ ಗಾಯಗೊಂಡಿದ್ದರು. ಕೂಡಲೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕೊಂಡ್ಯುಯುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಕಳೆದ 35ಕ್ಕೂ ಅಧಿಕ ವರ್ಷದಿಂದ ಕವಲಕ್ಕಿ ಸನ್ನಿದಾನದಲ್ಲಿ ಅಯ್ಯಪ್ಪ ಸ್ವಾಮಿ ಮಾಲಧಾರಿಯಾಗಿ ಗುರುಸ್ವಾಮಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಗ್ರಾಮಾಭಿವೃದ್ಧಿ ಯೋಜನೆಯ ಶೌರ್ಯ ವಿಪತ್ತು ದಳ, ಒಕ್ಕೂಟದ ಪದಾಧಿಕಾರಿಯಾಗಿ ವಿವಿಧ ಸಂಘಟನೆಯ ಸದಸ್ಯರಾಗಿ ಜನಮನ್ನಣೆ ಪಡೆದಿದ್ದರು. ಮೃತರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ತಾಲೂಕ ಆಸ್ಪತ್ರೆಯಲ್ಲಿ ಮರಣೊತ್ತರ ಪರೀಕ್ಷೆ ನಡೆಸಿ ಮೃತದೇಹ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಈ ಸಂಭದ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗ್ರಾಪಂ ಸದಸ್ಯ ಎಚ್.ಆರ್. ಗಣೇಶ, ಉದ್ದಿಮೆದಾರರದ ಎಸ್.ಕೆ.ನಾಯ್ಕ, ಸಂದೇಶ ಶೆಟ್ಟಿ ಸೇರಿದಂತೆ ಸಾರ್ವಜನಿಕರು, ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕರ್ತರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ಮೇ 8ಕ್ಕೆ ರಾಜ್ಯಮಟ್ಟದ ರೈತ ಜಾಗೃತಿ ಸಮಾವೇಶ

ವಿಜಯಪುರ: ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಮಟ್ಟದ 4ನೇ ಬೃಹತ್ ರೈತ ಜನ ಜಾಗೃತಿ ಸಮಾವೇಶವನ್ನು ನಗರದಲ್ಲಿ ಮೇ 8ರಂದು ಹಮ್ಮಿಕೊಳ್ಳಲಾಗಿದೆ ಎಂದು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಕುಬಕಡ್ಡಿ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಗಳಖೋಡ, ಜಿಡಗಾದ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ವಹಿಸಿಕೊಳ್ಳಲಿದ್ದು, ಶಿರಶ್ಯಾಡದ ಅಭಿನವ ಮುರಘೇಂದ್ರ ಶಿವಾಚಾರ್ಯರು ಸೇರಿ ವಿವಿಧ ಮಠಾಧಿಶರು ಸಾನ್ನಿಧ್ಯ ವಹಿಸಲಿದ್ದಾರೆ. ರಾಜ್ಯಾಧ್ಯಕ್ಷ ಚುನಪ್ಪ ಪೂಜೇರಿ ಅಧ್ಯಕ್ಷತೆಯಲ್ಲಿ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ನೇತೃತ್ವದಲ್ಲಿ ನಾಡಿನ ಸಾವಿರಾರು ರೈತ ಮುಖಂಡರು ಹಾಗೂ ರೈತರೊಡಗೂಡಿ ಈ ಕಾರ್ಯಕ್ರಮ ಜರುಗಲಿದೆ ಎಂದರು.

ಜಿಲ್ಲಾಧಿಕಾರಿ ಡಾ.ಆನಂದ ಕೆ., ಎಸ್ಪಿ ಲಕ್ಷ್ಮಣ ನಿಂಬರಗಿ, ಜಿಪಂ ಸಿಇಒ ರಿಷಿ ಆನಂದ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ರಾಹುಲ್‌ಕುಮಾರ ಭಾವಿದೊಡ್ಡಿ, ಆಹಾರ ಇಲಾಖೆಯ ಡಿಡಿ ವಿನಯಕುಮಾರ ಪಾಟೀಲ ಭಾಗವಹಿಸಲಿದ್ದಾರೆ ಎಂದರು.

ಈ ನಾಡಿನಲ್ಲಿ ರೈತರಿಗೆ ಎಲ್ಲ ಕ್ಷೇತ್ರದಲ್ಲಿ ಎಲ್ಲ ಪ್ರಕಾರದ ಅನ್ಯಾಯಗಳಾಗುತ್ತ ಬಂದಿವೆ. ಅದನ್ನು ತಡೆಯಬೇಕಾದರೆ ರೈತರೆಲ್ಲರೂ ಜಾತ್ಯತೀತವಾಗಿ, ಪಕ್ಷಾತೀತವಾಗಿ, ಧರ್ಮಾತೀತವಾಗಿ ಗುರ್ಲಾಪುರದಲ್ಲಿ ನಡೆದ ಹೋರಾಟದ ಮೂಲಕ ಒಗ್ಗಟ್ಟಿನ ಸಂದೇಶ ಸಾರಿರುವ ರೈತರೆಲ್ಲರೂ ಸಮಯ ಸಂದರ್ಭ ಬಂದಾಗಲೆಲ್ಲ ಒಂದಾಗಬೇಕು. ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿ, ರೈತರೆಲ್ಲ ಒಗ್ಗಟನ್ನು ತೋರಿಸಬೇಕಾಗಿದೆ ಎಂದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕಲ್ಲು ಸೊನ್ನದ, ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ, ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ರಾಮನಗೌಡ ಪಾಟೀಲ, ದಯಾನಂದ ಕೋಳ್ಳಿ, ಮಹಾದೇವಿ ಬನಸೋಡೆ, ಸಂಗಪ್ಪ ಟಕ್ಕೆ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಕಾಡುಕೋಣಗಳ ಪ್ರತ್ಯಕ್ಷ

ಬೆಳಗಾವಿ: ಜಿಲ್ಲೆಯ ಖಾನಾಪೂರ ತಾಲೂಕಿನ ದಟ್ಟ ಅರಣ್ಯದ ಗುಂಜಿ ಸಮೀಪದ ತಿವೋಲಿ ರಸ್ತೆಯಲ್ಲಿ ಕಾಡುಕೋಣ ಮತ್ತು ಕಾಡೆಮ್ಮೆಗಳ ಹಿಂಡು ಪ್ರತ್ಯಕ್ಷ ವಾಗಿವೆ. ಅದೇ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರಲ್ಲಿ ಒಂದು ಕ್ಷಣ ಆಂತಕದ ಭಯ ಹಾಗೂ ಕುತೂಹಲ ಮೂಡಿಸಿದೆ.

ದಟ್ಟವಾದ ಕಾಡು ಅರಣ್ಯ ಪ್ರದೇಶ ಸೌಂದರ್ಯ ಹೊಂದಿರುವ ಖಾನಾಪುರ ತಾಲೂಕು ನೂರಕ್ಕೆ ನೂರರಷ್ಟು ಅರಣ್ಯದಿಂದ ಆವೃತವಾದ ಪ್ರದೇಶ. ಇಲ್ಲಿ ಕಾಡು ಪ್ರಾಣಿಗಳ ದರ್ಶನ ಸಹಜವಾದರೂ, ಗುಂಜಿ ಮಾರ್ಗ ಮಧ್ಯದ ತಿವೋಲಿ ರಸ್ತೆಯ ಮೇಲೆ ಹಠಾತ್ತಾಗಿ ಕಾಡುಕೋಣಗಳ ತಂಡ ಕಾಣಿಸಿಕೊಂಡಿದ್ದು ಸಂಚಲನ ಮೂಡಿಸಿದೆ.

ರಸ್ತೆಯ ಬದಿಯಲ್ಲಿ ನಿಂತು ಗಂಭೀರವಾಗಿ ಪಹರೆ ನೀಡುವಂತೆ ಕಂಡ ಈ ಕಾಡುಕೋಣಗಳನ್ನು ಕಂಡ ಪ್ರವಾಸಿಗರು ಆತಂಕಗೊಂಡರೂ ಅಷ್ಟೇ ಉತ್ಸಾಹದಿಂದ ಈ ಅಪರೂಪದ ಕ್ಷಣಗಳನ್ನು ತಮ್ಮ ಮೊಬೈಲ್‌ಫೋನ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಕಾಡಿನ ಆಳದಿಂದ ನಾಡಿನ ರಸ್ತೆಯಂಚಿಗೆ ಬಂದ ಈ ಪ್ರಾಣಿಗಳು ಕೆಲಕಾಲ ಸಂಚಾರಕ್ಕೆ ಅಡ್ಡಿಪಡಿಸಿದರೂ, ಪರಿಸರ ಪ್ರೇಮಿಗಳಿಗೆ ಮಾತ್ರ ಹಬ್ಬದೂಟ ಉಣಬಡಿಸಿವೆ. ದಟ್ಟ ಹಸಿರಿನ ನಡುವೆ ಕಡುಗಪ್ಪಿನ ಬಲಿಷ್ಠ ಕಾಡುಕೋಣಗಳ ಆ ಗಾಂಭೀರ್ಯದ ನೋಟ ನಿಜಕ್ಕೂ ಅದ್ಭುತವಾಗಿತ್ತು. ಕಾಡಿನ ವನ್ಯಸಂಪತ್ತಿನ ನೈಜ ಚಿತ್ರಣ ಅಡಗಿದ್ದು, ವನ್ಯಜೀವಿಗಳ ಸಂರಕ್ಷಣೆಯ ಮಹತ್ವವನ್ನು ಸಾರುತ್ತಿದೆ ಎಂದು ಪ್ರವಾಸಿಗಳು ತಮ್ಮ ಮನದಾಳದ ಮಾತುಗಳನ್ನು ಆಡುತ್ತಿದ್ದಾರೆ.

ಅಪ್ರಾಪ್ತೆ ಅತ್ಯಾಚಾರಕ್ಕೆ ಯತ್ನ

ಹಳಿಯಾಳ: ಅಪ್ರಾಪ್ತ ಬಾಲಕಿ ಅತ್ಯಾಚಾರಕ್ಕೆ ಯತ್ನಿಸಿದ ಘಟನೆ ತಾಲೂಕಿನ ಗುಂಡೊಳ್ಳಿ ಗ್ರಾಮದಲ್ಲಿ ಶುಕ್ರವಾರ ತಡರಾತ್ರಿ ನಡೆದಿದೆ. ಗುಂಡೊಳ್ಳಿ ಗ್ರಾಮದ ಒಂಬತ್ತು ವರ್ಷದ ಬಾಲಕಿಯೊರ್ವಳು ಹತ್ತಿರದ ಅಂಗಡಿಯಿಂದ ವಸ್ತುವನ್ನು ತೆಗೆದುಕೊಂಡು ಬರುತ್ತಿರುವಾಗ ಅಲ್ಲಿಯೇ ಇದ್ದ 30 ವರ್ಷದ ಹುಸೇನ್ ಎನ್ನುವಾತ ಮಗುವನ್ನು ಒತ್ತಾಯಪೂರ್ವಕವಾಗಿ ಕರೆದುಕೊಂಡು ಹೋಗಿ ಅತ್ಯಾಚಾರಕ್ಕೆ ಪ್ರಯತ್ನಿಸಿದ್ದಾನೆ. ಬಾಲಕಿಯ ಚೀರಾಟದ ಮೂಲಕ ತಪ್ಪಿಸಿಕೊಂಡು ಮನೆಗೆ ಬಂದು ವಿಷಯ ತಿಳಿಸಿದಾಗ ಯುವಕನ ಮನೆಯ ಅಕ್ಕಪಕ್ಕದ ಕೋಮಿನ ಜನರೇ ಆತನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನಂತರ ಸ್ಥಳಕ್ಕಾಗಮಿಸಿದ ಪಿಎಸ್ಐ (ಅಪರಾಧ) ಕೃಷ್ಣಗೌಡ ಅರಕೇರಿ ಸಿಬ್ಬಂದಿಯ ಜೊತೆ ಘಟನಾಸ್ಥಳಕ್ಕೆ ಆಗಮಿಸಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ಸಿಪಿಐ ಜಯಪಾಲ್ ಪಾಟೀಲ್ ರ ಮುಂದೆ ಹಾಜರು ಪಡಿಸಿದ್ದಾರೆ. ಸಿಪಿಐ ಜಯಪಾಲ್ ಪಾಟೀಲ್ ರವರು ಪೀಡಿತ ಬಾಲಕಿಗೆ ವೈದ್ಯಕೀಯ ಚಿಕಿತ್ಸೆಗೆ ವ್ಯವಸ್ಥೆ ಮಾಡಿ ಆರೋಪಿಯಿಂದ ಘಟನೆಯ ಸಂಪೂರ್ಣ ವಿವರ ಪಡೆದು ಕಾನೂನಿ ಕ್ರಮ ಜರುಗಿಸಿದ್ದಾರೆ. ಗ್ರಾಮದಲ್ಲಿ ಯಾವುದೇ ತರದ ಅಶಾಂತಿ ಯಾಗದಂತೆ ಸೂಕ್ತ ಬಂದೋಬಸ್ತ್ ಗೆ ವ್ಯವಸ್ಥೆ ಕೈಗೊಂಡಿದ್ದಾರೆ. ಘಟನೆಯ ವಿಷಯ ತಿಳಿಯುತ್ತಿದ್ದಂತೆ ಠಾಣೆಗೆ ದಾಂಡೇಲಿಯ ಡಿವಾಯ್‌ಎಸ್ಪಿ ಶಿವಾನಂದ ಮದರಖಂಡಿಯವರು ಆಗಮಿಸಿ ಮುಂದಿನ ಕ್ರಮದ ಕುರಿತು ಮಾರ್ಗದರ್ಶನ ನೀಡಿ ಎಫ್ ಆಯ್‌ಆರ್ ದಾಖಲಿಸಲು ಕ್ರಮಕೈಗೊಂಡಿದ್ದಾರೆ.

ಕಲಬುರಗಿ ನೂತನ ಡಿಸಿಯಾಗಿ ಶರೀಫ್ ನೇಮಕ

ಕಲಬುರಗಿ: ರಾಜ್ಯ ಸರ್ಕಾರ ಮಹತ್ವದ ಆಡಳಿತಾತ್ಮಕ ಬದಲಾವಣೆಯನ್ನು ಪ್ರಕಟಿಸಿದ್ದು, ಕಲಬುರಗಿ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಫೌಜಿಯಾ ತರನ್ನುಮ ಬಿ., ಐಎಎಸ್ (ಕೆಎನ್:2015) ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಲಾಗಿದೆ. ಅವರಿಗೆ ಮುಂದಿನ ಆದೇಶದವರೆಗೆ ಬೆಂಗಳೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರ ಹುದ್ದೆಯನ್ನು ನೀಡಲಾಗಿದೆ. ಇದೇ ವೇಳೆ, ಹಣಕಾಸು ಇಲಾಖೆಯಲ್ಲಿ ಸರ್ಕಾರದ ಜಂಟಿ ಕಾರ್ಯದರ್ಶಿ (ಬಜೆಟ್ ಮತ್ತು ಸಂಪನ್ಮೂಲ) ಆಗಿ ಕಾರ್ಯನಿರ್ವಹಿಸುತ್ತಿದ್ದ ಮೊಹಮ್ಮದ್ ಇಕ್ರಮುಲ್ಲಾ ಶರೀಫ್, ಐಎಎಸ್ (ಕ.ನಾ:2016) ಅವರನ್ನು ಕಲಬುರಗಿ ಜಿಲ್ಲೆಯ ಹೊಸ ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದ್ದು, ರಾಜ್ಯ ಸರ್ಕಾರದ ಆದೇಶದಂತೆ, ಇಕ್ರಮುಲ್ಲಾ ಶರೀಫ್ ಅವರು ತಕ್ಷಣವೇ ಅಧಿಕಾರ ಸ್ವೀಕರಿಸಲಿದ್ದಾರೆ.



ಕಲಬುರಗಿಯಿಂದ ವರ್ಗಾವಣೆಗೊಂಡ ಬಿ ಫೌಜಿಯಾ ತರನ್ನುಮ್, ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ತಮ್ಮ ಎರಡುವರೆ ವರ್ಷಗಳ ಆಡಳಿತದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ರಾಷ್ಟ್ರಪತಿಗಳಿಂದ ಹಾಗೂ ಮುಖ್ಯಮಂತ್ರಿಗಳಿಂದ ಪ್ರಶಸ್ತಿ ಪಡೆದಿದ್ದರು.

ರಾತ್ರಿ ವಾಕಿಂಗ್ ವೇಳೆ ತಾಳಿ ಎಗರಿಸಿದ ಕಳ್ಳರು

ಹಾವೇರಿ: ರಾತ್ರಿ ಊಟ ಮುಗಿಸಿದ ಮಹಿಳೆಯೊಬ್ಬರು ಮನೆ ಎದುರಿನ ರಸ್ತೆಯಲ್ಲಿ ವಾಕಿಂಗ್ ಮಾಡುತ್ತಿರುವಾಗ ಬೈಕ್‌ನಲ್ಲಿ ಬಂದ ಇಬ್ಬರು ಕಿರಾತಕರು ಮಹಿಳೆಯ ಕೊರಳಲ್ಲಿದ್ದ 7 ಲಕ್ಷ ರೂ.ಮೌಲ್ಯದ ತಾಳಿ ಚೈನ್‌ನ್ನು ಕಿತ್ತುಕೊಂಡು ಪರಾರಿಯಾದ ಘಟನೆ ಇಲ್ಲಿಯ ವಿದ್ಯಾನಗರದಲ್ಲಿ ನಡೆದಿದೆ. ಹಾವೇರಿಯ ವಿದ್ಯಾನಗರ ಮೂರನೇ ಕ್ರಾಸ್ ನಿವಾಸಿ ಗಂಗಾಧರಯ್ಯ ಹಾಲಯ್ಯ ಕಬ್ಬಿಣಕಂತಿಮಠ ಎಂಬುವವರು ನೀಡಿದ ದೂರಿನನ್ವಯ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರುದಾರರ ಪತ್ನಿ ಸುಮಾ ಕಬ್ಬಿಣಕಂತಿಮಠ ಅವರು ಮನೆಯಲ್ಲಿ ರಾತ್ರಿ ಊಟ ಮುಗಿಸಿ, ಮನೆ ಪಕ್ಕದ ರಸ್ತೆಯಲ್ಲಿ ವಾಕಿಂಗ್ ಮಾಡುತ್ತಿದ್ದಾಗ ಎದುರಿಗೆ ಬೈಕ್‌ನಲ್ಲಿ ಬಂದ 25-30 ವರ್ಷದೊಳಗಿನ ಇಬ್ಬರು ಹೆಲ್ಮೆಟ್‌ಧಾರಿಗಳು ಮಹಿಳೆಯ ಕೊರಳಲ್ಲಿದ್ದ 7 ಲಕ್ಷ ರೂ.ಮೌಲ್ಯದ 55 ಗ್ರಾಂ ತೂಕದ ಬಂಗಾರದ ತಾಳಿ ಚೈನ್‌ನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಗೋವಿನಜೋಳ ಸಾಗಿಸುತ್ತಿದ್ದ ಲಾರಿ ಬೆಂಕಿಗಾಹುತಿ

ಬೈಲಹೊಂಗಲ: ತಾಲೂಕಿನ ಯರಡಾಲ ಕ್ರಾಸ್ ಸಮೀಪ ಶನಿವಾರ ಮಧ್ಯಾಹ್ನ ಗೋವಿನಜೋಳ ಸಾಗಿಸುತ್ತಿದ್ದ ಲಾರಿಗೆ ಏಕಾಏಕಿ ಬೆಂಕಿ ತಗುಲಿ ಮುಂಭಾಗ ಸಂಪೂರ್ಣ ಸುಟ್ಟು ಕರಕಲಾದ ಘಟನೆ ಸಂಭವಿಸಿದೆ.



ಹುಬ್ಬಳ್ಳಿಯ ಶರೀಫ್ ಅಹ್ಮದ್ ಮುಲ್ಲಾ ಅವರಿಗೆ ಸೇರಿದ ಲಾರಿ ನರಗುಂದದಿಂದ ಸುಮಾರು 620 ಚೀಲ ಗೋವಿನಜೋಳವನ್ನು ತುಂಬಿಕೊಂಡು ಬೈಲಹೊಂಗಲ ಮಾರ್ಗವಾಗಿ ಬೆಳಗಾವಿ ಕಡೆ ಸಾಗುತ್ತಿತ್ತು. ಈ ವೇಳೆ ಮಾರ್ಗ ಮಧ್ಯೆ ಬ್ಯಾಟರಿ ಸರ್ಕ್ಯೂಟ್ ಶಾರ್ಟ್ ಆಗಿ ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಲಾರಿಯ ಮುಂಭಾಗವನ್ನು ಆವರಿಸಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಬೈಲಹೊಂಗಲ ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ದೌಡಾಯಿಸಿ, ಸೂಕ್ತ ಸಮಯದಲ್ಲಿ ಬೆಂಕಿ ನಂದಿಸುವ ಮೂಲಕ ಸಂಭವಿಸಬಹುದಾದ ಭಾರೀ ದುರಂತವನ್ನು ತಪ್ಪಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣಾಧಿಕಾರಿ ತಿಪ್ಪಣ್ಣ ನಾವದಗಿ ಅವರ ನೇತೃತ್ವದಲ್ಲಿ ನಾಗಯ್ಯ ಹುದ್ದಾರ, ರಾಹುಲ್ ಹೋಮಕರ, ಡಿ.ಜಿ.ಕಟ್ಟಿ, ಸಿ.ಎಲ್. ಮದಕಟ್ಟಿ, ಎಸ್.ಪಿ.ಮದನಳ್ಳಿ ಹಾಗೂ ಬಿ.ಎಂ.ಗುಡಗುಡಿ ಭಾಗವಹಿಸಿದ್ದರು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸದಿದ್ದರೂ, ಲಾರಿಗೆ ಹೆಚ್ಚಿನ ಹಾನಿಯಾಗಿದೆ ಎಂದು ತಿಳಿದುಬಂದಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿ)	₹ಗರಿಷ್ಠ (ಕ್ವಿ)
ಕಡಲೆಕಾಳು	2049	5806
ಉದ್ದಿನಕಾಳು	3009	6039
ಹೆಸರು ಕಾಳು	701	6611
ಹುರುಳಿ ಕಾಳು	3502	3502
ಜೋಳ	1107	3610
ಅಲಸಂಧಿ	4259	5836
ಮಡಿಕೆ	1009	13859
ಮೆಕ್ಕೆಜೋಳ	1680	1906
ಈರುಳ್ಳಿ	500	1900
ಆಲೂಗಡ್ಡೆ	1200	1800
ಸೋಯಾಬಿನ್	1309	6211
ತೊಗರಿ	1229	4311
ನೆಲಗಡಲೆ (ಶೇಂಗಾ)	2014	7670
ಒಣ ಮೆಣಸಿನಕಾಯಿ	4501	50510

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ,
ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/ 2ನೇ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27/ ದಿ: 29.04.2026

ಅಲ್ಪಾವಧಿ ಟೆಂಡರ್ ಪಕಟಣೆ – 2ನೇ ಕರೆ

ಉಲ್ಲೇಖಿ: ಸಂ:ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27/ ದಿ: 04.04.2026

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು: 30.04.2026 ರಿಂದ 11.05.2026 ರವರೆಗೆ 17.30 ಗಂಟೆಗೆ
2. Pre-Bid Meeting ದಿ : 05.05.2026 ರಂದು 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.05.2026 ರಂದು 17.30 ಗಂಟೆಗೆ
4. ಆರ್ಥಿಕ ಬಿಡ್ ತರೆಯುವ ದಿನಾಂಕ : After obtaining approval of technical bid from competent authority 5. ಕಾಲಾವಧಿ 08 ತಿಂಗಳು (ಮಳೆಗಾಲ ಸಹಿತ) 6. ಟೆಂಡರಿಗಿಟ್ಟ ಮೊತ್ತ ರೂ.97.40 ಲಕ್ಷಗಳು 7. ಇ.ಎಂ.ಡಿ ಮೊತ್ತ ರೂ.1,95,000/-

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್- 8660573513

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/138/04/167

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ದೂರವಾಣಿ ಸಂಖ್ಯೆ: 0836-2741277, 0836-2748374,
ಸತ್ಯಮೇವ ಜಯತೇ ಫ್ಯಾಕ್ಸ್ ಸಂಖ್ಯೆ: 0836-2741277, ಆರೋಗ್ಯವೇ ಭಾಗ್ಯ
Email Id: dsdharwad@gmail.com

ಕ್ರ: ಜಿಆಧಾ/ಎ.ಆರ್.ಎಸ್/02/2026-27 ದಿನಾಂಕ: 22-04-2026

ಟೆಂಡರ್ ಪ್ರಕಟಣೆ

ವಿಷಯ: 2026-2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 32 ಗ್ರೂಪ್ ಡಿ. 04-ಸ್ವೀಪರ್, 02-ಡಾಟಾ ಎಂಟ್ರಿ ಆಪರೇಟರ, 01-ಲ್ಯಾಬ ಟೆಕ್ನಿಷಿಯನ್, 01-ಫಾರ್ಮಾಸಿಸ್ಟ, 03-ಶುಶ್ರೂಷಾ ಅಧಿಕಾರಿಗಳ ಮಾನವ ಸಂಪನ್ಮೂಲವನ್ನು ಒದಗಿಸಲು ಇ-ಟೆಂಡರ್ ಆಹ್ವಾನಿಸಿರುವ ಕುರಿತು.

2026-2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 32 ಗ್ರೂಪ್ ಡಿ. 04 ಸ್ವೀಪರ್, 02-ಡಾಟಾ ಎಂಟ್ರಿ ಆಪರೇಟರ, 01-ಲ್ಯಾಬ ಟೆಕ್ನಿಷಿಯನ್, 01-ಫಾರ್ಮಾಸಿಸ್ಟ, 03-ಶುಶ್ರೂಷಾ ಅಧಿಕಾರಿಗಳ ಮಾನವ ಸಂಪನ್ಮೂಲವನ್ನು ಒದಗಿಸಲು ಇ-ಟೆಂಡರ್ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000 ರ ಪ್ರಕಾರ ದ್ವಿ-ಬಿಡ್ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್ (ಇ-ಟೆಂಡರ್) ಆಹ್ವಾನಿಸಲಾಗಿದೆ.

1) ಇ-ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡುವ ದಿನಾಂಕ: 22-04-2026 ರಿಂದ 06-05-2026ರ ವರೆಗೆ ಸಾಯಂಕಾಲ 4.00 ಗಂಟೆಯವರೆಗೆ 2) ತಾಂತ್ರಿಕ್ ಬಿಡ್‌ನ್ನು ತೆರೆಯುವ ದಿನಾಂಕ: 08-05-2026 ರಂದು 11.30 ಗಂಟೆಗೆ 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 11-05-2026 ರಂದು 12.00 ಗಂಟೆಗೆ

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ (www.kppp.karnataka.gov.in) ದಿಂದ ಪಡೆಯಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ ಧಾರವಾಡ

ಡಿಐಪಿಆರ್/ಧಾರವಾಡ/112/ಮಣಿಪಾಲ್/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ

ಕ್ರ.ಸಂ.: ಕೃಉಮಾಸ/ಶಿ/ಭಸಿಸೇ/137/2026-27 ದಿನಾಂಕ: 29.04.2026

ಭದ್ರತಾ ಸಿಬ್ಬಂದಿಗಳಿಗಾಗಿ ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರ್‌ಮೆಂಟ್ ಮೂಲಕ)

ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಪ್ರಾಂಗಣದ ಸ್ಥಿರ ಮತ್ತು ಚರಾಸ್ಥಿಗಳನ್ನು ಸಂರಕ್ಷಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಒಟ್ಟು 29 ಜನ ಭದ್ರತಾ ಸಿಬ್ಬಂದಿಗಳು, ಸಮಿತಿಯ ಆಡಳಿತ ಕಛೇರಿ ಮತ್ತು ಇ-ಟೆಂಡರ್ ನಿರ್ವಹಣೆಯ ಕೆಲಸ-ಕಾರ್ಯಗಳನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಲು ಒಟ್ಟು 13 ಜನ ಭದ್ರತಾ ಸಿಬ್ಬಂದಿಗಳು (ವಲಯ-2 ರಂತೆ) ಹಾಗೂ ಸಮಿತಿಯ ಹೊಳಲೂರು, ಮಲ್ಲಾಪುರ ಉಪಮಾರುಕಟ್ಟೆ ಪ್ರಾಂಗಣಗಳಲ್ಲಿನ ಸಮಿತಿಯ ಒಡೆತನದಲ್ಲಿರುವ ಆಸ್ತಿಗಳನ್ನು ಸಂರಕ್ಷಿಸಲು (ವಲಯ-4 ರಂತೆ) ಒಟ್ಟು 02 ಜನ ಭದ್ರತಾ ಸಿಬ್ಬಂದಿಗಳು ಹೀಗೆ ಒಟ್ಟು ವಿವಿಧ ಪ್ರವರ್ಗಗಳ 44 ಜನ ಭದ್ರತಾ ಸಿಬ್ಬಂದಿಗಳ ಸೇವೆಯನ್ನು (ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ) 2026-2027 ನೇ ಸಾಲಿಗೆ ಅಂದರೆ ಕೆಲಸದ ಆದೇಶ ನೀಡಿದ ದಿನಾಂಕದಿಂದ 11 ತಿಂಗಳ ಅವಧಿಗೆ ಒದಗಿಸಲು ಅರ್ಹ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ಸೂಕ್ತ ಪ್ರವರ್ಗಕ್ಕೆ ಅನುಗುಣವಾಗಿ ನೋಂದಾಯಿಸಲ್ಪಟ್ಟ ಭದ್ರತಾ ಏಜೆನ್ಸಿಗಳಿಂದ, ಸರ್ವಿಸ್ ಚಾರ್ಜ್ (ಸೇವಾ ಶುಲ್ಕ) ನಮೂದಿಸಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಏಕವ್ಯಕ್ತಿಯಾಗಿದ್ದಲ್ಲಿ ಶೇಕಡಾ 1 ರಷ್ಟು ಆದಾಯ ತೆರಿಗೆ ಮತ್ತು ಪಾಲುದಾರರಾಗಿದ್ದಲ್ಲಿ ಶೇಕಡಾ 2 ರಷ್ಟು ಆದಾಯ ತೆರಿಗೆ ಕಡಿತಗೊಳಿಸಬೇಕಾಗಿರುವುದರಿಂದ ಏಜೇನ್ಸಿದಾರರು ಸದರಿ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ಶೇ. 1 ಸೇವಾ ಶುಲ್ಕ ನಮೂದಿಸತಕ್ಕದ್ದು. ಅರ್ಹ ಟೆಂಡರ್‌ದಾರರು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in.) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ ಸಂ.	ಕೆಲಸದ ಹೆಸರು	ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ	ಖಾಲಿ ಟೆಂಡರ್ ಫಾರಂ ಬೆಲೆ	ಇ.ಎಂ.ಡಿ ಮೊತ್ತ
1	ಭದ್ರತಾ ಸಿಬ್ಬಂದಿಗಳು	29 ಸಂಖ್ಯೆ (ವಲಯ-2 ರಂತೆ)	ಇ-ಪೋರ್ಟಲ್ ನಿಯಮಗಳಂತೆ	ರೂ. 1,80,000-00
2	ಭದ್ರತಾ ಸಿಬ್ಬಂದಿಗಳು	02 ಸಂಖ್ಯೆ (ವಲಯ-4 ರಂತೆ)		
3	ಕಂಪ್ಯೂಟರ್‌ಆಪರೇಟರ್	04 ಸಂಖ್ಯೆ		
4	ಡಾಟಾಎಂಟ್ರಿಆಪರೇಟರ್ಸ್	05 ಸಂಖ್ಯೆ		
5	ವಾಹನ ಚಾಲಕರು	03 ಸಂಖ್ಯೆ		
6	ನೀರುಗಂಟಿ(ಪ್ಲಂಬರ್)	01 ಸಂಖ್ಯೆ		
	ಒಟ್ಟು	44 ಸಂಖ್ಯೆ		

1. ಮೇಲ್ಕಂಡ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ-ಪೋರ್ಟ್‌ಲ್‌ನಲ್ಲಿ ದಿನಾಂಕ: 20-05-2026 ರ ಅಪರಾಹ್ನ 3.00 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್ ಬಿಡ್‌ಗಳನ್ನು ಈ ಪೋರ್ಟ್‌ಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 20-05-2026 ರ ಅಪರಾಹ್ನ 4.00 ಗಂಟೆಗೆ. 3. ಅರ್ಜಿದಾರರು ಟೆಂಡರ್ ತೆರೆಯುವ ಮುನ್ನ ಮೂಲ ದಾಖಲಾತಿಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ ಇವರಿಗೆ ಸಲ್ಲಿಸತಕ್ಕದ್ದು. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22-05-2026 ಸಂಜೆ 5.00 ಗಂಟೆಗೆ. 5. ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ (Financial bid) ಬಿಡ್‌ನ್ನು ತೆರೆಯುವ ದಿನಾಂಕ: 25-05-2026 ರ ಸಂಜೆ 5.00 ಗಂಟೆಗೆ. 6. ಹೆಚ್ಚಿನ ವಿವರಗಳು ಮತ್ತು ಇತರೆ ಷರತ್ತು-ವಾ-ನಿಬಂಧನೆಗಳನ್ನು ಸಮಿತಿಯ ಕಛೇರಿಯ ವೇಳೆಯಲ್ಲಿ "ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ" ಫೋನ್ ನಂ-08182-250338 ಇವರಿಂದ ಅಥವಾ ಕರ್ನಾಟಕ ಸರ್ಕಾರದ ವೆಬ್‌ಸೈಟ್ (https://kppp.karnataka.gov.in.) ಇಂದ ಪಡೆಯಬಹುದು. 7. ಆಸಕ್ತಿಯುಳ್ಳ ಗುತ್ತಿಗೆದಾರರು ಆನ್‌ಲೈನ್‌ನಲ್ಲಿ ಭಾಗವಹಿಸಿ ಅರ್ಜಿ ಪಡೆದುಕೊಳ್ಳಲು ಮತ್ತು ಇ.ಎಂ.ಡಿ. ಮೊತ್ತ ಪಾವತಿಸಲು ಇ-ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-25501216 ನ್ನು ಸಂಪರ್ಕಿಸಬಹುದು

ಸಹಿ/- ಹೆಚ್.ವೈ.ಸತೀಶ., ಕೆ.ಎಂ.ಎಸ್
ಕಾರ್ಯದರ್ಶಿ(ದರ್ಜೆ-1)
ಕೃ.ಉ.ಮಾ.ಸ.,ಶಿವಮೊಗ್ಗ.

ಸಹಿ/- ಅಭಿಷೇಕ್ ವಿ., ಕ.ಆ.ಸೇ
ಆಡಳಿತಾಧಿಕಾರಿಗಳು ಕೃ.ಉ.ಮಾ.ಸ.,ಶಿವಮೊಗ್ಗ
ಹಾಗೂ ಅಪರ ಜಿಲ್ಲಾಧಿಕಾರಿಗಳು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/148/04/159

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ.: 08182 - 222942, ಇ-ಮೇಲ್ :spdivision@gmail.com
ಐ.ಎಫ್.ಟಿ ಸಂಖ್ಯೆ: 11/2026-27 ದಿನಾಂಕ: 30-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)
(ಕೆ.ಪಿ.ಪಿ. ಪೋರ್ಟ್‌ಲ್ ಮೂಲಕ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 20000 ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ನಿಯುವುದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ 5054-04-337-0-01-154-ಜಿಲ್ಲಾ ರಸ್ತೆಗಳು ಸುಧಾರಣೆಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿವಮೊಗ್ಗ ತಾಲ್ಲೂಕಿನಲ್ಲಿ 01 ಕಾಮಗಾರಿ ಶಿವಮೊಗ್ಗ ತಾಲ್ಲೂಕಿನ ಬೆಳಲಕಟ್ಟೆ ಗ್ರಾಮಕ್ಕೆ ಅಬ್ಬಲಗೆರೆ ಗ್ರಾಮದ ಮುಖ್ಯ ರಸ್ತೆಯಿಂದ ಅಬ್ಬಲಗೆರೆ ಗ್ರಾಮದ ಮುಖಾಂತರ ಬೆಳಲಕಟ್ಟೆ ಗ್ರಾಮಕ್ಕೆ ಸೇರುವ ಚಾನಲ್ ವರೆಗಿನ ರಸ್ತೆಯನ್ನು ಒಂದು ಬಾರಿ ಅಭಿವೃದ್ಧಿ ಪಡಿಸುವ ಕಾಮಗಾರಿ(ಇಂಡೆಂಟ್ ನಂ-35899) ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.142.86 ಲಕ್ಷ ಮತ್ತು ಇಂ.ಎಂ.ಡಿ ಮೊತ್ತ ರೂ.2.145 ಲಕ್ಷ, ಕಾಲಾವಧಿ 09 ತಿಂಗಳು ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿಪೋರ್ಟ್‌ಲ್‌ನಲ್ಲಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 30-04-2026 ರಿಂದ 08-05-2026 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ:08-05-2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ:09-05-2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ:10-05-2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/159/04/157

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಚೇರಿ ನಂ.2
ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್. ತಾ॥ ಗಂಗಾವತಿ, ಜಿ॥ ಕೊಪ್ಪಳ.

ಸಂ:ಕಾಅ.2/ಕನೀನಿನಿ/ತಾಂಶಾ/ಸಇ-3/ಟೆಂಡರ್/2026-27/112, ದಿ:29-04-2026

ಟೆಂಡರ್ ಪ್ರಕಟಣೆ (Call-2)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಚೇರಿಯಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ https://kppp.karnataka.gov.in ಮುಖಾಂತರ ಈ ವಿಭಾಗದಡಿ ಕೆಳಕಂಡ ಕಾಮಗಾರಿಗಳ ಶೇಕಡವಾರು ಟೆಂಡರ್‌ನ್ನು ಎರಡು ಲಕೋಟೆಯಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಸಂಖ್ಯೆ	Indent No: KNNL/2025-26/ OW/WORK_ INDENT	ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಒಳಗೊಂಡು) (ರೂ. ಗಳಲ್ಲಿ)	ಇ ಎಮ್ ಡಿ ಮೊತ್ತ (ರೂ. ಗಳಲ್ಲಿ)	ವರ್ಗ
1	3456CALL-2	4,63,95,279=00	5,89,800=00	ಸಾಮಾನ್ಯ
2	3458CALL-2	4,87,95,375=00	6,20,300=00	ಸಾಮಾನ್ಯ
3	3459CALL-2	3,19,94,704=00	4,06,750=00	ಸಾಮಾನ್ಯ
4	3137CALL-2	63,98,064=00	54,500=00	ಪ.ಜಾ
5	3139CALL-2	47,98,000=00	40,700=00	ಪ.ಪಂ.

ಕಾಮಗಾರಿಗಳ ಇನ್ನು ಇತರೆ ಹೆಚ್ಚಿನ ವಿವರಗಳನ್ನು https://kppp.karnataka.gov.in ಜಾಲದಿಂದ ಪಡೆಯಬಹುದು. ಪೂರ್ವ ಬಿಡ್ ಸಭೆಯನ್ನು ಕಾರ್ಯಪಾಲಕ ಅಭಿಯಂತರರು ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಚೇರಿಯಲ್ಲಿ ದಿನಾಂಕ: 07-05-2026 ರಂದು ಬೆಳಿಗ್ಗೆ 11:30 ಗಂಟೆಗೆ ನಿರ್ವಹಿಸಲಾಗುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 31-05-2026 ರ ಮಧ್ಯಾಹ್ನ 4:30 ಗಂಟೆಯವರೆಗೆ ಮತ್ತು ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 01-06-2026 ರಂದು ಮಧ್ಯಾಹ್ನ 4:30 ಗಂಟೆಗೆ ಮತ್ತು ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: 02-06-2026 ರಂದು ಮಧ್ಯಾಹ್ನ 4:31 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದೆಂದು ನಿಗದಿಪಡಿಸಲಾಗಿರುತ್ತದೆ. ಟೆಂಡರ್‌ನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಚೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/-ಕಾರ್ಯಪಾಲಕ ಅಭಿಯಂತರರು
ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್.
ತಾ॥ಗಂಗಾವತಿ, ಜಿ॥ಕೊಪ್ಪಳ.

ವಾ.ಸಾ.ಸಂ.ಇ/ಕೊಪ್ಪಳ/59/ದೇಶಪಾಂಡೆಪಬ್ಲಿಸಿಟಿ/2026-27

ಉಡುಪಿ ನಗರಸಭೆ

ಕೆ.ಎಂ.ಮಾರ್ಗ, ಉಡುಪಿ -576 101. ದೂ : 0820-2520306 E-MAIL: ka.udupi.cmc@gmail.com Website: www.udupicity.mrc.gov.in
ದಿನಾಂಕ 29.04.2026

ಟೆಂಡರ್ ಪ್ರಕಟಣೆ

ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಉಡುಪಿ ನಗರಸಭೆಯ ಈ ಕೆಳಗಿನ ವಾಹನಗಳ ದುರಸ್ಥಿ ಕಾರ್ಯಗಳನ್ನು ಮಾಡುವ ಕುರಿತು ಕರ್ನಾಟಕ ಪಬ್ಲಿಕ್ ಪ್ರೊಕ್ಯರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 14/05/2026 ಸಮಯ ಅಪರಾಹ್ನ 5.20 ಗಂಟೆವರೆಗೆ, ಅರ್ಹ ಗುತ್ತಿಗೆದಾರರು/ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

S. N.	Details of Work	Vehicle Number	Vehicle Type	Tender Number	Amount put to tender	E.M.D.
1	Repair of Udupi CMC Vehicles	KA20 D3761	14.0 Cum Refuse Compactor	DMA/2026-27/SE7740	19,86,426.96	49650/-
2		KA20 AA9963	7.0 Cum Refuse Compactor			
3		KA20 AA9933	5.0 Cum Tipper			
4		KA20 AB5092	3.0 Cum Tipper			
5		KA20 AB5093	3.0 Cum Tipper			
6		KA20 AA8817	Tractor			
7		KA20 AA1845	1.8 Cum Tata Ace			
8		KA20 AA9924	1.8 Cum Tata Ace			

ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ಕರ್ನಾಟಕ ಸರ್ಕಾರ
ದೂರವಾಣಿ: 08382-220556 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2026-27/05 ದಿ: 28.04.2026

ಟೆಂಡರ್ ಪ್ರಕಟಣೆ-05/2026-27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದಡಿ ಕುಮಟಾ ತಾಲ್ಲೂಕಿನ ಶಿರಗುಂಜಿ ಮುಖ್ಯ ರಸ್ತೆಯಿಂದ ತುಳುಸು ಮುಕ್ರಿ ಮನೆವರೆಗೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) --ಸದರ-- ಕುಮಟಾ ತಾಲ್ಲೂಕಿನ ಕಲಭಾಗ ಪಂ. ಕಲಭಾಗ ಸಾರಂಗಮುತ್ತಿ ಮನೆಯಿಂದ ದೇವಗುಂಡಿಗೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರವರ್ಗ 2-A) (3) --ಸದರ-- ಕುಮಟಾ ತಾಲ್ಲೂಕಿನ ಕೂಜಳ್ಳಿ ಎಸ್.ಸಿ. ಕೇರಿ ಹತ್ತಿರ ರಸ್ತೆ ಹಾಗೂ ಗಟಾರ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(4) --ಸದರ-- ಕುಮಟಾ ತಾಲ್ಲೂಕಿನ ಮಿರ್ಜಾನ ಗ್ರಾಮ ಪಂ. ಬಿ.ಜಿ.ಎಸ್. ಕೆಳಭಾಗದಲ್ಲಿ ಎಸ್.ಸಿ. ಕೇರಿ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಷೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 14.05.2026 ರ ಮಧ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 15.05.2026 ಮಧ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/69/26-27 dt. 30.04.2026

ಪಟ್ಟಣ ಪಂಚಾಯತ ಕಾರ್ಯಾಲಯ, ಯಲ್ಲಾಪುರ (ಉ.ಕ)-581359

Azadi Ka Amrit Mahotsav
ಕರ್ನಾಟಕ ಸರ್ಕಾರ
TOWN PANCHAYAT OFFICE, YELLAPUR (U.K) - 581 359
E-mail ID: ka.yellapura.tp@gmail.com, tp_ylp@yahoo.co.in
Website: www.yellapuratown.mrc.gov.in
Phone:- 08419-261152, Fax: 261463

ನಂ.: ಪಪಂಯ:ಕಾವಿ:ಟೆಂಪ್ರ:ವಿವ:2026-27 ದಿನಾಂಕ: 29-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ [Karnataka Public Procurement Portal])

2026-27ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಅನುದಾನದಡಿಯಲ್ಲಿ ಕೈಗೊಳ್ಳುವ ಕಾಮಗಾರಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ -2000 ರಂತೆ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್ ದರಗಳನ್ನು ಟೆಂಡರ್ ಡಾಕ್ಯುಮೆಂಟ್ (KW-1)ರ ನಿಬಂಧನೆಗೊಳಪಟ್ಟು ಸಾಮಾನ್ಯ ಮೀಸಲಾತಿ (ಇಂಡೆಂಟ್ ನಂ. 57783, 57784, 87785, 57793) ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ [Karnataka Public Procurement Portal] ಮೂಲಕ ನಿಗದಿತ ಅವಧಿಯಲ್ಲಿ ಸಲ್ಲಿಸತಕ್ಕದ್ದು.

1. ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ : 04-05-2026 (ಸಂಜೆ 16.00.00 ಗಂಟೆವರೆಗೆ)
2. ಟೆಂಡರಗೆ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ : 08-05-2026 (ಸಂಜೆ 16.00.00 ಗಂಟೆವರೆಗೆ)
3. ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 11-05-2026 (ಸಂಜೆ 16.00.05 ಗಂಟೆವರೆಗೆ) (ರಜೆ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK KPPP ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಮತ್ತು ವೆಬ್‌ಸೈಟ್ www.yellapuratown.mrc.gov.in ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಮುಖ್ಯಾಧಿಕಾರಿ,
ಪಟ್ಟಣ ಪಂಚಾಯತ,
ಯಲ್ಲಾಪುರ (ಉ.ಕ)

ಸಹಿ/- ಆಡಳಿತಾಧಿಕಾರಿ,
ಪಟ್ಟಣ ಪಂಚಾಯತ,
ಯಲ್ಲಾಪುರ (ಉ.ಕ)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

ಕರ್ನಾಟಕ ಸರ್ಕಾರ
Tel. No.:08338-275101 E-Mail:ee.rdws.ckd@gmail.com
ಸಂಖ್ಯೆ:ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು4:ಟೆಂಡರ್-3:2026-27/99 ದಿನಾಂಕ:27-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3&4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No:-9662/Call-3

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (http://kppp.karnataka.Gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01)ಟೆಂಡರ ಪೂರ್ವಬಾವಿ ಸಭೆ:02-05-2026 ರ ಬೆಳಿಗ್ಗೆ 11-00 ಗಂಟೆಗೆ, ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ. 02)ಇ-ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:05-05-2026 ಸಾಯಂಕಾಲ 17.00 ಘಂಟೆವರೆಗೆ. 03)ಇ-ಪ್ರೊಕ್ಯೂರಮೆಂಟ್ ತಾಂತಿಕ ಬಿಡ್ಡನ್ನು ತೆರೆಯುವ ದಿನಾಂಕ:06-05-2026 ಸಂಯಕಾಲ 5.30 ಘಂಟೆ ನಂತರ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.

DIPR/BGM/RO-NO-182/KSMCA/2026-27

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಕರ್ನಾಟಕ ಸರ್ಕಾರ
ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ ಮ.ಟೆಂಡರ.ಪ್ರ-35/2025-26/391 ದಿನಾಂಕ: 29-04-2026

ಮರು ಟೆಂಡರ್ (Call-2) ಪ್ರಕಟಣೆ
(ಇ-ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ ಮಾತ್ರ)

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ಟೆಂಡರ-35/2025-26/5604 ದಿನಾಂಕ: 04-03-2026

ಉಲ್ಲೇಖಿದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2025-26ನೇ ಸಾಲಿನ 4059-80-051-0-60-132-CMIDP ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Construction of Cement Concrete Road from Karnakod Road to Sonagarjaddi, NH-66 to Kabbinhakkala Road, Mogehalla Road to Basakuli Road, Krishnakere to Heggar, Jaddi to Kasabail, NH-66 to Bommanakodlu and Constuction of Retaining Wall near Kranshakere Kenel in Nagarbastikere Gram Panchayat in Honavar Taluk U K Dist Under CMIDP During 2025-26 PWD/2025-26/RD/WORK_INDENT 32931/CALL-2 ರೂ. 100.88 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08-05-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 11-05-2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 12-05-2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 14-05-2026 17.00 ಗಂಟೆವರೆಗೆ

ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಅವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/96/26-27 dt. 30.04.2026

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಕರ್ನಾಟಕ ಸರ್ಕಾರ
ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ಟೆಂಡರ-01/2026-27/392 ದಿನಾಂಕ: 29-04-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲ್ಯೂ-4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13-05-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14-05-2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15-05-2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18-05-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: Mitigation-8443-Deposite Contribution During 2025-26 ವರ್ಷ ಇನಡೆಂಟ್ (1) PWD/2025-26/FP/WORK_INDENT 33701 (2) PWD/2025-26/FP/WORK_INDENT34502

(ಕೆಡಬ್ಲ್ಯೂ-4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/97/26-27 dt. 30.04.2026

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ಕರ್ನಾಟಕ ಸರ್ಕಾರ
ದೂರವಾಣಿ: 0836-2741277, 0836-2748374. ಫ್ಯಾಕ್ಸ್: 0836-2741277.
E-mail: dsdharwad@gmail.com

ಕ್ರ: ಜಿಆಧಾ/ಎ.ಆರ್.ಎಸ್/01/2026-27 ದಿನಾಂಕ: 22.04.2026

ಟೆಂಡರ್ ಪ್ರಕಟಣೆ

ವಿಷಯ:2026-2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 17 ನಾನ್-ಕ್ಲಿನಿಕಲ್ ಸೇವೆಗಳ ಹುದ್ದೆಗೆ ಮಾನವ ಸಂಪನ್ಮೂಲವನ್ನು ಒದಗಿಸಲು ಇ-ಟೆಂಡರ ಆಹ್ವಾನಿಸಿರುವ ಕುರಿತು.

2026-2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 17 ನಾನ್- ಕ್ಲಿನಿಕಲ್ ಸೇವೆಗಳ ಹುದ್ದೆಗೆ ಮಾನವ ಸಂಪನ್ಮೂಲವನ್ನು ಒದಗಿಸಲು ಇ-ಟೆಂಡರ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000 ರ ಪ್ರಕಾರ ದ್ವೀ-ಬಿಡ್ (Technical and Financial) ಪದ್ಧತಿಯಲ್ಲಿ ಟೆಂಡರ (ಇ-ಟೆಂಡರ) ಆಹ್ವಾನಿಸಲಾಗಿದೆ.

1) ಇ-ಪೋರ್ಟಲ್‌ದಲ್ಲಿ ಅಪ್ ಲೋಡ್ ಮಾಡುವ ದಿನಾಂಕ: 22-04-2026 ರಿಂದ 06-05-2026 ರ ವರೆಗೆ ಸಾಯಂಕಾಲ 4.00 ಘಂಟೆಯವರೆಗೆ. 2) ತಾಂತ್ರಿಕ್ ಬಿಡ್‌ನ್ನು ತೆರೆಯುವ ದಿನಾಂಕ: 08-05-2026 ರಂದು 11.30 ಘಂಟೆಗೆ. 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 11-05-2026 ರಂದು 12.00 ಘಂಟೆಗೆ.

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ-ಪ್ರಕ್ಯೂರಮೆಂಟ್ ವೆಬ್‌ಸೈಟ್ (www.kppp.karnataka.gov.in) ದಿಂದ ಪಡೆಯಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ ಧಾರವಾಡ

ವಾಸಾಸಂಇ/ಧಾ/ದಿಶಾ/111/2026-27

ಕಾರ್ಯಪಾಲಕ ಇಂಜಿನಿಯರವರ ಕಛೇರಿ ಲೋಕೋಪಯೋಗಿ ಇಲಾಖೆ ವಿಭಾಗ, ಮಂಗಳೂರು

ಕರ್ನಾಟಕ ಸರ್ಕಾರ
ಸಂಖ್ಯೆ:ಕಾಇಂ:ಲೋವಿ:ಮಂ.ವಿ:ಟಿಎನ್‌ಡಿ(06ಇ)ಜೆಇ-1:ಟೆಂಡರ್-:2026-27 ದಿನಾಂಕ: 02.05.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಸಿ - 4) ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಮಂಗಳೂರು ಇವರಿಂದ **ಲೆಕ್ಕಶೀರ್ಷಿಕೆ: 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ** ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ **ವಿಸ್ತೃತ ಯೋಜನಾ ವರದಿ** ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ **ದ್ವಿ ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **www.kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ	ಇ.ಎಂ.ಡಿ.
1	ಮಂಗಳೂರು ತಾಲೂಕು ಮುಲ್ಕಿ ಮೂಡಬಿದ್ರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಗಳೂರು- ಅತ್ರಾಡಿ ರಾಜ್ಯ ಹೆದ್ದಾರಿ ಕಿ.ಮೀ 14.42 ರಲ್ಲಿ ಕಟೀಲು ಎಂಬಲ್ಲಿ 16 ಮೀಟರ್ ಅಗಲದ ಸೇತುವೆ ಮರು ನಿರ್ಮಾಣ	ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಇ-ಪ್ರೋಕೂರ್‌ಮೆಂಟ್ ಮುಖಾಂತರ ಪಡೆಯುವುದು
2	ಮುಲ್ಕಿ ಮೂಡಬಿದ್ರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಗಳೂರು- ಅತ್ರಾಡಿ ರಾಜ್ಯ ಹೆದ್ದಾರಿ-67ರ ಕಿ.ಮೀ 0.16 ರಲ್ಲಿ ಮವೂರು ಸೇತುವೆ ಮರು ನಿರ್ಮಾಣ	


ಟೆಂಡರ್ ವಿವರಗಳು ಈ ಕೆಳಕಂಡಂತಿವೆ: (1) ಟೆಂಡರ್ ದಾಖಲೆಗಳನ್ನು ಇ-ಪ್ರೋಕೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: **02.05.2026** ರಿಂದ **11.05.2026** ರ **17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: **06.05.2026 ರ ಪೂರ್ವಾಹ್ನ 11.30 ಗಂಟೆಗೆ** ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. (3) ಸಮಾಲೋಚನಾ ಸಭೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ವಿಡಿಯೋ ಸಂವಾದ ಮೂಲಕ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ. (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.05.2026 ರ ಅಪರಾಹ್ನ 17.00 ಗಂಟೆಯವರೆಗೆ** (5) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12.05.2026 ರ ಪೂರ್ವಾಹ್ನ 17.15 ಗಂಟೆಯವರೆಗೆ** (6) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. (7) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. (8) ಸ್ಟ್ರಕ್ಚರಲ್ ವಿನ್ಯಾಸ ನಕ್ಷೆಯನ್ನು ತಯಾರಿಸಲು ಸಮಾಲೋಚಕರು ಕಡ್ಡಾಯವಾಗಿ ಲೋಕೋಪಯೋಗಿ ಇಲಾಖೆ, ಕೇಂದ್ರ ವಲಯ, ಶಿವಮೊಗ್ಗದ ಅಡಿಯಲ್ಲಿ **(Cat – I)** ನೋಂದಣಿ ಆಗಿರತಕ್ಕದ್ದು.

ಉಲ್ಲೇಖ ನಿಯಮಗಳನ್ನು ಕರ್ನಾಟಕ ಸರ್ಕಾರ **KPPP** ಪೋರ್ಟಲ್‌ನಲ್ಲಿ **(https://kppp.karnataka.gov.in)** 02.05.2026 ರಿಂದ ಡೌನ್ಲೋಡ್ ಮಾಡಬಹುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 0824 2423169 ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ +919240214000 ಮತ್ತು +919240214001 ರಿಂದ ಮಾಹಿತಿ ಪಡೆಯಬಹುದು.

ಸಹಿ/-, ಕಾರ್ಯಪಾಲಕ ಅಭಿಯಂತರರು

DIPR/DK/KSMCA/164/26-27 dt. 02.05.2026



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	10	6	4	0	12	+0.510
ಗುಜರಾತ್	9	5	4	0	10	-0.192
ದಿಲ್ಲಿ	9	4	5	0	8	-0.895
ಚೆನ್ನೈ	8	3	5	0	6	-0.121
ಕೆಕೆಆರ್	8	2	5	1	5	-0.751
ಮುಂಬೈ	8	2	6	0	4	-0.784
ಲಖನೌ	8	2	6	0	4	-1.106

ಕಿರುಸುದ್ದಿ

ಮ್ಯಾಗ್ನಸ್ ವಿರುದ್ಧ ಡ್ರಾ ಮಾಡಿಕೊಂಡ ಅರ್ಜುನ್

•ಮಾಲ್ಮೋ: ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು 31ನೇ ಟೆಪೆ ಸಿಗೇಮನ್ ಅಂಡ್ ಕಂಪನಿ ಚೆಸ್ ಟೂರ್ನಿಯಲ್ಲಿ ಉತ್ತಮ ಆರಂಭ ಮಾಡಿ, ವಿಶ್ವ ಕ್ರಮಾಂಕ 1ರ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ಮೊದಲ ಸುತ್ತಿನಲ್ಲಿ ಡ್ರಾ ಸಾಧಿಸಿದ್ದಾರೆ. ಪಂದ್ಯದಲ್ಲಿ ಕಾರ್ಲ್‌ಸನ್ ಕ್ವೀನ್‌ಸೈಡ್ ಭಾಗದಲ್ಲಿ ಒತ್ತಡ ಹೆಚ್ಚಿಸಲು ಪ್ರಯತ್ನಿಸಿದರೂ, ಅರ್ಜುನ್ ನಿಖರ ರಕ್ಷಣಾತ್ಮಕ ಆಟ ಪ್ರದರ್ಶಿಸಿ 24b6 ಎಂಬ ಪ್ರಮುಖ ನಡೆ ಮೂಲಕ ಎದುರಾಳಿಯ ಪಾಸ್‌ಡ್ ಪಾನ್ ಬೆದರಿಕೆಯನ್ನು ತಡೆದರು. ನಂತರ ಕುದುರೆಯನ್ನು ಸಕ್ರಿಯಗೊಳಿಸಿ ಆಟವನ್ನು ಸರಳೀಕರಣದತ್ತ ಕೊಂಡೊಯ್ದರು. ರೂಕ್‌ಗಳ ವಿನಿಮಯವಾದ ಬಳಿಕ ಕಾರ್ಲ್‌ಸನ್‌ಗೆ ಸ್ಪಷ್ಟ ಮುನ್ನಡೆಯ ಅವಕಾಶ ಸಿಗದೆ, ಪಂದ್ಯ ಅಂತಿಮವಾಗಿ ಡ್ರಾದಲ್ಲಿ ಅಂತ್ಯವಾಯಿತು. 2026ರಲ್ಲಿ ಅರ್ಜುನ್ ನಿಧಾನ ಆರಂಭ ಕಂಡಿದ್ದರು. ಅವರು ಟಾಟಾ ಸ್ಟೀಲ್ ಮಾಸ್ಟರ್ಸ್‌ನಲ್ಲಿ 13ನೇ ಸ್ಥಾನ ಪಡೆದುಕೊಂಡರೆ, ಫ್ರೀಸ್ಟೈಲ್ ಚೆಸ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಆರನೇ ಸ್ಥಾನ ಗಳಿಸಿದ್ದರು. ಆ ಟೂರ್ನಿಯನ್ನು ಕಾರ್ಲ್‌ಸನ್ ಜಯಿಸಿದ್ದರು. ಈ ಟೂರ್ನಿಯಲ್ಲಿ ಉಜ್ಬೇಕಿಸ್ತಾನದ ನೋಡಿರ್ಬೆಕ್ ಅಬ್ದುಸಾತ್ತೊರೋ (2024ರ ವಿಜೇತ), ಜಾರ್ಡನ್ ವ್ಯಾನ್ ಫಾರೆಸ್ಟ್ (2021ರ ಚಾಂಪಿಯನ್) ಹಾಗೂ ಸ್ವೀಡನ್‌ನ ಅಗ್ರ ಆಟಗಾರ ನೀಲ್ಸ್ ಗ್ರ್ಯಾಂಡೆಲ್ಯುಸ್ ಸೇರಿದಂತೆ ಹಲವಾರು ಶಕ್ತಿಶಾಲಿ ಆಟಗಾರರು ಭಾಗವಹಿಸಿದ್ದಾರೆ.

ಪೋಲ್ ವಾಲ್ಟ್: ಕುಲ್ದೀಪ್ ಕುಮಾರ್ ದಾಖಲೆ

•ಭುವನೇಶ್ವರ: ಶನಿವಾರ ಭುವನೇಶ್ವರದಲ್ಲಿ ನಡೆದ ಮೊದಲ ಭಾರತೀಯ ಒಳಾಂಗಣ ಮುಕ್ತ ಕಂಬೈನ್ಡ್ ಇವೆಂಟ್ಸ್ ಮತ್ತು ಪೋಲ್ ವಾಲ್ಟ್ ಸ್ಪರ್ಧೆಗಳಲ್ಲಿ ಕುಲ್ದೀಪ್ ಕುಮಾರ್ ಪೋಲ್ ವಾಲ್ಟ್‌ನಲ್ಲಿ 5.41 ಮೀ ದೂರ ಗುರಿಯನ್ನು ಸಾಧಿಸುವ ಮೂಲಕ ಹೊಸ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದರು. ಮಧ್ಯಪ್ರದೇಶದ 21 ವರ್ಷದ ಕುಲ್ದೀಪ್, ಮೂರನೇ ಸ್ಥಾನ ಪಡೆದ ರಾಜ್ಯದ ದೇವ್ ಮೀನಾ ಅವರ ಹಿಂದಿನ 5.40 ಮೀ ರಾಷ್ಟ್ರೀಯ ದಾಖಲೆಯನ್ನು ಮೀರಿಸಿದರು. ಅವರು 5.46 ಮೀ. ನಲ್ಲಿ ಮೂರು ವಿಫಲ ಪ್ರಯತ್ನಗಳನ್ನು ಮಾಡಿದ್ದರು. 21 ವರ್ಷದ ಅವರು ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಏಪ್ರಿಲ್‌ನ ಆರಂಭದಲ್ಲಿ, ಅವರು ಜೈಪುರದಲ್ಲಿ 5.25 ಮೀ. ಎತ್ತರ ಗುರಿಯನ್ನು ಸಾಧಿಸುವ ಮೂಲಕ ಚಿನ್ನವನ್ನು ಗೆದ್ದರು, 2026 ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅರ್ಹತಾ ಅಂಕವನ್ನು ಸಾಧಿಸಿದರು.

ಫಲಿತಾಂಶಗಳು:
ಚಿನ್ನ – ಕುಲದೀಪ್ ಕುಮಾರ್ (ಮಧ್ಯಪ್ರದೇಶ) – 5.41 ಮೀ
ಬೆಳ್ಳಿ – ಜಿ ರೀಗನ್ (ತಮಿಳುನಾಡು) – 5.25 ಮೀ.
ಕಂಚು – ದೇವ್ ಮೀನಾ (ಮಧ್ಯಪ್ರದೇಶ) – 5.20 ಮೀ.

ಅಂಡರ್-17 ಫುಟ್ಬಾಲ್: ಭಾರತಕ್ಕೆ ಸೋಲು

•ಮುಂಬೈ: ಎಎಫ್‌ಸಿ ಏಷ್ಯನ್ ಕಪ್ ಪಂದ್ಯಾವಳಿಯಲ್ಲಿ ಭಾರತ ಅಂಡರ್-17 ಮಹಿಳಾ ತಂಡ ಸೋಲಿನಾರಂಭ ಮಾಡಿತು. ಶನಿವಾರ ಶುರುವಾದ ಪಂದ್ಯಾವಳಿಯ ಮೊದಲ ಪಂದ್ಯವಾಡಿದ ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ತಂಡವನ್ನು ಎದುರಿಸಿತ್ತು. ಚೀನಾದ ಸುಝೌನಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ 2-0ರಿಂದ ಗೆಲುವು ಸಾಧಿಸಿದೆ. ಆರಂಭಿಕ ಹಂತದಲ್ಲಿ ಎರಡೂ ತಂಡಗಳು ಬಿಗಿ ಪ್ರದರ್ಶನ ನೀಡಿದವು. ಮೊದಲಿನ 25 ನಿಮಿಷಗಳಲ್ಲಿ ಗೋಲಾಗಿರಲಿಲ್ಲ. ಆದರೆ ಮೌತಿಯಾಸ್ ಮಿಕಾಲಾಡ್ 25ನೇ ನಿಮಿಷ ಮುಗಿಯುವಷ್ಟರಲ್ಲಿ ಗೋಲು ಬಾರಿಸಿದರು. ಇತ್ತ ಭಾರತ ತಂಡ ಹಲವಾರು ಪ್ರಯತ್ನಗಳನ್ನು ಮಾಡಿದರೂ ಗೋಲು ಬರಲಿಲ್ಲ. ಮುಂದಿನ ಸುಮಾರು 30ನಿಮಿಷಗಳ ಕಾಲ ಗೋಲಿಗಾಗಿ ಉಭಯ ತಂಡಗಳು ಪ್ರಯತ್ನ ಪಟ್ಟವು. 59ನೇ ನಿಮಿಷದಲ್ಲಿ ಅಭಿಸ್ತಾ ಬೆನೆಟ್ ತಮ್ಮ ತಂಡಕ್ಕೆ ಎರಡನೇ ಗೋಲು ತಂದುಕೊಟ್ಟರು. ಅಲ್ಲಿಂದ ಆಸ್ಟ್ರೇಲಿಯಾ ಗೆಲುವಿನ ಕಹಳೆ ಮೊಳಗಿಸಿತು. ಭಾರತದ ಎಲ್ಲಾ ಪ್ರಯತ್ನಗಳಿಗೂ ಆಸ್ಟ್ರೇಲಿಯಾ ಡಿಫೆನ್ಸ್ ತಡೆಯೊಡ್ಡಿತು. ಅಂತಿಮವಾಗಿ ಆಸ್ಟ್ರೇಲಿಯಾ 2-0ರಿಂದ ಗೆಲುವು ಸಾಧಿಸಿದೆ.

ಕುಸಿದ ಮುಂಬೈಗೆ ನಮನ್ ಆಸರೆ | ಹಾರ್ದಿಕ್ ತಿಣುಕಾಟ | ನೂರ್ ಮಿಂಚಿನಾಟ | ಓವರ್‌ಟನ್ ಕಡಿವಾಣ

ಕಂಬೋಜ್ ಅಬ್ಬರ: ಮುಂಬೈ 159/7

•ಚೆನ್ನೈ: ಅನ್ಶುಲ್ ಕಂಬೋಜ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ಕುಸಿದ ಮುಂಬೈ ಇಂಡಿಯನ್ಸ್ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸ್ಪರ್ಧಾತ್ಮಕ ಗುರಿ ಮಾತ್ರ ಕೊಟ್ಟಿತು.

ರಯಾನ್ ರಿಕೆಲ್ಟನ್ ಅವರ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆದ ಮುಂಬೈ ಮಧ್ಯಮ ಓವರ್‌ಗಳಲ್ಲಿ ನೂರ್, ಓವರ್‌ಟನ್ ಮತ್ತು ಅನ್ಶುಲ್ ದಾಳಿಗೆ ತತ್ತರಿಸಿತು. ಪರಿಣಾಮ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಮಾತ್ರ ಗಳಿಸಿದೆ. ನಮನ್ ಧಿರ್ (57; 37ಎ, 4ಬೌ, 3ಸಿ) ಮಾತ್ರ ಅರ್ಧಶತಕ ಬಾರಿಸಿದರು. ರಯಾನ್ (37; 24ಎ, 5ಸಿ) ಆರಂಭದಲ್ಲಿ ಮಿಂಚಿದರು. ಹಾರ್ದಿಕ್ ಪಾಂಡ್ಯ ನಿಧಾನಗತಿ ಬ್ಯಾಟಿಂಗ್ ಮಾಡಿದರು. ಚೆನ್ನೈ ಪರ ಅನ್ಶುಲ್, ಓವರ್‌ಟನ್, ನೂರ್ ಅಹ್ಮದ್ ಗಮನ ಸೆಳೆದರು.

ರಯಾನ್ ಪವರ್ ಆಟ: ಟಾಸ್ ಗೆದ್ದ ಮುಂಬೈ ಬ್ಯಾಟಿಂಗ್ ಆಯ್ದುಕೊಂಡಿತು. ರೋಹಿತ್ ಇಲ್ಲದ ಹೊತ್ತಲ್ಲಿ ಮತ್ತೊಮ್ಮೆ ಜ್ಯಾಕ್ಸ್ ಕಣಕ್ಕಿಳಿದರು. ರಯಾನ್ ರಿಕೆಲ್ಟನ್ ದಂಡಿಸುವ ಮನಸ್ಥಿತಿಯೊಂದಿಗೆ ಬ್ಯಾಟಿಂಗ್‌ಗಿಳಿದರು. ವಿಲ್ ಜ್ಯಾಕ್ಸ್ ಕೂಡ ಅದನ್ನೇ ಮಾಡಲು ಮುಂದಾದರು. ಮೊದಲ ಓವರ್‌ನಲ್ಲಿ ಐದು ಡಾಟ್ ಬಾಲ್ ಆಡಿದ್ದ ಜ್ಯಾಕ್ಸ್ ಹೊಡೆಯಲೆತ್ನಿಸಿದರು.

ಅನ್ಶುಲ್ ಎಸೆದ ಎಸೆತ ಬ್ಯಾಟಿನ ತುದಿಗೆ ತಾಗುತ್ತಿದ್ದಂತೆ ಥರ್ಡ್‌ಮ್ಯಾನ್‌ನತ್ತ ಹಾರಿತು. ಅಲ್ಲಿದ್ದ ರಾಮಕೃಷ್ಣ ಘೋಷ್ 18 ಮೀ. ದೂರ ಕ್ರಮಿಸಿ ಕ್ಯಾಚ್ ಹಿಡಿದರು. ಐಪಿಎಲ್‌ನ ಮೊದಲ ಪಂದ್ಯದಲ್ಲಿ ಘೋಷ್ ತಮ್ಮನ್ನು ತಾವೇ ಪರಿಚಯಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ನಮನ್ ಸ್ಟ್ರೈಕ್ ರೊಟೇಟ್ ಮೇಲೆ ಗಮನ ಹರಿಸಿದರು. ಇತ್ತ ರಯಾನ್ ಬ್ಯಾಟ್‌ನಿಂದ ಬಾನೆತ್ತರದ ಸಿಕ್ಸರ್‌ಗಳು ಬಂದವು. ಅಚ್ಚರಿಯ ಆಯ್ಕೆಯಲ್ಲಿ ನಾಲ್ಕನೇ ಓವರ್



ಮಾಡಲು ಪ್ರಶಾಂತ್ ವೀರ್ ಬಂದರು. ಮೂರು ಸಿಕ್ಸರ್ ತಿಂದು ಹೊದರು. ಸೆಟ್ ಆಗಿದ್ದ ರಯಾನ್ ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾಗಿದ್ದರು. ಪವರ್‌ಪ್ಲೇ ಮುಗಿತು, ಮುಂಬೈ 57/1.

ಚೆನ್ನೈ ಕಡಿವಾಣ: ಮಧ್ಯಮ ಓವರ್‌ಗಳಲ್ಲಿ ಹೆಚ್ಚು ಡಾಟ್ ಬಾಲ್‌ಗಳು ಕಂಡವು. ರಯಾನ್ ಏಳನೇ ಓವರ್‌ನಲ್ಲಿ ನೂರ್‌ಗೆ ಕ್ಯಾಚಿತ್ತರು. ಸೂರ್ಯಕುಮಾರ್ ಯಾದವ್ ಮತ್ತು ನಮನ್ ಧಿರ್ ಸಿಂಗಲ್‌ಗಳ ಮೂಲಕ ಇನ್ನಿಂಗ್ಸ್ ಕಟ್ಟಲಾರಂಭಿಸಿದರು. ಸೂರ್ಯನಿಂದ ಒಂದೆರಡು ಬೌಂಡರಿ ಕೂಡ ಬಂದವು. ಪಂದ್ಯದ ದಿಕ್ಕು ಬದಲಾಗುತ್ತಿದ್ದಂತೆ ಸೂರ್ಯಗೆ ಖೆಡ್ಡಾ ತೋಡಿಬಿಟ್ಟರು ರಾಮಕೃಷ್ಣ ಘೋಷ್. ಪಂದ್ಯದ ಗತಿ ಬದಲಾಯಿತು. ರನ್ ವೇಗ ಇಳಿಯಿತು. ತಿಲಕ್ 5 ರನ್ ಗಳಿಸುಷ್ಟರಲ್ಲಿ ಸುಸ್ತಾದರು. ನೂರ್‌ಗೆ ಎರಡನೇ ವಿಕೆಟ್. ಬಳಿಕ ಬಂದ ಪಾಂಡ್ಯ, ನಮನ್ ನಿಧಾನ ಬ್ಯಾಟಿಂಗ್ ಮಾಡಿ ಮಧ್ಯಮ ಓವರ್ ಮುಗಿಸಿದರು. ಮಧ್ಯಮ ಓವರ್‌ಗಳಲ್ಲಿ ಮುಂಬೈ ಗಳಿಸಿದ್ದು ಕೇವಲ 67 ರನ್ ಮಾತ್ರ.

ಡೆತ್ ಓವರ್: ಪವರ್‌ಪ್ಲೇನಲ್ಲೇ ಬ್ಯಾಟಿಂಗ್‌ಗೆ ಬಂದ ನಮನ್ 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಆದರೆ ಡೆತ್ ಓವರ್ ಶುರುವಿನಲ್ಲೇ ವಿಕೆಟ್ ಕೊಟ್ಟರು. ಬಳಿಕ ಬಂದ ರಾಬಿನ್ ಮಿಂಜ್ ಬೋಲ್ಡ್ ಆದರು. ಓವರ್‌ಟನ್ ಕೊಟ್ಟ ಕಾಟಕ್ಕೆ ಡೆತ್‌ನಲ್ಲಿ ಹಾರ್ದಿಕ್ ಸುಸ್ತಾದರು. 140 ವೇಗದಲ್ಲಿ ಬೌಲಿಂಗ್ ಮಾಡಿದ ಓವರ್‌ಟನ್ ಹಾರ್ದಿಕ್ ಪಾಂಡ್ಯಗೆ ಬೆವರಿಳಿಸಿದರು. ಡೆತ್ ಓವರ್‌ನಲ್ಲಿ ರನ್ ಹರಿಯಲೇ ಇಲ್ಲ. ಮುಂಬೈ ರನ್ ಮಟ್ಟ ಕುಗ್ಗಿತು. ಪಾಂಡ್ಯ 23 ಬಾಲ್‌ಗಳಲ್ಲಿ 18 ರನ್ ಗಳಿಸಿ ಕ್ಯಾಚಿತ್ತರು. ಬೋಲ್ಟ್ ಕೊನೆಯ ಓವರ್‌ನಲ್ಲಿ ಒಂದು ಸಿಕ್ಸರ್ ಬಾರಿಸಿದರು. ಡೆತ್ ಓವರ್‌ನಲ್ಲಿ ಮುಂಬೈ 3 ವಿಕೆಟ್‌ಗೆ 35 ರನ್ ಗಳಿಸಿತು. ಒಟ್ಟು 159. ಚೆನ್ನೈ ಪರ ಅನ್ಶುಲ್ 3, ನೂರ್ 2, ಘೋಷ್-ಓವರ್‌ಟನ್ ತಲಾ ಒಂದು ವಿಕೆಟ್ ಪಡೆದರು.

ಬಾರದ ಧೋನಿ, ಇಳಿಯದ ರೋಹಿತ್

ಮಹೇಂದ್ರ ಸಿಂಗ್ ಧೋನಿ ಆಟವನ್ನು ನೋಡುವ ಅಭಿಮಾನಿಗಳ ಆಸೆ ಇನ್ನೂ ಹಾಗೇ ಉಳಿದಿದೆ. ಇತ್ತ ರೋಹಿತ್ ಶರ್ಮ ಬ್ಯಾಟಿಂಗ್ ನೋಡುವ ತವಕ ಮುಂಬೈ ಅಭಿಮಾನಿಗಳಲ್ಲಿ ಹಾಗೇ ಉಳಿದಿದೆ. ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಧೋನಿ ಮತ್ತು ರೋಹಿತ್ ಕಣಕ್ಕಿಳಿಯಲಿಲ್ಲ. ಮೈಕ್ ಹಸ್ಸಿ ಧೋನಿ ಆಗಮನದ ಬಗ್ಗೆ ಮಾತನಾಡಿದ್ದರು. ಆದರೆ ಮೈದಾನಕ್ಕೆ ಅವರು ಬರಲೇ ಇಲ್ಲ. ಅಭ್ಯಾಸಕ್ಕಿಳಿಯುವ ಧೋನಿ ಪಂದ್ಯದಲ್ಲಿ ಕಾಣಿಸುತ್ತಿಲ್ಲ. ವಾಸ್ತವವಾಗಿ ಧೋನಿ ಗಾಯದಿಂದ ಮೂರು ಪಂದ್ಯಕ್ಕೆ ಮಾತ್ರ ಲಭ್ಯರಿಲ್ಲ ಎಂದು ಹೇಳಲಾಗಿತ್ತು. ಆದರೆ, ಅರ್ಧಕ್ಕಿಂತ ಹೆಚ್ಚು ಐಪಿಎಲ್ ಮುಗಿದರೂ ಧೋನಿ ಇದುವರೆಗೂ ಪಂದ್ಯವಾಡಿಲ್ಲ. ಇತ್ತ ರೋಹಿತ್ ಶರ್ಮ ಕೂಡ ಪಂದ್ಯದಲ್ಲಿ ಕಣಕ್ಕಿಳಿಯುವ ಸಾಧ್ಯತೆ ಇತ್ತು. ಆದರೆ ಅವರೂ ಹೊರಗುಳಿದರು.

ಮಹಿಳಾ ವಿಶ್ವಕಪ್‌ಗೆ ಭಾರತ ತಂಡ ಪ್ರಕಟ | ರಾಧಾ ಯಾದವ್‌ಗೆ ಅವಕಾಶ | ತಂಡಕ್ಕೆ ಮರಳಿದ ಕನ್ನಡತಿ ಶ್ರೇಯಾಂಕಾ ಪಾಟೀಲ್

ಭಾಟಿಯಾ, ನಂದಿನಿ ಶರ್ಮ ಆಯ್ಕೆ!

•ಮುಂಬೈ: ಭಾರತದ ಯುವ ಪ್ರತಿಭೆಗಳಾದ ಯಸ್ತಿಕಾ ಭಾಟಿಯಾ, ನಂದಿನಿ ಶರ್ಮ ಮತ್ತು ರಾಧಾ ಯಾದವ್ ಐತಿಹಾಸಿಕ ಟಿ20 ವಿಶ್ವಕಪ್ ಪಂದ್ಯಾವಳಿ ಆಡುವುದಕ್ಕೆ ಸಜ್ಜಾಗಿದ್ದಾರೆ. ಮಹಿಳೆಯರ ವಿಶ್ವಕಪ್ ಪಂದ್ಯಾವಳಿಗೆ ವೇದಿಕೆ ಸಿದ್ಧವಾಗುತ್ತಿದ್ದು, ಭಾರತ ಶನಿವಾರದಂದು ತಂಡ ಪ್ರಕಟಿಸಿತು.

ಇಂಗ್ಲೆಂಡಿನಲ್ಲಿ ನಡೆಯಲಿರುವ ಪಂದ್ಯಾವಳಿಗಾಗಿ ಭಾರೀ ಸಿದ್ಧತೆಗಳು ನಡೆಯುತ್ತಿವೆ. ಹೀಗಿರುವಾಗ ಭಾರತ ಬಲಿಷ್ಠ ತಂಡವನ್ನು ಪ್ರಕಟಿಸಿದೆ. ಹರ್ಮನ್‌ಪ್ರೀತ್ ಕೌರ್ ತಂಡದ ನಾಯಕತ್ವ ವಹಿಸಿದ್ದು, ಸ್ಮೃತಿ ಮಂಧಾನಗೆ ಉಪನಾಯಕತ್ವದ ಜವಾಬ್ದಾರಿ ಸಿಕ್ಕಿದೆ. ಉಳಿದಂತೆ ಈ ತಂಡದಲ್ಲಿ ನಿರೀಕ್ಷಿತ ಹೆಸರುಗಳೇ ಸೇರಿವೆ. ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಸಂಚಲನ ಮೂಡಿಸಿದ್ದ ಯಸ್ತಿಕಾ ಭಟಿಯಾಗೆ ಅವಕಾಶ ನೀಡ ಲಾಗಿದೆ. ಇದು ಅವರ ಮೊದಲನೇ ವಿಶ್ವಕಪ್. ವೇಗಿ ರಾಧಾ ಯಾದವ್ ಅವರಿಗೂ ಅವಕಾಶ ನೀಡಲಾಗಿದೆ. ಮಹಿಳಾ ಪ್ರೀಮಿಯರ್ ಲೀಗ್ ಸೇರಿದಂತೆ ವಿವಿಧ ಪಂದ್ಯಗಳಲ್ಲಿ ಅವರು ಮಿಂಚಿದ್ದರು. ಇನ್ನು ಈ ಬಾರಿಯ ಡಬ್ಲ್ಯುಪಿಎಲ್‌ನಲ್ಲಿ ಸಂಚಲನ ಮೂಡಿಸಿರುವ ನಂದಿನಿ ಶರ್ಮ ಅವರಿಗೂ ಅವಕಾಶ ನೀಡಲಾಗಿದೆ.

ಜೂನ್ 12ಕ್ಕೆ ಶುರು: 2026 ರ ಮಹಿಳಾ ಟಿ20 ವಿಶ್ವಕಪ್‌ಗೆ ಇಂಗ್ಲೆಂಡ್ ಆತಿಥ್ಯವಹಿಸುತ್ತಿದ್ದು, ಈ ಪಂದ್ಯಾವಳಿ ಜೂನ್ 12 ರಂದು ಪ್ರಾರಂಭವಾಗಲಿದ್ದು, ಜುಲೈ 5 ರಂದು ನಡೆಯಲಿರುವ ಫೈನಲ್ ಪಂದ್ಯದೊಂದಿಗೆ ಅಂತ್ಯವಾಗಲಿದೆ. ಈ ಮಹಿಳಾ ವಿಶ್ವಕಪ್‌ನಲ್ಲಿ ಒಟ್ಟು 12 ತಂಡಗಳು ಭಾಗವಹಿಸಲಿದ್ದು, ತಲಾ 6 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ಪಂದ್ಯಾವಳಿಯಲ್ಲಿ ಒಟ್ಟು 33 ಪಂದ್ಯಗಳು ನಡೆಯಲಿವೆ.



ಭಾರತ ಟಿ20 ವಿಶ್ವಕಪ್ ತಂಡ

ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂಧಾನ, ಜೆಮಿಮಾ ರಾಡ್ರಿಗ್ಸ್, ಶಫಾಲಿ ವರ್ಮಾ, ಭಾರತಿ ಫುಲ್ಮಾಲಿ, ದೀಪ್ತಿ ಶರ್ಮ, ರಿಚಾ ಘೋಷ್, ಶ್ರೀ ಚರಣಿ, ಯಸ್ತಿಕಾ ಭಾಟಿಯಾ, ನಂದಿನಿ ಶರ್ಮ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ಕ್ರಾಂತಿ ಕೌಡ್, ಶ್ರೇಯಾಂಕ ಪಾಟೀಲ್, ರಾಧಾ ಯಾದವ್.

ಭಾರತದ ಪಂದ್ಯಗಳು

ಪಂದ್ಯಾವಳಿಯಲ್ಲಿ ಭಾರತ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಈ ಗುಂಪಿನಲ್ಲಿ ಭಾರತವನ್ನು ಹೊರತುಪಡಿಸಿ ದಕ್ಷಿಣ ಆಫ್ರಿಕಾ, ಪಾಕಿಸ್ತಾನ, ಬಾಂಗ್ಲಾದೇಶ, ನೆದರ್ಲೆಂಡ್ಸ್ ಮತ್ತು ಆಸ್ಟ್ರೇಲಿಯಾ ತಂಡಗಳು ಸೇರಿವೆ. ಭಾರತೀಯ ಮಹಿಳಾ ತಂಡ ಜೂನ್ 14 ರಂದು ಪಾಕಿಸ್ತಾನವನ್ನು ಎದುರಿಸುವ ಮೂಲಕ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ. ನಂತರ ಜೂನ್ 17 ರಂದು ನೆದರ್ಲೆಂಡ್ಸ್, ಜೂನ್ 21 ರಂದು ದಕ್ಷಿಣ ಆಫ್ರಿಕಾ, ಜೂನ್ 25 ರಂದು ಬಾಂಗ್ಲಾದೇಶ ಹಾಗೂ ಜೂನ್ 28 ರಂದು ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಕೇಂದ್ರ ಸಚಿವ ಡಾ.ಮನ್ಸುಖ್ ಮಾಂಡವಿಯ ಭರವಸೆ

ಒಲಿಂಪಿಕ್ಸ್ ಆಯೋಜನೆಗೆ ಸನ್ನದ್ಧ

•ವೀರಾಜಪೇಟೆ: 2032ರ ಒಲಿಂಪಿಕ್ಸ್ ಆಯೋಜಿಸಲು ಭಾರತ ಸನ್ನದ್ಧವಾಗಿದೆ. ಈ ಮಹತ್ವದ ಯೋಜನೆಗೆ ನಮ್ಮ ಸರ್ಕಾರ ಯೋಜನೆ ಹಾಕಿಕೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವಿಯ ತಿಳಿಸಿದರು. ಕೊಡಗು ಜಿಲ್ಲೆಯ ನಾಪೋಕ್ಲುವಿನಲ್ಲಿ ಆಯೋಜಿತ 26ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಫೈನಲ್ ಪಂದ್ಯಾಟದ ಸಭಾ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

ಕ್ರೀಡಾ ಅಕಾಡೆಮಿಗೆ ನೆರವು: ಕೊಡಗಿನಲ್ಲಿ ಕ್ರೀಡಾ ಬೆಳವಣಿಗೆಗೆ ಕೇಂದ್ರ ಕ್ರೀಡಾ ಇಲಾಖೆ ಎಲ್ಲಾ ರೀತಿಯ ಸಹಕಾರ ನೀಡಲಿದೆ. ಜಿಲ್ಲೆಯಲ್ಲಿ ಹಾಕಿ ಅಕಾಡೆಮಿ ಸ್ಥಾಪಿಸಿದರೆ ಕೇಂದ್ರ ಸರ್ಕಾರ ಎಲ್ಲಾ ಸೌಲಭ್ಯ ನೀಡಲು ಬದ್ಧವಾಗಿದೆ ಎಂದರು.

> **ಕೊಡವ ಕೌಟುಂಬಿಕ ಹಾಕಿ ಮೂಲಕ ಕೊಡವ ಸಮುದಾಯದ ಸೌಹಾರ್ದತೆ ಹೆಚ್ಚಾಗಿದೆ. ದೇಶದಲ್ಲಿಯೇ ಈ ಪಂದ್ಯಾಟ ಗಮನ ಸೆಳೆದಿದೆ.**
> ■ **ಯದುವೀರ್ ಒಡೆಯರ್, ಸಂಸದ**



ಕ್ರೀಡಾ ಕೌಶಲದ ಮೇಲೆ ಗಮನವಿಡಿ

ಕ್ರೀಡೆಯನ್ನು ಕ್ರೀಡಾಪಟುಗಳ ಉತ್ತೇಜನಕ್ಕೆ ಬಳಸಬೇಕೇ ವಿನಹ ರಾಜಕೀಯಕ್ಕೆ ಬಳಸಬಾರದು ಎಂದು ಅಭಿಪ್ರಾಯಪಟ್ಟ ಅವರು, ಗ್ರಾಮೀಣ ಪ್ರದೇಶ ಸೇರಿದಂತೆ ಭಾರತದ ಕ್ರೀಡಾ ಪ್ರತಿಭೆಗಳನ್ನು ಬೆಳಕಿಗೆ ತರುವಲ್ಲಿ ಎಲ್ಲರೂ ಒಗ್ಗೂಡಬೇಕು. ಪ್ರತಿಭೆ ಎಂಬುದನ್ನು ಗೋಲುಗಳ ಆಧಾರದಲ್ಲಿ ಪರಿಗಣಿಸದೆ, ಕ್ರೀಡಾ ಕೌಶಲ್ಯದ ಆಧಾರದಲ್ಲಿ ಗಮನಿಸಬೇಕೆಂದು ಕಿವಿಮಾತು ಹೇಳಿದರು.

ಇಂದು 2 ಪಂದ್ಯ | ಪಂಜಾಬ್-ಗುಜರಾತ್ ಸೆಣಸಾಟ

ಕೆಕೆಆರ್ vs ಹೈದರಾಬಾದ್

•ಹೈದರಾಬಾದ್: ಸತತ ಸೋಲುಗಳಿಂದ ಹೊರಬಂದಿರುವ ಕೆಕೆಆರ್ ಹಾಗೂ ಗೆಲುವಿನ ಗೂಡು ಕಟ್ಟಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ವೀಕೆಂಡ್ ಸೂಪರ್ ಕದನದ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದರೆ, ಗೆಲುವಿನ ನಾಗಾಲೋಟ ನಡೆಸಿರುವ ಪಂಜಾಬ್ ಕಿಂಗ್ಸ್ ಹಾಗೂ ಗುಜರಾತ್ ಟೈಟಾನ್ಸ್ ತಂಡಗಳು ಎರಡನೇ ಪಂದ್ಯದಲ್ಲಿ ಸೆಣಸಲಿವೆ.

ಐಪಿಎಲ್ ರೋಚಕ ಹಂತಕ್ಕೆ ತಲುಪಿದೆ. ಟೇಬಲ್‌ನ ಅಗ್ರ ನಾಲ್ಕು ಸ್ಥಾನಗಳಿಗಾಗಿ ಹೊಡೆದಾಟ ಜೋರಾಗಿದೆ. ಮೊದಲಾರ್ಧದ ಪಂದ್ಯಾವಳಿಯಲ್ಲಿ ಮೂರನಾಲ್ಕು ತಂಡಗಳು ಗೆಲ್ಲುತ್ತಾ ಬಂದರೆ ಕೆಳಗಿನ ಐದಾರು ತಂಡಗಳು ಸೋಲುತ್ತಾ ಹೋಗಿದ್ದವು. ಆದರೆ ಎರಡನೇ ಹಂತದ ಪಂದ್ಯಗಳಲ್ಲಿ ಹೈದರಾಬಾದ್, ಗುಜರಾತ್ ಅಂಥ ತಂಡಗಳು ಭರ್ಜರಿ ಪ್ರದರ್ಶನ ನೀಡುತ್ತಿವೆ. ಅಳಿವು ಮತ್ತು ಉಳಿವು ಹೋರಾಟದಲ್ಲಿರುವ ಕೆಕೆಆರ್‌ಗೆ ಎಲ್ಲಾ ಪಂದ್ಯವೂ ಕೊನೆಯ ಅವಕಾಶ. ಅಪ್ಪಿತಪ್ಪಿ ಒಂದು ಪಂದ್ಯದಲ್ಲಿ ಸೋತರೆ ಟ್ರೋಫಿ ಆಸೆ ಬದಿಗಿಡಬೇಕು. ಇತ್ತ ಹೈದರಾಬಾದ್ ಮೂರನೇ ಸ್ಥಾನದಲ್ಲಿ ಸ್ವಸ್ಥವಾಗಿದೆ. ರಾಜಸ್ಥಾನ ಕಳೆದ ಪಂದ್ಯದಲ್ಲಿ ಸೋತಿರುವುದು ಮೇಲಿನ ಇನ್ನೊಂದು ಸ್ಥಾನದ ಮೇಲೆ ವಿವಿಧ ತಂಡಗಳ ಕಣ್ಣು ಬಿದ್ದಿದೆ. ಹೀಗಿರುವಾಗ ಭಾನುವಾರದ ಪಂದ್ಯಗಳು ಪ್ರಮುಖ ಪಾತ್ರ ವಹಿಸಲಿವೆ.

ಕೆಕೆಆರ್-ಹೈದರಾಬಾದ್: ಮೊದಲಾರ್ಧದ ಎಲ್ಲಾ ಪಂದ್ಯಗಳನ್ನು ಸೋತಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಹಿಂದಿನ ಎರಡೂ ಪಂದ್ಯಗಳಲ್ಲಿ ಗೆದ್ದಿದೆ. ಇತ್ತ ಹೈದರಾಬಾದ್ ತನ್ನ ಹಳಿ ಹಿಡಿದಿರುವುದು ರೋಮಾಂಚನಕಾರಿ. ಕಳೆದ 3 ಪಂದ್ಯಗಳಲ್ಲಿ ಹೈದರಾಬಾದ್‌ಗೆ ಸೋಲೇ ಇಲ್ಲ. ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಲಯಕ್ಕೆ ಮರಳಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ಇಶಾನ್ ಕಿಶನ್, ನಿತಿಶ್ ಕುಮಾರ್ ರೆಡ್ಡಿ ಅಂಥವರು ಬಲಿಷ್ಠಗೊಳಿಸಿದ್ದಾರೆ. ಇತ್ತ ಕೆಕೆಆರ್ ಪರ ರಿಂಕು ಸಿಂಗ್ ಮಾತ್ರವೇ ಲಯದಲ್ಲಿದ್ದಾರೆ. ಆರಂಭಿಕರಾದ ಸೈಫರ್ಟ್, ಫಿನ್ ಹಾಗೂ ಅಜಿಂಕ್ಯಾ ಕಳಪೆ ಪ್ರದರ್ಶನ ನೀಡಿರುವುದು ಹಿನ್ನಡೆ ತಂದಿದೆ. ಗ್ರೀನ್, ರಮಣದೀಪ್ ಕೂಡ ಲಯದ ಹುಡುಕಾಟದಲ್ಲಿದ್ದಾರೆ. ಹೈದರಾಬಾದ್ ಬೌಲಿಂಗ್ ಪಡೆಯತ್ತ ಕಣ್ಣಿಟ್ಟರೆ, ನಾಯಕ ಪ್ಯಾಟ್ ಕಮ್ಮಿನ್ಸ್ ಬಲ ತಂದಿದ್ದಾರೆ. ಪ್ರಫುಲ್ ಹಿಂಗೆ, ಹುಸೈನ್, ಶಿವಾಂಗ್ ಕುಮಾರ್ ಕೂಡ ಉತ್ತಮ ಪ್ರದರ್ಶನ ನೀಡಿದ್ದಾರೆ. ಕೆಕೆಆರ್ ಪರ ವೈಭವ್ ಆರೋರಾ ದುಬಾರಿಯಾದರೆ, ಸುನಿಲ್ ನರೈನ್, ಕಾರ್ತಿಕ್ ತ್ಯಾಗಿ ಮಿಂಚಿದ್ದಾರೆ.

ಪಿಚ್ ರಿಪೋರ್ಟ್

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಂಗ್‌ಗೆ ಬಲ ನೀಡುವ ಪಿಚ್ ಇದಾಗಿದ್ದು, ಹೆಚ್ಚಿನ ಬೌನ್ಸ್ ಸ್ಫೋಟಕ ಬ್ಯಾಟರ್‌ಗಳಿಗೆ ಅನುವು ಮಾಡಿಕೊಡಲಿದೆ. ಹಿಂದಿನ ಪಂದ್ಯಗಳಲ್ಲಿ 200ಕ್ಕೂ ಹೆಚ್ಚು ರನ್ ಬಂದಿದ್ದವು. ಆದಾಗ್ಯೂ ಪಿಚ್‌ನಲ್ಲಿ ಹೆಚ್ಚಿನ ಸ್ವಿಂಗ್ ಇರುವುದು ವೇಗಿಗಳಿಗೆ ಲಾಭ ತರಲಿದೆ.



ಪಂಜಾಬ್-ಗುಜರಾತ್

ಎರಡನೇ ಪಂದ್ಯ ಕುತೂಹಲ ಮೂಡಿಸಿದೆ. ಎರಡು ಲಯದಲ್ಲಿರುವ ತಂಡಗಳು ಎದುರಾಗುತ್ತಿವೆ. ಪಂಜಾಬ್ ತಂಡದಲ್ಲಿ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಮತ್ತು ಸ್ಟೋನಿಸ್ ಅಂಥ ಬ್ಯಾಟರ್‌ಗಳಿದ್ದಾರೆ. ಎಲ್ಲರೂ ಲಯದಲ್ಲಿರುವುದು ತಂಡದ ಶಕ್ತಿ. ಇತ್ತ ಗುಜರಾತ್‌ನಲ್ಲಿ ಶುಭಮನ್ ಗಿಲ್ ತಮ್ಮ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಸಾಯಿ ಸುದರ್ಶನ್, ಜಾಸ್ ಬಟ್ಲರ್ ಅಬ್ಬರಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ರಾಹುಲ್ ಟೇವಾಟಿಯ ಉತ್ತಮ ಬ್ಯಾಟಿಂಗ್ ಮಾಡಿರುವುದು ವಿಶ್ವಾಸ ಹೆಚ್ಚಿಸಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪಂಜಾಬ್ ತಂಡದ ಪ್ರಮುಖ ವೇಗಿ ಅರ್ಷದೀಪ್ ಸಿಂಗ್ ದುಬಾರಿಯಾಗಿದ್ದರೆ, ಬಾರ್ಟ್‌ಲೆಟ್, ಯಾನ್ಸನ್ ಕೂಡ ಅಷ್ಟೊಂದು ಪರಿಣಾಮಕಾರಿ ಪ್ರದರ್ಶನ ನೀಡಿಲ್ಲ. ಈ ನಡುವೆ ಸ್ಪಿನ್ನರ್ ಯಜುವೇಂದ್ರ ಚಹಲ್ ಕೂಡ ಅಲ್ಪ ದುಬಾರಿಯಾದರೂ ವಿಕೆಟ್ ಪಡೆದಿದ್ದಾರೆ. ಇತ್ತ ಗುಜರಾತ್ ಪರ ಅರ್ಷದ್ ಖಾನ್, ರಬಾಡ ಲಯದಲ್ಲಿದ್ದಾರೆ. ಸಿರಾಜ್ ಕೂಡ ಕರಾರುವಾಕ್ ದಾಳಿ ನಡೆಸಿರುವುದು ತಂಡಕ್ಕೆ ಬಲ. ಸ್ಪಿನ್ ವಿಭಾಗದಲ್ಲಿ ಮಾನವ್ ಸುಥರ್, ರಶೀದ್ ಖಾನ್ ಮಿಂಚಲು ಸಜ್ಜಾಗಿದ್ದಾರೆ.

ಪಿಚ್:

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಈ ಬಾರಿ ಬೌಲರ್‌ಗಳಿಗೆ ಸಹಾಯ ಮಾಡುತ್ತಿದೆ. ಕಳೆದ ಪಂದ್ಯಗಳಲ್ಲಿ ಕಡಿಮೆ ಸ್ಕೋರ್‌ಗಳಾಗಿದ್ದವು. ಸ್ಪಿನ್ನರ್‌ಗಳಿಗೆ ಅನುವು ಮಾಡಿಕೊಟ್ಟಿದೆ. ಬಿರುಸಿನ ಬ್ಯಾಟಿಂಗ್ ಮಾಡಲಾಗುವುದಿಲ್ಲ, ಹೆಚ್ಚಿನ ಬೌನ್ಸ್, ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇರಲಿದೆ.

ಪಂದ್ಯಗಳ ವಿವರ

ಹೈದರಾಬಾದ್-ಕೆಕೆಆರ್
ಯಾವಾಗ: ಭಾನುವಾರ, ಎಲ್ಲಿ: ಹೈದರಾಬಾದ್, ಸಮಯ: ಮಧ್ಯಾಹ್ನ 3:30

ಪಂಜಾಬ್-ಗುಜರಾತ್
ಯಾವಾಗ: ಭಾನುವಾರ, ಎಲ್ಲಿ: ಅಹಮದಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

---

226 ರನ್ ಪೇರಿಸಿದ ಕ್ಯಾಪಿಟಲ್ಸ್ | ಮತ್ತೆ ರಾಹುಲ್ ಅಬ್ಬರ | ಮಿಂಚಿದ ನಿಸ್ಸಂಕಾ

ಜೈಪುರದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ದರ್ಬಾರ್

•ಜೈಪುರ: ಕೆ.ಎಲ್. ರಾಹುಲ್ ಹಾಗೂ ನಿಸ್ಸಂಕಾ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ 226 ರನ್ ಗುರಿ ಮುಟ್ಟಿರುವ ದಿಲ್ಲಿ ಕ್ಯಾಪಿಟಲ್ಸ್ ಸೋಲಿನ ಸರಪಳಿಯಿಂದ ಹೊರಬಂದಿತು.

ರಿಯಾನ್ ಪರಾಗ್ ಹಾಗೂ ಫೇರೆರಾ ಅವರ ಬ್ಯಾಟಿಂಗ್‌ನೊಂದಿಗೆ ದೊಡ್ಡ ಸ್ಕೋರ್ ನಿರ್ಮಿಸಿದ್ದ ರಾಜಸ್ಥಾನ ಸೋಲನುಭವಿಸಿದೆ. ಐಪಿಎಲ್ ಇತಿಹಾಸದಲ್ಲಿ ದಿಲ್ಲಿ ಪೇರಿಸಿದ ಅತಿ ಹೆಚ್ಚು ಮೊತ್ತ ಇದಾಗಿದೆ. ಟಾಸ್ ಗೆದ್ದ ರಾಜಸ್ಥಾನ ಬ್ಯಾಟಿಂಗ್ ಗಿಳಿಯಿತು. ರಿಯಾನ್ ಪರಾಗ್(90; 50ಎ, 8ಬೌ, 5ಸಿ), ಫರೇರಾ(47; 14ಎ, 2 ಬೌ, 6ಸಿ) ಅವರ ಆಸರೆ ಪಡೆದು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿತು. ದಿಲ್ಲಿ ಪರ ಮಿಚೆಲ್ ಸ್ಟಾರ್ಕ್ (4-0-40-3) ಮಿಂಚಿದರು. ಗುರಿ ಬೆನ್ನತ್ತಿದ ಕ್ಯಾಪಿಟಲ್ಸ್ ಕೆ.ಎಲ್. ರಾಹುಲ್(75; 40ಎ, 6ಬೌ, 5ಸಿ), ಪಾಥುಮ್ ನಿಸ್ಸಂಕಾ (62; 33ಎ, 6ಬೌ, 3ಸಿ) ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ 19.1 ಓವರ್‌ಗಳಲ್ಲಿ ಗುರಿ ಮುಟ್ಟಿತು. ನಿತೀಶ್ ರಾಣಾ ಕೂಡ ಮಿಂಚಿದರು.

ಕ್ಯಾಪಿಟಲ್ಸ್ ಕಂಬ್ಯಾಕ್: ದಿಲ್ಲಿ ಕ್ಯಾಪಿಟಲ್ಸ್ ದೊಡ್ಡ ಸ್ಕೋರ್ ನಿರ್ಮಿಸಿದ್ದಾರೂ ಪಂಜಾಬ್ ವಿರುದ್ಧ ಸೋತಿತ್ತು. ಮುಂದಿನ ಪಂದ್ಯದಲ್ಲಿ ಭಾರೀ ಬ್ಯಾಟಿಂಗ್ ವೈಫಲ್ಯದಿಂದಾಗಿ 75 ರನ್ ಮಾತ್ರಕ್ಕೆ ಪತಕಗೊಂಡಿತ್ತು. ರಾಜಸ್ಥಾನ ವಿರುದ್ಧ ಮತ್ತೆ ಪುಟಿದೆದ್ದಿದೆ. ಗುರಿ ಬೆನ್ನತ್ತುವಾಗ ಕೆ.ಎಲ್. ರಾಹುಲ್ ಅಬ್ಬರ ಶುರುವಾಯಿತು. ಅವರಿಗೆ ಪಾಥುಮ್ ನಿಸ್ಸಂಕಾ ಸಾಥ್ ಕೊಟ್ಟರು. ನಿಸ್ಸಂಕಾ ವಿಕೆಟ್ ಬಿದ್ದಾಗ ರಾಹುಲ್ ಜೊತೆಗೆ ನಿತೀಶ್ ನಿಂತರು. ಒಟ್ಟಿನಲ್ಲಿ ರಾಹುಲ್ ಪಂದ್ಯದ ಹೀರೋ. ನಿಸ್ಸಂಕಾ ಗೆಲುವಿನಲ್ಲಿ ಮಿಂಚಿದರು. ಇತ್ತ ಮೊದನೇ ಇನ್ನಿಂಗ್ಸ್‌ನಲ್ಲಿ ರಿಯಾನ್ ಪರಾಗ್ ಉತ್ತಮ ಬ್ಯಾಟಿಂಗ್ ಮಾಡಿದರು. ಕುಸಿದ ಆರ್‌ಆರ್‌ಗೆ ಆಸರೆಯಾದ ಅವರು, 90 ರನ್ ಗಳಿಸಿ ಹೋರಾಡಿದರು. ಮೂರನೇ ಕ್ರಮಾಂಕದಲ್ಲಿ ಬಂದಿದ್ದ ಧ್ರುವ್ ಜುರೇಲ್ 42 ರನ್ ಗಳಿಸಿದರು. ಕೊನೆಯಲ್ಲಿ ಫೆರೇರಾ ಅಬ್ಬರದೊಂದಿಗೆ ದಿಲ್ಲಿ ದೊಡ್ಡ ಸ್ಕೋರ್ ನಿರ್ಮಿಸಿತು.


ದಿಲ್ಲಿ ಮೇಲುಗೈ: ರಾಜಸ್ಥಾನ ಪವರ್‌ಪ್ಲೇನಲ್ಲಿ 56/2 ಗಳಿಸಿದರೆ, ದಿಲ್ಲಿ 70 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ರಿಯಾನ್ ಆಸರೆ ಪಡೆದ ರಾಜಸ್ಥಾನ 106 ರನ್ ಗಳಿಸಿತ್ತು. ಇತ್ತ ದಿಲ್ಲಿ ಒತ್ತಡ ರಹಿತ ಬ್ಯಾಟಿಂಗ್ ಮತ್ತು ರಾಹುಲ್ ಅವರ ವಿಸ್ಮಯದೊಂದಿಗೆ 114/3 ಗಳಿಸಿತು. ಡೆತ್ ಓವರ್‌ನಲ್ಲಿ ಫರೇರಾ ಆರ್ಭಟದೊಂದಿಗೆ ರಾಜಸ್ಥಾನ 63 ರನ್ ಗಳಿಸಿತು. ದಿಲ್ಲಿ 42 ರನ್ ಮಾತ್ರವೇ ಗಳಿಸಬೇಕಿತ್ತು. ರಾಹುಲ್ ಆಟದ ನಂತರ ಸ್ಟಬ್ಸ್, ಅಷುತೋಶ್ ಮತ್ತು ನಿತೀಶ್ ಮಿಂಚಿದ ನಂತರ ದಿಲ್ಲಿ ಡೆತ್ ಓವರ್ ಮುಕ್ತಾಯಕ್ಕೂ ಮುನ್ನವೇ ಪಂದ್ಯ ಗೆದ್ದಿತು. ಮುಂದಿನ ಪಂದ್ಯದಲ್ಲಿ ದಿಲ್ಲಿ, ಚೆನ್ನೈ ತಂಡವನ್ನು, ರಾಜಸ್ಥಾನ ಲಖನೌ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 20 ಓವರ್‌ಗಳಲ್ಲಿ 225/6: ರಿಯಾನ್ 90, ಫೆರೇರಾ 42★; ಸ್ಟಾರ್ಕ್ 40/3
ದಿಲ್ಲಿ 19.1 ಓವರ್‌ಗಳಲ್ಲಿ 226/3: ರಾಹುಲ್ 75, ನಿಸ್ಸಂಕಾ 62; ಜಡೇಜಾ 33/1

ಪದಬಂಧ 5972

▸ ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಹೊಳೆ ಮತ್ತು ಸಮುದ್ರ ಸೇರಿ (5)
3.ಮಾರನಿಲ್ಲಿ ತಿರುಗಿ ಕುಳಿತಿದ್ದಾನೆ (3)
4.ವಿಶಾಲತೆ ಸೂಚಿಸುವ ಸಮುದ್ರ (3)
6.ಮನುಷ್ಯರನ್ನು ತಿನ್ನುವ ಪ್ರಾಣಿ (5)
7.ಕಳೆದುಹೋದ ಸಮಯವಿದು (4)
10.ಸುತನ ನಡುವೆ ಚೆನ್ನಾಗಿ ತಯಾರಾದದ್ದಿದೆ (4)
12.ಭಾರ-ಗಾಂಭೀರ್ಯದ ಸಮಾನಪದ (3)
13.ಕನಿಕರವಿಲ್ಲಿ ತಿರುಗಿ ಮೂಡಿದೆ (3)
15.ತಪನವಲ್ಲ-ಕೀಳುಮಟ್ಟಕ್ಕಿಳಿಯುವುದು (3)
16.ಕಣ್ಣನ್ನೆ ಕಿವಿಯಾಗುಳ್ಳ ಹಾವು (5)

ಮೇಲಿನಿಂದ ಕೆಳಕ್ಕೆ
1.ಗೌರವಪೂರ್ವಕವಾಗಿ ಬಾಗು (3)
2.ಬಟ್ಟೆ ಸ್ವಚ್ಛಗೊಳಿಸುವವನು (3)
3.ಹೊಸತು-ಬಣ್ಣ ಸೇರಿ ಸಭಾಮಂಟಪವಾಯ್ತು (4)
5.ಅಪಮಾನಿಸು-ತಿರಸ್ಕರಿಸು (4)
8.ಅಲ್ಲಿಯೇ ಜಾಗ ಭದ್ರಪಡಿಸಿಕೊ (4)
9.ಪೇಲವನಾಗಿಲ್ಲದ ರಾಮಸುತ (2)
10.ಮಾತನ್ನು ಆಡುತ್ತಿರುವುದು ಈ ದೇಹದಿಂದ (2)
11.ಹನುಮಂತನು ಸಹನೆಯಿಂದ ನೀಡಿದ ಒಪ್ಪಿಗೆ (4)
14.ಅಂತರಂಗ-ಚಿತ್ತವಿದು (2)
15.ಸಂಸ್ಕೃತದಲ್ಲಿ ಎಲೆ (2)

5971 ಉತ್ತರ

ಎಡದಿಂದ ಬಲಕ್ಕೆ:
2.ಕವನ 5.ರಕ್ಕಸ 6.ವರದ
7.ಅಂಕ 8.ಗುಣ 10.ಸೆಳೆತ
11.ತಾತ್ವಿಕ 13.ತಕರಾರು
15.ಲಾಭಹಾನಿ 17.ರುಧಿರ

ಮೇಲಿನಿಂದ ಕೆಳಕ್ಕೆ:
1.ಚರಕ 2.ಕಸಕಸೆ
3.ನವನೀತ 4.ಅಂದಣ
7.ಅಂಕಗಣಿತ
9.ಗುಲಾಬದಾನಿ
11.ತಾರುಮಾರು
12.ಕಲಾಕಾರ 14.ಕಲಿಕೆ
16.ಹಾಲಕ್ಕಿ

ಕಿರುಸುದ್ದಿ

ಶಂಕುಸ್ಥಾಪನೆ ಇಂದು

ಗದಗ: ಇಂಧನ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ತಾಲೂಕಿನ ಮುಳಗುಂದ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲಾಗುವ 2 ಗಿ 20 ಎಂ.ವಿ.ಎ 110/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಶಂಕುಸ್ಥಾಪನೆ ಸಮಾರಂಭವನ್ನು ಮುಳಗುಂದದಲ್ಲಿ ಮೇ 3 ರಂದು ಸಂಜೆ 5ಕ್ಕೆ ಹಮ್ಮಿಕೊಳ್ಳಲಾಗಿದೆ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ ಅವರುಗಳು ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಶಾಸಕ ಹಾಗೂ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ , ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ರೋಣ ಶಾಸಕ ಜಿ.ಎಸ್.ಪಾಟೀಲ, ಹು.ವಿ.ಸ.ಕಂ.ನಿ, ಅಧ್ಯಕ್ಷ ಸೈಯದ್ ಅಜೀಮಪೀರ್ ಎಸ್ ಖಾದ್ರಿ, ಹಾವೇರಿ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ , ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ಸೇರಿದಂತೆ ಇತರರು ಆಗಮಿಸುವರು.

ಜಿಲ್ಲೆಗೆ ಇಂದು ಸಚಿವರು

ಗದಗ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಮೇ 3 ರಂದು ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 11ಕ್ಕೆ ಹುಲಕೋಟಿಯಲ್ಲಿ ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿಯ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭ, ಪ್ರಮಾಣ ಸ್ವೀಕಾರ ಹಾಗೂ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 4 ರಿಂದ 5 ಗಂಟೆಯವರೆಗೆ ಹರ್ತಿ ಗ್ರಾಮದಲ್ಲಿ ಶಿವ ಪಾರ್ವತಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಯ ಪ್ರಾರಂಭೋತ್ಸವ, ಗ್ರಾಮ ಚವಡಿ ಕಟ್ಟಡ ಕಾಮಗಾರಿಯ ಭೂಮಿಪೂಜೆ, ಬಸವೇಶ್ವರ ದೇವಸ್ಥಾನದ ತಡೆಗೋಡೆ ನಿರ್ಮಾಣ ಕಾಮಗಾರಿಯ ಭೂಮಿಪೂಜೆ, ಗೌರವ ಘಟಕದ ಭೂಮಿಪೂಜೆ, ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಯ ಭೂಮಿಪೂಜೆ, ಬುದ್ಧ, ಬಸವ, ಅಂಬೇಡ್ಕರ್ ಅವರ ಜಯಂತ್ಯುತ್ಸವ ಕಾರ್ಯಕ್ರಮ, ವಾರ್ಡ್ ನಂ.3ರಲ್ಲಿ ನೂತನ ಅಂಗನವಾಡಿ ಕಟ್ಟಡದ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅದೇ ದಿನ ಸಂಜೆ 5.15ಕ್ಕೆ ಮುಳಗುಂದದಲ್ಲಿ ಜೈನ ಬಸದಿ ಅಭಿವೃದ್ಧಿ ಕಾಮಗಾರಿಯ ಭೂಮಿಪೂಜಾ ಸಮಾರಂಭ, ಮುಳಗುಂದದಲ್ಲಿ ಅಂಗನವಾಡಿ ಕೇಂದ್ರ–323 ರ ಭೂಮಿಪೂಜೆ, ಪುರದ ಬಸವೇಶ್ವರ ಸಮುದಾಯ ಭವನದ ಭೂಮಿಪೂಜೆ , 135 ಕೆವಿಯ ಕೆ.ಪಿ.ಟಿ.ಸಿ.ಎಲ್. ಗ್ರೀಡ್ ಭೂಮಿಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ನಾಗಮ್ಮ ದಂಡಿನ ನಿಧನ



ನರಗುಂದ: ಭೈರನಹಟ್ಟಿ ಗ್ರಾಮದ ನಾಗಮ್ಮ ಸೋಮಣ್ಣ ದಂಡಿನ (59) ಗುರುವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳ ಅಗಲಿದ್ದಾರೆ.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಬೆಳೆ	ಧಾರಣೆ
ಗೆಜ್ಜಿ ಶೇಂಗಾ	2450-6697
ಅಜವಾನ	9919-10300
ಆಲಸಂದಿ	2412-6237
ಕಡಲೆ	1677- 5589
ಉದ್ದು	2244-5712
ಹವೀಜ	7069-7069
ಒಣಮೆಣಸಿನಕಾಯಿ	1609-51600
ಹೆಸರು	1207-9881
ಹುರಳಿ	2844-4266
ಜೋಳ	1144-4688
ಗೋವಿನಜೋಳ	1144-1725
ಮಡಕಿ	8612-8612
ಸಾಸವಿ	3209-4819
ಕುಸುಬಿ	2009-5309
ಸೋಯಾಬಿನ	3614-4024
ಸೂರ್ಯಕಾಂತಿ	3206-6512
ತೊಗರಿ	4244-5959
ಗೋಧಿ	1599-5555
ನವನಿ ಅಕ್ಕಿ	4400-4400



ನರಗುಂದ: ತಾಲೂಕಿನ ಹದಲಿ ಗ್ರಾಮದಲ್ಲಿ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಗ್ರಾಮದಲ್ಲಿ ಪ್ರಮುಖ ಬೀದಿಯಲ್ಲಿ ಬೆಳ್ಳಿ ಕಳಸವುಳ್ಳ ರಥೋತ್ಸವವು ವಿಜೃಂಭಣೆಯಿಂದ ಜರುಗಿತು. ಶ್ರೀಶೈಲ ಭೀಕ್ಷಾವತಿ ಮಠದ ವೀರಬದ್ರ ಶಿವಾಚಾರ್ಯರು, ವಿಶ್ವನಾಥಯ್ಯ ಹಿರೇಮಠ, ದೇವಸ್ಥಾನದ ಟ್ರಸ್ಟ್ ಕಮಿಟಿಯವರು ಹಾಗೂ ಭಕ್ತರು ಇದ್ದರು.

ಭಾವೈಕ್ಯತೆಯ ಟೆಕ್ಕದ ದರ್ಗಾ ಉರುಸು

ಗಜೇಂದ್ರಗಡ: ಟಕ್ಕೇದ ದರ್ಗಾದ ಹಜರತ್ ಸೈಯದ್ ಮೆಹಬೂಬ್ ಅಲಿಶಾ ಪೀರಾಂ, ಹಜರತ್ ಸೈಯದ್ ಮಾಸುಮ್ ಅಲಿಶಾ ಪೀರಾಂ, ಹಜರತ್ ನಿಸಾರ ಅಲಿಶಾ ಪೀರಾಂ ಅವರ ಉರುಸು ವಿಜೃಂಭಣೆಯಿಂದ ನಡೆಯಿತು.

ಪ್ರತಿ ವರ್ಷವೂ ಬುದ್ಧ ಪೌರ್ಣಿಮೆ ದಿನ ದರ್ಗಾದ ಉರುಸ್ ಹಾಗೂ ದುರ್ಗಾದೇವಿ ರಥೋತ್ಸವ ನಡೆಯುತ್ತದೆ. ಪಟ್ಟಣದ ಕೆಳಗಲ ಪೇಟೆ ದುರ್ಗಾದೇವಿ ರಥೋತ್ಸವಕ್ಕೆ ದರ್ಗಾದ 8ನೇ ಪೀಠಾಧಿಪತಿ ಹಜರತ್ ನಿಜಾಮುದ್ದೀನ್ ಷಾ ಅಶ್ರಫಿ ಮಕಾನದಾರ ಅವರು ಹೂಮಾಲೆ ಹಾಕಿದ ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ದುರ್ಗಾದೇವಿ ರಥೋತ್ಸವಕ್ಕೆ ಚಾಲನೆ ದೊರಕಿದ ಬಳಿಕ ಉರುಸಿಗೆ ಹಾಗೂ ಜಾತ್ರೆಗೆ ಬಂದ ಭಕ್ತರಿಗೆ ದರ್ಗಾದಲ್ಲಿ ಅನ್ನಸಂತರ್ಪಣೆ ನಡೆಯಿತು. ಟೆಕ್ಕದ ದರ್ಗಾವು ಸುಮಾರು 500 ವರ್ಷಗಳ ಐತಿಹಾಸಿಕ ಹಿನ್ನಲೆ ಹೊಂದಿದ್ದು ಈ ಭಾಗದಲ್ಲಿ ಭಾವೈಕ್ಯತೆಯ ಕೇಂದ್ರವೆಂದೇ ಖ್ಯಾತಿ ಪಡೆದಿದೆ. ಎಲ್ಲ ಜಾತಿ ಜನಾಂಗದ ಜನರು ಈ ದರ್ಗಾಕ್ಕೆ ಆಗಮಿಸುತ್ತಾರೆ. ಅಂಜುಮನ್ ಇಸ್ಲಾಂ ಕಮಿಟಿ ನಿರ್ದೇಶಕ ದಾವಲಸಾಬ ತಾಳಿಕೋಟಿ ಮಾತನಾಡಿ, ಟೆಕ್ಕದ ದರ್ಗಾವು ಹಿಂದಿನಿಂದಲೂ ಭಾವೈಕ್ಯತೆಯನ್ನೇ ಜೀವಾಳವಾಗಿಸಿಕೊಂಡು ಬಂದಿದೆ. ಇಲ್ಲಿಗೆ ಬರುವ ಭಕ್ತರ ಕಷ್ಟಗಳಿಗೆ ಸ್ಪಂದಿಸಿ ಕಾಯಿಲೆಗಳನ್ನು ನಿವಾರಿಸುತ್ತಿದೆ. ಜಾತಿ ಪಂಥ ಎನ್ನದೇ ಎಲ್ಲರೂ ನಾವು ಒಂದೇ. ಸರ್ವೇ ಜನ ಸುಖಿನೋ ಭವಂತು ಟೆಕ್ಕದ ದರ್ಗಾದ ಅಜ್ಜನ ಪ್ರತಿ ವ್ಯಾಖ್ಯಾನದಲ್ಲೂ ಕಾಣುತ್ತಿದ್ದೇವೆ ಎಂದರು.



ಗಜೇಂದ್ರಗಡ: ಟಕ್ಕೇದ ದರ್ಗಾದ ಹಜರತ್ ಸೈಯದ್ ಮೆಹಬೂಬ್ ಅಲಿಶಾ ಪೀರಾಂ, ಹಜರತ್ ಸೈಯದ್ ಮಾಸುಮ್ ಅಲಿಶಾ ಪೀರಾಂ, ಹಜರತ್ ನಿಸಾರ ಅಲಿಶಾ ಪೀರಾಂ ಅವರ ಉರುಸು ವಿಜೃಂಭಣೆಯಿಂದ ನಡೆಯಿತು.

ವರದಕ್ಷಿಣೆಗೆ ಬಂಜಾರ ಸಮಾಜ ಕಡಿವಾಣ | 17 ತಾಂಡದ ಹಿರಿಯರಿಂದ ನಿರ್ಧಾರ

ಮದುವೆಯ ದುಂದು ವೆಚ್ಚಕ್ಕೆ ತಡೆ

ಗಜೇಂದ್ರಗಡ: ವರದಕ್ಷಿಣೆ ಎಂಬುದು ಸಮಾಜದಲ್ಲಿ ವ್ಯಾಪಕವಾಗಿ ಬೇರೂರಿರುವ ಪಿಡುಗು. ಇದರಿಂದ ಹೆಚ್ಚಾಗಿ ಮಹಿಳೆಯರು, ಹೆಣ್ಣು ಹೆತ್ತವರು ಶೋಷಣೆಗೆ ಒಳಗಾಗುತ್ತಾರೆ. ಇದನ್ನು ನಿಯಂತ್ರಿಸುವುದಕ್ಕಾಗಿ ವರದಕ್ಷಿಣೆ ನಿಷೇಧ ಅಧಿನಿಯಮ ಜಾರಿಗೆ ಬಂತಾದರು ಪಾಲನೆಯಲ್ಲಿ ಇರಲಿಲ್ಲ. ಈಚೆಗೆ ಬಂಗಾರದ ಬೆಲೆ 10 ಗ್ರಾಂಗೆ 2 ಲಕ್ಷ ರೂ. ವರೆಗೆ ತಲುಪಿದಾಗ ಹೆಣ್ಣು ಹೆತ್ತವರು ಮದುವೆ ಮಾಡುವುದು ಹೇಗೆ ಎಂಬ ಆತಂಕಕ್ಕೆ ಒಳಗಾಗಿದ್ದರು. ಆದರೆ ಈ ಪಿಡುಗನ್ನು ನಿಜವಾಗಿಯೂ ನಿವಾರಿಸಿ, ನಿಯಂತ್ರಿಸಲು ಬಂಜಾರ ಸಮಾಜದ ಹಿರಿಯರು ಮುಂದಾಗುವ ಮೂಲಕ ಇತರೇ ಎಲ್ಲಾ ಸಮಾಜದ ಗುರು ಹಿರಿಯರಿಗೆ ಮಾದರಿಯಾಗಿದ್ದಾರೆ.

ಗಜೇಂದ್ರಗಡ ತಾಲೂಕಿನ 17 ತಾಂಡಾದ ನಾಯಕ, ಕಾರಬಾರಿ, ಡಾವ್, ಗುರುಹಿರಿಯರ ಹಾಗೂ ಯುವಕರ ಸಮ್ಮುಖದಲ್ಲಿ ದಕ್ಷಿಣಕಾಶಿ ಕಾಲಕಾಲೇಶ್ವರ ದೇವಸ್ಥಾನದ ಆವರಣದಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದಕ್ಕೆ ಕಡಿವಾಣ ಹಾಕಲಾಯಿತು. ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ನಡೆದ ಸಭೆಯಲ್ಲಿ ಎಲ್ಲಾ ತಾಂಡಾದ ಗುರುಹಿರಿಯರ ಅಭಿಪ್ರಾಯಗಳನ್ನು ಪಡೆದು, ಸಾಧಕ-ಬಾಧಕಗಳನ್ನು ಚರ್ಚಿಸಲಾಯಿತು. ಸಮಾಜದ ಮೇಲೆ, ಬಡ ಕುಟುಂಬಗಳ ಮೇಲೆ, ಮಹಿಳೆಯರ ಮೇಲೆ ಹೆಣ್ಣು ಹೆತ್ತವರ ಮೇಲೆ ದುಷ್ಪರಿಣಾಮ ಬೀರುತ್ತಿದ್ದ ಆಚರಣೆಗಳನ್ನು ನಿಷೇಧಿಸುವ ನಿರ್ಧಾರವನ್ನು ಹಿರಿಯರು ಪ್ರಕಟಿಸಿದ ನಂತರ ಠರಾವು ಪಾಸ್ ಮಾಡಲಾಯಿತು.

17 ತಾಂಡಾ ಹೊರತುಪಡಿಸಿ ಇತರೇ ಜಿಲ್ಲೆಯ ತಾಂಡಾದವರು ಹೆಚ್ಚಿನ ವರದಕ್ಷಿಣೆಗೆ, ದುಂದು ವೆಚ್ಚಕ್ಕೆ ಮುಂದಾದರೆ ಹಿರಿಯರು ತಿಳಿಸಿ ಹೇಳಬೇಕು. ಅವರೂ ಇಲ್ಲಿ ಕೈಗೊಳ್ಳಲಾದ ನಿರ್ಧಾರ ಪಾಲನೆ ಮಾಡುವಂತೆ ಮನವೊಲಿಸಿ ಸಂಬಂಧಗಳನ್ನು ಬೆಳೆಸಬೇಕು. ವರದಕ್ಷಿಣೆ ಬೇಡಿಕೆ ಹಾಗೂ ಇತರೇ ವಿಷಯಗಳ ಬಗ್ಗೆ ಇಲ್ಲಿ ಕೈಗೊಳ್ಳಲಾದ ನಿರ್ಧಾರವನ್ನು ಯಾರಾದರು ತಿರಸ್ಕರಿಸಿದರೆ ತಾಂಡಾದ ಹಿರಿಯರು ಕೈಗೊಳ್ಳುವ ಕ್ರಮಕ್ಕೆ ಬದ್ಧರಾಗಬೇಕು ಎನ್ನುವ ಮಾತಿಗೆ ಎಂದು ಸಮ್ಮತಿ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಗಜೇಂದ್ರಗಡ ತಾಂಡಾದ ಸುರೇಶ ಸಿ. ರಾಠೋಡ, ಯಮನಪ್ಪ ಎಸ್. ರಾಠೋಡ, ಮನ್ನುನಾಯಕ ಡಿ. ರಾಠೋಡ, ದುರಗಪ್ಪ ಮಾಳೋತ್ತರ, ಶಿವಪುತ್ರಪ್ಪ ಡಿ. ಮಾಳೋತ್ತರ, ಗೋವಿಂದಪ್ಪ ಗುಗಲೋತ್ತರ, ರಾಜೂರ ತಾಂಡಾದ ತುಕಪ್ಪ ರಾಠೋಡ, ಪಡಿಯಪ್ಪ ಚವ್ಹಾಣ, ದಿಂಡೂರ ತಾಂಡಾದ ಎಸ್. ಎಸ್. ಲಮಾಣಿ, ಲಕ್ಕಲಕಟ್ಟಿ ತಾಂಡಾದ ಭೀಮಪ್ಪ ನಾಯಕ, ಬೈರಾಪುರ ತಾಂಡಾದ ಲಕ್ಷ್ಮಣ ರಾಠೋಡ, ಜನತಾ ಪ್ಲಾಟ್ ತಾಂಡಾದ ಕೃಷ್ಣಪ್ಪ ರಾಠೋಡ, ನಾರಾಯಣಪ್ಪ ಮಾಳೋತ್ತರ, ನೆಲ್ಲೂರು ತಾಂಡಾದ ಶಾಂತಪ್ಪ ರಾಠೋಡ, ಶರಣಪ್ಪ ಲಮಾಣಿ, ಸರ್ಜಾಪುರ ತಾಂಡಾದ ಮಹಾಂತೇಶ ರಾಠೋಡ, ಚಂದ್ರು ಕಾರಬಾರಿ, ಶಂಕ್ರಪ್ಪ ನಾಯಕ, ಪೋಮಪ್ಪ ಕಾರಬಾರಿ, ರುದ್ರಾಪುರ ತಾಂಡಾದ ಎಂ.ವೈ. ಮಾಳೋತ್ತರ, ತುಕಪ್ಪ ರಾಠೋಡ, ನೇಮಪ್ಪ ಮಾಳೋತ್ತರ, ಅಮರಗಟ್ಟಿ ತಾಂಡಾದ ಸಕ್ರಪ್ಪ ರಾಠೋಡ, ಕೊಡಗಾನೂರ ತಾಂಡಾದ ಕಮಲಪ್ಪ ರಾಠೋಡ, ದುರ್ಗಪ್ಪ ಮಾಳೋತ್ತರ, ಬೆಣಚಮಟ್ಟಿ ತಾಂಡಾದ ಮಂಡಲೀಕ ನಾಯಕ, ಕಾಂತಪ್ಪ ಕಾರಬಾರಿ, ನಾಗರಸಕೊಪ್ಪ ತಾಂಡಾದ ರಾಮಪ್ಪ ರಾಠೋಡ, ಶರಣಪ್ಪ ಮಾಳೋತ್ತರ ಗೌಡಗೇರಿ ತಾಂಡಾದ ಕುಮಾರ ರಾಠೋಡ, ಯಮನಪ್ಪ ಮಾಳೋತ್ತರ ಇತರರಿದ್ದರು.

ಅನೇಕ ಉಪಯುಕ್ತ ನಿರ್ಧಾರ



ವರದಕ್ಷಿಣೆಗೆ ಕಡಿವಾಣ, ಮದುವೆಗಾಗಿ ಮಾಡುವ ದುಂದು ವೆಚ್ಚಕ್ಕೆ ತಡೆ, ಮದ್ಯಪಾನ ಸೇವನೆ, ಡಿಜೆಗೆ ಸಂಪೂರ್ಣ ನಿಷೇಧ, ಮದುವೆ ಜವಳಿಗಾಗಿ, ಕಿರಾಣಿಗಾಗಿ ನೂರಾರು ಜನರು ಹೋಗದೆ 21 ಸಂಖ್ಯೆಯೊಳಗೆ ಹೋಗುವುದು, ಯಾವುದೇ ಸಣ್ಣಪುಟ್ಟ ಕಾರ್ಯಕ್ರಮಗಳಿಗೆ ದುಂದುವೆಚ್ಚದ ಊಟ ಹಾಕಿಸುವಂತಿಲ್ಲ, ಮದುಮಗಳಿಗೆ ಜೀವನೋಪಾಯಕ್ಕೆ ಬೇಕಾದ ಅಗತ್ಯ ಭಾಂಡೆ ಸಾಮಾಗ್ರಿಗಳನ್ನು ಮಾತ್ರ ಹಾಕಬೇಕು, ಹೆಣ್ಣಿನ ಮನೆಯ ಮುಂದೆ ಮದುವೆ ಮಾಡಿದರೆ ಅರ್ಧ-ಅರ್ಧ ಖರ್ಚು ಹಂಚಿಕೆ, ತಾಳಿಯಲ್ಲಿ ಗಂಡು-ಹೆಣ್ಣಿನ ಕಡೆಯವರು ಇಬ್ಬರು ಒಂದೊಂದು ತಾಳಿ ಕೊಡಿಸಬೇಕು, ತಾಳಿಗುಂಡು ಐದು ಗ್ರಾಂ ಒಳಗೆ ಇರಬೇಕು, ಸಂಪ್ರದಾಯದಂತೆ ಒಳೆಗಳನ್ನು ಮಾತ್ರ ಮಹಿಳೆಯರಿಗೆ ಕೊಡಿಸಬೇಕು ಹೀಗೆ ಅನೇಕ ಉಪಯುಕ್ತ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಅಷ್ಟೇ ಅಲ್ಲದೆ, ಹಾಡ್ ಬಕರಾ ಅಂದರೆ ವ್ಯಕ್ತಿಯೊಬ್ಬ ಸಾವನ್ನಪ್ಪಿದಾಗ ಮೂರು ದಿನದ ದಿವಸದಂದು ಮಾಡುವ ಮಾಂಸಾಹಾರಿ ಊಟನ್ನು ನಿಷೇಧಿಸಲಾಯಿತು. ಯಾವುದೇ ಸಮಾಜದವರು, ಬೀಗರು ಪ್ರಾಣಿಯನ್ನು ಬಲಿ ಕೊಡದೆ, ಕುಟುಂಬಸ್ಥರ ದುಃಖದಲ್ಲಿ ಪಾಲ್ಗೊಂಡು ಸಾಂತ್ವನ ಹೇಳುವುದು, ಧೈರ್ಯ ತುಂಬುವುದು ಹಾಗೂ ಸಾಂಪ್ರದಾಯದ ಪದ್ಧತಿಯನ್ನು ಮಾತ್ರ ಆಚರಣೆ ಮಾಡುವ ನಿರ್ಧಾರ ಕೈಗೊಳ್ಳಲಾಯಿತು. 17 ತಾಂಡಾದ ಹಿರಿಯರು ಒಪ್ಪಿಗೆ ಸೂಚಿಸಿದ ನಂತರ ಸಾಂಘಿಕವಾಗಿ ನಿರ್ಧಾರವನ್ನು ಪ್ರಕಟಿಸಲಾಯಿತು. ಆ ಬಳಿಕ ಠರಾವು ಬರೆದು ಓದಿಸಲಾಯಿತು.

ಬುದ್ಧನ ಶಾಂತಿ ಮಂತ್ರ ಜಗತ್ತಿಗೆ ಅನಿವಾರ್ಯ

ಗದಗ: ಜಗತ್ತಿನಾದ್ಯಂತ ಯುದ್ಧದ ಕಾರ್ಮೋಡಗಳು ಕವಿದಿರುವ ಇಂದಿನ ಅಕ್ಷರಶಃ ವಿಷಮ ಪರಿಸ್ಥಿತಿಯಲ್ಲಿ ಬುದ್ಧನ ಶಾಂತಿ ಮಂತ್ರ ಇಂದಿನ ಜಗತ್ತಿಗೆ ಅನಿವಾರ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಗರದಲ್ಲಿ ಬೌದ್ಧ ಸಂಸ್ಕೃತಿ ಮತ್ತು ವಿಚಾರಧಾರೆಗಳನ್ನು ಪಸರಿಸುವ ನಿಟ್ಟಿನಲ್ಲಿ 10 ಕೋಟಿ ರೂಪಾಯಿಗಳ ಭವ್ಯ , ಬುದ್ಧ ವಿಹಾರ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಿದೆ. ಆ ಪೈಕಿ 3 ಕೋಟಿ ರೂಪಾಯಿಗಳು ಬಿಡುಗಡೆಯಾಗಿ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ತಲುಪಿವೆ. ನಗರದ ಮೆಡಿಕಲ್ ಕಾಲೇಜು ಸಮೀಪವಿರುವ ಗುಡ್ಡದ ಮೇಲಿನ ಆಯಕಟ್ಟಿನ ಜಾಗದಲ್ಲಿ ಈ ವಿಹಾರ ತಲೆ ಎತ್ತಲಿದೆ. ಮುಂದಿನ ತಿಂಗಳ ಒಳಗಾಗಿ ಕಾಮಗಾರಿ ಆರಂಭವಾಗಲಿದೆ ಎಂದರು.

ವಿಧಾನ ಪರಿಷತ್ ಶಾಸಕ ಎಸ್.ವಿ. ಸಂಕನೂರು ಮಾತನಾಡಿ, ಜಗತ್ತಿನಲ್ಲಿ ಶಾಂತಿ, ಅಹಿಂಸೆ ಮತ್ತು ಮಾನವೀಯತೆ ನೆಲೆಸಲು ಭಗವಾನ್ ಬುದ್ಧನ ತತ್ವಗಳು ಅತ್ಯವಶ್ಯಕವಾಗಿದ್ದು, ಅವುಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನಿವೃತ್ತ ಉಪನ್ಯಾಸಕ ಸತೀಶ ಪಾಶಿ ಹಾಗೂ ಜೇನುಗೂಡು ಕಲಾತಂಡದ ಬಸವರಾಜ ಅಂಗಡಿ ಮಾತನಾಡಿದರು. ಬಸವರಾಜ ಅಂಗಡಿ ಮತ್ತು ಸಂಗಡಿಗರು ನಾಡಗೀತೆ ಪ್ರಸ್ತುತ ಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ಸ್ವಾಗತಿಸಿದರು. ಪ್ರೊ. ಬಾಹುಬಲಿ ಜೈನರ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಬಿ.ಇ.ಡಿ ಕಾಲೇಜುಗಳಲ್ಲಿ ಏರ್ಪಡಿಸಿದ್ದ ಭಗವಾನ ಬುದ್ಧರ ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ, ಎಸ್ಎಸ್ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮುದಾಯದ ಸಾಧಕರಿಗೆ ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ. ಆರ್. ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ.ಕೆ.ಆರ್., ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ. ಆರ್. ಮುಂಡರಗಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ ಇತರರಿದ್ದರು.



ಆ.21ರಿಂದ ವಿಶೇಷ ಲೋಕ ಅದಾಲತ್

ಗದಗ: ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಭಾರತದ ಸರ್ವೋಚ್ಚ ನ್ಯಾಯಾಲಯ ಸಮಾಧಾನ ಸಮಾರೋಹ–2026 ಎಂಬ ವಿಶೇಷ ಲೋಕ ಅದಾಲತ್‌ನ್ನು ಆ. 21, 22 ಮತ್ತು 23 ರಂದು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ಅನು ಸಿವರಾಮನ್ ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಒಟ್ಟು 4,328 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಿ ಈ ವಿಶೇಷ ಲೋಕ ಅದಾಲತ್ ಆಯೋಜಿಸಿದ್ದು, ಆಸಕ್ತಿವುಳ್ಳವರು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ನೋಂದಣಿಗೆ ಸಹ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಸುಪ್ರೀಂ ಕೋರ್ಟ್ ಪ್ರಮುಖವಾಗಿ ಬ್ಯಾಂಕಿಂಗ್ ಮತ್ತು ವಿಮಾ ಸಂಬಂಧಿತ ಪ್ರಕರಣಗಳು, ನಾಗರಿಕ ಕಾನೂನು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ಗ್ರಾಹಕ ವ್ಯಾಜ್ಯಗಳು ಮತ್ತು ರೇರಾ, ಕ್ರಿಮಿನಲ್ ಪ್ರಕರಣಗಳು, ಕೌಟುಂಬಿಕ ವಿವಾದಗಳು, ಕಾರ್ಮಿಕ ಮತ್ತು ಕೈಗಾರಿಕಾ ಕಾನೂನುಗಳು ವಿವಾದಗಳು, ಭೂಸ್ವಾಧೀನ ಮತ್ತು ಪುನರ್ವಸತಿ, ಆಸ್ತಿ ತೆರಿಗೆ, ಬಾಡಿಗೆ ನಿಯಂತ್ರಣ ಮತ್ತು ಸಾರ್ವಜನಿಕ ಆವರಣ (ತೆರವುಗೊಳಿಸುವಿಕೆ) ಕಾಯ್ದೆ, ವರ್ಗಾವಣೆ ಅರ್ಜಿಗಳು ಮತ್ತು ಸೇವಾ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಕ್ಕೆ ಗುರುತಿಸಲಾಗಿದೆ. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಒಟ್ಟು 4,328 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಲಾಗಿದ್ದು ಅದರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 1,245, ಬೆಳಗಾವಿ 517, ಕಲಬುರಗಿ 269, ವಿಜಯಪುರ 213, ಧಾರವಾಡ 188, ಬಾಗಲಕೋಟೆ 159, ಗದಗದಲ್ಲಿ 125, ಬಳ್ಳಾರಿ 109, ತುಮಕೂರು 101, ಕೊಪ್ಪಳ 98, ಹಾವೇರಿ 81, ಉಡುಪಿ 78, ಬೀದರ್ 77, ದಕ್ಷಿಣ ಕನ್ನಡ 75, ಶಿವಮೊಗ್ಗ 69, ರಾಯಚೂರು 69, ಚಿತ್ರದುರ್ಗ 58, ಮೈಸೂರು 56, ದಾವಣಗೆರೆ 47, ಉತ್ತರ ಕನ್ನಡ 35 ಮಂಡ್ಯ 30, ಚಿಕ್ಕಮಗಳೂರು 27, ಹಾಸನ 24, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 18, ರಾಮನಗರ 17, ಚಿಕ್ಕಬಳ್ಳಾಪುರ 17, ಕೊಡಗು 15, ಯಾದಗಿರಿ 14 ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 4 ಪ್ರಕರಣಗಳು ಒಳಗೊಂಡಿವೆ. ಕರ್ನಾಟಕದ ವ್ಯಾಪ್ತಿಯ ಹೊರಗಿನಿಂದ 36 ಪ್ರಕರಣಗಳು ವರದಿಯಾಗಿದ್ದು, ಸರಿಯಾಗಿ ಗುರುತಿಸಲಾಗದ ಪ್ರಕರಣಗಳ ಸಂಖ್ಯೆ 347 ಆಗಿದೆ. ಸುಪ್ರೀಂ ಕೋರ್ಟ್ ಈಗಾಗಲೇ ಗುರುತಿಸಲಾದ ಪ್ರಕರಣಗಳಲ್ಲಿ 937ಕ್ಕೂ ಹೆಚ್ಚು ಪ್ರಕರಣಗಳು ಸರ್ಕಾರವು ಪಕ್ಷವಾಗಿರುವ ಪ್ರಕರಣಗಳಾಗಿವೆ ಎಂದರು.

ವಿಸಿ ಮೂಲಕ ಜಿಲ್ಲೆಯಿಂದ ಮೂಲಕ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎನ್. ಶಿವನಗೌಡರ, ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ ಇದ್ದರು.

ಕಷ್ಟ-ಸುಖಗಳಲ್ಲಿ ಜೊತೆಯಾಗಿರುವ, ಸ್ವಾರ್ಥರಹಿತ, ನಂಬಿಕೆಯ ಸಂಬಂಧ ಸ್ನೇಹ

ಲಕ್ಷ್ಮೇಶ್ವರ: ಗೆಳೆತನ ಎನ್ನುವುದು ಬಹು ಅಮೂಲ್ಯವಾದ ವಸ್ತು. ಗೆಳೆತನ (ಸ್ನೇಹ) ಎಂದರೆ ಸ್ವಾರ್ಥರಹಿತ, ನಂಬಿಕೆ, ಗೌರವ ಮತ್ತು ಕಷ್ಟ ಸುಖಗಳಲ್ಲಿ ಜೊತೆಯಾಗಿರುವ ಬಾಂಧವ್ಯವಾಗಿದೆ ಎಂದು ಪಿಎಸ್ಐ ನಾಗರಾಜ ಗಡದ ಹೇಳಿದರು.

ಅವರು ಪಟ್ಟಣದಲ್ಲಿ ಸ್ನೇಹಿತೆಯರ ಬಳಗದಿಂದ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಸ್ನೇಹಿತರಾದ ಪತ್ರಕರ್ತ ದಿಗಂಬರ ಪೂಜಾರ ಮತ್ತು ಉಪತಹಶೀಲ್ದಾರ್ ರೇಣುಕಾ ದಾನಣ್ಣವರ ಅವರನ್ನು ಸನ್ಮಾನಿಸಿ ನಂತರ ಮಾತನಾಡಿದರು. ಗೆಳೆತನವು ಜೀವನಕ್ಕೆ ಬಲ ನೀಡುತ್ತದೆ. ಕಷ್ಟ-ಸುಖದಲ್ಲಿ ನಿಲ್ಲುವುದು, ಯಾವುದೇ ಅಪೇಕ್ಷೆಯಿಲ್ಲದ ಪ್ರೀತಿ ಹಂಚುವುದು ಗೆಳೆತನದ ಉದ್ದೇಶವಾಗಿರುತ್ತದೆ ಎಂದರು.

ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ ಮಾತನಾಡಿ, ಶಾಲಾ ಹಂತದಲ್ಲಿ ಮಕ್ಕಳಿಗೆ ಶಿಕ್ಷಕರು ದೊಡ್ಡವರಾದ ಮೇಲೆ ಏನಾಗುತ್ತೀಯಾ ಎಂಬ ಪ್ರಶ್ನೆಗೆ ಬಹುತೇಕರು ಡಾಕ್ಟರ್, ಇಂಜಿನಿಯರ್, ಪಿಎಸ್ಐ, ಪೊಲೀಸ್ ಹೀಗೆ ಹೇಳುತ್ತಿದ್ದರು. ಆದರೆ ಇಂದು ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತಿರುವ ದೊಡ್ಡವರನ್ನು ಇದೇ ಪ್ರಶ್ನೆ ಕೇಳಿದಾಗ ಬಹುತೇಕರರಿಂದ ಒಂದೆ ಉತ್ತರ ಬರುತ್ತದೆ ಅದು ನಾವು ಬಾಲ್ಯಾವಸ್ಥೆಗೆ ಹೋಗಬೇಕು, ನಾವು ವಿದ್ಯಾರ್ಥಿಗಳಾಗಬೇಕೆಂದು ಹೇಳುತ್ತಾರೆ, ಒಳ್ಳೆಯ ಸ್ನೇಹಿತರಿದ್ದರೆ ಯಾವುದೇ ಕಷ್ಟವನ್ನು ಸುಲಭವಾಗಿ ಎದುರಿಸಬಹುದಾಗಿದೆ ಎಂದರು.

ಅಧ್ಯಕ್ಷತೆಯನ್ನು ಬಳಗದ ಸದಸ್ಯೆ ಜಯಲಕ್ಷ್ಮೀ ಮಹಾಂತಶೆಟ್ಟರ ವಹಿಸಿದ್ದರು. ರತ್ನ ಕರ್ಕಿ, ಸುಮಿತ್ರಾ ಉಮಚಗಿ, ಉಮಾ ಮಲ್ಲಾಡದ, ಉಮೇರಾಬಾನು ಶಿರಹಟ್ಟಿ, ಗಿರಿಜಾ ಜಗಲಿ, ಮೀನಾಕ್ಷಿ ಕಳಸೂರ, ರಾಜೇಶ್ವರಿ ಕೋಲಕಾರ, ರೇಖಾ ಘೋರ್ಪಡೆ, ಚಂದ್ರಕಲಾ ವೇರ್ಣೇಕರ, ಅನಿತಾ ಮಾಗಳದ, ಪಾರ್ವತಿ ಅರಳಿ, ಪ್ರಭಾ ಶಿರೋಳ, ಸುಜಾತಾ ಹಿರೇಮಠ, ಗೌರಾ ಹಳ್ಳಿಕೇರಿ, ಪ್ರಭಾ ಕೂಡ್ಲಮಠ, ಶಕುಂತಲಾ ಕೊಟಗಿ, ಶಕುಂತಲಾ ಉಪಾಸಿ, ಯಶೋದಾ ಉಪಾಧ್ಯೆ ಸೇರಿದಂತೆ ಅನೇಕರಿದ್ದರು.



ಜಾತಿಭೇದ ಮರೆತು ಸರ್ವರೂ ಒಟ್ಟಾಗಿ ಜೀವಿಸಲಿ: ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ

ನರಗುಂದ: ಜಗತ್ತಿನ ಆಧ್ಯಾತ್ಮದ ಕೇಂದ್ರವಾದ ಭಾರತದ ಪ್ರಜೆಗಳಾದ ನಾವು ಬದುಕಿನಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಆದರ್ಶ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಪಂಚಗೃಹ ಗುಡ್ಡದ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಸರಸ್ವತಿ ನಗರದಲ್ಲಿನ ಸರಸ್ವತಿ ದೇವಿ ಮಂದಿರದ ಜಾತ್ರಾ ಮಹೋತ್ಸವದ ಪ್ರವಚನ ಮಂಗಲೋತ್ಸವದ ವೇದಿಕೆಯಲ್ಲಿ ಮಾತನಾಡಿ, ಬಡಾವಣೆಗಳಲ್ಲಿ ಜನರು ತಮ್ಮ ತಮ್ಮ ಮನೆಗಷ್ಟೇ ಸೀಮಿತವಾಗಿ ಜೀವನ ಮಾಡದೇ ಜಾತಿಭೇದ ಮರೆತು ಒಟ್ಟಾಗಿ ಜೀವನ ಮಾಡಬೇಕು ಎಂದರು.

ಬನಹಟ್ಟಿಯ ವೇ.ಮೂ ಶೇಖರಯ್ಯ ಹಿರೇಮಠ ಅವರು ಸಿದ್ಧಾರೂಢರ ಚರಿತಾಮೃತ ವಚನ ನೀಡಿದರು. ದೇವಸ್ಥಾನದ ಅಭಿವೃದ್ಧಿಗೆ ಕೊಡುಗೆ ನೀಡಿದ 20 ದಾನಿಗಳನ್ನು,12 ಎಸ್ಎಸ್ಎಲ್ಸಿ ವಿದ್ಯಾರ್ಥಿಗಳು ಮತ್ತು 6 ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಬಸವರಾಜ ಬ್ಯಾಹಟ್ಟಿ, ಸಿ.ಎಸ್. ಸಂಗಳಮಠ, ಎಸ್.ಬಿ. ಚನ್ನವೀರಗೌಡ್ರ, ಕೆ.ಎಸ್. ದೊಡಮನಿ, ಯು.ಐ. ಬದ್ನಿಕಾಯಿ, ಜಿ.ಬಿ. ತಳವಾರ, ವೈ.ಐ. ಕುಂಬಾರ, ಬಿ.ಎ. ಕುರಿ, ಎಸ್.ಬಿ. ಕರಮಡಿ, ಬಿ.ಎಸ್. ಪೂಜಾರ, ಎಸ್.ವಿ. ಅಲ್ಲಮ ಪ್ರಭುದೇವರಮಠ, ಎನ್.ಡಿ. ಕಿತ್ತೂರ, ಲಲಿತಕ್ಕ ದೊಡಮನಿ, ಎಲ್.ಬಿ. ಮಂಟೂರ, ಎಂ.ಎಸ್. ಹಿರೇಮಠ, ಪ್ರಕಾಶ ನಂದಿ, ಪ್ರಮೋದ ಪಾಟೀಲ, ಬಸವರಾಜ ಚಿಪಿಡಿ, ಸೋಮಲಿಂಗಪ್ಪ ಕಲಹಾಳ, ಎಚ್.ಡಿ. ಭಜಂತ್ರಿ, ವಿ.ಕೆ. ಹಿರೇಗೌಡ್ರ, ಆರ್.ಎಸ್. ಅಂಗಡಿ, ವಿ.ಕೆ. ತಳವಾರ, ಆರ್ .ಬಿ. ಚಿನಿವಾಲರ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದ್ದರು.



ಪ್ರಾಮಾಣಿಕತೆಯಿಂದ ಪಕ್ಷ ಸಂಘಟನೆಯಲ್ಲಿ ತೊಡಗಿ: ಪಾಟೀಲ

ರೋಣ: ಸದ್ಯದಲ್ಲಿ ಸ್ಥಳೀಯ ಸಂಸ್ಥೆ ಸೇರಿದಂತೆ ವಿಧಾನಪರಿಷತ್ ಚುನಾವಣೆಗಳು ಬರಲಿದ್ದು ಕಾಂಗ್ರೆಸ್ ಯುವಕರು ಪ್ರಾಮಾಣಿಕತೆಯಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳಬೇಕು ಎಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಹೇಳಿದರು.

ಅವರು ಶನಿವಾರ ಪಟ್ಟಣದ ಆರ್.ಎಸ್.ಪಾಟೀಲ ಜಿನ್ನಿಂಗ್ ಫ್ಯಾಕ್ಟರಿಯಲ್ಲಿರುವ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಜರುಗಿದ ಜಿಲ್ಲಾ ಮಟ್ಟದ ಯುವ ಕಾಂಗ್ರೆಸ್ ಕಾರ್ಯಕಾರಣಿ ಸಭೆ ಹಾಗೂ ಎಸ್ ಎಸ್ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ, ಆಂಗ್ಲ, ಉರ್ದು ಭಾಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ತಾಪಂ, ಜಿಪಂ, ಪುರಸಭೆ ಸೇರಿದಂತೆ ವಿಧಾನ ಪರಿಷತ್ ಚುನಾವಣೆಗಳು ಶೀಘ್ರ ಘೋಷಣೆಯಾಗುವ ಎಲ್ಲ ಲಕ್ಷಣಗಳಿದ್ದು, ಪಕ್ಷದ ಬಲವರ್ಧನೆಗೆ ಶ್ರಮಿಸಬೇಕಿದೆ. ಒಬ್ಬರ ಮೇಲೆ ಒಬ್ಬರು ಕುಂಠನೆಪಗಳನ್ನು ಹೇಳುವ ಸ್ಥಿತಿ ಹೊರಟು ಹೋಗಿದೆ. ಪಕ್ಷಕ್ಕೆ ಪ್ರಾಮಾಣಿಕತೆ ಬೇಕಿದೆ. ಪಕ್ಷದ ಅಭ್ಯರ್ಥಿ ಗೆಲುವಿಗೆ ಕಾರ್ಯಕರ್ತರು ಶ್ರಮಿಸಲಿ ಎಂದರು. ಪಕ್ಷ ಹಾಗೂ ಪಕ್ಷದ ಹಿರಿಯರು ಎಲ್ಲವನ್ನೂ ಗಮನಿಸುತ್ತಾರೆ. ಕೇವಲ ವಿಜಿಟಿಂಗ್ ಕಾರ್ಡ್‌ಗೋಸ್ಕರ ಪದಾಧಿಕಾರಿಗದಿರಿ. ಬೂತ್ ಮಟ್ಟದಲ್ಲಿ ಹೋಗಿ ಪಕ್ಷವನ್ನು ಸಂಘಟಿಸುವ ಪ್ರಾಮಾಣಿಕ ಕಾರ್ಯಕರ್ತರು ಪಕ್ಷಕ್ಕೆ ಬೇಕಾಗಿದ್ದಾರೆ. ಪದಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿ ವರ್ಷ ಸಮೀಪಿಸುತ್ತಿದ್ದರೂ ಕೆಲವರು ಸಭೆಗಳಿಗೆ ಹಾಜರಾಗುತ್ತಿಲ್ಲ, ಅಂಥವರು ಪಕ್ಷಕ್ಕೆ ಬೇಕೆ ಎಂದು ಪ್ರಶ್ನಿಸಿದ ಅವರು, ಚುನಾಯಿತರಾಗಿ ಆಯ್ಕೆಯಾಗಿದ್ದರಿಂದ ರಾಜ್ಯಾಧ್ಯಕ್ಷರ ಗಮನಕ್ಕೆ ತರಲಾಗುವುದು ಎಂದರು.

ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿವೇಕ ಯಾವಗಲ್ಲ, ರಾಜ್ಯ ಕಾರ್ಯದರ್ಶಿ ಅಕ್ಷಯ ಪಾಟೀಲ, ಮುತ್ತುರಾಜ ನವಲಗುಂದ, ಸೋಮು ನಾಗರಾಜ, ಮಹೇಶ ಕಳಸಣ್ಣವರ, ಅಸ್ಲಂ ಕೊಪ್ಪಳ, ವಿನಾಯಕ ಜಕ್ಕಣಗೌಡ್ರ, ಗೋಪಿ ರಾಯನಗೌಡ್ರ ಸೇರಿದಂತೆ ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಉಚಿತ ಆರೋಗ್ಯ ತಪಾಸಣೆ

ನರಗುಂದ: ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾಕೋತ್ತರ ಅಧ್ಯಯನ ಕೇಂದ್ರದಲ್ಲಿ ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ-1, 2 ಮತ್ತು 3, ನ್ಯಾಷನಲ್ ಕೆಡೆಟ್ ಕಾರ್ಪ್ಸ್, ರೋವರ್ ಮತ್ತು ರೇಂಜರ್ಸ್ ಘಟಕ, ರೆಡ್ ರಿಬ್ಬನ್ ಘಟಕ, ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಘಟಕ ಮತ್ತು ಕೆ.ಎಚ್ .ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಜಿಲ್ಲಾ ಆಸ್ಪತ್ರೆ, ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಉಚಿತ ಆರೋಗ್ಯ ತಪಾಸಣಾ ಮತ್ತು ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ತಾಲೂಕು ವೈದ್ಯಾಧಿಕಾರಿ ಡಾ.ರೇಣುಕಾ ಕೊರವನವರ ಉದ್ಘಾಟಿಸಿದರು.

ಪ್ರಾಂಶುಪಾಲ ಡಾ.ಆನಂದಕುಮಾರ ಎಸ್. ಲಾಲಸಂಗಿ ಮಾತನಾಡಿ, ರಕ್ತದಾನ ಮಾಡಿ ತಮ್ಮ ಆರೋಗ್ಯವನ್ನು ವೃದ್ಧಿ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಆಪ್ತ ಸಮಾಲೋಚಕ ಎಸ್.ಬಿ. ಪಾಟೀಲ, ಡಾ.ಶ್ವೇತಾ ಪಾಟೀಲ, ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಜಗದೀಶ ತಳವಾರ ಮತ್ತು ಪ್ರೊ. ಫಕೀರಬಿ ನದಾಫ್, ಆಪ್ತ ಸಮಾಲೋಚಕ ಎನ್. ಎಲ್. ಮಡಿವಾಳರ, ಎಸ್.ಬಿ. ಪಾಟೀಲ ಮತ್ತು ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಇದ್ದರು. ಡಾ.ರಾಮು ಎಂ.ಎಸ್. ನಿರೂಪಿಸಿದರು.



ಹಿಂದು ಧರ್ಮಕ್ಕೆ ಶಂಕರಾಚಾರ್ಯರ ಕೊಡುಗೆ ಅಪಾರ

ಲಕ್ಷ್ಮೇಶ್ವರ: ಶಂಕರಾಚಾರ್ಯರನ್ನು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಲ್ಲಿ ಒಬ್ಬರೆಂದು ಪರಿಗಣಿಸಲಾಗುತ್ತದೆ. ಅವರ ಅಲ್ಪಾವಧಿಯ ಜೀವಿತಾವಧಿಯಲ್ಲಿ ಹಿಂದೂ ಧರ್ಮದ ಪುನರುತ್ಥಾನಕ್ಕೆ ನೀಡಿದ ಕೊಡುಗೆಯು ಅಪಾರವಾಗಿದೆ ಎಂದು ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನೀಸ್ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಶ್ರೀ ಶಂಕರಭಾರತಿಮಠದಲ್ಲಿ ಬ್ರಹ್ಮವೃಂದ ಮತ್ತು ಶ್ರೀ ಶಂಕರ ಸೇವಾ ಸಮಿತಿ ಆಶ್ರಯದಲ್ಲಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಂಗೀತ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿದ ಸಮಾಜದ ಮಕ್ಕಳನ್ನು ಸನ್ಮಾನಿಸಿ ಮಾತನಾಡಿದರು. ಶಂಕರಾಚಾರ್ಯರರು ಜಗತ್ತಿನ ಎಲ್ಲ ಸಮಾಜದವರನ್ನು ಕೂಡಿಕೊಂಡು ಹೋಗುವ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಸಮಾಜದಲ್ಲಿ ಬಿತ್ತುವ ಕಾರ್ಯಮಾಡಿದ್ದು, ಸಮಾನತೆಯ ತತ್ವವನ್ನು ಸಾರಿ ಹೇಳಿದ್ದರು. ತಮ್ಮ ಆಳವಾದ ಅಧ್ಯಯನದಿಂದ ಚಿಕ್ಕ ವಯಸ್ಸಿನಲ್ಲಿಯೇ ಅಪಾರ ಜ್ಞಾನವನ್ನು ಸಂಪಾದಿಸಿದ್ದ ಶ್ರೀಗಳ ಕೊಡುಗೆಗಳು ಭಾರತದ ಆಧ್ಯಾತ್ಮಿಕ ಮತ್ತು ತಾತ್ವಿಕವಾಗಿ ಈ ಜಗತ್ತಿನ ಮೇಲೆ ಶಾಶ್ವತವಾದ ಪ್ರಭಾವ ಬೀರಿವೆ ಎಂದರು.

ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೃಷ್ಣ ಕುಲಕರ್ಣಿ ಮಾತನಾಡಿ, ಶಂಕರಾಚಾರ್ಯರು ಹಿಂದೂ ಧರ್ಮಕ್ಕೆ ನೀಡಿದ ಕೊಡುಗೆಗಳು ಎಲ್ಲ ಕಾಲಕ್ಕೂ ಪ್ರಸ್ತುತ. ಇಂದು ಸನಾತನ ಹಿಂದೂ ಧರ್ಮ ಇಷ್ಟೊಂದು ಬೆಳೆದು ನಿಲ್ಲಲು ಶಂಕರಾಚಾರ್ಯರು ಅಂದು ನೀಡಿದ ಕೊಡುಗೆಗಳೆ ಕಾರಣವಾಗಿದೆ. ಬ್ರಾಹ್ಮಣ ಸಮಾಜ ಇಂದು ತನ್ನದೆ ಆದ ವರ್ಚಸ್ಸು ಕಾಯ್ದುಕೊಂಡು ಬರುತ್ತಿದ್ದು ಅದನ್ನು ಬೆಳೆಸಿಕೊಂಡು ಹೋಗುವ ಕಾರ್ಯವಾಗಲಿ ಎಂದರು.

ಸಮಾಜದ ವತಿಯಿಂದ ಪಂ. ಚಿದಂಬರ ಜೋಶಿ ಅವರಿಗೆ ವಿಪ್ರ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ದಿಲೀಪ ಜೋಶಿ ದಂಪತಿ ಮತ್ತು ಶಹನಾಯಿವಾದಕ ಕೃಷ್ಣಾಜಿ ಕ್ಷತ್ರೀಯ ದಂಪತಿಯನ್ನು ಸನ್ಮಾನಿಸಲಾಯಿತು. ಸಮಾಜದ ಗುರುರಾಜ ಪಾಟೀಲಕುಲಕರ್ಣಿ, ಅರವಿಂದ ದೇಶಪಾಂಡೆ, ಧ್ರುವರಾಜ ಬೆಟಗೇರಿ, ಡಾ.ಪ್ರಸನ್ನ ಕುಲಕರ್ಣಿ, ನಾರಾಯಣಭಟ್ ಪುರಾಣಿಕ, ರಾಜಾಚಾರ್ಯ ರಾಯಚೂರ, ಎ.ಪಿ.ಕುಲಕರ್ಣಿ, ಕೃಷ್ಣಕುಮಾರ ಕುಲಕರ್ಣಿ, ದೀರೇಂದ್ರರಾಚಾರ್ಯ ರಾಯಚೂರ, ಶ್ರೀಕಾಂತ ಪೂಜಾರ, ದಿಗಂಬರ ಪೂಜಾರ, ನಾಗರಾಜ ಪೂಜಾರ ಇತರರಿದ್ದರು.



ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ

ಲಕ್ಕುಂಡಿ ವಿಶ್ವ ಪಾರಂಪರಿಕ ಪಟ್ಟಿಗೆ ಶೀಘ್ರ



ಗದಗ: ಇತಿಹಾಸ ಪ್ರಸಿದ್ಧ ಲಕ್ಕುಂಡಿಯ ಗತ ವೈಭವವನ್ನು ಕಂಡಾಗ ಬಿಸಿಲು, ಸೆಕೆ ಯಾವುದೂ ಅನಿಸದೇ, ಹೆಮ್ಮೆಯ ಭಾವನೆ ಮಾತ್ರ ಮೂಡುತ್ತದೆ. ಲಕ್ಕುಂಡಿ ವಿಶ್ವಪಾರಂಪರಿಕ ಪಟ್ಟಿಗೆ ಆದಷ್ಟು ಬೇಗ ಸೇರಲಿ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ತಾಲೂಕಿನ ಲಕ್ಕುಂಡಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 6 ಸ್ಮಾರಕಗಳ ಸಂರಕ್ಷಣೆ, ಅಭಿವೃದ್ಧಿ ಕಾಮಗಾರಿ ಶಿಲಾನ್ಯಾಸ, ದಶ ಬಾವಿ, ದಶ ದೇವಾಲಯ ಅನಾವರಣ, ಪ್ರಾಚ್ಯವಶೇಷಗಳ ಅನ್ವೇಷಣಾ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪತ್ತೆಯಾದ ಪುರಾತತ್ವ ವಸ್ತುಗಳು ಮತ್ತು ಬಂಗಾರದ ನಾಣ್ಯಗಳ ಘಟನೆ ಬಳಿಕ ಲಕ್ಕುಂಡಿ ರಾಜ್ಯದಷ್ಟೇ ಅಲ್ಲದೆ ದೇಶದ ಗಮನ ಸೆಳೆದಿದೆ. ಈ ಹಿಂದೆ ಕೇವಲ ಹಾದು ಹೋಗುವ ಸ್ಥಳವೆಂದು ಭಾವಿಸಿದ್ದ ಲಕ್ಕುಂಡಿ, ಈಗ ತನ್ನ ಐತಿಹಾಸಿಕ ಮಹತ್ವವನ್ನು ಜಗತ್ತಿಗೆ ತೋರಿಸುತ್ತಿದೆ ಎಂದು ತಿಳಿಸಿದರು.

ಸಚಿವ ಎಚ್.ಕೆ.ಪಾಟೀಲ ಅವರ ಪ್ರಯತ್ನಗಳಿಂದ ಲಕ್ಕುಂಡಿಯ ಇತಿಹಾಸ ಜನರಿಗೆ ಪರಿಚಿತವಾಗಿದ್ದು, ಈ ಕಾರ್ಯ ಎಲ್ಲರೂ ಹೆಮ್ಮೆ ಪಡುವಂತಹದ್ದು. ಲಕ್ಕುಂಡಿಯ ಶಿಲ್ಪಕಲೆ, ದೇವಾಲಯಗಳು, ಕೆರೆಗಳು ಮತ್ತು ಪ್ರಾಚೀನ ನಿರ್ಮಾಣಗಳು ಅಚ್ಚರಿ ಮೂಡಿಸುವಂತಿವೆ. ಇಂದಿನ ತಂತ್ರಜ್ಞಾನದಲ್ಲಿಯೂ ಸಾಧ್ಯವಿಲ್ಲವೆನ್ನಿಸುವ ಸೂಕ್ಷ್ಮ ಶಿಲ್ಪಗಳನ್ನು ಆಗಿನ ಕಾಲದಲ್ಲಿ ನಿರ್ಮಿಸಿರುವುದು ಅಚ್ಚರಿಯ ಸಂಗತಿ. ಇದು ನಮ್ಮ ಪೂರ್ವಜರ ಕೌಶಲ್ಯಕ್ಕೆ ಸಾಕ್ಷಿ ಎಂದು ಹೇಳಿದರು.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಎಲ್ಲರೂ ಪಕ್ಷಾತೀತವಾಗಿ ಒಟ್ಟಾಗಿ ಕೆಲಸ ಮಾಡಬೇಕು. ಲಕ್ಕುಂಡಿಯಂತಹ ಪುರಾತತ್ವ ಸಂಪತ್ತು ಪ್ರದೇಶದ ಅಭಿವೃದ್ಧಿಗೆ ದಾರಿ ತೋರಿಸಬಲ್ಲದು. ಈ ಹಿನ್ನೆಲೆಯಲ್ಲಿ ಲಕ್ಕುಂಡಿಯನ್ನು ರಾಷ್ಟ್ರಮಟ್ಟದಲ್ಲಿ ಇನ್ನಷ್ಟು ಗುರುತಿಸುವ ಕೆಲಸ ನಡೆಯಬೇಕು ಎಂದು ಹೇಳಿದರು.

ಶಾಸಕ ಸಿ.ಸಿ.ಪಾಟೀಲ, ರಾಜ್ಯ ವಿಕೇಂದ್ರಿಕಾರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ,ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಪುರಾತತ್ವ ಇಲಾಖೆ ಆಯುಕ್ತ ಎ.ದೇವರಾಜು, ಲಕ್ಕುಂಡಿ ಪ್ರಾಧಿಕಾರ ಆಯುಕ್ತ ಡಾ. ಶರಣು ಗೊಗೇರಿ, ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪ ವಿಭಾಗಾಧಿಕಾರಿ ಎಂ.ಗಂಗಪ್ಪ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ, ಸಲಹಾ ಸಮಿತಿ ಸದಸ್ಯರಾದ ಜಿ.ಸಿ. ಬೆಟಸೂರುಮಠ, ಸಿದ್ದು ಪಾಟೀಲ, ಗೀತಾಂಜಲಿ ರಾವ,ಅ. ದ. ಕಟ್ಟಿಮನಿ, ಇಒ ಎಚ್.ಎಸ್. ಜಿನಗಾ, ಪಿಡಿಒ ಅಮೀರ ನಾಯಕ ಬಸವರಾಜ ಕಡೆಮನಿ, ವಾಸಣ್ಣ ಕುರಡಗಿ ಇತರರು ಇದ್ದರು.

ಪ್ರಾಮಾಣಿಕತೆಗೆ ಶ್ಲಾಘನೆ

ಬಂಗಾರದ ನಾಣ್ಯಗಳಂತಹ ಅಮೂಲ್ಯ ವಸ್ತುಗಳನ್ನು ಸಹ ಸರ್ಕಾರಕ್ಕೆ ಒಪ್ಪಿಸುತ್ತಿರುವ ಲಕ್ಕುಂಡಿ ಜನರ ಪ್ರಾಮಾಣಿಕತೆ ಅಪರೂಪ. ಇತ್ತೀಚೆಗೆ ಲಕ್ಕುಂಡಿಯಲ್ಲಿ ಪತ್ತೆಯಾದ ಬಂಗಾರದ ಮೌಲ್ಯವನ್ನು ತಜ್ಞರು 8 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಲಕ್ಕುಂಡಿ-ಗದಗ-ಕಪ್ಪತಗುಡ್ಡ ಪ್ರವಾಸಿ ವಲಯಗಳಾಗಿ ರೂಪುಗೊಂಡಿದೆ. ಮುಖ್ಯಮಂತ್ರಿಗಳ ಬೆಂಬಲದೊಂದಿಗೆ ಲಕ್ಕುಂಡಿಯ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ಪ್ರಸ್ತಾವನೆಗಳನ್ನು ಮಂಜೂರು ಮಾಡಲಾಗುವುದು. ಲಕ್ಕುಂಡಿಯನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಬಹುದಾದ ಪುರಾತತ್ವ ಕೇಂದ್ರವನ್ನಾಗಿ ರೂಪಿಸಲು ಸರ್ಕಾರ ಬದ್ಧವಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ವೈಭವ ಅನಾವರಣಕ್ಕೆ ಸಹಕಾರ ಮುಖ್ಯ

ಗದಗ: ಎರಡು ಸಾವಿರ ವರ್ಷಗಳ ಹಿಂದಿನ ಇತಿಹಾಸವನ್ನು ಹೊತ್ತಿರುವ ಲಕ್ಕುಂಡಿಯ ಪುರಾತತ್ವ ಸಂಪತ್ತು ಇಂದಿನ ಪೀಳಿಗೆಗೆ ಅಚ್ಚರಿಯ ವಿಷಯವಾಗಿದೆ. ಆ ಕಾಲದ ಶಿಲ್ಪಿಗಳ ಪ್ರತಿಭೆ, ಶ್ರಮ ಮತ್ತು ಕಲಾತ್ಮಕತೆ ಎಷ್ಟು ಉನ್ನತ ಮಟ್ಟದಲ್ಲಿತ್ತು ಎಂಬುದಕ್ಕೆ ಇಲ್ಲಿ ದೊರೆಯುತ್ತಿರುವ ವಸ್ತುಗಳೇ ಸಾಕ್ಷಿ ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಗ್ರಾಮಸ್ಥರು ಪುರಾತತ್ವ ವಸ್ತುಗಳನ್ನು ಸ್ವಯಂ ಪ್ರೇರಿತವಾಗಿ ಸರ್ಕಾರಕ್ಕೆ ಒಪ್ಪಿಸುತ್ತಿರುವುದು ಅತ್ಯಂತ ಶ್ಲಾಘನೀಯ ಕೆಲಸ. ಹಳೆಯ ನಾಣ್ಯಗಳು, ಮುತ್ತು-ರತ್ನಗಳು ಸೇರಿದಂತೆ ಅಪರೂಪದ ವಸ್ತುಗಳನ್ನು ಸಂಗ್ರಹಿಸಿ ನೀಡುತ್ತಿರುವುದು ಲಕ್ಕುಂಡಿಯ ಮಹತ್ವವನ್ನು ರಾಜ್ಯಾದ್ಯಂತ ಹೊರ ಹಾಕುತ್ತಿದೆ ಎಂದು ತಿಳಿಸಿದರು.

ಸಚಿವ ಎಚ್.ಕೆ.ಪಾಟೀಲ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಅನ್ವೇಷಣಾ ಕಾರ್ಯಗಳು ಲಕ್ಕುಂಡಿಯನ್ನು ಮತ್ತಷ್ಟು ಪ್ರಸಿದ್ಧಿಗೊಳಿಸುತ್ತಿವೆ. ಲಕ್ಕುಂಡಿಯಲ್ಲಿ ಈಗಾಗಲೇ ಪತ್ತೆಯಾಗಿರುವ ವಸ್ತುಗಳು ಕೇವಲ ಪ್ರಾರಂಭ ಮಾತ್ರ. ಇನ್ನಷ್ಟು ಅನ್ವೇಷಣೆ ಮಾಡಿದರೆ ಹೊಸ ಲಕ್ಕುಂಡಿಯೇ ಮೂಡಿಬರುವಷ್ಟು ಪುರಾತತ್ವ ಸಂಪತ್ತು ಸಿಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಅಭಿಮಾನಿಗಳ ದಂಡು: ರಾಜೀವ್

ವಿಜಯಪುರ: ಚಿತ್ರದುರ್ಗದಲ್ಲಿ ಮೇ 9 ರಂದು ಹಮ್ಮಿಕೊಂಡ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಜಿಲ್ಲೆಯಿಂದ 18ರಿಂದ 20 ಸಾವಿರ ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಮಾಜಿ ಶಾಸಕ ಪಿ.ರಾಜೀವ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವ ವಿಷಯಕ್ಕೆ ಹೋರಾಟ ಮಾಡಿದ್ದರೂ ಅಧಿಕಾರ ಸಿಕ್ಕಾಗ ಆ ಹೋರಾಟದ ಆಶಯಗಳನ್ನು ಈಡೇರಿಸುವ ಮೂಲಕ ಧೀಮಂತವಾಗಿ ಆಡಳಿತ ನಡೆಸಿದ ಮಹಾನ್ ನೇತಾರ ಬಿ.ಎಸ್. ಯಡಿಯೂರಪ್ಪ ಅವರು ನಾಡು ಕಂಡ ಶ್ರೇಷ್ಠ ಹೋರಾಟಗಾರ. ಹೀಗಾಗಿ ಅವರನ್ನು ಹೃದಯಸ್ಪರ್ಶಿಯಾಗಿ ಅಭಿನಂದಿಸುವ ದೃಷ್ಟಿಯಿಂದ ಅಭಿಮಾನಿಗಳೆಲ್ಲರೂ ಸೇರಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮನೋತ್ಸವ ಹೆಸರಿನಲ್ಲಿ ಚಿತ್ರದುರ್ಗದಲ್ಲಿ ಅರ್ಥಪೂರ್ಣ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ ಎಂದರು.

ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಮಾತನಾಡಿ, ಬಿಜೆಪಿಯನ್ನು ಸಂಘಟನಾತ್ಮಕವಾಗಿ ಕಟ್ಟಿದ ಬಿ.ಎಸ್.ಯಡಿಯೂರಪ್ಪ ಒಂದು ಆಧಾರಸ್ತಂಭ, ಒಬ್ಬ ಅಜಾತ ಶತ್ರು. ಪ್ರತಿಯೊಬ್ಬ ಕಾರ್ಯಕರ್ತ, ಪದಾಧಿಕಾರಿಗಳು ಅಭಿಮಾನದಿಂದ ಈ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದಾರೆ. ಎಂದರು.

ಕೃಷ್ಣ ಮೇಲ್ದಂಡೆ ಬಿ ಸ್ಕೀಂ ಯೋಜನೆ, ಕೆರೆಗಳಿಗೆ ನೀರು ತುಂಬುವ ಯೋಜನೆ, ಚಿಮ್ಮಲಗಿ ಏತ ನೀರಾವರಿಗೆ ಆಡಳಿತಾತ್ಮಕ ಅನುಮೋದನೆ ಹೀಗೆ ಅವರು ಜಿಲ್ಲೆಗೆ ನೀಡಿದ ಕೊಡುಗೆ ಅನನ್ಯ. ಕೆಲವರು ಯಡಿಯೂರಪ್ಪ ಅವರ ಕೊಡುಗೆ ಜಿಲ್ಲೆಗೆ ಇಲ್ಲ ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಅವರು ಕೊಟ್ಟ ಕೊಡುಗೆ ಯಾವ ಮುಖ್ಯಮಂತ್ರಿಯೂ ನೀಡಿಲ್ಲ ಎಂದರು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಜಿಲ್ಲೆ ಪರವಾಗಿಯೂ ಅನೇಕ ಬಾರಿ ಹೋರಾಟ ಮಾಡಿದ ಬಿ.ಎಸ್ .ಯಡಿಯೂರಪ್ಪ ಅತಿವೃಷ್ಟಿ ಬಂದಾಗ ದೊಡ್ಡ ಹೋರಾಟವನ್ನು ವಿಜಯಪುರದಲ್ಲಿ ಮಾಡಿದ್ದರು. ಮಳೆಯಲ್ಲಿಯೇ ನೆನೆದುಕೊಂಡು ಹೋರಾಟ ಮಾಡಿದ ದಿಟ್ಟ ಹೋರಾಟಗಾರ ಎಂದರು.

ಕರ್ನಾಟಕ ಸಾವಯವ ಬೀಜ ಪ್ರಮಾಣ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಮಾತನಾಡಿ, ಆಟೋರಿಕ್ಷಾ, ಟಾಂಗಾ, ಬಸ್, ಸೈಕಲ್ ಮೂಲಕವೂ ಸಂಚರಿಸಿ ಬಿಜೆಪಿ ಪಕ್ಷವನ್ನು ಬೇರು ಮಟ್ಟದಿಂದ ಬೆಳೆಸಿದ ಕೀರ್ತಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ವಿಜಯಪುರ ನಗರ ಸಿಂಗಾಪೂರ ಮಾಡಿದ್ದೇನೆ ಎಂದು ಕೆಲವರು ಹೇಳುತ್ತಿದ್ದಾರೆ. ವಾಸ್ತವವಾಗಿ ವಿಜಯಪುರ ಸಿಂಗಾಪೂರದಂತೆ ಅಭಿವೃದ್ಧಿಯಾಗಲು ಬಿ.ಎಸ್.ಯಡಿಯೂರಪ್ಪ ಅವರೇ ಕಾರಣ, ಸಿಂಗಾಪೂರ ಮಾಡಿದ್ದೇನೆ ಎಂದು ಹೇಳುವವರು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.



> ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ರಾಜಕೀಯ ನಾಯಕರು ಭಾಗವಹಿಸಲಿದ್ದಾರೆ. 12ಲಕ್ಷಕ್ಕೂ ಅಧಿಕ ಜನರಿಗೆ ಊಟದ ವ್ಯವಸ್ಥೆ, ಬಿಸಿಲಿನ ಹಿನ್ನೆಲೆಯಲ್ಲಿ ವಾತಾನುಕೂಲ ರೂಪದ ಶಾಮಿಯಾನ್ ಅಳವಡಿಕೆ ಸೇರಿದಂತೆ ವಿವಿಧ ರೀತಿಯ ಸಿದ್ಧತೆಗಳು ಭರದಿಂದ ನಡೆಯುತ್ತಿವೆ.
>
> ■ **ಪಿ.ರಾಜೀವ್, ಮಾಜಿ ಶಾಸಕ**

ಬಿಜೆಪಿ ಯುವ ಮುಖಂಡ ಉಮೇಶ ಕಾರಜೋಳ ಮಾತನಾಡಿ, ಬಿ.ಎಸ್. ಯಡಿಯುರಪ್ಪನವರು ರೈತ, ಕಾರ್ಮಿಕ, ಪತ್ರಕರ್ತರು ಹೀಗೆ ಎಲ್ಲ ವರ್ಗದ ಬಗ್ಗೆಯೂ ಸಹ ಅತ್ಯಂತ ಕಾಳಜಿ ಹೊಂದಿದ ಜನನಾಯಕ ಎಂದರು.

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಮಾತನಾಡಿ, ಬಾಗಲಕೋಟೆಗೆ ಬಜೆಟ್‌ನಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ನಿರ್ಧಾರ ಪ್ರಕಟಿಸಿದರು. ಆದರೆ, ತೋಟಗಾರಿಕಾ ಬೆಳೆಗಳ ಉತ್ತೇಜನಕ್ಕೆ ಅಲ್ಲಿ ತೋಟಗಾರಿಕಾ ವಿವಿ ಬೇಕಾಗಿತ್ತು. ಈ ಕಾರಣಕ್ಕಾಗಿ ಸಚಿವನಾದ ನಾನು ಅಂದು ಸಾತ್ವಿಕ ಅಸಮಾಧಾನದಿಂದಾಗಿ ಊಟಕ್ಕೆ ಹೋಗಲಿಲ್ಲ, ಆಗ ಊಟಕ್ಕೆ ಬಾರದಿರುವ ಕಾರಣ ತಿಳಿದುಕೊಂಡ ತೋಟಗಾರಿಕಾ ವಿವಿ ಅಗತ್ಯತೆ ಮನವರಿಕೆ ಮನಗಂಡು ತೋಟಗಾರಿಕಾ ವಿವಿ ಮಂಜೂರು ಮಾಡಿದರು. ಈ ರೀತಿಯ ಬದ್ಧತೆಯನ್ನು ಬಿ.ಎಸ್ .ಯಡಿಯೂರಪ್ಪ ಹೊಂದಿದ್ದಾರೆ ಎಂದು ಬೆಳ್ಳುಬ್ಬಿ ಸ್ಮರಿಸಿದರು.

ಮಾಜಿ ಶಾಸಕರಾದ ಸಂಜಯ ಪಾಟೀಲ, ರಮೇಶ ಭೂಸನೂರ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಉಮೇಶ ಕಾರಜೋಳ, ಕಾಸುಗೌಡ ಬಿರಾದಾರ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಮದ್ಯ ಸೇವನೆ, ಡಿಜೆಗೆ ನಿಷೇಧ | ವರದಕ್ಷಿಣೆಗೆ ಕಡಿವಾಣ ಹಾಕಿದ ಬಂಜಾರ ಸಮಾಜ

17 ತಾಂಡದ ಹಿರಿಯರಿಂದ ನಿರ್ಧಾರ: ಠರಾವು ಪಾಸ್

ಗಜೇಂದ್ರಗಡ: ವರದಕ್ಷಿಣೆ ಎಂಬುದು ಸಮಾಜದಲ್ಲಿ ವ್ಯಾಪಕವಾಗಿ ಬೇರೂರಿರುವ ಪಿಡುಗು. ಇದರಿಂದ ಹೆಚ್ಚಾಗಿ ಮಹಿಳೆಯರು, ಹೆಣ್ಣು ಹೆತ್ತವರು ಶೋಷಣೆಗೆ ಒಳಗಾಗುತ್ತಾರೆ. ಇದನ್ನು ನಿಯಂತ್ರಿಸುವುದಕ್ಕಾಗಿ ವರದಕ್ಷಿಣೆ ನಿಷೇಧ ಅಧಿನಿಯಮ ಜಾರಿಗೆ ಬಂತಾದರು ಪಾಲನೆಯಲ್ಲಿ ಇರಲಿಲ್ಲ, ಈಚೆಗೆ ಬಂಗಾರದ ಬೆಲೆ 10 ಗ್ರಾಂಗೆ ರೂ.2 ಲಕ್ಷದ ವರೆಗೆ ತಲುಪಿದಾಗ ಹೆಣ್ಣು ಹೆತ್ತವರು ಮದುವೆ ಮಾಡುವುದು ಹೇಗೆ ಎಂಬ ಆತಂಕಕ್ಕೆ ಒಳಗಾಗಿದ್ದರು. ಆದರೆ, ಈ ಪಿಡುಗನ್ನು ನಿಜವಾಗಿಯೂ ನಿವಾರಿಸಿ, ನಿಯಂತ್ರಿಸಲು ಬಂಜಾರ ಸಮಾಜದ ಹಿರಿಯರು ಮುಂದಾಗುವ ಮೂಲಕ ಇತರೇ ಎಲ್ಲಾ ಸಮಾಜದ ಗುರು ಹಿರಿಯರಿಗೆ ಮಾದರಿಯಾಗಿದ್ದಾರೆ.

ಗಜೇಂದ್ರಗಡ ತಾಲೂಕಿನ 17 ತಾಂಡಾದ ನಾಯಕ, ಕಾರಬಾರಿ, ಡಾವ್, ಗುರುಹಿರಿಯರ ಹಾಗೂ ಯುವಕರ ಸಮ್ಮುಖದಲ್ಲಿ ದಕ್ಷಿಣಕಾಶಿ ಕಾಲಕಾಲೇಶ್ವರ ದೇವಸ್ಥಾನದ ಆವರಣದಲ್ಲಿ ಬುಧವಾರ ಕರೆಯಲಾಗಿದ್ದ ಸಭೆಯಲ್ಲಿ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದಕ್ಕೆ ಕಡಿವಾಣ ಹಾಕಲಾಯಿತು. ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ನಡೆದ ಸಭೆಯಲ್ಲಿ ಎಲ್ಲಾ ತಾಂಡಾದ ಗುರುಹಿರಿಯರ ಅಭಿಪ್ರಾಯಗಳನ್ನು ಪಡೆದು, ಸಾಧಕ-ಬಾಧಕಗಳನ್ನು ಚರ್ಚಿಸಲಾಯಿತು.

ಸಮಾಜದ ಮೇಲೆ, ಬಡ ಕುಟುಂಬಗಳ ಮೇಲೆ, ಮಹಿಳೆಯರ ಮೇಲೆ ಹೆಣ್ಣು ಹೆತ್ತವರ ಮೇಲೆ ದುಷ್ಪರಿಣಾಮ ಬೀರುತ್ತಿದ್ದ ಆಚರಣೆಗಳನ್ನು ನಿಷೇಧಿಸುವ ನಿರ್ಧಾರವನ್ನು ಹಿರಿಯರು ಪ್ರಕಟಿಸಿದ ನಂತರ ಠರಾವು ಪಾಸ್ ಮಾಡಲಾಯಿತು.

ಶಾಸಕ ಸ್ಥಾನದಿಂದ ವಿನಯ ಕುಲಕರ್ಣಿ ಅನರ್ಹ

ಧಾರವಾಡ: ಬಿಜೆಪಿ ಮುಖಂಡ ಯೋಗೀಶಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದ ಧಾರವಾಡ ಗ್ರಾಮೀಣ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಶಾಸಕ ಸ್ಥಾನದಿಂದ ಅನರ್ಹಗೊಳಿಸಿ ಕರ್ನಾಟಕ ವಿಧಾನಸಭೆ ಸಚಿವಾಲಯ ಶನಿವಾರ ಅಧಿಕೃತ ಆದೇಶ ಹೊರಡಿಸಿದೆ.

ನ್ಯಾಯಾಲಯದ ತೀರ್ಪು: ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಏ.15ರಂದು ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ವಿನಯ ಕುಲಕರ್ಣಿ ಸೇರಿದಂತೆ 16 ಜನರನ್ನು ದೋಷಿ ಎಂದು ಘೋಷಿಸಿ, ಏಪ್ರಿಲ್ 17ರಂದು ಜೀವಾವಧಿ ಶಿಕ್ಷೆ ವಿಧಿಸಿತ್ತು.

ಕಾನೂನು ಅನ್ವಯ: ಭಾರತದ ಸಂವಿಧಾನದ ಅನುಚ್ಛೇದ 191(1) (ಜ) ಮತ್ತು ಪ್ರಜಾಪ್ರತಿನಿಧಿಗಳ ಕಾಯ್ದೆ 1951ರ ಸೆಕ್ಷನ್ 8ರ ಅಡಿಯಲ್ಲಿ, ಯಾವುದೇ ಜನಪ್ರತಿನಿಧಿಗೆ 2 ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಶಿಕ್ಷೆಯಾದಲ್ಲಿ ಅವರು ತಕ್ಷಣವೇ ತಮ್ಮ ಸ್ಥಾನಕ್ಕೆ ಅನರ್ಹರಾಗುತ್ತಾರೆ.

ಪೂರ್ವಾನ್ವಯ ಜಾರಿ: ಇವರ ಅನರ್ಹತೆಯು ನ್ಯಾಯಾಲಯ ತೀರ್ಪು ನೀಡಿದ ದಿನಾಂಕ ಏ.15ರಿಂದಲೇ ಅನ್ವಯವಾಗುವಂತೆ ಜಾರಿಗೆ ಬಂದಿದೆ.

ಆದೇಶದ ಮುಖ್ಯಾಂಶಗಳು: ಕ್ಷೇತ್ರ ತೆರವು: ವಿನಯ ಕುಲಕರ್ಣಿ ಅವರ ಅನರ್ಹತೆಯಿಂದಾಗಿ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರವು ಈಗ ಅಧಿಕೃತವಾಗಿ ಖಾಲಿಯಾಗಿದೆ.

ಚುನಾವಣಾ ನಿಷೇಧ: ಶಿಕ್ಷೆಗೆ ಮೇಲ್ಮಟ್ಟದ ನ್ಯಾಯಾಲಯದಿಂದ ತಡೆಯಾಜ್ಞೆ ಸಿಗದೇ ಇದ್ದಲ್ಲಿ, ಅವರು ಜೈಲಿನಿಂದ ಬಿಡುಗಡೆಯಾದ ನಂತರವೂ ಮುಂದಿನ 6 ವರ್ಷ ಯಾವುದೇ ಚುನಾವಣೆಗೆ ಸ್ಪರ್ಧಿಸುವಂತಿಲ್ಲ.

ಉಪಚುನಾವಣೆ ಸಾಧ್ಯತೆ: ಕ್ಷೇತ್ರ ಖಾಲಿಯಾಗಿರುವ ಹಿನ್ನೆಲೆಯಲ್ಲಿ ಮುಂದಿನ ಆರು ತಿಂಗಳೊಳಗೆ ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುವ ಸಾಧ್ಯತೆಯಿದೆ.

ಸಾಮಾಜಿಕ ಬಹಿಷ್ಕಾರ ಆರೋಪ: ಪ್ರಕರಣ ದಾಖಲು

ಬೆಳಗಾವಿ: ತಾಲೂಕಿನ ಕೊಂಡಸಕೊಪ್ಪ ಗ್ರಾಮದಲ್ಲಿ ದೇವಸ್ಥಾನದ ಪೂಜೆ ವಿಚಾರಕ್ಕೆ ಸಂಬಂಧಿಸಿ ಕುಟುಂಬವೊಂದಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ ಆರೋಪದ ಹಿನ್ನೆಲೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಕೊನೆಗೂ ಪ್ರಕರಣ ದಾಖಲಾಗಿದೆ.

ನರಸೋಬಾ ಕರೆಪ್ಪ ಸಾಂಬ್ರೇಕರ್ ಕುಟುಂಬದವರೊಂದಿಗೆ ಯಾರೂ ಮಾತನಾಡಬಾರದು ಎಂದು ಗ್ರಾಮ ಪಂಚಾಯಿತಿ ಪಂಚರು ಸೂಚನೆ ನೀಡಿದ್ದರೆಂದು ಆರೋಪಿಸಿ ನರಸೋಬಾ ಅವರು ಕೆಲ ದಿನಗಳ ಹಿಂದೆಯೇ ದೂರು ಸಲ್ಲಿಸಿದ್ದರೂ ಪ್ರಕರಣ ದಾಖಲಾಗಿರಲಿಲ್ಲ. ಈ ಬಗ್ಗೆ ಗ್ರಾಮಸ್ಥರು ಪ್ರತಿಕ್ರಿಯಿಸಿ, ಯಾರನ್ನೂ ಸಾಮಾಜಿಕ ಬಹಿಷ್ಕಾರ ಮಾಡಿಲ್ಲ. ದೇವಸ್ಥಾನದ ಬಗ್ಗೆ ನಂಬಿಕೆ ಇಲ್ಲದಿದ್ದರೆ, ಆ ವಿಚಾರದಿಂದ ದೂರವಿರಲು ಮಾತ್ರ ಹೇಳಿದ್ದೇವೆ ಎಂದು ಸ್ಪಷ್ಟನೆ ನೀಡಿದ್ದರು.

ಆದರೆ, ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಮಲ್ಲಪ್ಪ ವಿಠ್ಠಲ ಸಾಂಬ್ರೇಕರ್, ವಿಠ್ಠಲ ಗಣಪತಿ ಸಾಂಬ್ರೇಕರ್, ಬಾಗಣ್ಣ ಯಲ್ಲಪ್ಪ ಸಾಂಬ್ರೇಕರ್, ರಮೇಶ್ ವಿಠ್ಠಲ ಸಾಂಬ್ರೇಕರ್, ಮಾಳಿಂಗ ಸಾಂಬ್ರೇಕರ್, ಗಂಗಪ್ಪ ನಿಂಗಪ್ಪ ಸಾಂಬ್ರೇಕರ್, ವೈಜು ವಿಠ್ಠಲ ಸಾಂಬ್ರೇಕರ್, ಪಿರಾಜಿ ವಿಠ್ಠಲ ಸಾಂಬ್ರೇಕರ್ ಹಾಗೂ ಯಲ್ಲಪ್ಪ ವಿಠ್ಠಲ ಸಾಂಬ್ರೇಕರ್ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ದೂರಿನಲ್ಲಿ ನರಸೋಬಾ ಕುಟುಂಬದವರೊಂದಿಗೆ ಮಾತನಾಡಿದವರಿಗೆ 5 ಸಾವಿರ ರೂ. ದಂಡ ವಿಧಿಸುವುದು ಹಾಗೂ ಮಾಹಿತಿ ನೀಡುವವರಿಗೆ 1 ಸಾವಿರ ರೂ. ಬಹುಮಾನ ನೀಡುವುದಾಗಿ ಘೋಷಿಸಿದ್ದರೆಂದು ಉಲ್ಲೇಖಿಸಲಾಗಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಲ ತೀರಿಸಲು ಅಳಿಯನ ಮನೆಗೆ ಕನ್ನ ಹಾಕಿದ ಅತ್ತೆ!

ಬೆಳಗಾವಿ: ತಾನು ಮಾಡಿದ ಸಾಲವನ್ನು ತೀರಿಸುವುದಕ್ಕೆ ಸ್ವತಃ ಅಳಿಯನ ಮನೆಗೆ ಅತ್ತೆಯು ಕನ್ನ ಹಾಕಿರುವ ಘಟನೆಯೊಂದು ಬೆಳಗಾವಿ ನಗರದ ಪಿರಣವಾಡಿಯಲ್ಲಿ ನಡೆದಿದೆ.



ಪಿರಣವಾಡಿ ನಿವಾಸಿ ಉಜ್ವಲಾ ಎಂಬವರೇ ಕಳ್ಳತನ ಮಾಡಿದ ಚಾಲಾಕಿ ಅತ್ತೆ. ದಂಪತಿಗಳು ಅತ್ತೆಗೆ ಮನೆಯಲ್ಲೇ ಇರುವಂತೆ ಹೇಳಿ ಸ್ನೇಹಿತರ ಮದುವೆಗೆಂದು ಹೋಗಿದ್ದಾರೆ. ಆದರೆ, ಮನೆಯಲ್ಲಿ ಯಾರೂ ಇಲ್ಲದಿರೋ ಸಮಯಕ್ಕಾಗಿ ಕಾಯ್ತಿದ್ದ ಉಜ್ವಲಾ ಕಮ್ಮಾರ ಅಳಿಯ ಮನೆಯನ್ನು ಇಂಚಿಂಚು ಶೋಧ ಮಾಡಿ ಸಿಕ್ಕ ಸಿಕ್ಕಿದ್ದನ್ನ ವಸ್ತುಗಳನ್ನು ದೋಚಿಕೊಂಡಿದ್ದಾಳೆ. ಅತ್ತೆಗೆ ಶಿವಾ ಅಪ್ಪಯ ಕೂಡ ಸಾಥ್ ನೀಡಿದ್ದಾರೆ ಎಂದು ಹೇಳಲಾಗಿದೆ.

ಮನೆಯಲ್ಲಿನ ಬೀರುವಿನಲ್ಲಿ ಇಟ್ಟಿದ್ದ ಪುತ್ರಿಯ ಚಿನ್ನ ಬಳೆ, ಉಂಗುರ, ನೆಕ್ಲೇಸ್ ಸೇರಿ ಒಟ್ಟು 16.57 ಲಕ್ಷ ರೂ ಮೌಲ್ಯದ 110 ಗ್ರಾಂ ಚಿನ್ನಾಭರಣವನ್ನು ಕಳ್ಳತನ ಮಾಡಿದ್ದಾಳೆ ಎನ್ನಲಾಗಿದೆ.

ಮಗಳು ಮತ್ತು ಅಳಿಯ ಮದುವೆ ಮುಗಿಸಿಕೊಂಡು ಬಂದು ಮನೆಯಲ್ಲಿ ನೋಡಿದ್ದಾಗ ಚಿನ್ನಾಭರಣ ಕಳ್ಳತನವಾಗಿರೋದು ಸ್ಪಷ್ಟವಾಗಿದೆ. ಈ ಕುರಿತು ದಂಪತಿಗಳು ಕೂಡಲೇ ಪೊಲೀಸರಿಗೆ ದೂರು ದಾಖಲಿಸಿದ್ದಾರೆ. ತಿಳಕವಾಡಿ ಪೊಲೀಸರು ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಿದ ವೇಳೆ ಅತ್ತೆ ಕಳ್ಳತನ ಮಾಡಿರುವುದರ ಬಗ್ಗೆ ಬಾಯಿ ಬಿಟ್ಟಿದ್ದಾಳೆ. ಅಳಿಯನ ಮನೆಯಲ್ಲಿಯೇ ಕಳ್ಳತನಕ್ಕೆ ಸಾಥ್ ನೀಡಿದ ಶಿವಾ ಅಪ್ಪಯನವರ, ಹಾಗೂ ಅತ್ತೆ ಉಜ್ವಲಾ ಕಮ್ಮಾರ, ಇಬ್ಬರನ್ನು ತಿಳಕವಾಡಿ ಪೊಲೀಸರು ಬಂಧಿಸಿ ವಿಚಾರಣೆ ಮುಂದುವರಿಸಿದ್ದಾರೆ.

ಫಕೀರೇಶ್ವರ ಜಾತ್ರೆ: ಕಡುಬಿನ ಕಾಳಗ



ಶಿರಹಟ್ಟಿ: ಕೋಮು ಸೌಹಾರ್ದತೆಯ ಹರಿಕಾರ ಕರ್ತೃ ಜಗದ್ಗುರು ಫಕೀರೇಶ್ವರ ಜಾತ್ರಾ ಮಹೋತ್ಸವದ ಎರಡನೇ ದಿನವಾದ ಶನಿವಾರ ಶ್ರೀಮಠದ ಪರಂಪರೆಯಂತೆ ನಗಾರಿಯ ನೀನಾದ, ಕಹಳೆ, ಡೊಳ್ಳು ಕುಣಿತ, ನಂದಿ ಕೋಲಿನ ಮೆರವಣಿಗೆ ಸೇರಿ ಸಪ್ತಸ್ವರಗಳ ನಿನಾದದೊಂದಿಗೆ 13ನೇ ಪೀಠಾಧ್ಯಕ್ಷರಾದ ಜ.ಫಕೀರಸಿದ್ಧರಾಮ ಮಹಾಸ್ವಾಮಿಗಳು ಅಶ್ವರೂಢರಾಗಿ ನೆರೆದಿದ್ದ ಅಸಂಖ್ಯಾತ ಭಕ್ತರ ಕಡೆ ಬೆಲ್ಲದ ಚೂರುಗಳನ್ನು ಎಸೆಯುವುದರ ಮೂಲಕ ಅದ್ಧೂರಿ ಕಡುಬಿನ ಕಾಳಗ ನಡೆಸಿದರು.

ಶ್ರೀಗಳು ಎಸೆದ ಬೆಲ್ಲದ ಚೂರುಗಳನ್ನು ಭಕ್ತರು ಪ್ರಸಾದ ರೂಪದಲ್ಲಿ ಸ್ವೀಕರಿಸಿದರು. ಶ್ರೀಮಠದ ಪೀಠದ ಪರಂಪರೆಯಂತೆ ಶ್ರೀಗಳು ಮಠದ ಕರ್ತೃ ಗದ್ದುಗೆಗೆ ಐದು ಸುತ್ತು ಪ್ರದಕ್ಷಣೆ ಹಾಗೂ ಮಹಾರಥದ ಸುತ್ತ ಐದು ಸುತ್ತು ಪ್ರದಕ್ಷಿಣೆ ಹಾಕುತ್ತಾ ಭಕ್ತರ ಕಡೆ ಬೆಲ್ಲದ ಚೂರುಗಳ ಕಡುಬಿನ ಕಾಳಗ ನಡೆಸಿದರು.

ಶ್ರೀಗಳು ರಥದ ಸುತ್ತ ಕಡುಬಿನ ಕಾಳಗ ನಡೆಸಿ ಕೊಟ್ಟ ಮೇಲೆ ಮಹಾದ್ವಾರದ ಮೂಲಕ ಆಗಮಿಸುವಾಗ ಮಠದ ಪರಂಪರೆಯಂತೆ ಮುಸ್ಲಿಂ ಕುಟುಂಬದ ಅತ್ತಾರ ಮನೆತನದವರು ಶ್ರೀಗಳಿಗೆ ಗುಲಾಲ್ ಎರಚುತಿದ್ದಂತೆ ಕಡುಬಿನ ಕಾಳಗಕ್ಕೆ ತೆರೆ ಬಿದ್ದಿತ್ತು. ಜಾತ್ರೆಗೆ ಬಂದ ಭಕ್ತರು ಕಡಬಿನ ಕಾಳಗ ಮುಗಿಸಿಕೊಂಡು ಮನರಂಜನೆಗಾಗಿ ಸಿದ್ಧಗೊಂಡಿದ್ದ ಜೋಕಾಲಿ, ರೈಲು ಬಂಡಿ, ಬ್ರೇಕ್ ಡ್ಯಾನ್ಸ್ ಸೇರಿದಂತೆ ವಿವಿಧ ಆಟಗಳ ಜತೆ ಜನರು ಕರದ ಮಂಡಕ್ಕಿ, ಬೆಂಡು ಬೆಸ್ತ ಸವಿದು ಸಂಭ್ರಮಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ವನಿ
09

ಉತ್ತರ ಕನ್ನಡ

ಗರಿಷ್ಠ 34° | ಕನಿಷ್ಠ 23°

ಭಾನುವಾರ
3 ಮೇ 2026
ಹುಬ್ಬಳ್ಳಿ

ಕಿರುಸುದ್ದಿ

ಹರ್ಷಿತಾ ಮಡಿವಾಳಗೆ ಸನ್ಮಾನ

ಸಿದ್ದಾಪುರ: ತಾಲೂಕಿನ ಕೋಲಸಿರ್ಸಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹರ್ಷಿತಾ ಮಂಜುನಾಥ ಮಡಿವಾಳ ಕುಣಜಿ ಇವಳು ದ್ವಿತೀಯ ಪಿಯುಸಿಯಲ್ಲಿ 95.33% ಅಂಕ ಪಡೆದಿದ್ದು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬದಿಂದ ಬಂದ ಅವರ ನಿವಾಸಕ್ಕೆ ತೆರಳಿ ಸೇವಾ ಸಂಕಲ್ಪ ಟ್ರಸ್ಟ್ ಹೊಸೂರು ಸಿದ್ದಾಪುರ ಇವರ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಂಜುನಾಥ ಮಡಿವಾಳ, ಕುಟುಂಬದ ಸದಸ್ಯರು, ಸ.ಪ.ಪೂ ಕಾಲೇಜ ಕೋಲಸಿರ್ಸಿ ಇದರ ಉಪನ್ಯಾಸಕ ಗೋಪಾಲ ಕಾನಳ್ಳಿ, ಶಿಕ್ಷಕರಾದ ವೆಂಕಟೇಶ ಮಡಿವಾಳ, ಟ್ರಸ್ಟಿನ ಸದಸ್ಯರು, ಮುಖ್ಯಾಧ್ಯಾಪಕಿಯಾದ ಲೀಲಾವತಿ ಮಡಿವಾಳ, ಟ್ರಸ್ಟಿನ ನಿರ್ದೇಶಕರಾದ ಪಿ.ಬಿ.ಹೊಸೂರ ಇತರರು ಉಪಸ್ಥಿತರಿದ್ದರು.



ಮುಂಡಗೋಡ: ಕಳೆದ 22ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ, ಹುಟ್ಟೂರಿಗೆ ಮರಳಿದ ಯೋಧ ಮಂಜುನಾಥ ತಳವಾರ ಅವರಿಗೆ ತಾಲೂಕಿನ ಜನತೆಯ ಪರವಾಗಿ ಯೋಧನ ಸ್ನೇಹಿತರು, ಶಿಂಗನಳ್ಳಿ ಗ್ರಾಮಸ್ಥರು ಹಾಗೂ ದೇಶ ಪ್ರೇಮಿಗಳು ಅದ್ದೂರಿಯಾಗಿ ಸ್ವಾಗತಿಸಿದರು.

ಅಂಬೇಡ್ಕರ್ 135ನೇ ಜಯಂತ್ಯುತ್ಸವ



ಜೋಯಿಡಾ: ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕಾ ಸಮಿತಿ ಜೋಯಿಡಾ ಹಾಗೂ ಚನ್ನಬಸವೇಶ್ವರ ಟ್ರಸ್ಟ್ ಕಮಿಟಿ ಉಳವಿ ಹಾಗೂ ಬಸವಧಾಮ ಶಿವಪುರ ಇವರ ಸಹಯೋಗದಲ್ಲಿ ಶ್ರೀ ಕ್ಷೇತ್ರ ಉಳವಿಯಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ವಿಜೃಂಭಣೆಯಿಂದ ನಡೆಯಿತು. ಚನ್ನಬಸವೇಶ್ವರ ದೇವಸ್ಥಾನದ ಮುಖ್ಯದ್ವಾರದಿಂದ ಮುಖ್ಯ ವೇದಿಕೆಯವರೆಗೆ ಡಾ. ಅಂಬೇಡ್ಕರ್ ಅವರ ಭಾವಚಿತ್ರದ ಅದ್ದೂರಿ ಮೆರವಣಿಗೆಗೆ ಶಶಿಕಾಂತ ಕಾಂಬಳೆ ಅಧ್ಯಕ್ಷರು ದಸಾಪ ಜೋಯಿಡಾ ಇವರು ವಿದ್ಯುಕ್ತವಾಗಿ ಚಾಲನೆ ನೀಡಿದರು. ಶಂಕ್ರಯ್ಯ ಎಂ.ಕಲ್ಮಠ ಪ್ರಧಾನ ಅರ್ಚಕರು ಚನ್ನಬಸವೇಶ್ವರ ದೇವಸ್ಥಾನ ಹಾಗೂ ಚನ್ನಬಸವಾನಂದ ಸ್ವಾಮೀಜಿ ಬಸವಧಾಮ ಶಿವಪುರ ವಹಿಸಿದ್ದರು. ಅಧ್ಯಕ್ಷತೆಯನ್ನು ಮಂಜುನಾಥ ಮೊಕಾಶಿ ನಿಕಟಪೂರ್ವ ಅಧ್ಯಕ್ಷರು ಗ್ರಾಪಂ ಉಳವಿ ವಹಿಸಿದರು. ಉಳವಿ ಪ್ರಾಥಮಿಕ ಶಾಲೆಯ ಮಕ್ಕಳ ಪ್ರಾರ್ಥಿಸಿದರು. ದಸಾಪ ಜೋಯಿಡಾದ ಖಜಾಂಚಿಗಳಾದ ಪ್ರಸನ್ನ. ಹೆಚ್ ಸ್ವಾಗತಿಸಿದರು. ಉಳವಿ ಶಾಲೆಯ ವಿದ್ಯಾರ್ಥಿ ಪ್ರಜ್ವಲ ಮೋಹನ ಹರಿಜನ ಅಂಬೇಡ್ಕರ್ ಕುರಿತು ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿದನು. ನಂತರದಲ್ಲಿ ಜೋಯಿಡಾದ ಐಶ್ವರ್ಯ ಹಳದನಕರರವರು ನೆರೆದ ಎಲ್ಲರೆದುರಿಗೆ ಭೀಮಘರ್ಜನೆಯನ್ನು ಮೊಳಗಿಸಿದರು. ಭೀಮಾಶಂಕರ ಹರಿಜನ ಅಧ್ಯಕ್ಷರು ಜಿಲ್ಲಾ ದ.ಸಾ.ಪ ಉ.ಕ ತಮ್ಮ ಉಪನ್ಯಾಸ ನೀಡಿದರು. ರಾಜು ಎಂ.ತಳವಾರ ಗೋಪಾಲ ಭಟ್, ಶ್ರೀಕಾಂತ ಛಲವಾದಿ, ಮಂಜುನಾಥ ಮೊಕಾಶಿ ಮಾತನಾಡಿದರು. ಚನ್ನಬಸವಾನಂದ ಸ್ವಾಮೀಜಿ ಆಶೀರ್ವಚಿಸಿದರು.ಮುಖ್ಯ ಅತಿಥಿಗಳಾಗಿ ರಾಜು ಎಂ ತಳವಾರ, ವಿನೋದ ಹರಿಜನ, ತಾತೋಬಾ ಹರಿಜನ ಶ್ರೀಕಾಂತ ಚಲವಾದಿ ಮೋಹನ ಹರಿಜನ, ರಾಜೇಂದ್ರ ಹರಿಜನ, ದೇವಾನಂದ ಕಾಂಬಳೆ, ಹನುಮಂತಪ್ಪ ಹರಿಜನ, ಪ್ರಶಾಂತ ನಾಯರ, ಗೋಪಾಲ ಭಟ್, ಪ್ರಕಾಶ ಹರಿಜನ, ಮದನ ಗಾವಡೆ, ಚಂದ್ರಕಾಂತ ಚುಗಲಕರ, ಸುರೇಶ ಕಾಂಬಳೆ ಇದ್ದರು.ಭಾಸ್ಕರ್ ಗಾಂವ್ಕರ ಕಾರ್ಯಕ್ರಮ ನಿರ್ವಹಿಸಿದರು. ಪಕೀರಪ್ಪ ಎಸ್.ಬಿ. ಅವರು ವಂದಿಸಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61299	71299
ಬಿಳಿಗೋಟು	26199	38100
ಕೆಂಪುಗೋಟು	26219	35223
ಬೆಟ್ಟೆ	43099	52099
ರಾಶಿ	51600	53809
ಚಾಲಿ	44049	48699



ಸಿದ್ದಾಪುರ: ತಾಲೂಕಿನ ಕೋಲಸಿರ್ಸಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹರ್ಷಿತಾ ಮಂಜುನಾಥ ಮಡಿವಾಳ ಕುಣಜಿ ಇವಳು ದ್ವಿತೀಯ ಪಿಯುಸಿಯಲ್ಲಿ 95.33% ಅಂಕ ಪಡೆದಿದ್ದು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬದಿಂದ ಬಂದ ಅವರ ನಿವಾಸಕ್ಕೆ ತೆರಳಿ ಸೇವಾ ಸಂಕಲ್ಪ ಟ್ರಸ್ಟ್ ಹೊಸೂರು ಸಿದ್ದಾಪುರ ಇವರ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು.

ಮನೆ ಪಾಠ ಕೇಂದ್ರಗಳ ಕಾರ್ಯ ಶ್ಲಾಘನೀಯ

ಗೋಕರ್ಣ: ಗ್ರಾಮೀಣ ಪ್ರದೇಶದ ಮಕ್ಕಳಿಗೆ ಮನೆ ಪಾಠದ ಮೂಲಕ ಉತ್ತಮ ಸಂಸ್ಕಾರದ ಶಿಕ್ಷಣವನ್ನ ನೀಡುತ್ತಿರುವ ವನವಾಸಿ ಕಲ್ಯಾಣ ಮನೆ ಪಾಠ ಕೇಂದ್ರಗಳ ಕಾರ್ಯ ಪ್ರಶಂಸನೀಯ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.ಅವರು ಇಲ್ಲಿನ ಅಶೋಕೆಯ ವನದುರ್ಗಾ ವನವಾಸಿ ಕಲ್ಯಾಣ ಕೇಂದ್ರದ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಕೇವಲ ಸುಶಿಕ್ಷಿತರಾದರೆ ಸಾಲದು, ಶಿಕ್ಷಣದ ಜೊತೆ ನಾವು ಸಮಾಜದಲ್ಲಿ ಹೇಗೆ ಬದುಕಬೇಕು. ಸಮಾಜಕ್ಕಾಗಿ ನಾವೇನು ನೀಡ ಬೇಕು ಎಂಬುದನ್ನ ತಿಳಿಯಬೇಕು. ಈ ಕೆಲಸ ಮನೆ ಪಾಠ ಕೇಂದ್ರದಿಂದ ಆಗುತ್ತಿದೆ ಎಂದರು. ಮುಖ್ಯ ವಕ್ತಾರರಾಗಿ ಆಗಮಿಸಿದ ವನವಾಸಿ ಕಲ್ಯಾಣದ ರಾಜ್ಯ ಟ್ರಸ್ಟಿ ಡಾ. ಸುರೇಶ ಹೆಗಡೆ ಮನೆಪಾಠ ಕೇಂದ್ರಗಳ ಕುರಿತು ವಿವರಿಸಿ ಕಾರ್ಯಚಟುವಟಿಕೆ ತಿಳಿಸಿದರು. ಮುಖ್ಯ ಅತಿಥಿಗಳಾಗಿ ವನವಾಸಿ ಕಲ್ಯಾಣದ ಶಿಕ್ಷಣ ವಿಭಾಗದ ಪ್ರಮುಖ ರಾಮಚಂದ್ರ ಜಿ., ಕಾರವಾರ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶ್ರೀಧರ ಸಾಲಿಹಿತ್ತಲ ,ಮಾಜಿ ತಾಂಪಂ ಸದಸ್ಯ ಮಹೇಶ ಶೆಟ್ಟಿ, ಅಶೋಕೆಯ ಊರ ಗೌಡರಾದ ಮಹಾಬಲೇಶ್ವರ ಗೌಡ,ಮಾಜಿ. ಗ್ರಾಪಂ ಸದಸ್ಯರಾದ ಸಂದೇಶ ಗೌಡ, ಶಾರದಾ ಮೂಡಂಗಿ, ಯುವಕ ಸಂಘದ ಅಧ್ಯಕ್ಷ ಮೋಹನ ಮೂಡಂಗಿ ಬಿಜೆಪಿ ಗೋಕರ್ಣ ಮಂಡಲಾಧ್ಯಕ್ಷ ಗಣೇಶ ಪಂಡಿತ್ ಪಾಲ್ಗೊಂಡಿದ್ದರು. ಮಂಗಲಾ ಆರ್. ಗೌಡ ಸ್ವಾಗತಿಸಿದರು. ಸುಜಾತಾ ಗೌಡ ವಂದಿಸಿದರು. ನಾಗರತ್ನ ಗೌಡ ಕಾರ್ಯಕ್ರಮ ನಿರ್ವಹಿಸಿದರು. ಸಭಾ ಕಾರ್ಯಕ್ರಮದ ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಗೋಕರ್ಣ: ಇಲ್ಲಿನ ಅಶೋಕೆಯ ವನದುರ್ಗಾ ವನವಾಸಿ ಕಲ್ಯಾಣ ಕೇಂದ್ರದ ವಾರ್ಷಿಕೋತ್ಸವವನ್ನು ಶಾಸಕ ದಿನಕರ ಶೆಟ್ಟಿ ಉದ್ಘಾಟಿಸಿದರು. ಕಾರವಾರ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶ್ರೀಧರ ಸಾಲಿಹಿತ್ತಲ ,ಮಾಜಿ ತಾಂಪಂ ಸದಸ್ಯ ಮಹೇಶ ಶೆಟ್ಟಿ, ಅಶೋಕೆಯ ಊರ ಗೌಡರಾದ ಮಹಾಬಲೇಶ್ವರ ಗೌಡ,ಮಾಜಿ. ಗ್ರಾಪಂ ಸದಸ್ಯರಾದ ಸಂದೇಶ ಗೌಡ ಉಪಸ್ಥಿತರಿದ್ದರು.

ಜೆಜೆಎಂ ಕಾಮಗಾರಿ ಕಳಪೆ : ಆರೋಪ

ಸಂಜು ಕೋಳೂರ

ಹಳಿಯಾಳ: ತಾಲೂಕಿನ ಗ್ರಾಪಂ ವ್ಯಾಪ್ತಿಯಲ್ಲಿ ಕಾಮಗಾರಿ ಪೂರ್ತಿಗೊಳಿಸಿ ಹಸ್ತಾಂತರಗೊಂಡ ಎಲ್ಲಾ ಜಲ ಜೀವನ್ ಮಿಷನ್ ಕಾಮಗಾರಿಗಳು ಕಳಪೆಯಾಗಿದ್ದು ಯಾವುದೇ ಕಾಮಗಾರಿಯೂ ಪರಿಪೂರ್ಣವಾಗಿ ಕಾರ್ಯನಿರ್ವಹಿಸಲು ಅಸಮರ್ಥವಾಗಿವೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ತರಾತುರಿಯಲ್ಲಿ ಅಪೂರ್ಣ ಕಾಮಗಾರಿ ಯಾಗಿದ್ದ ಜಲಜೀವನ್ ಮಿಷನ್‌ನ ಕುಡಿಯುವ ನೀರಿನ ಪೂರೈಕೆ ಯನ್ನು ಹಸ್ತಾಂತರಿಸಿಕೊಳ್ಳಲು ಕಾರಣ ತಿಳಿದು ಬಂದಿಲ್ಲ, ಸಂಪೂರ್ಣ ಕಾಮಗಾರಿಯು ಕಳಪೆಯಾಗಿದ್ದು ಹಲವಾರು ಕಡೆಯಲ್ಲಿ ಪೈಪ್‌ಗಳನ್ನು ಅಳವಡಿಸಲು ಅಗೆದಿದ್ದ ಗುಂಡಿಗಳು ಮುಚ್ಚದೇ ಇನ್ನೂ ಹಾಗೆಯೇ ತೆರೆದೇ ಇವೆ. ಹಳಿಯಾಳ ತಾಲೂಕಿನ ಬಿ.ಕೆ.ಹಳ್ಳಿ ಗ್ರಾಮದಲ್ಲಿ ಕಾಮಗಾರಿ ಹಸ್ತಾಂತರಗೊಂಡು ಏಳು ತಿಂಗಳು ಕಳೆದಿದ್ದರೂ ಹೊಸದಾಗಿ ಬಂದಿದ್ದ ಪಿಡಿಒಗೆ ಮಾಹಿತಿಯೇ ಇರದೆ ಕಾಮಗಾರಿ ಅಪೂರ್ಣವಾಗಿರುವ ಕುರಿತು ವ್ಯವಹರಿಸಿದಾಗಲೇ ಗೊತ್ತಾಗಿದ್ದು, ಅವರು ತಮ್ಮ ಅಧಿಕಾರ ಸ್ವೀಕಾರಕ್ಕೂ ನಾಲ್ಕು ದಿನಗಳ ಮೊದಲು ಹಸ್ತಾಂತರವಾಗಿರುವ ವಿಷಯ ತಿಳಿದು ಆಶ್ಚರ್ಯಚಕಿತರಾಗಿದ್ದಾರೆ. 2019ರಲ್ಲಿ ಯೋಜನೆ ಅನುಷ್ಠಾನಕ್ಕೆ 500 ನಲ್ಲಿಗಳ ಪಟ್ಟಿ ಮಾಡಿ ಸಲ್ಲಿಕೆಯಾಗಿತ್ತು. ಆದರೆ 2023 ರಲ್ಲಿ ಕಾಮಗಾರಿ ಪ್ರಾರಂಭವಾಗಿ 613 ನಲ್ಲಿಗಳ ಜೋಡಣೆ ವರೆಗೂ ಸಾಗಿತ್ತು. ಅದರ ನಂತರ ಈಗ ಹೆಚ್ಚುವರಿಯಾಗಿ 300 ನಲ್ಲಿಗಳ ಹೊಸ ಬೇಡಿಕೆಯೊಂದಿಗೆ ಮತ್ತೊಂದು ಹಂತದ ಕಾಮಗಾರಿ ಪ್ರಾರಂಭವಾಗಿರುವ ಕುರಿತು ಮಾಹಿತಿ ಇದೆ. ಮೊದಲ ಹಂತದ ಕಾಮಗಾರಿಗೆ 1.67 ಕೋಟಿ ರೂ.ಗಳ ಅನುದಾನ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಜಂಟೀ ಪಾಲುದಾರಿಕೆಯಲ್ಲಿ ಅನುಷ್ಠಾನ ಗೊಂಡಿದೆ.



> ಜೆಜೆಎಮನ ಕಳಪೆ ಕಾಮಗಾರಿಯಿಂದಾಗಿ ಇಡೀ ಗ್ರಾಮವು ಕುಡಿಯುವ ನೀರಿನ ಪೂರೈಕೆಗಾಗಿ ತತ್ತರಿಸುತ್ತಿದ್ದು, ಬಿರು ಬಿಸಿಲಿನಲ್ಲಿ ಎಲ್ಲಾ ಕಾರ್ಯಗಳನ್ನು ಬದಿಗೊತ್ತಿ ದೂರದ ಹೊಲಗಳಲ್ಲಿಯ ಬೋರಿನಿಂದ ಕುಡಿಯುವ ನೀರನ್ನು ಹೊತ್ತು ತರುವ ಅನಿವಾರ್ಯತೆ ತಲೆದೋರಿದೆ. ಇದಕ್ಕೆಲ್ಲ ಕಾರಣ ಜೆಜೆಎಮ್‌ನ ಕಳಪೆ ಕಾಮಗಾರಿ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ.
>
> ■ ಸಂಜು ಗೌಡ, ಗ್ರಾಮಸ್ಥ

ಕಳೆದ ಏಳು ತಿಂಗಳಿನಿಂದ ಇದುವರೆಗೂ ನಲ್ಲಿಯಲ್ಲಿ ಮಾತ್ರ ನೀರು ಬರದೇ ಗ್ರಾಮದಲ್ಲಿ ನೀರಿಗಾಗಿ ಹಾಹಾಕಾರ ಎದುರಾಗಿದೆ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ಗ್ರಾಮಸ್ಥ ಶಿವಾಜಿ ಪ್ರತಿಕ್ರಿಯಿಸಿ, ಜೆಜೆಎಮ್ ಕಾಮಗಾರಿಯು ಕಳಪೆ ಕಾಮಗಾರಿಯಿಂದಾಗಿ ಸಂಪೂರ್ಣ ವಿಫಲವಾಗಿದ್ದು, ಕಾಳಿನದಿಯ ಬಹುಗ್ರಾಮ ಶುದ್ಧ ಕುಡಿಯುವ ನೀರಿನ ಯೋಜನೆ ಪಡೆಯಲು ಬಾಧಕವಾಗಿ ಕಾಡುತ್ತಿದೆ ಎಂದು ಆಪಾದಿಸಿದರು. ಕೂಡಲೇ ಹಳಿಯಾಳ ಶಾಸಕರು ಮಧ್ಯಪ್ರವೇಶಿಸಿ ಕಾಳಿ ನದಿ ಬಹುಗ್ರಾಮ ಶುದ್ಧ ಕುಡಿಯುವ ನೀರಿನ ಕಾಮಗಾರಿಯ ಅನುಷ್ಠಾನಕ್ಕೆ ಜೆಜೆಎಮ ಕಾಮಗಾರಿಯು ಪೂರ್ಣವಾಗಿರದೇ ಅಡ್ಡಿಯಾಗಿ ಕಪ್ಪು ಚುಕ್ಕೆಯಾಗಿ ತಲೆದೋರಿರುವುದನ್ನು ಕೂಡಲೇ ತನಿಖೆಗೆ ಒಳಪಡಿಸಲು ಮುಂದಾಗಿ ಸಾರ್ವಜನಿಕರಿಗೆ ನ್ಯಾಯ ಕೊಡಿಸುವಂತಾಗಬೇಕಾಗಿದೆ ಎಂದು ಜನರು ಆಗ್ರಹಿಸುತ್ತಿದ್ದಾರೆ.

ಮೇಲಾಧಿಕಾರಿಗಳಿಗೂ ಮಾಹಿತಿ

ಪ್ರಸ್ತುತ ಸ್ಥಿತಿಯು ಕುಡಿಯುವ ನೀರಿನ ಸರಬರಾಜಿಗೆ ತೊಂದರೆಯಿದ್ದು ಬಗೆಹರಿಸಲು ಕಾಮಗಾರಿಯ ಗುತ್ತಿಗೆದಾರರಿಂದ ಸರಿಪಡಿಸುವ ಕಾರ್ಯ ಜಾರಿಯಲ್ಲಿದೆ. ಕಡತದಲ್ಲಿ ಹಸ್ತಾಂತರ ಪ್ರಕ್ರಿಯೆಯ ಮೂಲ ದಸ್ತಾವೇಜು ಇಲ್ಲದಿದ್ದರಿಂದ ಯೋಜನೆಯ ಹಸ್ತಾಂತರದ ಬಗ್ಗೆ ಗೊಂದಲವಿತ್ತು. ಯೋಜನಾ ಅನುಷ್ಠಾನಾಧಿಕಾರಿಯನ್ನು ಸಂಬಂಧಿಸಿದ ವಿಷಯಕ್ಕೆ ಸಂಪರ್ಕಿಸಿದಾಗ ಹಸ್ತಾಂತರ ಪ್ರಕ್ರಿಯೆ ಮುಗಿದು ಏಳು ತಿಂಗಳಾಗಿರುವ ಕುರಿತು ಮಾಹಿತಿ ದೊರೆತಿದ್ದು ಬಾಕಿ ಇರುವ ಕಾಮಗಾರಿಯ ದುರಸ್ತಿಗಾಗಿ ಒತ್ತಾಯಿಸಿ ಪತ್ರ ಬರೆದು ಕಾಮಗಾರಿಯನ್ನು ಪ್ರಗತಿಗೆ ತರಲಾಗುತ್ತಿದೆ ಹಾಗೂ ಮೇಲಾಧಿಕಾರಿಗಳಿಗೂ ವಿಷಯದ ಕುರಿತು ಮಾಹಿತಿ ನೀಡಲಾಗಿದೆ ಎಂದು ಬಿ.ಕೆ.ಹಳ್ಳಿ ಗ್ರಾಮ ಪಂಚಾಯತಿ ಪಿಡಿಒ ಸಂಜು ಬೊಂಗಾಳೆ ಹೇಳಿಕೆ ನೀಡಿದ್ದಾರೆ.

ಟಾಸ್ಕ್ ಸಮಿತಿ ಸಭೆ: ಹಲವು ವಿಷಯಗಳ ಚರ್ಚೆ



ಅಂಕೋಲಾ: ಮಂಗನ ಕಾಯಿಲೆ ಮುಂಜಾಗ್ರತಾ ಕ್ರಮಗಳ ಕುರಿತಂತೆ ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಅವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಸಮಿತಿ ಸಭೆ ತಹಶೀಲ್ದಾರ ಕಾರ್ಯಾಲಯದ ಸಭಾಭವನದಲ್ಲಿ ನಡೆಯಿತು.

ಆರೋಗ್ಯ ಇಲಾಖೆ, ಪಶುವೈದ್ಯಕೀಯ ಇಲಾಖೆ,ಅರಣ್ಯ ಇಲಾಖೆ ಮತ್ತು ವಿವಿಧ ಪಂಚಾಯತಿಗಳ ಅಭಿವೃದ್ಧಿ ಅಧಿಕಾರಿಗಳು,ಪುರಸಭೆ ಸಿಬ್ಬಂದಿ,ಆರೋಗ್ಯ ಮತ್ತು ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದ ಸಭೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಜಗದೀಶ ನಾಯ್ಕ ಮಾತನಾಡಿ, ಏಪ್ರಿಲ್ ತಿಂಗಳಲ್ಲಿ ಮಂಗಗಳ ಸಾವಿನ ಪ್ರಕರಣಗಳು ಸಂಪೂರ್ಣ ನಿಯಂತ್ರಣದಲ್ಲಿದ್ದು, ಒಂದು ಮಂಗ ಸತ್ತ ಘಟನೆಏಪ್ರಿಲ್‌ತಿಂಗಳಲ್ಲಿವರದಿಯಾದರೂ, ಮೃತ ಮಂಗಕೆಎಫ್‌ಡಿ ಸೋಂಕು ಹೊಂದಿಲ್ಲ ಎಂದು ಪರೀಕ್ಷೆಯಿಂದ ತಿಳಿದು ಬಂದಿದೆ ಎಂದರು.

ಮಂಗನ ಕಾಯಿಲೆ ಕುರಿತಂತೆ ಮಾಹಿತಿ ನೀಡುವ ಮೂಲಕ ಜನಜಾಗೃತಿ ಮೂಡಿಸುವ ಕೆಲಸ ಆರೋಗ್ಯ ಇಲಾಖೆ ವತಿಯಿಂದ ಪ್ರತಿ ಪಂಚಾಯತ್ ಮತ್ತು ಪಟ್ಟಣ ವ್ಯಾಪ್ತಿಯಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಬೇಸಿಗೆ ಸಮಯದಲ್ಲಿ ಹಲವೆಡೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಶುದ್ಧಿಕರಿಸಿದ ನೀರು ಪೂರೈಕೆ ಆಗುವಂತೆ ಸಂಬಂಧಿಸಿದವರು ಗಮನಹರಿಸಬೇಕು ಎಂದು ಸಭೆಯಲ್ಲಿ ಚರ್ಚಿಸಲಾಯಿತು. ಮಳೆಗಾಲ ಆರಂಭವಾಗುವ ಪೂರ್ವದಲ್ಲಿ ಚರಂಡಿಗಳನ್ನು ಸ್ವಚ್ಚಗೊಳಿಸುವ ಕೆಲಸ ಗ್ರಾಪಂ ಮತ್ತು ಪುರಸಭೆಯ ವತಿಯಿಂದ ನಡೆಯಬೇಕು. ನೀರು ನಿಲ್ಲಲು ಅವಕಾಶವಾದರೆ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದ್ದು ಅದಕ್ಕೆ ಅವಕಾಶ ಆಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಚರ್ಚೆ ನಡೆಯಿತು.ಸಾರ್ವಜನಿಕ ಸ್ಥಳಗಳಲ್ಲಿ ಅಪಾಯಕಾರಿ ಆಗಬಲ್ಲ ಮರಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯತೆ ಇದೆ ಎಂದು ಉಪ ತಹಶೀಲ್ದಾರ ಸೂಚಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಆಯ್ಕೆ

ಸಿದ್ದಾಪುರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಇದರ ಸಿದ್ದಾಪುರ ತಾಲೂಕಾ ಘಟಕದ 2026 ರಿಂದ 2031ರ ಅವಧಿಯ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಎಂ.ಕೆ.ನಾಯ್ಕ, ಸತೀಶ ಆರ್.ಹೆಗಡೆ, ಮಂಜುನಾಥ ನಾಯ್ಕ, ಗುರುರಾಜ ಕೃಷ್ಣ ನಾಯ್ಕ, ನಾಗರಾಜ ಮಡಿವಾಳ, ಜಿ.ಜಿ.ಹೆಗಡೆ, ಮಹಿಳಾ ಮೀಸಲು ಕ್ಷೇತ್ರದಿಂದ ಸುಧಾಬಾಯಿ ರಾಯ್ಕರ್, ರೀಟಾ ಡಿಸೋಜಾ, ದಿವ್ಯಾ ನಾಯ್ಕ ಇವರುಗಳು ಆಯ್ಕೆಯಾಗಿದ್ದಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಿಂದ ತಿಳಿಸಲಾಗಿದೆ.

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ಸಂಸದ ಕಾಗೇರಿ

ಭಟ್ಕಳ: ಪುರವರ್ಗದ ರಾಷ್ಟ್ರೀಯ ಹೆದ್ದಾರಿ ಸಮಸ್ಯೆ ಬಗ್ಗೆ ಸಾರ್ವಜನಿಕರು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಗಮನಕ್ಕೆ ತಂದು ಅಗತ್ಯ ಕಾಮಗಾರಿ ಮಾಡಿಕೊಡುವಂತೆ ಮನವಿ ಮಾಡಿದರು.

ಭಟ್ಕಳದಿಂದ ಮಂಗಳೂರಿಗೆ ಹೋಗುತ್ತಿದ್ದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪುರವರ್ಗದ ಬಳಿ ಕಾರು ನಿಲ್ಲಿಸಿ ಪುರವರ್ಗ ಸಾರ್ವಜನಿಕರಿಂದ ಹೆದ್ದಾರಿ ಸಮಸ್ಯೆ ಬಗ್ಗೆ ಆಲಿಸಿದರು. ಪುರವರ್ಗದ ಅಣ್ಣಪ್ಪ ನಾಯ್ಕ ಅಬ್ಬಿಹಿತ್ತಲು ಮುಂತಾದವರು ಸಂಸದರಲ್ಲಿ ಪುರವರ್ಗದಲ್ಲಿ ರಸ್ತೆಗೆ ಡಿವೈಡರ್ ಹಾಕಿಲ್ಲ, ಸರ್ವಿಸ್ ರಸ್ತೆ, ಬಸ್ ನಿಲ್ದಾಣ ಮಾಡಿಲ್ಲ ಎಂದು ದೂರಿದರು. ಭಟ್ಕಳ ಪಟ್ಟಣದಿಂದ ಕೇವಲ ಮೂರು ಕಿ.ಮಿ ದೂರದಲ್ಲಿರುವ ಪುರವರ್ಗದಲ್ಲಿ ಹೆದ್ದಾರಿ ಪಕ್ಕದಲ್ಲಿ ಶಾಲೆ, ಚರ್ಚ್, ದೇವಸ್ಥಾನ ಮುಂತಾದವುಗಳಿವೆ. ಇಲ್ಲಿಗೆ ಐದು ರಸ್ತೆಗಳು ಸೇರುವುದರಿಂದ ಕೂಡಲೇ ಜನರ ಅನುಕೂಲಕ್ಕಾಗಿ ಸರ್ವಿಸ್ ರಸ್ತೆ ಮಾಡಬೇಕು ಎಂದು ಆಗ್ರಹಿಸಿ ಶೀಘ್ರ ಹೆದ್ದಾರಿ ಸಮಸ್ಯೆ ಬಗೆಹರಿಸಿಕೊಡುವಂತೆ ಮನವಿ ಮಾಡಿದರು.

ಇದಕ್ಕುತ್ತರಿಸಿದ ಸಂಸದ ಕಾಗೇರಿ ಅವರು, ಭಟ್ಕಳದಲ್ಲಿ ಕಳೆದ 14 ವರ್ಷಗಳಿಂದ ಹೆದ್ದಾರಿ ಕಾಮಗಾರಿ ಮಂದಗತಿಯಿಂದ ಸಾಗುತ್ತಿತ್ತು. ನಾನು ಸಂಸದನಾದ ಬಳಿಕ ಮುತುವರ್ಜಿ ವಹಿಸಿ ಮೂಡಭಟ್ಕಳ ಮತ್ತು ಕಾಯ್ಕಿಣಿಯಲ್ಲಿ ಅಂಡರಪಾಸ್ ಮಂಜೂರಿಸಿಕೊಂಡು ಬಂದಿದ್ದು, ಕೆಲಸ ನಡೆಯುತ್ತಿದೆ. ಹೆದ್ದಾರಿ ಕಾಮಗಾರಿ ಇನ್ನೂ ಮುಗಿದಿಲ್ಲ. ಇಲ್ಲಿ ವಾಟರ್ ಸಪ್ಲೈ, ಲೋಕೋಪಯೋಗಿ, ನಗರಸಭೆ ಇನ್ನಿತರ ಇಲಾಖೆಗಳ ಸಹಕಾರದೊಂದಿಗೆ ಕೆಲಸ ಮಾಡಬೇಕು. ಹೆದ್ದಾರಿ ತ್ವರಿತವಾಗಿ ನಡೆಯುತ್ತಿದ್ದು, ಕಾಮಗಾರಿ ಶೀಘ್ರ ಮುಗಿಸಬೇಕು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನಾಯ್ಕ, ಶಿರಾಲಿ ಗ್ರಾಪಂ ಮಾಜಿ ಅಧ್ಯಕ್ಷ ಭಾಸ್ಕರ ದೈಮನೆ ಮತ್ತಿತರರಿದ್ದರು.



ಉದ್ಯೋಗ ಮೇಳ ಉದ್ಘಾಟಿಸಿದ ಶಾಸಕ

ಯಲ್ಲಾಪುರ: ಉದ್ಯೋಗ ಮಾಡುವ ಸಂಸ್ಥೆಯ ಬಗ್ಗೆ ಗೌರವ ಮತ್ತು ಕೃತಜ್ಞತೆಯ ಭಾವವಿರಬೇಕು ಆದರಿಂದ ಉದ್ಯೋಗದಾತರ ಮತ್ತು ಉದ್ಯೋಗಿಯ ಬೆಳವಣಿಗೆ ಆಗಬೇಕು ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ವಿಶ್ವ ದರ್ಶನ ಶಿಕ್ಷಣ ಸಮೂಹದ ಆವಾರಣದಲ್ಲಿ ಎಂಸಿಎ ನೂತನ ಕಟ್ಟಡ ಮತ್ತು ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿ, ಉತ್ತಮ ಅಂಕಗಳನ್ನು ಪಡೆದವಿದ್ಯಾರ್ಥಿಗಳಲ್ಲಿಯೂಸಾಮಾನ್ಯ ಜ್ಞಾನದಕೊರತೆಕಾಣುತ್ತೇವೆ ಅಂಕಗಳ ಜೊತೆಗೆ ಬದುಕು ವಿಜ್ಞಾನ ಮತ್ತು ಸಾಮನ್ಯ ಜ್ಞಾನ ಅನಿವಾರ್ಯವಾಗಿದೆ. ಕೌಶಲ್ಯದ ಮೂಲಕ ಉದ್ಯೋಗ ಪಡೆದು ಆದರ ಮೂಲಕ ಉದ್ಯೋಗದಾತ ಸಂಸ್ಥೆಯ ಬೆಳವಣಿಗೆಗೆ ಕಾರಣರಾಗಬೇಕು ಉದ್ಯೋಗದಾತರ ಬಗ್ಗೆ ಸೌಜನ್ಯ ಕಾಳಜಿ ಇರಬೇಕು. ಒಂದು ವೇಳೆ ನಾವು ಉದ್ಯೋಗ ಮಾಡಿದ ಸಂಸ್ಥೆ ನಶಿಸಿದರೆ ಅದರ ಪರಿಣಾಮ ಸಮಾಜದ ಮೇಲೆ ಆಗುತ್ತದೆ ಎಂದರು.

ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಪ್ರಾಸ್ತಾವಿಕವಾಗಿ ಮಾತನಾಡಿ, ಮೂರು ವರ್ಷಗಳ ಹಿಂದೆ ಆರಂಭವಾದ ಬಿಸಿಎ ಮೊದಲ ಬ್ಯಾಚಿನ ವಿದ್ಯಾರ್ಥಿಗಳು ಉದ್ಯೋಗಕ್ಕೆ ಸೇರುವ ಸಂದರ್ಭದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜನೆ ಮಾಡಿದ್ದೇವೆ. ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ ಎಂಸಿಎ ಆರಂಭಿಸುತ್ತಿದ್ದೇವೆ. ನಮ್ಮ ವಿದ್ಯಾರ್ಥಿಗಳು ಮಾತ್ರವಲ್ಲದೇ ಎಲ್ಲರಿಗೂ ಉದ್ಯೋಗವನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಉದ್ಯೋಗಮೇಳವನ್ನು ಪ್ರತಿವರ್ಷ ಮೇ–ತಿಂಗಳ ಮೊದಲ ಶನಿವಾರ ಆಯೋಜಿಸಲು ಯೋಚಿಸಿದ್ದೇವೆ ಎಂದರು.



ಇಮ್ಯಾಕ್ಯುಲೇಟ್ ಒರಾಕಲ್ಸ್ ಶೈಕ್ಷಣಿಕ ಸಲಹಾ ಸಮಿತಿಯ ಮುಖ್ಯಸ್ಥ ಡಾ. ಆರೋಗ್ಯ ಸ್ವಾಮಿ ಮಾತನಾಡಿದರು.


ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಆರ್ಡಿ ಜನಾರ್ಧನ್, ಪ್ರಥಮ ದರ್ಜೆಗುತ್ತಿಗೆ ದಾರ ಅಶೋಕ ನಾಯಕ್ವಿ ಸ್ವದರ್ಶನ ಶಿಕ್ಷಣ ಸಮೂಹದ ನಿರ್ದೇಶಕ ವಿಘ್ನೇಶ್ವರ ಗಾಂವ್ಕರ್, ಗಣಪತಿ ಮಾನಿಗದ್ದೆ , ಬಿಸಿಎ ಕಾಲೇಜಿನ ಪ್ರಾಂಶುಪಾಲ ಪ್ರಸನ್ನ ಭಟ್ಕೊ ಉಪಸ್ಥಿತರಿದ್ದರು.

ಶಾಲಾ ಶಿಕ್ಷಕರ ಸಂಘಕ್ಕೆ ಪ್ರತಿನಿಧಿಗಳ ಆಯ್ಕೆ

ಮುಂಡಗೋಡ: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ತಾಲೂಕ ಸಂಘದ 2026–31ನೇ ಸಾಲಿಗಾಗಿ ಕಾರ್ಯಕಾರಿ ಸಮಿತಿಯ ಆರು ಪ್ರತಿನಿಧಿಗಳ ಸ್ಥಾನಕ್ಕೆ ಮೇ 1ರಂದು ನಡೆದ ಚುನಾವಣೆಯಲ್ಲಿ ಶಿಕ್ಷಕ ಕೆ.ಕೆ.ಕುರುವಿನಕೊಪ್ಪ ನೇತೃತ್ವದ ತಂಡದ ಆರು ಸ್ಥಾನ ಗೆಲ್ಲುವ ಮೂಲಕ ಭರ್ಜರಿ ಜಯಗಳಿಸಿದ್ದಾರೆ.

ಹಾಲಿ ಅಧ್ಯಕ್ಷ ಪ್ರದೀಪ ಕುಲಕರ್ಣಿ ನೇತೃತ್ವದ ತಂಡ ಹಾಗೂ ಕೆ.ಕೆ.ಕುರುವಿನಕೊಪ್ಪ ನೇತೃತ್ವದ ತಂಡದ ನಡುವೆ ಚುನಾವಣೆಯಲ್ಲಿ ನಡೆದಿತ್ತು. ಶನಿವಾರ ಬೆಳಗ್ಗೆಯಿಂದ ಇಲ್ಲಿನ ಮಾದರಿ ಶಾಲೆಯ ಪಕ್ಕದಲ್ಲಿರುವ ಬಿಆರ್‌ಸಿ ಕಾರ್ಯಾಲಯದಲ್ಲಿ ನಡೆದಿತ್ತು. ಫಲಿತಾಂಶ ಶುಕ್ರವಾರ ರಾತ್ರಿ ಹೊರಬಿತ್ತು. ಚುನಾವಣೆಯಲ್ಲಿ ಕೆ.ಕೆ.ಕುರುವಿನಕೊಪ್ಪ–205ಮತ, ಈಶ್ವರ ಹನಕನಹಳ್ಳಿ–154, ಮಂಜುನಾಥ ಮಟ್ಟೇರ–145, ನಾಗರಾಜ ನಾಯ್ಕ–179, ನಾಗರತ್ನ ಎಸ್–151, ಸುಮಿತ್ರಾ ತಳವಾರ– 143 ಮತಗಳು ಪಡೆದು ಜಯಶಾಲಿಗಳಾಗಿದ್ದಾರೆ.

ತಾಲೂಕ ಪ್ರಾಥಮಿಕ ಶಾಲಾ ಸಂಘದಲ್ಲಿ ಒಟ್ಟು 313 ಮತದಾರರಿದ್ದು, ಅದರಲ್ಲಿ 279ಶಿಕ್ಷಕರು ಮತ ಚಲಾಯಿಸಿದ್ದು ಶೇ. 89.13ರಷ್ಟು ಮತದಾನವಾಗಿದೆ. ಶಿಕ್ಷಕರಿಗೆ ಬೇಸಿಗೆ ರಜೆ ಹಾಗೂ ಮನೆ ಪಟ್ಟಿ ಕಾರ್ಯಾಚರಣೆ ನಡೆಯುತ್ತಿರುವುದರಿಂದ ಶೇ.100ರಷ್ಟು ಮತದಾನ ಆಗದಿರಲು ಕಾರಣವಾಗಿದೆ. ಚುನಾವಣಾ ಅಧಿಕಾರಿಯಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಸುಮಾ ಜಿ, ಸಹಾಯಕ ಚುನಾವಣಾಧಿಕಾರಿಯಾಗಿ ಅಕ್ಷರ ದಾಸೋಹ ನಿರ್ದೇಶಕ ವಾಸುದೇವ ನಾಯಕ ಕಾರ್ಯನಿರ್ವಹಿಸಿದರು. ಜಯಗಳಿಸಿದ ಶಿಕ್ಷಕರ ತಂಡದವರು ಮತ ಎಣಿಕೆ ಕಾರ್ಯ ಮುಗಿದ ನಂತರ ಪಟಾಕಿ ಸಿಡಿಸಿ ಸಂಭ್ರಮಿಸಿದರು.



ಸಂಭ್ರಮದ ಭೂತೇಶ್ವರ ದೇವರ ಮೆರವಣಿಗೆ



ಬನವಾಸಿ: ಇಲ್ಲಿಯ ರುದ್ರಭೂಮಿ ಮೆದೆಗಂಟೆ ಭೂತೇಶ್ವರ ದೇವರ ಪ್ರತಿಷ್ಠಾಪನೆ ನಿಮಿತ್ತ ಭೂತೇಶ್ವರ ದೇವರ ವಿಗ್ರಹದ ಮೆರವಣಿಗೆ ಶನಿವಾರ ಸಂಭ್ರಮದಿಂದ ನಡೆಯಿತು.

ಪಟ್ಟಣದ ರುದ್ರಭೂಮಿಯ ಮೆದೆಗಂಟೆ ಭೂತೇಶ್ವರ ಕಟ್ಟೆಯಲ್ಲಿ ಭಾನುವಾರ ಪ್ರತಿಷ್ಠಾಪನೆಗೊಳ್ಳಲಿದ್ದು, ಇದರ ನಿಮಿತ್ತವಾಗಿ ದೇವರ ವಿಗ್ರಹವನ್ನು ನೂರಾರು ಮಹಿಳೆಯರು ಪೂರ್ಣಕುಂಭದೊಂದಿಗೆ ಸಕಲ ವಾದ್ಯ ಮೇಳದಲ್ಲಿ ಪಟ್ಟಣದ ವಿವಿಧ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು.

ಭಾನುವಾರದಂದು ವೇ.ಮೂ. ಶ್ರೀರಂಗ ವಿನಾಯಕ ಮಂಗಳೂರು ಇವರ ನೇತೃತ್ವದಲ್ಲಿ ಬೆಳಗ್ಗೆ 11.30ಕ್ಕೆ ಪ್ರತಿಷ್ಠಾ ಪೂರ್ವಾಂಗ ವಿಧಿ, ದೇವರ ಪ್ರತಿಷ್ಠಾಪನೆ, ಪ್ರಾಯಶ್ಚಿತ ಹೋಮ, ಪ್ರತಿಷ್ಠಾಂಗ ಹೋಮ, ಕಲಶಾಭಿಷೇಕ, ಮಹಾ ಪೂಜೆ ತೀರ್ಥಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಮೆರವಣಿಗೆಯಲ್ಲಿ ಕಮಿಟಿಯ ಅಧ್ಯಕ್ಷ ಗಣಪತಿ ಜಿ.ಚನ್ನಯ್ಯ, ಉಪಾಧ್ಯಕ್ಷ ಧಾಕಪ್ಪ ಚನ್ನಯ್ಯ, ಕಾರ್ಯದರ್ಶಿ ಗೋಪಿ ಚನ್ನಯ್ಯ, ಖಜಾಂಚಿ ದರ್ಶನ ಚನ್ನಯ್ಯ, ಸದಸ್ಯರಾದ ಕೆರೆಸ್ವಾಮಿ ಚನ್ನಯ್ಯ, ಪ್ರಭಾಕರ್ ಚನ್ನಯ್ಯ, ಸುಬ್ರಹ್ಮಣ್ಯ ಚನ್ನಯ್ಯ, ಮಂಜುನಾಥ ಚನ್ನಯ್ಯ, ಇಂಧುದರ ಚನ್ನಯ್ಯ, ಸುನೀಲ್ ಚನ್ನಯ್ಯ, ಪರಮೇಶ್ವರ ಚನ್ನಯ್ಯ, ಲೋಕೇಶ್ ಮೂರ್ತಿ, ಮಧುಕೇಶ್ವರ ಡಿ.ಚನ್ನಯ್ಯ, ಮಧುಕೇಶ್ವರ ಕೆ. ಚನ್ನಯ್ಯ ಸೇರಿದಂತೆ ದೊಡ್ಡ ಕೇರಿ ಹಾಗೂ ಬನವಾಸಿಯ ನೂರಾರು ಗ್ರಾಮಸ್ಥರು ಪಾಲ್ಗೊಂಡಿದ್ದರು.

ವಿಶ್ವ ಭೂ ದಿನ ಸಪ್ತಾಹ ಯಶಸ್ವಿ

ಹಳಿಯಾಳ: ಭಾರತ ಪರಿಸರ ಯೋಜನೆ 2026ರ ಅಡಿಯಲ್ಲಿ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯವು ವಿಶ್ವ ಭೂ ದಿನ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಪರಿಸರ ಸುಸ್ಥಿರತೆ ಹಾಗೂ ಸಂರಕ್ಷಣೆ ಕುರಿತಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಈ ಸಪ್ತಾಹದಲ್ಲಿ ಕೈಗೊಳ್ಳಲಾಯಿತು.

ಮಹಾವಿದ್ಯಾಲಯದ 180 ಕ್ಕೂ ಅಧಿಕ ವಿದ್ಯಾರ್ಥಿಗಳು ಸ್ಥಳೀಯ ಸುತ್ತಮುತ್ತಲಿನ ಹಳ್ಳಿಗಳಿಗೆ ತೆರಳಿ ತ್ಯಾಜ್ಯ ನಿರ್ವಹಣೆ, ಹಸಿ ಕಸ ಹಾಗೂ ಒಣ ಕಸ ಬೇರ್ಪಡಿಸುವಿಕೆ, ಪ್ಲಾಸ್ಟಿಕ್ ಕಸ ನಿರ್ವಹಣೆ, ನೀರು ಸಂರಕ್ಷಣೆ ಕುರಿತಾಗಿ ಕಾಲ್ನಡಿಗೆ ಅಭಿಯಾನದ ಮುಖಾಂತರ ಜಾಗೃತಿ ಮೂಡಿಸಿದರು. ಗಿಡಗಳನ್ನು ನೆಟ್ಟು ವಿದ್ಯಾರ್ಥಿಗಳು ಪರಿಸರ ಕಾಳಜಿ ಮೆರೆದರು. ಭಾರತ ಪರಿಸರ ಯೋಜನೆಯಡಿ ಮಹಾವಿದ್ಯಾಲಯದ ಆವರಣದಲ್ಲಿ ಪರಿಸರ ಸಂರಕ್ಷಣೆ ಕುರಿತಾಗಿ ಉಪನ್ಯಾಸ ಕಾರ್ಯಕ್ರಮ ಈ ಅವಧಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಇಕೋ ಕ್ಲಬ್ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮವನ್ನು ಪ್ರೊ. ರಾಕೇಶ್ ಪಾಟೀಲ್ ಸಂಯೋಜಿಸಿದ್ದರು. ಪರಿಸರ ಸಂರಕ್ಷಣಾ ಕಾರ್ಯದಲ್ಲಿ ವಿಡಿಐಟಿಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸದಾ ಸಕ್ರಿಯವಾಗಿದ್ದಾರೆ ಎಂದು ಪ್ರಾಚಾರ್ಯ ಡಾ.ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಾಂಗ್ರೆಸ್ ಸಚಿವರಿಂದ ಕೀಳು ಮಟ್ಟದ ರಾಜಕಾರಣ: ನಾಯ್ಕ

ಹೊನ್ನಾವರ: ತಾಲೂಕಿನ ಮಂಕಿ ಪಪಂ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಸಚಿವರು ಬಿಜೆಪಿಯ ಜನಪ್ರತಿನಿಧಿಗಳನ್ನು ನಿರ್ಲಕ್ಷಿಸಿ ಕೇಂದ್ರ ಸರ್ಕಾರದ 'ಅಮೃತ್' ಕುಡಿಯುವ ನೀರಿನ ಯೋಜನೆಯ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಂಡು ಕೀಳು ಮಟ್ಟದ ರಾಜಕಾರಣ ಮಾಡುತ್ತಿದ್ದಾರೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಮಂಜುನಾಥ ನಾಯ್ಕ ಆರೋಪಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಕಿ ಪಪಂ ವ್ಯಾಪ್ತಿಯಲ್ಲಿ 'ಅಮೃತ್ 2.0' ಯೋಜನೆಯನ್ನು ನಾವು ಸ್ವಾಗತ ಮಾಡುತ್ತೇವೆ. ನಗರಾಭಿವೃದ್ಧಿ ಇಲಾಖೆ ಮತ್ತು ಸಚಿವರು ನಿಯಮ ಗಾಳಿಗೆ ತೂರಿ, ತರಾತುರಿಯಲ್ಲಿ ಪ್ರೊಟೊಕಾಲ್ ಉಲ್ಲಂಘನೆ ಮಾಡಿ ರಾಜಕೀಯವಾಗಿ ಬಳಸಿಕೊಳ್ಳುತ್ತಿರುವುದನ್ನು ಖಂಡಿಸುತ್ತೇವೆ. ಬಿಜೆಪಿಯ ಎಲ್ಲ ಜನಪ್ರತಿನಿಧಿಗಳು ಉಸ್ತುವಾರಿ ಸಚಿವರ ಕೀಳು ಮಟ್ಟದ ರಾಜಕೀಯವನ್ನು ಖಂಡಿಸಿ ಸಭೆಯನ್ನು ಬಹಿಷ್ಕರಿಸುತ್ತೇವೆ ಎಂದರು.

ಮಾಜಿ ಸಚಿವ ಶಿವಾನಂದ ನಾಯ್ಕ ಮಾತನಾಡಿ, ಕೇಂದ್ರ ಸರ್ಕಾರದ ಯೋಜನೆ ಆಗಿರುವುದರಿಂದ ಸಂಸದರ ಸಮಯವನ್ನು ಕೇಳಿ ಕಾರ್ಯಕ್ರಮ ನಿಗದಿ ಮಾಡಬೇಕಿತ್ತು. ಅದನ್ನು ಮಾಡದೆ ಕಾಟಾಚಾರಕ್ಕೆ ಕರೆದು, ಅವರು ಬರದೆ ಇರಲಿ ಎಂದು ಮೇ 1ರಂದು ಆಮಂತ್ರಣ ನೀಡಿದ್ದಾರೆ. ಅಭಿವೃದ್ಧಿ ದೃಷ್ಟಿಯಲ್ಲಿ ನಾವೆಲ್ಲ ಒಟ್ಟಾಗಿ ಹೋಗಬೇಕಿದೆ. ಪಾರ್ಟಿ, ಪಂಗಡ ಎನ್ನುವುದು ಚುನಾವಣೆಗೆ ಮಾತ್ರ ಸೀಮಿತವಾಗಿರಬೇಕು. ಮಂಕಿ ಪಪಂ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯ ಉದ್ಘಾಟನೆಗೆ ಸಂಸದ ವಿಶ್ವೇಶ್ವರ ಹೆಗಡೆಯವರನ್ನು ಕಡೆಗಣಿಸಿರುವುದು ಖಂಡನಿಯ ಎಂದರು.



ಭಟ್ಕಳದ ಹಿರಿಯ ಮುಖಂಡರಾದ ಗೋವಿಂದ ನಾಯ್ಕ ಮಾತನಾಡಿ, ಯಾವುದೇ ಕಾರ್ಯಕ್ರಮ ಮಾಡುವಾಗ ಸ್ಥಳೀಯ ಆಡಳಿತದ ಗಮನಕ್ಕೆ ತರಬೇಕು. ಇವರು ಅದನ್ನು ಮಾಡದೆ ಆಮಂತ್ರಣ ಪತ್ರಿಕೆ ಪ್ರಿಂಟ್ ಮಾಡಿದ ಮೇಲೆ ಅವರಿಗೆ ತಿಳಿಸಿದ್ದಾರೆ. ಮಂಕಾಳ ವೈದ್ಯರ ಹತಾಶ ಮನೋಭಾವನೆ ಮೇಲ್ನೋಟಕ್ಕೆ ಸಾಬೀತು ಆಗಿದೆ. ಕ್ಷೇತ್ರದ ಜನ ಗಮನಿಸುತ್ತಿದ್ದಾರೆ. ಮೂರು ವರ್ಷ ಕಳೆದಿದೆ. ಸಂಸದರನ್ನು ಗಣನೆಗೆ ತೆಗೆದುಕೊಳ್ಳದೆ ತರಾತುರಿಯಲ್ಲಿ ಯೋಜನೆ ಉದ್ಘಾಟನೆಗೆ ಮುಂದಾಗಿದ್ದಾರೆ. ಈ ಕ್ಷೇತ್ರದಲ್ಲಿ ಮಂಕಾಳ ವೈದ್ಯರು ಮತ್ತೆ ಗೆಲ್ಲುವುದಿಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿ ಖುರ್ಚಿ ಕಿತ್ತಾಟದಿಂದ ಇಡಿ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ ಎಂದು ಆರೋಪಿಸಿದರು.ಮಂಕಿ ಪಪಂ ಅಧ್ಯಕ್ಷೆ ಸವಿತಾ ನಾಯ್ಕ ಮಾತನಾಡಿದರು. ಭಟ್ಕಳ ಮಂಡಳ ಅಧ್ಯಕ್ಷ ಸುಬ್ರಾಯ ದೇವಾಡಿಗ, ಬಿಜೆಪಿಯ ಮುಖಂಡರಾದ ಈಶ್ವರ ನಾಯ್ಕ, ಮಾಜಿ ಜಿ.ಪಂ. ಸದಸ್ಯ ದೀಪಕ ನಾಯ್ಕ, ಪ.ಪಂ.ಉಪಾಧ್ಯಕ್ಷೆ ಜ್ಯೋತಿ ಖಾರ್ವಿ, ಗಣಪತಿ ಬಿ.ಟಿ., ಗಣಪತಿ ಗೌಡ ಚಿತ್ತಾರ, ವಿಘ್ನೇಶ್ ಹೆಗಡೆ, ಪಪಂ ಸದಸ್ಯರು ಇದ್ದರು.

ಕಿರುಸುದ್ದಿ

ರುಚಿ ಬಿಂದಲ್ ವರ್ಗಾವಣೆ



ಹಾವೇರಿ: ಜಿಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ರುಚಿ ಬಿಂದಲ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿ ಆದೇಶಿಸಿದೆ. ರುಚಿ ಬಿಂದಲ್ ಅವರು ರಾಜ್ಯ ಸರ್ಕಾರದ ಹಣಕಾಸು ಇಲಾಖೆಯ ಉಪಕಾರ್ಯದರ್ಶಿ ಹುದ್ದೆಗೆ ವರ್ಗಾವಣೆಗೊಂಡಿದ್ದಾರೆ. 2020ರ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ ರುಚಿ ಬಿಂದಲ್ ಅವರು 2025ರ ಫೆಬ್ರವರಿ 21ರಂದು ಹಾವೇರಿ ಜಿಪಂ ಸಿಇಒ ಆಗಿ ಅಧಿಕಾರ ವಹಿಸಿಕೊಂಡಿದ್ದರು. ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳು, ಗ್ರಾಮೀಣ ಗ್ರಂಥಾಲಯಗಳ ಅಭಿವೃದ್ಧಿ ಸೇರಿದಂತೆ ಹಲವು ಅಭಿವೃದ್ಧಿಪರ ಕಾರ್ಯಗಳಿಂದ ಜನಪ್ರಿಯರಾಗಿದ್ದರು. ಸದ್ಯ ರುಚಿ ಬಿಂದಲ್ ಅವರಿಂದ ತೆರವಾಗಿರುವ ಹಾವೇರಿ ಜಿಪಂ ಸಿಇಒ ಸ್ಥಾನಕ್ಕೆ ಸರ್ಕಾರ ಬೇರೆ ಅಧಿಕಾರಿಯನ್ನು ನಿಯೋಜನೆ ಮಾಡಿಲ್ಲ.

ಇಂದು ವಿದ್ಯುತ್ ವ್ಯತ್ಯಯ

ಹಾವೇರಿ: ಗುತ್ತಲ 110 ಕೆ.ವ್ಹಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮೇ 3ರಂದು ಭಾನುವಾರ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಗುತ್ತಲ, ಹೊಸರಿತ್ತಿ ಮತ್ತು ನೀರಲಗಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೃದಯಾಘಾತ: ಯುವಕ ಸಾವು

ಹಾವೇರಿ: ಸ್ನೇಹಿತರ ಮದುವೆಗೆಂದು ಬಂದಿದ್ದ ಧಾರವಾಡ ಮೂಲದ ಯುವಕರೊಬ್ಬರು ಹಾರ್ಟ್ ಅಟ್ಯಾಕ್ ಆಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಗುತ್ತಲ ಪಟ್ಟಣದಲ್ಲಿ ನಡೆದಿದೆ. ಧಾರವಾಡ ಜಿಲ್ಲೆಯ ನಾಗಲಾವಿ ಗ್ರಾಮದ ಫಯಾಜ್ ಗುಡೂಸಾಬ ಪಟ್ಟೆವಾಲೆ (29) ಮೃತ ದುರ್ದೈವಿಯಾಗಿದ್ದಾರೆ. ಮೃತರು ಗುತ್ತಲ ಪಟ್ಟಣಕ್ಕೆ ಸ್ನೇಹಿತರ ಮದುವೆಗೆಂದು ಬಂದಿದ್ದು, ತೀವ್ರ ಎದೆನೋವು ಕಾಣಿಸಿಕೊಂಡಿದೆ. ಕೂಡಲೆ ಆತನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ, ನಂತರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದಾನೆ ಎಂದು ಮೃತನ ಸಹೋದರ ನಿಯಾಜ್ ಪಟ್ಟೆವಾಲೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ: ವ್ಯಕ್ತಿ ಸಾವು

ಹಾವೇರಿ: ಸ್ಕೂಟಿಗೆ ಕಂಟೇನರ್ ಲಾರಿ ಡಿಕ್ಕಿ ಹೊಡೆದಿದ್ದರಿಂದ ಸ್ಕೂಟಿ ಸವಾರ ಸ್ಥಳದಲ್ಲಿ ಸಾವನ್ನಪ್ಪಿದ ಘಟನೆ ಇಲ್ಲಿಯ ತೋಟದ ಯಲ್ಲಾಪುರ ಓವರ್ ಬ್ರಿಡ್ಜ್ ಬಳಿ ನಡೆದಿದೆ. ಇಲ್ಲಿಯ ನೇತಾಜಿ ನಗರದಲ್ಲಿ ವಾಸವಿದ್ದ ಹೊಸ ಹಲಸೂರು ಗ್ರಾಮದ ಮಂಜುನಾಥ ಗಂಗಾಧರ ತುಳಜಿ (47) ಮೃತ ದುರ್ದೈವಿ ಎಂದು ಗುರುತಿಸಲಾಗಿದೆ. ಬೆಂಗಳೂರಿನ ಚಾಮುಂಡಿ ನಗರದ ಜಿ.ಕಾರ್ತಿಕ್ ಎಂಬ ಕಂಟೇನರ್ ಚಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿ ಹರಿಹರ ಕಡೆಯಿಂದ ಹುಬ್ಬಳ್ಳಿ ಕಡೆಗೆ ಹೋಗುತ್ತಿರುವಾಗ ಈ ಘಟನೆ ಸಂಭವಿಸಿದೆ. ಅಪಘಾತದಲ್ಲಿ ಸ್ಕೂಟಿ ಸವಾರ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಮೃತನ ಪತ್ನಿ ಕವನಾ ಮಂಜುನಾಥ ತುಳಜಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಬಾಧೆ : ನೇಣು ಬಿಗಿದುಕೊಂಡು ಸಾವು

ಹಾವೇರಿ: ಸಾಲಬಾಧೆ ತಾಳಲಾರದೆ ವ್ಯಕ್ತಿಯೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸವಣೂರ ತಾಲೂಕು ಹಿರೇಮುಗದೂರು ಗ್ರಾಮದಲ್ಲಿ ನಡೆದಿದೆ. ಸವಣೂರ ತಾಲೂಕು ಹಿರೇಮುಗದೂರು ಗ್ರಾಮದ ಜಡಯ್ಯ ವೀರಯ್ಯ ಕೆಂಭಾವಿಮಠ (46) ಮೃತ ದುರ್ದೈವಿ. ಈತ ವೃತ್ತಿಯಲ್ಲಿ ಡ್ರೈವರ್ ಆಗಿದ್ದು, ಕೃಷಿ ಕೆಲಸದ ಸಂಬಂಧ ಹಾಗೂ ಮನೆತನದ ನಿರ್ವಹಣೆಗಾಗಿ ವಿವಿಧ ಬ್ಯಾಂಕ್, ಫೈನಾನ್ಸ್‌ಗಳಲ್ಲಿ ಹಾಗೂ ಕೈಗಡವಾಗಿ ಸುಮಾರು 14 ಲಕ್ಷ ರೂ.ಸಾಲ ಮಾಡಿಕೊಂಡಿದ್ದಾರೆ. ಹೊಲ ಮಾರಿದರೂ ಸಾಲ ತೀರಲಿಲ್ಲಾ ಎನ್ನುವ ಚಿಂತೆಯಲ್ಲಿ ಮನನೊಂದು ಮನೆಯ ಹಿಂದಿನ ಬೇವಿನಗಿಡಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತನ ಪತ್ನಿ ಶಿಲ್ಪಾ ಕೆಂಬಾವಿಮಠ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ : ನಗರದ ಯಾಲಕ್ಕಿ ಓಣಿಯ ಹರಸೂರು ಬಣ್ಣದಮಠದ ಜಾತ್ರಾ ಮಹೋತ್ಸವಕ್ಕೆ ಶನಿವಾರ ಅದ್ದೂರಿ ಚಾಲನೆ ದೊರೆಯಿತು. ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣವನ್ನು ಗೌರಿಮಠದ ಶಿವಯೋಗಿ ಶಿವಾಚಾರ್ಯ ಶ್ರೀಗಳು ಹಾಗೂ ಪೀಠಾಧ್ಯಕ್ಷರಾದ ಅಭಿನವ ರುದ್ರ ಚನ್ನಮಲ್ಲಿಕಾರ್ಜುನ ಶ್ರೀಗಳು ನೆರವೇರಿಸಿದರು. ಪ್ರಕಾಶ ಮುಂಜೋಜಿ, ಬಸವರಾಜ ಜಾಬಿನ, ವೀರಣ್ಣ ಪಾಟೀಲ, ಮಲ್ಲಿಕಾರ್ಜುನ ಕಟ್ಟಿಮನಿ, ಮಂಜುನಾಥ ತಾಂಡೂರ, ಶಿವಸಪ್ಪ ಚೌಶೆಟ್ಟಿ, ಜಗದೀಶ ಕನವಳ್ಳಿ, ವಿಜಯಕುಮಾರ ಕೂಡ್ಲಪ್ಪನವರ, ಮಮತಾ ಜಾಬಿನ್, ಸೌಭಾಗ್ಯ ಹಿರೇಮಠ, ಗಿರಿಜಾ ಸಾತೇನಹಳ್ಳಿ ಇದ್ದರು.

ಪಿಡಿಒ ಸುನಿತಾಗೆ ಅತ್ಯುತ್ತಮ ಸೇವಾ ಪುರಸ್ಕಾರ

ಹಾವೇರಿ: ಜಿಪಂ ಸಭಾಂಗಣದಲ್ಲಿ ಇತ್ತೀಚೆಗೆ ರಾಷ್ಟ್ರೀಯ ಪಂಚಾಯತ ರಾಜ್ಯ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಗ್ರಾಪಂ ಯೋಜನೆಗಳನ್ನು ಗ್ರಾಮೀಣ ಜನರಿಗೆ ಉತ್ತಮ ಆಡಳಿತ ತಲುಪಿಸುವಲ್ಲಿ ಯಶಸ್ವಿಯಾದ ಸಾಧಕ ಪಿಡಿಒಗಳಿಗೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರುಚಿ ಬಿಂದಲ್ ಅವರು ಅತ್ಯುತ್ತಮ ಸೇವಾ ಪುರಸ್ಕಾರ ಪ್ರದಾನ ಮಾಡಿ ಸನ್ಮಾನಿಸಿದರು.



ದೇವಗಿರಿ ಗ್ರಾಪಂಯಲ್ಲಿ ಸಮರ್ಪಕ ಕುಡಿಯುವ ನೀರು, ಅಂಗನವಾಡಿ ಅಭಿವೃದ್ಧಿ, ಗ್ರಾಪಂ ಕಚೇರಿ ಆಧುನೀಕರಣ ಮಾಡಲಾಗಿದೆ. ಎಂಜಿ ಎನ್‌ಆರ್‌ಇಜಿ ಅಭಿವೃದ್ಧಿ ಕಾರ್ಯ, ಘನ ತ್ಯಾಜ್ಯ ವಿಲೇವಾರಿ ನಿರ್ವಹಣೆ, ರಸ್ತೆ, ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಅಚ್ಚುಕಟ್ಟಾಗಿ ಕಲ್ಪಿಸಿಕೊಟ್ಟು ಮಾದರಿ ಪಂಚಾಯಿತಿಯಾಗಿ ನಿರ್ಮಾಣ ಮಾಡಿದ ಸಾಧಕಿ ಪಿಡಿಒ ಸುನಿತಾ ಗರಡಿ ಅವರಿಗೆ ಅತ್ಯುತ್ತಮ ಸಾಧನಾ ಪುರಸ್ಕಾರ ಪ್ರಧಾನ ಮಾಡಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜಿಪಂ ಸಿಇಒ ರುಚಿ ಬಿಂದಲ್, ಉಪಕಾರ್ಯದರ್ಶಿ ಡಾ. ಪುನೀತ್ ಯೋಜನಾ ನಿರ್ದೇಶಕಿ ರೇಖಾ ಡೊಳ್ಳಿನ ಸೇರಿದಂತೆ ಅನೇಕ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.



ಹಾವೇರಿ: ಸವಣೂರು ತಾಲೂಕು ಇಚ್ಚಂಗಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ರಥೋತ್ಸವ ವಾದ್ಯಗಳೊಂದಿಗೆ ಅದ್ದೂರಿಯಾಗಿ ಸಂಭ್ರಮದಿಂದ ಜರುಗಿತು.

ಎಫ್‌ಐಡಿ ಕಡ್ಡಾಯ ರದ್ದು ಪಡಿಸಲು ರೈತರ ಆಗ್ರಹ

ಶಿಗ್ಗಾವಿ: ರಸಗೊಬ್ಬರ ಖರೀದಿಗೆ ಸರ್ಕಾರ ಎಫ್‌ಐಡಿ ಕಡ್ಡಾಯಗೊಳಿಸಿರುವುದನ್ನು ಖಂಡಿಸಿ, ಅದನ್ನು ಕೂಡಲೇ ರದ್ದುಗೊಳಿಸುವಂತೆ ಆಗ್ರಹಿಸಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು, ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ರಾಷ್ಟ್ರೀಯ ಹೆದ್ದಾರಿ ತಡೆದು ಶನಿವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಅಂಚೆ ಕಚೇರಿಯಿಂದ ಆರಂಭವಾದ ರೈತ ಮುಖಂಡರಗಳ ಪ್ರತಿಭಟನೆ ರಾಷ್ಟ್ರೀಯ ಹೆದ್ದಾರಿ ತಡೆದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ನಂತರ ರೈತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ, ಕೃಷಿ ಇಲಾಖೆಯ ಸಹಾಯಕ ಉಪನಿರ್ದೇಶಕ ಶಿವಕುಮಾರ ಮಲ್ಲಾಡದ ಅವರಿಗೆ ಮನವಿ ಸಲ್ಲಿಸಿ, ಕೂಡಲೇ ಸರ್ಕಾರದ ಗಮನಕ್ಕೆ ತಂದು ಪರಿಹಾರ ಕಲ್ಪಿಸುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಭುವನೇಶ್ವರ ಶಿಡ್ಲಾಪುರ, ರಸಗೊಬ್ಬರ ಖರೀದಿಗೆ ಎಫ್‌ಐಡಿ ಕಡ್ಡಾಯಗೊಳಿಸಿರುವುದರಿಂದ ರೈತರಿಗೆ ಮುಂದಿನ ದಿನಗಳಲ್ಲಿ ತುಂಬಾ ಸಮಸ್ಯೆಯಾಗಲಿದೆ ಎಂದರು.

ರೈತ ಸಂಘದ ಹಸಿರುಸೇನೆ ಉಪಾಧ್ಯಕ್ಷ ಶಂಕರಗೌಡ ಪಾಟೀಲ ಮಾತನಾಡಿ, ಬೆಳೆಗೆ ಅಗತ್ಯ ಇರುವಷ್ಟು ರಸಗೊಬ್ಬರ ಸಿಗದಿದ್ದಲ್ಲಿ ಬೆಳೆಗಳ ಇಳುವರಿ ಕುಂಠಿತಗೊಳ್ಳುವ ಸಾಧ್ಯತೆ ಹೆಚ್ಚು. ಸರ್ಕಾರ ಎಫ್‌ಐಡಿ ಕಡ್ಡಾಯಗೊಳಿಸಿದ್ದು ಇದನ್ನು ಕೂಡಲೇ ಕೈಬಿಡಬೇಕು. ತಾಲೂಕಿನ ಗೊಬ್ಬರ ವ್ಯಾಪಾರಸ್ಥರು ರೈತರಿಗೆ ಲಿಂಕ್ ಮೂಲಕ ಗೊಬ್ಬರ ಕೊಡುವುದನ್ನು ತಕ್ಷಣ ನಿಲ್ಲಿಸಬೇಕು. ರೈತನಿಗೆ ಅಗತ್ಯವಿರುವ ಗೊಬ್ಬರವನ್ನು ಸರ್ಕಾರಗಳು ಸಮರ್ಪಕವಾಗಿ ಪೂರೈಸಬೇಕು ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರವೇ ಅಧ್ಯಕ್ಷ ಸಂತೋಷಗೌಡ ಪಾಟೀಲ, ಬಸಲಿಂಗಪ್ಪ ನರಗುಂದ, ಮಂಜುನಾಥ ಕಂಕಣವಾಡ, ಗಿರಿಧರಗೌಡ ಪಾಟೀಲ, ಲಕ್ಷ್ಮಣ ಹಂಚಿನಮನಿ, ಹನುಮಂತಗೌಡ ಏಗನಗೌಡ್ರ, ಶಂಭು ನಂದಿ, ಬಸನಗೌಡ ಏಗನಗೌಡ್ರು, ಬಸವರಾಜ ಗಂಜೀಗಟ್ಟಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು, ರೈತರು ಪಾಲ್ಗೊಂಡಿದ್ದರು.



> ರೈತರು ಎಕರೆಗೆ ಮೂರ್‍ನಾಲ್ಕು ಚೀಲ ರಸಗೊಬ್ಬರ ಬಳಸುವುದು ಸಾಮಾನ್ಯ. ಆದರೆ, ಸರ್ಕಾರ ಎಫ್‌ಐಡಿ ಕಡ್ಡಾಯ ಜಾರಿಗೊಳಿಸುವ ಮೂಲಕ ಪ್ರತಿ ರೈತರಿಗೆ ಒಂದು ಚೀಲ ಗೊಬ್ಬರ ವಿತರಣೆ ಮಾಡುವ ಹುನ್ನಾರ ನಡೆಸಿದೆ. ತಕ್ಷಣ ಎಫ್‌ಐಡಿ ಕಡ್ಡಾಯ ಎಂಬದನ್ನು ರದ್ದುಪಡಿಸಬೇಕು.
> ■ ಭುವನೇಶ್ವರ ಶಿಡ್ಲಾಪುರ, ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ

- ಎಫ್‌ಐಡಿ ಕಡ್ಡಾಯದಿಂದ ರೈತರಿಗೆ ಸಮಸ್ಯೆ
- ಬೆಳೆಗೆ ಅಗತ್ಯ ಇರುವಷ್ಟು ರಸಗೊಬ್ಬರ ಸಿಗದಿದ್ದಲ್ಲಿ ಬೆಳೆಗಳ ಇಳುವರಿ ಕುಂಠಿತ

ಕಾಮಗಾರಿಗೆ ಶಾಸಕ ಭೂಮಿಪೂಜೆ

ರಾಣೇಬೆನ್ನೂರ: ಜನರ ಸಮಸ್ಯೆ ಬಗೆಹರಿಸಲು ನಮ್ಮ ಕಾಂಗ್ರೆಸ್ ಸರ್ಕಾರ ಸದಾ ಸಿದ್ಧವಿದೆ. ವಿಪಕ್ಷಗಳು ಕೇವಲ ಟೀಕೆಗಳನ್ನು ಮಾಡುತ್ತವೆ ಹೊರತು ನಮ್ಮ ಅಭಿವೃದ್ಧಿ ನೋಡುತ್ತಿಲ್ಲ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ಶನಿವಾರ ತಾಲೂಕಿನ ಗುಡ್ಡದಬೇವಿನಹಳ್ಳಿ ಗ್ರಾಮದಲ್ಲಿ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಯೋಜನೆಯಡಿ3 ಕೋಟಿರೂ.ಗಳ ಅನುದಾನದಲ್ಲಿ ಗುಡ್ಡದಬೇವಿನಹಳ್ಳಿಯಿಂದ ಸುಣಕಲ್ಲಬಿದರಿ ಗ್ರಾಮದ ವರೆಗೆ ಸಿಸಿ ರಸ್ತೆ ಮತ್ತು ಎರಡು ಬದಿ ಗಟಾರ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಗ್ಯಾರಂಟಿಯಿಂದ ಸರ್ಕಾರ ಖಜಾನೆ ಖಾಲಿಯಾಗಿದೆ ಎಂದು ಆರೋಪ ಮಾಡುವರಿಗೆ ಸರ್ಕಾರ ಗ್ರಾಮಗಳ ಅಭಿವೃದ್ಧಿಗೆ ಕೊಟ್ಯಾಂತರ ಹಣ ಖರ್ಚು ಮಾಡುವ ಮೂಲಕ ಉತ್ತರ ನೀಡುತ್ತಿದೆ ಈ ಬಗ್ಗೆ ತಾಲೂಕಿನ ಗ್ರಾಮಗಳ ಜನರೇ ಉತ್ತರ ನೀಡುತ್ತಿದ್ದಾರೆ ಎಂದರು.

ಗ್ರಾಮದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲಾಗುತ್ತಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಮಾಡಬೇಕು ಜೊತೆಗೆ ನಿಗದಿತ ಅವಧಿಯೊಳಗೆ ಪೂರ್ಣ ಕಾಮಗಾರಿ ಮುಗಿಸಬೇಕು ಎಂದರು.

ಗ್ರಾಮಸ್ಥರು ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡಬೇಕು. ನಮ್ಮ ಸರ್ಕಾರ ಚುನಾವಣಾ ಪೂರ್ವದಲ್ಲಿ ಭರವಸೆ ನೀಡಿದಂತೆ ನಡೆದು ಕೊಂಡು ನುಡಿದಂತೆ ನಡೆದುಕೊಂಡಿದ್ದೇವೆ. ಬಿಜೆಪಿಯವರ ಸುಳ್ಳು ಮಾತಿಗೆ ಕಿವಿಗೊಡಬೇಡಿ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ನಿಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ವೀರನಗೌಡ ಪೋಲಿಸಗೌಡ್ರ, ದಾನಪ್ಪ ಸೂರಿ, ಲಕ್ಷಣ ಕುರಬರ, ಚನ್ನಬಸಪ್ಪ ಸಂಗನವರ, ಹಾಲಪ್ಪ ನಂದಿಗಾವಿ, ಭರಮಣ್ಣ ಹುಲ್ಲತ್ತಿ, ಲಕ್ಕಪ್ಪ ತಳವಾರ, ಮಲ್ಲಿಕಾರ್ಜುನ, ಮಾಲತೇಶ, ದಾದಾಪೀರ ಸೇರಿದಂತೆ ಮತ್ತಿತರರು ಇದ್ದರು.



ಉಷ್ಣಾಂಶ ಹೆಚ್ಚಳ: ಮುಂಜಾಗ್ರತೆಗೆ ಸಲಹೆ

ಹಾವೇರಿ: ಬೇಸಿಗೆಯಲ್ಲಿ ಬಿಸಿಲಿನ ತಾಪದಿಂದ ಉಷ್ಣಾಂಶವು ಹೆಚ್ಚಾಗಿರುವುದರಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ತಡೆಗೆ, ಸಾರ್ವಜನಿಕರು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಂ. ಜಯಾನಂದ ಅವರು ಸಲಹೆ ನೀಡಿದ್ದಾರೆ.



ಮುಂಜಾಗ್ರತಾ ಕ್ರಮಗಳು: ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಅಥವಾ ಛತ್ರಿಯನ್ನು ಬಳಸಿ ಹಾಗೂ ಜೊತೆಯಲ್ಲಿ ಶುದ್ಧ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಬೇಕು. ಹಗುರವಾದ ತಿಳಿ ಬಣ್ಣದ ಸಡಿಲವಾದ ಹತ್ತಿ ಬಟ್ಟೆಗಳನ್ನು ಬಳಸಿ. ಓಆರ್‌ಎಸ್., ಎಳನೀರು ಮತ್ತು ಮನೆಯಲ್ಲಿ ತಯಾರಿಸಿದ ಲಸ್ಸಿ, ಶರಬತ್, ಹಣ್ಣಿನ ರಸ ಹಾಗೂ ಮಜ್ಜಿಗೆಯನ್ನು ಬಳಸಿರಿ.

ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ಮತ್ತು ಸಾಧ್ಯವಾದಷ್ಟು ಹೆಚ್ಚು ಶುದ್ಧ ನೀರನ್ನು ಕುಡಿಯಬೇಕು. ಚಿಕ್ಕಮಕ್ಕಳು ಹಾಗೂ ವಯೋವೃದ್ಧರು ಮನೆಯಲ್ಲಿಯೇ ಇದ್ದು ವಿಶ್ರಾಂತಿ ಪಡೆಯಬೇಕು. ಬಿಸಿಯಾದ ಹಾಗೂ ಮಸಾಲೆಯುಕ್ತ ಆಹಾರವನ್ನು ಸೇವಿಸುವುದನ್ನು ಕಡಿಮೆ ಮಾಡಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಹಾಗೂ ಹಾನಿಕಾರಕ ತಂಪು ಪಾನೀಯಗಳನ್ನು ಸೇವಿಸಬಾರದು ಹಾಗೂ ಮನೆಯಿಂದ ಹೊರಗೆ ಹೋಗುವಾಗ ಕಡ್ಡಾಯವಾಗಿ ಪಾದರಕ್ಷೆಗಳನ್ನು ಬಳಸಬೇಕು.

ವೈದ್ಯರನ್ನು ಸಂಪರ್ಕಿಸಿ, 108/102ಕ್ಕೆ ಕರೆಮಾಡಿ: ಬಿಸಿಲಿನಲ್ಲಿರುವ ಯಾವುದೇ ವ್ಯಕ್ತಿ ಅಪಾಯದ ಚಿಹ್ನೆಗಳಾದ ತೊದಲು ಮಾತು, ಅರ್ಥರಹಿತವಾಗಿ ಬಡಬಡಿಸುವುದು, ಚರ್ಮ ಕೆಂಪಾಗುವುದು, ಬೆವರು ಕಡಿಮೆಯಾಗುವುದು, ದೇಹದ ಉಷ್ಣತೆ ಹೆಚ್ಚಾಗುವುದು, ದೀರ್ಘವಾದ ತೀವ್ರ ಉಸಿರಾಟವಿದ್ದಲ್ಲಿ ಕೂಡಲೇ ನೆರಳಿನ ಪ್ರದೇಶಕ್ಕೆ ಸ್ಥಳಾಂತರಿಸಿ, ಕೆಳಗೆ ಮಲಗಿಸಿ ದೇಹದ ಎಲ್ಲ ಭಾಗಗಳನ್ನು ಒದ್ದೆ ಬಟ್ಟೆಯಿಂದ ಒರೆಸಬೇಕು ಹಾಗೂ ಅಪಾಯದ ಚಿಹ್ನೆಗಳು ಮುಂದುವರೆದಲ್ಲಿ ಹತ್ತಿರದ ವೈದ್ಯರನ್ನು ಸಂಪರ್ಕಿಸಿ ಅಥವಾ 108/102ಕ್ಕೆ ಕರೆ ಮಾಡಬೇಕು. ಬಿಸಿಲಿನತಾಪದಿಂದಉಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕು ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಬೇಸಿಗೆಯಲ್ಲಿ ಬರಬಹುದಾದ ರೋಗಗಳ ಆರೈಕೆಗಾಗಿ ಒಆರ್‌ಎಸ್, ಐ.ವಿ. ಫ್ಲೂಯಿಡ್ಸ್ ಮತ್ತು ಜೀವರಕ್ಷಕ ಔಷಧಿಗಳು ಲಭ್ಯವಿದ್ದು ಬಿಸಿಲಿನ ತಾಪದಿಂದ ಉಂಟಾಗಬಹುದಾದ ಆರೋಗ್ಯ ತೊಂದರೆಗಳನ್ನು ನಿಭಾಯಿಸಲು ಇಲಾಖೆ ಸನ್ನದ್ಧವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> **ಮನೆಯಲ್ಲೇ ವಿಶ್ರಾಂತಿ ಪಡೆಯಲಿ**
> ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ಮತ್ತು ಸಾಧ್ಯವಾದಷ್ಟು ಹೆಚ್ಚು ಶುದ್ಧ ನೀರನ್ನು ಕುಡಿಯಬೇಕು. ಚಿಕ್ಕಮಕ್ಕಳು ಹಾಗೂ ವಯೋವೃದ್ಧರು ಮನೆಯಲ್ಲಿಯೇ ಇದ್ದು ವಿಶ್ರಾಂತಿ ಪಡೆಯಬೇಕು.

ಚುನಾವಣಾ ಫಲಿತಾಂಶದ ನಂತರ ಭಾರೀ ಬದಲಾವಣೆ



ಗುತ್ತಲ: ಕರ್ನಾಟಕ ರಾಜಕೀಯದಲ್ಲಿ ಪಂಚರಾಜ್ಯಗಳ ಹಾಗೂ ಮರು ಚುನಾವಣಾ ಫಲಿತಾಂಶದ ನಂತರ ರಾಜ್ಯದಲ್ಲಿ ಭಾರಿ ಬದಲಾವಣೆನಡೆಯಲಿದೆ. ಕಾಂಗ್ರೆಸ್ ಸರ್ಕಾರದ ಆಂತರಿಕ ಕಚ್ಚಾಟದಿಂದಾಗಿ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಜಾರಿಯಾದರೂ ಅಚ್ಚರಿಯಿಲ್ಲ ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಕೆ.ಎಸ್.ಸಿದ್ಧಬಸಪ್ಪ ಯಾದವ್ ಹೇಳಿದರು.

ಶನಿವಾರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದಲೂ ಭ್ರಷ್ಟಾಚಾರ ದುರಾಡಳಿತದಿಂದ ಸರ್ಕಾರ ನಡೆಸುವಲ್ಲಿ ವಿಫಲವಾಗಿದೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ನಡುವಿನ ನಡೆ ಸರ್ಕಾರವನ್ನು ಪತನದ ಅಂಚಿಗೆ ತಳ್ಳುತ್ತಿದೆ ಎಂದರು.

ಸಿ.ಎಂ.ರೇಸಿನಲ್ಲಿ ಕೈ ನಾಯಕರ ಮಧ್ಯೆ ಸ್ಪರ್ಧೆ ನಡೆಯುತ್ತಿದೆ. ಕೆಲವು ಪ್ರಭಾವಿ ಶಾಸಕರು ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ, ಡಿಕೆಶಿವಕುಮಾರರವರು ಈಗಾಗಲೇ ಮುಖ್ಯಮಂತ್ರಿಯಾಗಲು ತಯಾರಿ ನಡೆಸಿದ್ದಾರೆ, ಮೇ 10ರಂದು ಮುಹೂರ್ತ ಕೂಡ ನಿಗದಿಯಾಗಿದೆ ಎಂಬ ಸ್ಫೋಟಕ ಮಾಹಿತಿಯನ್ನು ಅವರು ಹಂಚಿಕೊಡಿರುವುದು ಅವರ ನಡೆ ಏನೆಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದರು.

ರಾಜ್ಯ ಸರ್ಕಾರದ ಆಡಳಿತ ವೈಖರಿಯಿಂದ ರಾಜ್ಯದ ಜನರು ಬೇಸತ್ತಿದ್ದಾರೆ, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಕೇವಲ ಖುರ್ಚಿ ಉಳಿಸಿಕೊಳ್ಳುವ ಆಟ ನಡೆಯುತ್ತಿದೆ. ಕಾಂಗ್ರೆಸ್ ಒಳಜಗಳದಿಂದಾಗಿ ರಾಜ್ಯದ ಆಡಳಿತ ಯಂತ್ರ ಕುಸಿದಿದೆ ಹೀಗಾಗಿ ಇವರ ಕಚ್ಚಾಟದಿಂದ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಬಂದರೂ ಅಚ್ಚರಿ ಇಲ್ಲ ಎಂದರು.

ಹೋರಾಟದಿಂದ ಕಾರ್ಮಿಕರು ಹಕ್ಕು ಪಡೆಯಲು ಸಾಧ್ಯ

ಹಾವೇರಿ: ವಿಶ್ವಕಾರ್ಮಿಕರ ದಿನಾಚರಣೆ ನಿಮಿತ್ತ ಜಿಲ್ಲಾ ಬಿಲ್ಡಿಂಗ್ ಕಟ್ಟಡ ಕಟ್ಟುವ ಕಾರ್ಮಿಕರ ಸಂಘದ ಪದಾಧಿಕಾರಿಗಳು ಇಲ್ಲಿನ ಸುಭಾಸ್ ಸರ್ಕಲ್‌ನಲ್ಲಿ ಕಾರ್ಮಿಕರಿಗೆ ಸಿಹಿ ವಿತರಿಸುವ ಮೂಲಕ ಕಾರ್ಮಿಕ ದಿನಾಚರಣೆಯನ್ನು ಆಚರಿಸಿದರು.



ಈ ಸಂದರ್ಭದಲ್ಲಿ ಜಿಲ್ಲಾ ಬಿಲ್ಡಿಂಗ್ ಕಟ್ಟಡ ಕಟ್ಟುವ ಕಾರ್ಮಿಕರ ಸಂಘದ ಅಧ್ಯಕ್ಷ ದಾವಲಸಾಬ ಹಿರೇಮುಗದೂರ ಮಾತನಾಡಿ, ಎಲ್ಲಾ ಶ್ರಮಜೀವಿಗಳನ್ನು ನೆನೆದು ವಿಶ್ವ ಕಾರ್ಮಿಕ ದಿನಾಚರಣೆಯನ್ನು ಆಚರಿಸುತ್ತೇವೆ. ಆದರೆ ದುಡಿಯುವ ವರ್ಗದವರ ಭವಣೆ ನಿಂತಿಲ್ಲ. ಕಾರ್ಮಿಕರಿಗಾಗಿ ಸರ್ಕಾರದ ಹತ್ತಾರು ಸೌಲಭ್ಯಗಳಿವೆ. ಆದರೆ ಸಂಘಟನೆ ಮತ್ತು ಹೋರಾಟದ ಕೊರತೆಯಿಂದ ಅರ್ಹ ಕಾರ್ಮಿಕರಿಗೆ ಹಕ್ಕುಗಳು ದೊರೆಯುತ್ತಿಲ್ಲ ಎಂದು ವಿಷಾದಿಸಿದರು.

ನಕಲಿ ಕಾರ್ಮಿಕ ಕಾರ್ಡ್‌ನೆಪದಲ್ಲಿ ಜಿಲ್ಲೆಯ ಕಾರ್ಮಿಕ ಇಲಾಖೆಯ ಅಧಿಕಾರಿಗಳು ನೂರಾರು ಅರ್ಹ ಕಾರ್ಮಿಕರ ಕಾರ್ಡ್‌ಗಳನ್ನು ರದ್ದುಮಾಡುವ ಮೂಲಕ ಶ್ರಮಜೀವಿಗಳಿಗೆ ಅನ್ಯಾಯ ಮಾಡಿದ್ದಾರೆ. ಅರ್ಹ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯಗಳು ದೊರೆಯಲೇ ಬೇಕು. ನಾವು ಯಾರ ಹಕ್ಕನ್ನು ಕಸಿದುಕೊಳ್ಳುತ್ತಿಲ್ಲ. ಅರ್ಹ ಕಾರ್ಮಿರಿಗೆ ಸರ್ಕಾರದಿಂದ ಸಿಗಬೇಕಾದ ನ್ಯಾಯಯುತ ಹಕ್ಕುಗಳನ್ನು ಕೇಳುತ್ತಿದ್ದೇವೆ. ನಾವು ಸಂಘಟಿತರಾಗಿ ಹೋರಾಟ ಮಾಡಿದರೆ ನಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯ ಎಂದರು.

ಈ ವೇಳೆ ಜಿಲ್ಲಾ ಬಿಲ್ಡಿಂಗ್ ಕಟ್ಟಡ ಕಾರ್ಮಿಕರ ಸಂಘದ ಮುಖಂಡರಾದ ನಜೀರಸಾಬ ಪಟೇಲ, ಗುಲ್ಜಾರ ಗಣಜೂರ, ಸಂಜೀವಪ್ಪ ಹರಪನಹಳ್ಳಿ, ಹಸನಸಾಬ ಗಣಜೂರ, ಮಾರುತಿ ಕದರಮಂಡಲಗಿ, ನಾಗರಾಜ ಮಲಗೋಡ, ಬಸಯ್ಯ ಕುಲಕರ್ಣಿ, ರಿಯಾಜಅಹ್ಮದ ಕೊಟ್ಟಿಗೇರಿ, ಮಹಮ್ಮದ ರಫೀಕ ದೇವಗಿರಿ, ರಿಯಾಜ್ ಅಹ್ಮದ್ ದೇವಿಹೊಸೂರ, ಮಹಬೂಬಖಾನ ಪಠಾಣ, ಪ್ರಕಾಶ ಅರಸನಾಳ, ಮಾರುತಿ ಮುಳಗುಂದ, ಅಲ್ಲಾಉದ್ದಿನ, ವೆಂಕಟೇಶ ಹರಪಮಹಳ್ಳಿ, ಸುಬಾನ ಪಟೇಲ್, ಮಹ್ಮದಖಾನ ಗುತ್ತಲ ಇತರರಿದ್ದರು.

ಗುರುವಿನ ಮಾರ್ಗದಲ್ಲಿ ಮುನ್ನಡೆಯಿರಿ: ಬಳ್ಳಾರಿ

ಹಾವೇರಿ: ಯುವ ಜನತೆ ಯಾವುದೇ ದುಶ್ಚಟ ಗಳಿಗೆ ಒಳಗಾಗದೇ ತಂದೆ ತಾಯಂದಿರು ಹಾಗೂ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದು ಜಿಲ್ಲೆಗೆ ಕೀರ್ತಿ ತಂದ ಹಾಗೆಯೇ, ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರುವ ಮೂಲಕ ನಾಡಿನ ಕೀರ್ತಿ ಹೆಚ್ಚಿಸಬೇಕೆಂದು ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಕರೆ ನೀಡಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಶನಿವಾರ ಯುವ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ದ್ವಿತೀಯ ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ಜಿಲ್ಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಕೃಷಿ ಪ್ರಧಾನವಾದ ಹಾವೇರಿ ಜಿಲ್ಲೆಯಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರು ಹೆಚ್ಚಿದ್ದಾರೆ. ಆದರೂ ಕೂಡ ಶಿಕ್ಷಣ ಪಡೆಯುವಲ್ಲಿ ಜಿಲ್ಲೆಯ ಜನ ಹಿಂದೆ ಬಿದ್ದಿಲ್ಲ. ಈ ವರ್ಷದ ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿರುವುದು ಜಿಲ್ಲೆಯ ಜನತೆ ಹೆಮ್ಮೆ ಪಡುವಂತಹ ಅಭಿಮಾನದ ಸಂಗತಿ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಿ.ಎಸ್. ಮಾಳಗಿ ಮಾತನಾಡಿ, ಬಸವಣ್ಣನವರ ಅಂದಿನ ಕಾಲದಲ್ಲಿ ವಚನ ಸಾಹಿತ್ಯದಲ್ಲಿ ಯಾವ ರೀತಿ ಸಾಧನೆಗೈದು ಜಗತ್ತಿಗೆ ಹೆಸರುವಾಸಿಯಾದರೋ, ಅದೇ ತೆರನಾಗಿ ನೀವು ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆಗೈದು ಜಗತ್ತೆ ನಿಮ್ಮ ಬಗ್ಗೆ ಹೆಮ್ಮೆ ಪಡುವಂತಹ ವ್ಯಕ್ತಿಗಳಾಗಬೇಕು. ನಮ್ಮ ಸಂಸ್ಕೃತಿಯನ್ನು ವಿಶ್ವಾದ್ಯಂತ ಪಸರಿಸುವ ಕೆಲಸ ಮಾಡಬೇಕೆಂದು ತಿಳಿಸಿದರು.

ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ ಮಾತನಾಡಿ, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿ ಜೀವನದ ಮಹತ್ವದ ಘಟ್ಟ, ನೀವು ಮಾಡಿರುವ ಈ ಸಾಧನೆ ಇಲ್ಲಿಗೆ ನಿಲ್ಲಬಾರದು, ಮುಂದಿನ ದಿನಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಐಎಎಸ್, ಐಪಿಎಸ್, ಕೆಎಎಸ್, ಎಂಬಿಬಿಎಸ್ ನಂತಹ ಉನ್ನತ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ದೊಡ್ಡ ಅಧಿಕಾರಿಗಳಾಗಿ ನಮ್ಮ ಜಿಲ್ಲೆಗೆ ಮತ್ತು ತಾಲೂಕಿಗೆ ಕೀರ್ತಿ ತರಬೇಕು ಎಂದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನೀಲಪ್ಪ ಚಾವಡಿ, ಸಂತೋಷ ಆಲದಕಟ್ಟಿ, ಸಿದ್ದು ಚಿಕ್ಕಬಿದರಿ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಭರತ ಹೊಸಮನಿ, ವಿವೇಕ್ ರಾಮಗೇರಿ, ಶಹರ ಘಟಕದ ಅಧ್ಯಕ್ಷ ಕಿರಣ ಕೊಳ್ಳಿ, ಮಹಿಳಾ ಮೋರ್ಚಾ ಶಹರ ಅಧ್ಯಕ್ಷೆ ರೋಹಿಣಿ ಪಾಟೀಲ, ಬ್ಯಾಡಗಿ ಮಂಡಲ ಅಧ್ಯಕ್ಷ ನಿಂಗಪ್ಪ ಬಟ್ಟಲಕಟ್ಟಿ, ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡ ಮಲ್ಲಿಕಾರ್ಜುನ ಬಳ್ಳಾರಿ, ಆಕ್ಸಫರ್ಡ ಕಾಲೇಜಿನ ಪ್ರಾಚಾರ್ಯ ಪ್ರಶಾಂತ ಬೆನ್ನೂರ ಸೇರಿದಂತೆ ಪಕ್ಷದ ವಿವಿಧ ಮೋರ್ಚಾಗಳ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ಹಕ್ಕುಪತ್ರ ವಿತರಣೆಗೆ ಶೀಘ್ರ ಕ್ರಮ: ಶಾಸಕ ಮಾನೆ

ಹಾನಗಲ್ಲ: ತಂದೆ, ಅಜ್ಜನ ಕಾಲದಿಂದ ದಾಖಲೆ ರಹಿತವಾಗಿ ಅತಂತ್ರ ಸ್ಥಿತಿಯಲ್ಲಿ ವಾಸಿಸುತ್ತಿದ್ದ ತಾಲೂಕಿನ 13 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವ ನೀಡಲಾಗುತ್ತಿದೆ. ಈಗಾಗಲೇ 7 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸುವ ಕಾರ್ಯ ಚಾಲನೆ ಪಡೆದಿದ್ದು, ಇನ್ನುಳಿದ ಕುಟುಂಬಗಳಿಗೂ ಜನಗಣತಿ ಬಳಿಕ ಹಕ್ಕುಪತ್ರ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹಿರೂರು ಗ್ರಾಮದ ಬಸವೇಶ್ವರ ದೇವಸ್ಥಾನದ ಸಭಾಭವನದಲ್ಲಿ ಸಮಾರಂಭದಲ್ಲಿ ಕಂದಾಯ ಗ್ರಾಮ, ಉಪ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.



ತಹಶೀಲ್ದಾರ್ ರೇಣುಕಾ ಎಸ್. ಮಾತನಾಡಿ, ತಾಲೂಕಿನ 13 ಸಾವಿರಕ್ಕೂ ಹೆಚ್ಚು ಕುಟುಂಬಗಳ ಜೀವನಕ್ಕೆ ಯಾವುದೇ ಭದ್ರತೆ ಇರಲಿಲ್ಲ. ಇಂದಲ್ಲ, ನಾಳೆ ಯಾರಾದರೂ ಬಂದು ತಾವು ವಾಸಿಸುತ್ತಿರುವ ಮನೆಗಳನ್ನು ತೆರವುಗೊಳಿಸಿ ತಮ್ಮನ್ನು ಬೀದಿಯಲ್ಲಿ ತಂದು ನಿಲ್ಲಿಸುತ್ತಾರೆ ಎನ್ನುವ ಆತಂಕದಲ್ಲಿಯೇ ಕುಟುಂಬಗಳು ಕಾಲ ಕಳೆಯುವಂತಾಗಿತ್ತು. ಆದರೀಗ ಆತಂಕ ದೂರವಾಗಿದ್ದು, ಹಕ್ಕುಪತ್ರ, ನೋಂದಣಿ ಪತ್ರ, ಇಸ್ವತ್ತು ಹೀಗೆ ಶಾಶ್ವತ ದಾಖಲೆಗಳನ್ನು ಒದಗಿಸಲಾಗಿದೆ. ಕೆಲ ತಾಂತ್ರಿಕ ಕಾರಣಗಳಿಂದ ನೋಂದಣಿ ಪ್ರಕ್ರಿಯೆ ವಿಳಂಬವಾಗಿದ್ದು, ಆದಷ್ಟು ಬೇಗ ಸರ್ಕಾರದಿಂದ ಅನುಮೋದನೆಗೊಂಡ ಎಲ್ಲ ಫಲಾನುಭವಿಗಳಿಗೂ ಮಾಲಿಕತ್ವ ನೀಡಲಾಗುವುದು. ಶಾಸಕರ ಮಾರ್ಗದರ್ಶನದಲ್ಲಿ ಇಡೀ ರಾಜ್ಯದಲ್ಲಿಯೇ ಹಕ್ಕುಪತ್ರ ವಿತರಣೆಯಲ್ಲಿ ತಾಲೂಕಿನಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಹಿರೂರು ಗ್ರಾಮದ 128, ಹನುಮನಕೊಪ್ಪ 162, ಬಾಳಿಹಳ್ಳಿ 150, ಸಾವಿಕೇರಿ 27, ಹರಳಕೊಪ್ಪ 63, ಶೃಂಗೇರಿ 16, ಲಕ್ಷ್ಮೀಪುರ 135, ಡೊಳ್ಳೇಶ್ವರ 114, ಜಂಗಿನಕೊಪ್ಪ 17 ಹಾಗೂ ಅಜಗುಂಡಿಕೊಪ್ಪ ಗ್ರಾಮಗಳ 10 ಸೇರಿದಂತೆ ಒಟ್ಟು 822 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು.

> ಅಂದು ಇಂದಿರಾ ಗಾಂಧಿ ಊಳುವವನನ್ನು ಭೂಮಿಯ ಒಡೆಯನ್ನಾಗಿಸಿದರೆ ಇಂದು ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ವಾಸಿಸುವವನಿಗೆ ಮನೆ ಒಡೆಯನನ್ನಾಗಿಸಿದೆ. 40-50 ವರ್ಷಗಳಿಂದ ಮನೆಯ ಮಾಲಿಕತ್ವಕ್ಕೆ ಕಾಯುತ್ತಿದ್ದ ಸಾವಿರಾರು ಕುಟುಂಬಗಳಲ್ಲಿ ನೆಮ್ಮದಿಯ ಭಾವ ಮೂಡಿದೆ.
> ■ ಶ್ರೀನಿವಾಸ ಮಾನೆ, ಶಾಸಕ

ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಹಾನಗಲ್ಲ ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ ಸೇರಿದಂತೆ ತಾಲೂಕಿನ ಕಾಂಗ್ರೆಸ್ ಮುಖಂಡರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಇದ್ದರು.


ಕಿರುಸುದ್ದಿ

ಮೇ 5ರವರೆಗೆ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ



ಮುಗಳಖೋಡ: ಸಮೀಪದ ಪಾಲಬಾವಿಯ ಶೇಗುಣಸಿ ತೋಟದಲ್ಲಿ ಮೇ 5ರವರೆಗೆ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ, ದೇವಸ್ಥಾನದ ಉದ್ಘಾಟನೆ, ಕಳಸಾರೋಹಣ, ಲಕ್ಷ ದೀಪೋತ್ಸವ ಹಾಗೂ ಸತ್ಸಂಗ ಸಮ್ಮೇಳನ ನಡೆಯಲಿದೆ. ಪ್ರತಿದಿನ ಸಂಜೆ 7 ಗಂಟೆಗೆ ಪ್ರವಚನ ನಡೆಯಲಿದೆ. ಮೇ 3ರಂದು ಶಿವಭಜನಾ ಕಾರ್ಯಕ್ರಮ ನಡೆಯಲಿದೆ. ಮೇ 4ರಂದು ಬೆಳಿಗ್ಗೆ 5 ಗಂಟೆಗೆ ನವಗ್ರಹ ಹೋಮ, 9 ಗಂಟೆಗೆ ಕಳಸಾರೋಹಣ, ಭವ್ಯ ಮೆರವಣಿಗೆ , ಸಂಜೆ 4 ಗಂಟೆಗೆ ಶ್ರೀಶೈಲ ಜಗದ್ಗುರುಗಳಿಂದ ಕಳಸಾರೋಹಣ, ನಂತರ ಸಂಜೆ 7 ಗಂಟೆಗೆ ಲಕ್ಷ ದೀಪೋತ್ಸವದ ಉದ್ಘಾಟನೆ ಹಾಗೂ ಸತ್ಸಂಗ ನಡೆಯಲಿದೆ. ಮೇ 5ರಂದು ಬೆಳಿಗ್ಗೆ 5ಗಂಟೆಗೆ ಮಹಾರುದ್ರಾಭಿಷೇಕ ಮತ್ತು ಹೆಣ್ಣು ಮಕ್ಕಳಿಗೆ ಉಡಿ ತುಂಬುವ ಕಾರ್ಯಕ್ರಮ, 10 ಗಂಟೆಗೆ ಅಗ್ನಿ ಪ್ರವೇಶ, 11 ಗಂಟೆಗೆ ಧರ್ಮಸಭೆ ನಡೆಯಲಿದೆ. ನಾಡಿನ ಪೂಜ್ಯರು ಹಾಗೂ ವಿವಿಧ ಕ್ಷೇತ್ರಗಳ ರಾಜಕಾರಣಿಗಳು ಆಗಮಿಸಲಿದ್ದಾರೆ ಎಂದು ದೇವಸ್ಥಾನದ ಪ್ರಮುಖರಾದ ಅಗ್ರಾಣಿ ಶೇಗುಣಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಶ್ರೀ ವೀರಭದ್ರೇಶ್ವರ ಜಾತ್ರೆ



ಯಮಕನಮರಡಿ : ಸ್ಥಳೀಯ ಮಡ್ಡಿ ಶ್ರೀ ವೀರಭದ್ರೇಶ್ವರ ಜಾತ್ರೆಯು ಪ್ರತಿ ವರ್ಷದ ಪದ್ಧತಿಯಂತೆ ಅಗ್ಗಿ ಹುಣ್ಣಿಮೆ ಅಂಗವಾಗಿ ಶುಕ್ರವಾರ ನಡೆದ ಶ್ರೀ ವೀರಭದ್ರೇಶ್ವರ ಕರ್ಪೂರ ಗದ್ದುಗೆಗೆ ರುದ್ರಾಭಿಷೇಕ ಮಹಾಪ್ರಸಾದ, ಸಂಜೆ ಪಲ್ಲಕ್ಕಿ ಉತ್ಸವದೊಂದಿಗೆ ಸಕಲ ಭಕ್ತಾದಿಗಳು ಮಡಿಯಿಂದ ಅಗ್ಗಿ ಹಾಯುವ ಸಂಪ್ರದಾಯದಂತೆ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ದೇವಸ್ಥಾನದ ಸುತ್ತಮುತ್ತಲಿರುವ ಸಕಲ ಭಕ್ತಾದಿಗಳಾದ ರಾಣಪ್ಪ ತಬರಿ, ನೇಮಿನಾಥ ಸಮಯ ಬಾಬು ವಾಘ, ಶಿವಾ ನಗಾರಿ, ಅಶೋಕ ಸಮಯ, ಮಲ್ಲಪ್ಪಾ ನಗಾರಿ, ಅನಂತ ದುಪ್ಪದಾಳಿ, ಗುಂಡು ಪಾಟೀಲ, ಯಮಕನಮರಡಿ ಗ್ರಾಮದ ಮಳ್ಳೋಳ್ಳಿ, ಬಾವನ್ನವರ ಕುಟುಂಬದವರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ರಾಜ್ಯಕ್ಕೆ 11ನೇ ಸ್ಥಾನ



ಮೂಡಲಗಿ : ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಎಸ್.ಎಸ್.ಆರ್. (ಶ್ರೀ ಶಿವಬೋಧರಂಗ) ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿ ವಿನೋದ ಗಸ್ತಿಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ ಹೆಚ್ಚುವರಿ 9 ಅಂಕಗಳು ಲಭಿಸಿವೆ. 587(97.83%) ಅಂಕ ಪಡೆದು ವಿನೋದ ಗಸ್ತಿ ರಾಜ್ಯಕ್ಕೆ 11ನೇ ಸ್ಥಾನ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಕಲಾ ವಿಭಾಗದಲ್ಲಿ 4ನೇ ಸ್ಥಾನವನ್ನು ಗಳಿಸಿದ್ದಾನೆ. ಈತನಿಗೆ ಸಂಸ್ಥೆಯ ಚೇರಮನ್ನರು ವೆಂಕಟೇಶ ಸೋನವಾಲ್ಕರ್, ವ್ಹಾ.ಚೇರಮನ್ನ ರವೀಂದ್ರ ಸೋನವಾಲ್ಕರ್, ಹಾಗೂ ನಿರ್ದೇಶಕರು, ಪ್ರಾಚಾರ್ಯ ಎಮ್.ಎಸ್.ಪಾಟೀಲ, ಉಪನ್ಯಾಸಕರು ಮತ್ತುಕಾಲೇಜಿನ ಸಿಬ್ಬಂದಿ ವರ್ಗದವರು ಹರ್ಷವನ್ನು ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : ಚಾಮರಾಜೇಂದ್ರ, ಸರಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಸಂಸ್ಥೆಯಲ್ಲಿ 2026-27 ನೇ ಶೈಕ್ಷಣಿಕ ಸಾಲಿಗೆ ವಿವಿಧ ಹುದ್ದೆಗಳಿಗೆ, ಅತಿಥಿ ಉಪನ್ಯಾಸಕ, ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಮೇ 15ರ ಸಂಜೆ 5.30 ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಮೇ 19 ರಂದು ಬೆಳಿಗ್ಗೆ 11 ಗಂಟೆಗೆ ಸಂಸ್ಥೆಯಲ್ಲಿ ಸಂದರ್ಶನ ನಡೆಸಲಾಗುವುದು. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ www.mysore.nic.in ಮತ್ತು www.cavamysore.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಲಯ ಸಂಪರ್ಕಿಸಬಹುದಾಗಿದೆ. ಎಂದು ಮೈಸುರು ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜಿನ ಡೀನರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೇಸರಗಿ: ಸಮೀಪದ ಹಣ್ಣಿಕೇರಿ ಗ್ರಾಮದಲ್ಲಿ ಅದ್ದೂರಿಯಾಗಿ ಅನೇಕ ವರ್ಷಗಳ ನಂತರ ಪ್ರಾರಂಭವಾಗಿರುವ ಶ್ರೀ ಗ್ರಾಮದೇವತೆಯ ಜಾತ್ರಾ ಮಹೋತ್ಸವಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ, ಬಿಜೆಪಿ ಮುಖಂಡೆ ಲಕ್ಷ್ಮೀ ಇನಾಮದಾರ, ಕಿತ್ತೂರು ಬಿಜೆಪಿ ಮಂಡಲ ಅಧ್ಯಕ್ಷ ಶ್ರೀಕರ ಕುಲಕರ್ಣಿ ಹಾಗೂ ಇನ್ನಿತರು ವಿಶೇಷ ಪೂಜೆ ಸಲ್ಲಿಸಿ, ಗ್ರಾಮದೇವತೆಯರ ಆಶೀರ್ವಾದ ಪಡೆದರು.

ಮೂಲ ಸೌಲಭ್ಯ ಒದಗಿಸಲು ಸರ್ಕಾರ ಬದ್ಧ

ರಾಮದುರ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಜನತೆಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಬದ್ಧವಾಗಿದ್ದು ಅಧಿಕಾರಿಗಳು ಸರ್ಕಾರದ ಅನುದಾನ ಸದ್ಬಳಕೆಯಾಗಲು ಗುಣ ಮಟ್ಟದ ಕಾಮಗಾರಿ ಮಾಡಿಸಬೇಕು ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು. ಶನಿವಾರ ತಾಲೂಕಿನ ರೂ. 185 ಲಕ್ಷ ವೆಚ್ಚದಲ್ಲಿ ಕಲಹಾಳ ಚಿಕ್ಕೊಪ್ಪ ರಸ್ತೆ ಸುಧಾರಣೆ, ರೂ. 225 ಲಕ್ಷ ವೆಚ್ಚದಲ್ಲಿ ಕಿತ್ತೂರ ದಿಂದ ಕುರುಗೋವಿನಕೊಪ್ಪ ರಸ್ತೆ ಅಭಿವೃದ್ಧಿ ಮತ್ತು ರೂ. 2 ಕೋಟಿ ವೆಚ್ಚದಲ್ಲಿ ಮುಳ್ಳೂರ ದಿಂದ ಸುರೇಬಾನ ವರೆಗೆ ರಸ್ತೆ ಡಾಂಬರ ಮಾಡುವ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಿದ್ದರಾಮಯ್ಯನವರು ಚುನಾವಣೆಯಲ್ಲಿನ ಪ್ರಣಾಳಿಕೆಯಂತೆ ಗ್ಯಾರಂಟಿ ಜೊತಗೆ ಅಗತ್ಯವಿರುವ ಎಲ್ಲ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿ ಜನಪರ ಕಾರ್ಯಕ್ಕೆ ಮುಂದಾಗಿದ್ದಾರೆ ಎಂದು ಹೇಳಿದರು. ಗ್ರಾಮೀಣ ರಸ್ತೆ, ಜಿಲ್ಲಾ ಮುಖ್ಯರಸ್ತೆ ರೈತರ ಜಮೀನುಗಳಿಗೆ ತೆರಳುವ ರಸ್ತೆಗಳ ಸುಧಾರಣೆಗೆ ಅನುದಾನ ನೀಡಲಾಗಿದೆ. ಗುಣಮಟ್ಟದ ಕಾಮಗಾರಿ ನಿರ್ವಹಣೆಗೆ ಗುತ್ತಿಗೆದಾರರು ಆದ್ಯತೆ ನೀಡಬೇಕು ಸ್ಥಳೀಯ ಜನರು ಸಹಿತ ಸಣ್ಣ ಪುಟ್ಟ ವಿಷಯಕ್ಕೆ ತಕರಾರು ಮಾಡಬೇಡಿ ಕಳಪೆಯಾದರೆ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಗಮನಕ್ಕೆ ತರಲು ತಿಳಿಸಿದರು. ಈ ಸಂದರ್ಭದಲ್ಲಿ ಶಂಕರಗೌಡ ಪಾಟೀಲ, ದ್ಯಾವಪ್ಪ ಬೆಳವಡಿ, ಚೆನ್ನಪ್ಪ ಮುದೇನೂರ, ಗುತ್ತಿಗೆದಾರ ಎ. ಆರ್. ಜೋಗಿ, ಲೋಕೊಪಯೋಗಿ ಇಲಾಖೆಯ ಎಇಇ ರವಿಕುಮಾರ ಸೇರಿದಂತೆ ಹಲವರಿದ್ದರು.



ರಾಮದುರ್ಗ: ತಾಲೂಕಿನ ರೂ. 185 ಲಕ್ಷ ವೆಚ್ಚದಲ್ಲಿ ಕಲಹಾಳ ಚಿಕ್ಕೊಪ್ಪ ರಸ್ತೆ ಸುಧಾರಣೆ, ರೂ. 225 ಲಕ್ಷ ವೆಚ್ಚದಲ್ಲಿ ಕಿತ್ತೂರ ದಿಂದ ಕುರುಗೋವಿನಕೊಪ್ಪ ರಸ್ತೆ ಅಭಿವೃದ್ಧಿ ಮತ್ತು ರೂ. 2 ಕೋಟಿ ವೆಚ್ಚದಲ್ಲಿ ಮುಳ್ಳೂರ ದಿಂದ ಸುರೇಬಾನವರೆಗೆ ರಸ್ತೆ ಡಾಂಬರ ಮಾಡುವ ಕಾಮಗಾರಿಗೆ ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಚಾಲನೆ ನೀಡಿದರು.

ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ | ವ್ಯಾಪಾರಕ್ಕೆ ಹೊಡೆತ

ಮಳಿಗೆಗಳ ಎದುರು ಚರಂಡಿ ನೀರು!

▸ಎಸ್.ಆರ್.ಗುರುಬಸಣ್ಣವರ

ದಿಗಂತ ವಿಶೇಷ

ಸುರೇಬಾನ: ಗ್ರಾಮ ಪಂಚಾಯತಿ ವ್ಯಾಪಾರಿ ಮಳಿಗೆಗಳ ಎದುರು ಚರಂಡಿ ನೀರು ಹಲವು ದಿನಗಳಿಂದ ನಿಂತು, ಗಬ್ಬೆದ್ದು ದುರ್ವಾಸನೆ ಬೀರುತ್ತಿದ್ದು, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವ ಗ್ರಾಮ ಪಂಚಾಯತಿ ವಿರುದ್ಧ ನಾಗರಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಗ್ರಾಮದ ವ್ಯಾಪಾರ ವಲಯದಲ್ಲಿ ಸ್ವಚ್ಛತೆ ಸಮಸ್ಯೆ ಸವಾಲಾಗಿದ್ದು, ಗ್ರಾಮ ಪಂಚಾಯತಿ ಅಧಿಕಾರಿಗಳ ಕಾರ್ಯ ವೈಖರಿ ವಿರುದ್ಧ ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ. ಮಳಿಗೆಗಳಿಗೆ ಬರುತ್ತಿರುವ ಗ್ರಾಹಕರು ದುರ್ವಾಸನೆಯಿಂದ ತೊಂದರೆ ಅನುಭವಿಸುತ್ತಿದ್ದು, ವ್ಯಾಪಾರಿಗಳ ವ್ಯವಹಾರಕ್ಕೂ ಇದರಿಂದ ಹೊಡೆತ ಬೀಳುತ್ತಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಸಂಗೊಳ್ಳಿ ರಾಯಣ್ಣ ವೃತ್ತದ ಹತ್ತಿರವಿರುವ ಸುರೇಬಾನ ಗ್ರಾಮ ಪಂಚಾಯತಿ ವ್ಯಾಪಾರ ಮಳಿಗೆ ಹತ್ತಿರ ಚರಂಡಿ ನೀರು ನಿಂತಿರುವುದರಿಂದ ಸೊಳ್ಳೆಗಳ ಪ್ರಮಾಣವೂ ಹೆಚ್ಚಾಗಿ, ಆರೋಗ್ಯದ ಮೇಲೂ ಪರಿಣಾಮ ಬೀರುವ ಭೀತಿ ಎದುರಾಗಿದೆ. ಮಕ್ಕಳಿಗೆ ಹಾಗೂ ವೃದ್ಧರಿಗೆ ರೋಗ ಹರಡುವ ಸಾಧ್ಯತೆ ಹೆಚ್ಚಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಈ ಸಮಸ್ಯೆ ತಕ್ಷಣ ಪರಿಹರಿಸಲು ಚರಂಡಿ ಸ್ವಚ್ಛತೆ ಕಾರ್ಯವನ್ನು ಕೈಗೊಳ್ಳಬೇಕು, ನೀರು ನಿಲ್ಲದಂತೆ ಸರಿಯಾದ ವ್ಯವಸ್ಥೆ ಮಾಡಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ. ಜೊತೆಗೆ, ಗ್ರಾಮ ಪಂಚಾಯತಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿ, ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಒಟ್ಟಿನಲ್ಲಿ, ಗ್ರಾಮ ಪಂಚಾಯತಿಯ ನಿರ್ಲಕ್ಷ್ಯದಿಂದ ಸಾರ್ವಜನಿಕರು ಮತ್ತು ವ್ಯಾಪಾರಿಗಳು ಸಂಕಷ್ಟ ಅನುಭವಿಸುತ್ತಿದ್ದು, ಸಂಬಂಧಿತ ಅಧಿಕಾರಿಗಳು ತಕ್ಷಣ ಸ್ಪಂದಿಸಬೇಕಾದ ಅಗತ್ಯವಿದೆ.



ರಾಜ್ಯ ಹೆದ್ದಾರಿ ಅಗೆದು ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅತೀವವಾದ ತೊಂದರೆ ಉಂಟಾಗುತ್ತಿದೆ. ಈ ರೀತಿ ರಸ್ತೆ ಅಗೆದರು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಸಂಭಂದಿಸಿದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಈ ರಸ್ತೆಯ ಮೇಲೆ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ, ವಾಹನ ಸವಾರರಿಗೆ ಏನಾದರು ಅನಾಹುತವಾದರೆ ಇದಕ್ಕೆ ಸಂಭಂದ ಪಟ್ಟ ಅಧಿಕಾರಿಗಳೆ ಹೊಣೆಯಾಗಬೇಕಾಗುತ್ತದೆ.

■ ಬಸಣ್ಣ ಶಿರಿಯಣ್ಣವರ, ಮನಿಹಾಳ-ಸುರೇಬಾನ ಪ್ರಗತಿಪರ ರೈತರು.

ಚರಂಡಿ ನೀರಿನಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇನ್ನೆರಡು ದಿನಗಳಲ್ಲಿ ಕಾಮಗಾರಿ ಕೈಗೊಂಡು ಆಗುತ್ತಿರುವ ತೊಂದರೆ ಸರಿಪಡಿಸುತ್ತೇವೆ.

■ ಯಲ್ಲಪ್ಪ ಸಂಕನಗೌಡ್ರ, ಅಭಿವೃದ್ಧಿ ಅಧಿಕಾರಿಗಳು ಗ್ರಾ.ಪಂ ಸುರೇಬಾನ

ಪ್ರತಿ ದಿನ ಈ ದುರ್ವಾಸನೆಯಲ್ಲಿ ಕೆಲಸ ಮಾಡುವುದು ಕಷ್ಟವಾಗಿದೆ. ಹಲವು ಬಾರಿ ಪಂಚಾಯತಿ ಅಧಿಕಾರಿಗಳಿಗೆ ದೂರು ನೀಡಿದ್ದೇವೆ, ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ.

■ ನಾಗಣ್ಣ ಬಿಜಾಪೂರ, ಅಧ್ಯಕ್ಷರು ವರ್ತಕರ ಸಂಘ, ಸುರೇಬಾನ-ಮನಿಹಾಳ

ಮೇ 5ರಿಂದ ಏಳು ಗ್ರಾಮಗಳ ಗ್ರಾಮ ದೇವತೆಯರ ಜಾತ್ರಾ ಮಹೋತ್ಸವ

ರಾಮದುರ್ಗ: ತಾಲೂಕಿನ ಗೊಣ್ಣಾಗರ ಸೇರಿದಂತೆ ಏಳು ಗ್ರಾಮಗಳ ಗ್ರಾಮ ದೇವತೆಯರ ಜಾತ್ರಾ ಮಹೋತ್ಸವವು ಮೇ 5 ರಿಂದ 15ರ ವರೆಗೆ ಗೊಣ್ಣಾಗರ ಗ್ರಾಮದಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಪರಪ್ಪ ಜಂಗವಾಡ ತಿಳಿಸಿದರು.

ಶುಕ್ರವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗೊಣ್ಣಾಗರ, ಲಿಂಗದಾಳ, ಹೂಲಿಗೊಪ್ಪ, ಕೊಳಚಿ, ಘಟಕನೂರ, ಚಿಂಚಖಂಡಿ ಹಾಗೂ ದೊಡಮಂಗಡಿ ಗ್ರಾಮಗಳ ದೇವತೆಯರ ಜಾತ್ರೆ ಸುಮಾರು 60 ವರ್ಷಗಳ ನಂತರ ಚಿದಂಬರೇಶ್ವರ ಮಠದ ಧಮಾಧಿಕಾರಿ ಪ್ರಸನ್‌ದೀಕ್ಷಿತರು, ಈರಯ್ಯ ಹಿರೇಮಠ, ಶಿವಯ್ಯ ಹಿರೇಮಠರ ನೇತೃತ್ವದಲ್ಲಿ 11 ದಿನಗಳ ವರೆಗೆ ನಡೆಯಲಿದೆ ಎಂದು ತಿಳಿಸಿದರು.

ಮೇ 5 ರಂದು ಗ್ರಾಮ ದೇವತೆಯರ ಜಾತ್ರಾ ಮಹೋತ್ಸವದ ಉದ್ಘಾಟನೆ ಕಾರ್ಯಕ್ರಮವು ಕಿಲ್ಲಾತೊರಗಲ್‌ದ ಚನ್ನಮಲ್ಲಶಿವಾಚಾರ್ಯ ಸಾನಿಧ್ಯದಲ್ಲಿ ಇಳಕಲ್‌ದ ಗುರುಮಹಾಂತಸ್ವಾಮಿಗಳು ಶಿವಾನುಭವ ಗೋಷ್ಠಿ ನಡೆಯಲಿದೆ. ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಹೋಳಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಮಾಜಿ ಶಾಸಕ ಮಹಾದೇವಪ್ಪ ಯಾದವಾಡ, ಎಂಎಲ್‌ಸಿ ಚನ್ನರಾಜ ಹಟ್ಟಿಹೋಳಿ ಸೇರಿದಂತೆ ಹಲವರು ಭಾಗವಹಿಸುವರು.

ಪ್ರತಿ ದಿನ ಧರ್ಮಸಭೆ ಹಾಗೂ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ ಮತ್ತು ಮೇ 8 ರಂದು ಸಾಯಂಕಾಲ 5 ಗಂಟೆಗೆ ಗೊಣ್ಣಾಗರ ಗ್ರಾಮದಲ್ಲಿ ಧರ್ಮ ದೇವತೆಯರ ನೂತನ ರಥೋತ್ಸವ ಜರುಗುವದು. ಮೇ 15 ರ ವರಗೆ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ ತಾಲೂಕಿನ ಸಮಸ್ತ ನಾಗರಿಕರು ಗ್ರಾಮ ದೇವತೆಯರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವಿಯರ ಕೃಪಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಚಿದಂಬರೇಶ್ವರ ಮಠದ ಧರ್ಮಾಧಿಕಾರಿ ಪ್ರಸನ್ ದೀಕ್ಷಿತರು, ಪರಪ್ಪ ಮೇಟಿ ಮತ್ತು ಗದಿಗೆಪ್ಪ ಹುಲ್ಲೂರ ಇದ್ದರು.



ಸಾರ್ವಜನಿಕ ಶೌಚಾಲಯ ಧ್ವಂಸ


ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಕುಡಚಿ: ಪಟ್ಟಣದ ವಾರ್ಡ್ ನಂ 7ರಲ್ಲಿ ಪುರಸಭೆ ಸನ್ 2015-16 ಸಾಲಿನ ಎಸ್ ಎಫ್‌ಸಿ ಮುಕ್ತ ನಿಧಿ ಯೋಜನೆಯಡಿಲ್ಲಿ ನಿರ್ಮಿಸಲಾದ ಸಾರ್ವಜನಿಕ ಶೌಚಾಲಯಗಳನ್ನು ಶುಕ್ರವಾರ ತಡರಾತ್ರಿ ದುಷ್ಕರ್ಮಿಗಳು ಧ್ವಂಸಗೊಳಿಸಿದ್ದಾರೆ.

ಬಹುತೇಕ ಬಡಜನರೆ ಎಲ್ಲ ವರ್ಗದವರು ವಾಸಿಸುವ ಪುರಸಭೆ ವಾರ್ಡ್ ಸಂಖ್ಯೆ 7ರ ಜನರು ಶೌಚಕ್ಕಾಗಿ ಸಾರ್ವಜನಿಕ ಶೌಚಲಯವನ್ನೆ ಅವಲಂಬಿಸಿದ್ದು ಹೆಚ್ಚಾಗಿ ಹಿರಿಯರು, ಮಹಿಳೆಯರು ಚಿಕ್ಕ ಮಕ್ಕಳಿಗೆ ಬಹಳ ಅನುಕೂಲವಾಗಿತ್ತು.

ಶುಕ್ರವಾರ ತಡರಾತ್ರಿ ದುಷ್ಕರ್ಮಿಗಳು ಏಕಾಏಕಿ ಶೌಚಾಲಯಗಳನ್ನು ಕೆಡವಿದ್ದು, ಯಾರೇ ಆಗಲಿ ಪುರಸಭೆ ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವ ಕೃತ್ಯದಲ್ಲಿ ಭಾಗಿಯಾದ ದುಷ್ಕರ್ಮಿಗಳ ಮೇಲೆ ಗಂಭೀರ ಅಪರಾದದಡಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಸ್ಥಳೀಯ ಆಡಳಿತದಿಂದ ಕೂಡಲೇ ಶೌಚಾಲಗಳನ್ನು ದುರಸ್ತಿ ಮಾಡಿಸಿ, ಇಲ್ಲ ಹೊಸದಾಗಿ ನಿರ್ಮಿಸಿ ಕೊಡುವಂತೆ ಆಗ್ರಹಿಸಿ ಪುರಸಭೆ ಎದುರೆ ಪ್ರತಿಭಟನೆ ನಡೆಸಿ ಮುಖ್ಯಾಧಿಕಾರಿ ಅನುಪಸ್ಥಿತಿಯಲ್ಲಿ ಸಮುದಾಯ ಸಂಘಟನಾಧಿಕಾರಿ ಎಸ್.ಬಿ.ಕದಮ ಮೂಲಕ ಮನವಿ ಸಲ್ಲಿಸಿದರು.

ಈ ಸಂಧರ್ಭದಲ್ಲಿ ಶಿವಪ್ಪ ಗಸ್ತಿ, ಮಾರುತಿ ನಾಯಿಕ, ರಮೇಶ ಗಸ್ತಿ, ನಾಮದೇವ ಗಸ್ತಿ, ವಿಠ್ಠಲ ಗಸ್ತಿ, ಪರಸು ಗಸ್ತಿ, ಸೋನಾ ಗಸ್ತಿ, ಕುಶಪ್ಪ ಗಸ್ತಿ, ರವಿ ಗಸ್ತಿ, ಮುಸದಿಕ ಸಂದರವಾಲೆ, ಜೈರೋದಿನ ಫತ್ತೇಮುಹ್ಮದ, ಅಣ್ಣಾಸಾಬ ನಾಯಿಕ, ಸುನೀತಾ ಗಸ್ತಿ, ಸಂಜು ಗಸ್ತಿ, ಬಾಯವ್ವ ಗಸ್ತಿ, ಅಶ್ಪಾಕ್ ನಂದಿವಾಲೆ ಇತರರು ಉಪಸ್ಥಿತರಿದ್ದರು.



ಪ್ರಜಾಸೌಧ ನಿರ್ಮಾಣ ಮಾಡಲು ಒತ್ತಾಯ

ಯರಗಟ್ಟಿ: ಬೆಳಗಾವಿ ಜಿಲ್ಲೆ ನೂತನ ಯರಗಟ್ಟಿ ತಾಲೂಕಿನಲ್ಲಿ ಆಡಳಿತ ಭವನ ಪ್ರಜಾಸೌಧ ನಿರ್ಮಾಣ ಸ್ಥಳ ಬದಲಾವಣೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವ ಪ್ರದೇಶದಲ್ಲಿ ನಿರ್ಮಿಸಬೇಕು ಎಂದು ಆಗ್ರಹಿಸಿ ತಹಶೀಲ್ದಾರ್ ಎಂ.ವಿ.ಗುಡಪ್ಪಗೋಳಗೆ ಸಾರ್ವಜನಿಕರು ಬುಧವಾರ ಮನವಿ ಸಲ್ಲಿಸಿದರು.

ರತ್ನಾಕರ ಶೆಟ್ಟಿ ಹಾಗೂ ಅಶೋಕ ಅಂಗಡಿ ಮಾತನಾಡಿ, ಪಟ್ಟಣದಿಂದ 5 ಕಿಮೀ ದೂರದಲ್ಲಿ ತಾಲೂಕು ಆಡಳಿತ ಭವನ ನಿರ್ಮಿಸಿದರೆ ಜನರಿಗೆ ಸಮಸ್ಯೆಯಾಗುತ್ತದೆ. ಈ ಕುರಿತು ಅಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ ಪಟ್ಟಣದಲ್ಲೇ ಬೇರೆ ಜಾಗದಲ್ಲಿ ನಿರ್ಮಿಸಬೇಕು ಎಂದರು.

ಎಪಿಎಂಸಿ ಆವರಣದಲ್ಲಿ ನಡೆಯುವ ಜಾನುವಾರು ಸಂತೆಯನ್ನು ಗೋಕಾಕ ರಸ್ತೆಯಲ್ಲಿರುವ 8 ಎಕರೆ ಪ್ರದೇಶಕ್ಕೆ ಸ್ಥಳಾಂತರಿಸಿ, ಎಪಿಎಂಸಿ ಆವರಣದಲ್ಲಿ ತಾಲೂಕು ಆಡಳಿತದ ಎಲ್ಲ ಕಚೇರಿ ನಿರ್ಮಿಸಬಹುದು. ಗೋಕಾಕ ರಸ್ತೆಯಲ್ಲಿ ಪ್ರಜಾಸೌಧ ನಿರ್ಮಿಸಲು ನಮ್ಮ ವಿರೋಧವಿದೆ. ಆದ್ದರಿಂದ ಅದನ್ನು ಕೈಬಿಟ್ಟು ಬೇರೆ ಸ್ಥಳ ಗುರುತಿಸಬೇಕು. ಇಲ್ಲವಾದಲ್ಲಿ ತಾಲೂಕಿನ ಸಮಸ್ತ ಜನರು ಹೋರಾಟ ಮಾಡುತ್ತೇವೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.



ಮನವಿ ಸ್ವೀಕರಿಸಿದ ತಹಸೀಲ್ದಾರ್ ಮಾತನಾಡಿ, ಪ್ರಜಾಸೌಧ ನಿರ್ಮಾಣಕ್ಕೆ 8 ಎಕರೆ ಜಾಗ ಗುರುತಿಸಲಾಗಿದೆ. ಸಾರ್ವಜನಿಕರಿಂದ 'ಬಂದ ಈ ಆಕ್ಷೇಪಣೆ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಪರಿಶೀಲಿಸಲಾಗುವುದು ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಅಜಿತಕುಮಾರ ದೇಸಾಯಿ, ಸಂತೋಷ ಹಾದಿಮನಿ, ಶಂಕರ ಮುಗಳಿ, ವೆಂಕಣ್ಣ ಹುರಕನವರ, ಡಿ.ಕೆ.ರಫೀಕ್, ಸೋಮು ರೈನಾಪುರ, ಕೃಷ್ಣಮೂರ್ತಿ ತೊರಗಲ್, ಪ್ರವೀಣ ಬೆಣ್ಣಿ, ಮೆಹಬೂಬ್ ನದಾಫ್, ಫಿರೋಜ್ ಖಾದ್ರಿ, ಅಮೀರ್ ದೇವಡಿ ಸೇರಿದಂತೆ ಇತರರಿದ್ದರು.

ರೈತನ ಮನೆತನ ನಾಟಕಕ್ಕೆ ಚಾಲನೆ



ಕೊಕಟನೂರ: ಗ್ರಾಮದ ಸಮೀಪದ ಧಡಕೆ ವಸಂತಿ ತೋಟದಲ್ಲಿ ಶ್ರೀ ಅಪ್ಪಯ್ಯ ಸ್ವಾಮಿ ಜಾತ್ರಾ ಮಹೋತ್ಸವ ನಿಮಿತ್ತ ರೈತನ ಮನೆತನ ಎಂಬ ಸಾಮಾಜಿಕ ಸುಂದರ ನಾಟಕ ಪ್ರದರ್ಶನಗೊಂಡಿತು. ಈ ಸಂದರ್ಭದಲ್ಲಿ ವಿವೇಕಾನಂದ ಸ್ವಾಮೀಜಿ, ಗುರುಮೂರ್ತಿಯ ಕಾಡದೇವರಮಠ, ಪಹ್ಲಾದ ಪೂಜಾರಿ, ಸುಭಾಷ್ ಸೋಣರ್ಕ, ಡಾ. ಮಲ್ಲಿಕಾರ್ಜುನ ಹಿರೇಮಠ, ಅಣ್ಣಪ್ಪ ಖೋತ, ರಘುನಾಥ್ ಗವಾನಿ, ಅನಿಲ್ ಮೊಳಿಕ್, ಸುರೇಶ್ ಪಾಟಣರ್ಕಾ, ಮಲ್ಲಿಕಾರ್ಜುನ್ ಪರಾಂಡೆ, ರವಿ ದೊಡ್ಮನಿ, ರಾಚಯ್ಯ ಮಠಪತಿ, ಗೈಬುಸಾಬ್ ಪಶ್ಚಪುರ ಸೇರಿದಂತೆ ಮತ್ತಿತರರು ಇದ್ದರು.

ಮುಂದಿನ ವಾರ ಹಲ್ಮಿಡಿ ಶಾಸನ ಪುನರ್ ಸ್ಥಾಪನೆ



ಬೆಳಗಾವಿ: ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ 2024ರ ರಾಜ್ಯೋತ್ಸವ ದಿನದಂದು ಸ್ಥಾಪನೆಯಾಗಿದ್ದ ಶಾಸನವನ್ನು ಡಿಸಿ ಕಚೇರಿಯ ನವೀಕರಣದ ಭರದಲ್ಲಿ ಒಡೆದು ಹಾಕಲಾಗಿತ್ತು. ಇದನ್ನು ಬೆಳಗಾವಿಯ ಸಮಾನ ಮನಸ್ಕ ಕನ್ನಡ ಪರ ಸಂಘಟನೆಗಳು ತೀವ್ರವಾಗಿ ವಿರೋಧಿಸಿ ಪ್ರತಿಭಟಿಸಿದ್ದವು. ಕನ್ನಡಪರ ಸಂಘಟನೆಗಳ ಹೋರಾಟಕ್ಕೆ ಮಣೆದು ಜಿಲ್ಲಾಡಳವು, ಹೊಸದಾದ ಶಾಸನ ಪ್ರತಿಕೃತಿಯನ್ನು ಕೆತ್ತಿಸಿ ಕೂಡಿಸಲು ಜಿಲ್ಲಾಡಳಿತವು ಮುಂದಾಗಬೇಕಾಯಿತು. ಮುಂದಿನ ವಾರ ಪುನರ್ ಸ್ಥಾಪನೆ ಕಾರ್ಯ ಪೂರ್ಣಗೊಳ್ಳಲಿದ್ದು, ಸಮಾನ ಮನಸ್ಕ ಕನ್ನಡ ಪರ ಸಂಘಟನೆಗಳು ಪ್ರತಿಕೃತಿಗೆ ಜಿಲ್ಲೆಯ ನದಿಗಳ ನೀರಿನಿಂದ ಹಾಗೂ ಕ್ಷೀರಾಭಿಷೇಕ ಮಾಡಲಿವೆ ಎಂದು ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ತಿಳಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಆರಂಭ



ರಾಯಬಾಗ: ದಿನದಿಂದ ದಿನಕ್ಕೆ ಏರುತ್ತಿರುವ ಬೇಸಿಗೆಯ ಬಿಸಿಲಿನ ತಾಪದಿಂದ ತತ್ತರಿಸುತ್ತಿರುವ ಸಾರ್ವಜನಿಕರ ಅನುಕೂಲಕ್ಕಾಗಿ, ರಾಯಬಾಗ ಪಟ್ಟಣ ಪಂಚಾಯತಿ ವತಿಯಿಂದ ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯನ್ನು (ಜಲದಾನ) ಆರಂಭಿಸಲಾಗಿದೆ. ಪಟ್ಟಣ ಪಂಚಾಯತಿಯ ಈ ಜನಪರ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಭಾರಿ ಮೆಚ್ಚುಗೆ ವ್ಯಕ್ತವಾಗುತ್ತಿದೆ. ನೀರಿನ ಗುಣಮಟ್ಟ ಮತ್ತು ನೈರ್ಮಲ್ಯದ ಕಡೆಗೆ ವಿಶೇಷ ಗಮನ ಹರಿಸಲಾಗಿದ್ದು, ನಿರಂತರವಾಗಿ ನೀರಿನ ಲಭ್ಯತೆ ಇರುವಂತೆ ನೋಡಿಕೊಳ್ಳಲಾಗುತ್ತಿದೆ.

ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿ ಸಂಜು ಮಾಂಗ ಮಾತನಾಡಿ, ಬೇಸಿಗೆ ಅವಧಿಯಲ್ಲಿ ಯಾರಿಗೂ ಕುಡಿಯುವ ನೀರಿನ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಈ ಅರವಟಿಕೆಯನ್ನು ಸ್ಥಾಪಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಸಾಧಕ ವಿದ್ಯಾರ್ಥಿನಿಯರಿಗೆ ಸನ್ಮಾನ

ಗೋಕಾಕ: ತಾಲೂಕಿನ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆವತಿಯಿಂದ ಹಮ್ಮಿಕೊಂಡಿದ್ದ ಸಾಧಕ ಎಸ್ ಎಸ್ ಎಲ್ ಸಿ ವಿದ್ಯಾರ್ಥಿನಿಯರಿಗೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯಲ್ಲಿ ಕಲಿತ ವಿದ್ಯಾರ್ಥಿನಿಯರಾದ ಕಾವೇರಿ ಬಟಕುರ್ಕಿ, ಉಮ್ಮೆರುಮ್ಮಾನ ಜಕಾತಿ, ಸೃಷ್ಟಿ ಕುಂಬಾರ,ಶ್ರದ್ಧಾ ಹಿರೇಮಠ, ಕೀರ್ತಿ ಮಂಟೂರ,ರಂಜೀತಾ ಮಾನಿಂಗೋಳ, ತೇಜಸ್ವಿನಿ ಜೋತೆನ್ನವರ ಅವರನ್ನು ಆಡಳಿತ ಮಂಡಳಿ ಹಾಗೂ ಶಿಕ್ಷಕ ಸಿಬ್ಬಂದಿ ವರ್ಗದವರು ಸನ್ಮಾನಿಸಿದರು.

ಪ್ರಾಥಮಿಕ ಶಾಲೆಯ ಪ್ರಧಾನ ಗುರು ಎಸ್.ಡಿ.ಹಂಚಿನಾಳ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿನಿಯರು ಉನ್ನತ ವ್ಯಾಸಂಗ ಮಾಡಿ ಅವರ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು. ಸಮರ್ಥ ವಿಠ್ಠಲ ಕರೋಶಿ ಅವರನ್ನು ಕೂಡಾ ಸನ್ಮಾನಿಸಲಾಯಿತು. ವೇದಿಕೆ ಮೇಲೆ ಎಸ್.ಡಿ.ಎಂ.ಸಿ.ಅಧ್ಯಕ್ಷರುಗಳಾದ ದಯಾನಂದ ಕಳಸನ್ನವರ, ಶೀಧರ ಕಂಬಾರ, ಶಿಕ್ಷಕರಾದ ಎಂ.ವೈ.ಹಣಮಂತಗೋಳ, ಆಸೀಫ್ ಪಟಾಣ, ಪೂಜಾ ಮಲ್ಲಾಪುರ, ಪ್ರೀಯಾ ಬಂಬಲಾಡಿ, ವಿಠ್ಠಲ ಕರೋಶಿ ಸೇರಿದಂತೆ ಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಕಂಪ್ಯೂಟರ್ ತರಬೇತಿ ಸಂಪನ್ನ



ಬೈಲಹೊಂಗಲ: ವಿದ್ಯಾರ್ಥಿಗಳು ಪಡೆದ ಕಂಪ್ಯೂಟರ್ ಜ್ಞಾನವನ್ನು ಜೀವನದಲ್ಲಿ ಸರಿಯಾಗಿ ಬಳಸಿಕೊಂಡು ತಮ್ಮ ವೃತ್ತಿಜೀವನದಲ್ಲಿ ಮುನ್ನಡೆಯಬೇಕು ಎಂದು ಪ್ರೊ ಶ್ರೀಧರ ನಿರಡಿ ಹೇಳಿದರು.

ಅವರು ನಗರದ ಕೆ.ಎಲ್.ಇ ಸಂಸ್ಥೆಯ ಪಾಲಿಟೆಕ್ನಿಕ್ (ಡಿಪ್ಲೊಮಾ) ಕಾಲೇಜಿನಲ್ಲಿ ಆಯೋಜಿಸಲಾದ ಉಚಿತ ಕಂಪ್ಯೂಟರ್ ತರಬೇತಿ ಕಾರ್ಯಾಗಾರ ಯಶಸ್ವಿಯಾಗಿ ಪೂರ್ಣಗೊಂಡು, ಅದರ ಅಂಗವಾಗಿ ಪ್ರಮಾಣಪತ್ರ ವಿತರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಡಿಜಿಟಲ್ ಯುಗದಲ್ಲಿ ಕಂಪ್ಯೂಟರ್ ಜ್ಞಾನವು ಅತ್ಯಗತ್ಯವಾಗಿದ್ದು, ಇಂತಹ ತರಬೇತಿಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ತಾಂತ್ರಿಕ ಶಿಕ್ಷಣದ ಮಹತ್ವ ಹಾಗೂ ಅದರ ಅನ್ವಯಿಕತೆ ಕುರಿತು ಅವರು ವಿವರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪತ್ರಕರ್ತರಾದ ಪ್ರಕಾಶ ಬೆಳಗಾವಿ, ಶರೀಫ್ ನದಾಫ ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ಉಪನ್ಯಾಸಕರಾದ ಎನ್. ಹಾದಿಮನಿ, ಎಸ್.ಎಸ್. ಶರಣಪ್ಪನವರ, ವೀಣಾ ಪಾಟೀಲ, ಕೀರ್ತಿ ಕಟ್ಟೀ, ಗಾಯತ್ರಿ ಕರಾಡಕರ, ಆದಿತ್ಯ ಮುಪ್ಪಯ್ಯನವರ್, ಶಿವಪ್ರಸಾದ್ ಸುಣಗಾರ ಹಾಗೂ ಮೃತ್ಯುಂಜಯ ಸವದತ್ತಿಮಠ ಉಪಸ್ಥಿತರಿದ್ದರು. ತೃಪ್ತಿ ಮಾಳನ್ನವರ ನಿರೂಪಿಸಿದರು. ರವೀಂದ್ರ ತೋಟಗಿ ಅವರು ವಂದಿಸಿದರು.

ವಕೀಲರ ಸಂಘದ ಪದಾಧಿಕಾರಿಗಳ ಆಯ್ಕೆಗೆ ತುರುಸಿನ ಮತದಾನ

ಬೆಳಗಾವಿ : ಕುಂದಾನಗರಿ ಬೆಳಗಾವಿಯ ಪ್ರತಿಷ್ಠಿತ ಬಾರ್ ಅಸೋಸಿಯೇಷನ್ 2026-28ನೇ ಸಾಲಿನ ಆಡಳಿತ ಮಂಡಳಿ ಆಯ್ಕೆಗೆ ಶನಿವಾರ ಹೈವೋಲ್ಟೇಜ್ ಚುನಾವಣೆ ನಡೆಯುತ್ತಿದೆ. ಬೆಳಿಗ್ಗೆಯಿಂದಲೇ ವಕೀಲರು ಉತ್ಸಾಹದಿಂದ ಮತದಾನ ಮಾಡಿದರು.ಬಾರ್ ಅಸೋಸಿಯೇಷನ್ ನ ಮುಂದಿನ ಎರಡು ವರ್ಷಗಳ ಅವಧಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಅತ್ಯಂತ ವ್ಯವಸ್ಥಿತವಾಗಿ ಜರುಗಿತು. ಒಟ್ಟು 1709 ಮತದಾರರನ್ನು ಹೊಂದಿರುವ ಈ ಸಂಘದ ಚುನಾವಣಾ ಕಣದಲ್ಲಿ ಈ ಬಾರಿ 33 ಅಭ್ಯರ್ಥಿಗಳು ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಬೆಳಿಗ್ಗೆ 11 ಗಂಟೆಯಿಂದಲೇ ಆರಂಭವಾದ ಮತದಾನ ಪ್ರಕ್ರಿಯೆಯು ಸಂಜೆಯವರೆಗೆ ಅತ್ಯಂತ ಶಾಂತಿಯುತವಾಗಿ ಸಾಗಿತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮತದಾನ ಕೇಂದ್ರದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದ್ದು, ನ್ಯಾಯವಾದಿಗಳು ಶಿಸ್ತುಬದ್ಧವಾಗಿ ಸರತಿಯ ಸಾಲಿನಲ್ಲಿ ನಿಂತು ಮತ ಚಲಾಯಿಸುತ್ತಿರುವುದು ಕಂಡುಬಂದಿತು. ಚುನಾವಣಾ ಪ್ರಕ್ರಿಯೆಯ ಉಸ್ತುವಾರಿಯನ್ನು ರಿಟರ್ನಿಂಗ್ ಆಫೀಸರ್ ಜೆ.ಡಿ. ತಿಗಡಿ ವಹಿಸಿಕೊಂಡಿದ್ದರು. ಈಗಾಗಲೇ ಮೂವರು ಮಹಿಳಾ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದ್ದು, ಉಳಿದ ಪ್ರಮುಖ ಸ್ಥಾನಗಳಿಗಾಗಿ ತೀವ್ರ ಪೈಪೋಟಿ ಏರ್ಪಟ್ಟಿದೆ. ಸಂಜೆ 6:30ರ ನಂತರ ಮತ ಎಣಿಕೆ ಕಾರ್ಯ ಆರಂಭವಾಗಲಿದ್ದು, ರಾತ್ರಿ 9 ಗಂಟೆಯ ಸುಮಾರಿಗೆ ಹೊಸ ಪದಾಧಿಕಾರಿಗಳ ಪಟ್ಟಿ ಅಧಿಕೃತವಾಗಿ ಹೊರಬೀಳಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಬಾರಿಯ ಫಲಿತಾಂಶವು ವಕೀಲರ ಸಂಘದ ಮುಂದಿನ ದಿಸೆಯನ್ನು ನಿರ್ಧರಿಸಲಿದ್ದು, ಎಲ್ಲರ ಕಣ್ಣು ರಾತ್ರಿಯ ಫಲಿತಾಂಶದ ಮೇಲಿದೆ.

ಕಿರುಸುದ್ದಿ

ಶಿಕ್ಷಕರ ಏಳ್ಗೆಯೇ ಸಂಘಟನೆಯ ಮುಖ್ಯ ಧ್ಯೇಯ : ಪಾಟೀಲ

ಚಿಕ್ಕೋಡಿ: ತಾಲೂಕು ವ್ಯಾಪ್ತಿಯ ಎಲ್ಲ ಪ್ರಾಥಮಿಕ ಶಾಲೆಯ ಶಿಕ್ಷಕರ ಏಳ್ಗೆಯೇ ಸಂಘಟನೆಯ ಮುಖ್ಯ ಧ್ಯೇಯವಾಗಿದ್ದು, ಶಿಕ್ಷಕರ ಸಮಸ್ಯೆಗೆ ಸ್ಪಂದಿಸಿ ಸಂಘವನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರದಾಗಿದೆ ಎಂದು ಗುರುಪ್ರೇರಣಾ ಪೆನಲ್ ನೇತೃತ್ವ ವಹಿಸಿದ್ದ ಶಿಕ್ಷಕ ಎನ್. ಜಿ. ಪಾಟೀಲ ಹೇಳಿದರು.



ಪಟ್ಟಣದ ಇಂದಿರಾನಗರ ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಿಕ್ಷಕರ ಸಂಘದ ಚುನಾವಣೆ ಮತ ಎಣಿಕೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಳೆದ ನಾಲ್ಕು ಭಾರಿ ತನ್ನನ್ನು ಶಿಕ್ಷಕರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ. ಕಳೆದ ಅವಧಿಯಲ್ಲಿ ಸಂಘದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿ ಗುರು ಸ್ಪಂದನ, ಆದಾಯ ತೆರಿಗೆ ಸಮಸ್ಯೆ ನಿವಾರಣೆ ಸೇರಿದಂತೆ ಶಿಕ್ಷಕರ ವಿವಿಧ ಸಮಸ್ಯೆಗಳಿಗೆ ಸ್ಪಂಧಿಸಲಾಗಿದೆ. ಹೀಗಾಗಿಯೇ ಶಿಕ್ಷಕ ಬಂಧುಗಳ ಸಹಕಾರದಿಂದ ಈ ಗೆಲುವು ಸಾಧ್ಯವಾಗಿದೆ ಎಂದರು. ಪೆನಾಲ್ ನ ಪ್ರತಿಯೊಬ್ಬರ ಗೆಲುವಿಗೂ ಶ್ರಮಿಸಲಾಗಿದೆ. ಆದಾಗ್ಯೂ ಪೆನಾಲ್ ನ 4 ಅಭ್ಯರ್ಥಿಗಳು ಅತ್ಯಲ್ಪ ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ. ಯಾವುದೇ ಜಾತಿ ಮತ ಪಂಥ ಎನ್ನದೇ ಶಿಕ್ಷಕರೆಲ್ಲರೂ ಸರ್ವ ಸಮಾನರು ಎಂಬ ಭಾವನೆ ಹೊಂದಿದ್ದೆ ನಮ್ಮ ಪೆನಾಲ್ ಗೆಲುವಿಗೆ ಕಾರಣವಾಗಿದೆ ಎಂದು ಎನ್ ಜಿ ಪಾಟೀಲ ಹೆಮ್ಮೆಪಟ್ಟರು. ಈ ಸಂದರ್ಭದಲ್ಲಿ ಚಂದ್ರಶೇಖರ ಅರಬಾಂವಿ, ಎನ್ ಎಸ್ ಕಾಂಬಳೆ, ಆರ್ ಕೆ ಕಾಂಬಳೆ, ಅಪ್ಪಾಸಾಹೇಬ ಚಿಗರೆ, ಎಲ್ ವೈ ಚೌಗಲಾ, ಅರುಣ ಶಹಾಪೂರೆ, ಶೌಕತ ಅಲಿ ನದಾಫ್ , ಎಂ ಆರ್ ಕುಂದರಗಿ, ಎಸ್ ಆರ್ ಮರಡಿ, ಎ ಡಿ ಸಾವಂತ , ಚಿದಾನಂದ ಯಾದಗೂಡೆ ಇತರರು ಇದ್ದರು.

ಮಹಿಳೆ ಕಾಣೆ

ಸಂಕೇಶ್ವರ : ಪಟ್ಟಣದ ನಿಡಸೋಸಿ ರಸ್ತೆ ನಿವಾಸಿ ಶಾರದಾ ಚಿದಾನಂದ ಗಂಜಿ (66) ಏ.26ರಂದು ಬೆಳಿಗ್ಗೆ 9.30 ಕ್ಕೆ ಸಂಕೇಶ್ವರ ಪಟ್ಟಣದಲ್ಲಿರುವ ದೊಡ್ಡ ಮಗ ಸಂದೀಪ ಗಂಜಿ ಅವರ ಮನೆಗೆ ಹೋಗಿ ಬರುತ್ತೇನೆ ಎಂದು ಹೇಳಿ ಮನೆಯಿಂದ ಹೋದವರು ಮನೆಗೆ ವಾಪಸ್ ಬರದೆ ಹಾಗೂ ತಮ್ಮ ಮಗನ ಮನೆಗೂ ಹೋಗದೆ ಕಾಣೆಯಾಗಿದ್ದಾರೆ. ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮೈಕಟ್ಟು ಸಾಧಾರಣ,ಎತ್ತರ 5 ಅಡಿ, ಮೈಬಣ್ಣ ಗೋಧಿಗಪ್ಪು, ಮುಖ ಕೋಲು ಮುಖ, ಮೂಗು ಗಿಡ್ಡ, ಉಡುಪು ಬೂದು ಬಣ್ಣದ ಸೀರೆ ಮತ್ತು ಕೆಂಪು ಬಣ್ಣದ ಜಂಪರ್ ಧರಿಸುತ್ತಾರೆ, ಕನ್ನಡ, ಮರಾಠಿ ಭಾಷೆಗಳು ಮಾತನಾಡುತ್ತಾರೆ.ಈ ವ್ಯಕ್ತಿ ಯಾರಿಗಾದರೂ ಕಾಣಿಸಿದಲ್ಲಿ ಅಥವಾ ಮಾಹಿತಿ ಸಿಕ್ಕರೆ ದಯವಿಟ್ಟು ತಕ್ಷಣ ಸಂಕೇಶ್ವರ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ವಿನಂತಿಸಿದ್ದಾರೆ.



ಮೇ 5ರಂದು ಬೀಳ್ಕೊಡುಗೆ ಸಮಾರಂಭ

ಬೆಳಗಾವಿ : ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ 2025-26ನೇ ಸಾಲಿನ ವಿವಿಧ ವಿಭಾಗದ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಬಿಎ, ಬಿಕಾಂ. ಅಂತಿಮ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭವು ಮೇ 5ರಂದು ಮಧ್ಯಾಹ್ನ 1 ಗಂಟೆಗೆ ಕಾಲೇಜು ಆವರಣದಲ್ಲಿ ಜರುಗಲಿದೆ. ಬೆಳಗಾವಿ ಉತ್ತರ ಶಾಸಕ ಆಸೀಫ್ ಸೇಠ್ ಮುಖ್ಯ ಅಥಿತಿಗಳಾಗಿ ಆಗಮಿಸಲಿದ್ದಾರೆ. ಬೆಳಗಾವಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ಆರ್. ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ಸುದ್ದಿ

ವೀರಭದ್ರ ತುರಮರಿ

ಚೈಲಹೊಂಗಲ: ತಾಲೂಕಿನ ಅನಿಗೋಳ ಗ್ರಾಮದ ನಿವಾಸಿ ವೀರಭದ್ರ ಸಿದ್ರಾಮಪ್ಪ ತುರಮರಿ(50) ಶನಿವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಬೆಳಗಾವಿ : ನಗರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿ ಶನಿವಾರ ಮಧ್ಯಾಹ್ನ ಸಾರ್ವಜನಿಕರ ಸುರಕ್ಷತೆಗಾಗಿ 'ಟ್ರಯಾಸ್ ಮಾಕ್ ಡ್ರಿಲ್' ನಡೆಯಿತು. ಅಗ್ನಿಶಾಮಕ ದಳ, ರೆಡ್ ಕ್ರಾಸ್, ಸಿವಿಲ್ ಡಿಫೆನ್ಸ್ ಹಾಗೂ ಹೋಮ್ ಗಾರ್ಡಗಳ ಸಹಯೋಗದೊಂದಿಗೆ ಈ ಅಣಕು ಕಾರ್ಯಾಚರಣೆಯನ್ನು ಆಯೋಜಿಸಲಾಗಿತ್ತು. ಈ ಬಗ್ಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಂಗನಾಥ ಅವರು ಮಾಹಿತಿ ನೀಡಿದರು.

ನೂತನ ಬಸ್ ಘಟಕದ ಉದ್ಘಾಟನೆ ನಾಳೆ

ಬೆಳಗಾವಿ : ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬೆಳಗಾವಿ ವಿಭಾಗದ ವತಿಯಿಂದ ಚನ್ನಮ್ಮನ ಕಿತ್ತೂರು ನೂತನ ಬಸ್ ಘಟಕದ ಆವರಣದಲ್ಲಿ ಮೇ.4 ರಂದು ಬೆಳಿಗ್ಗೆ 10 ಗಂಟೆಗೆ ಚನ್ನಮ್ಮನ ಕಿತ್ತೂರು ನೂತನ ಬಸ್ ಘಟಕದ ಉದ್ಘಾಟನಾ ಸಮಾರಂಭ ಜರುಗಲಿದೆ.ಸಚಿವ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಾರಿಗೆ ಮತ್ತು ಮುಜರಾಯಿ ಇಲಾಖೆಯ ಸಚಿವರಾದ ರಾಮಲಿಂಗಾರೆಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು,ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷರಾದ ಭರಮಗೌಡ ಕಾಗೆ ಅವರು ಜ್ಯೋತಿ ಬೆಳಗಿಸಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ-2 ನವದೆಹಲಿ ಪ್ರಕಾಶ ಹುಕ್ಕೇರಿ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಹಾಗೂ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷರಾದ ಭರಮಣ್ಣ ಉಪ್ಪಾರ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದರಾದ ಜಗದೀಶ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಭಾಗವಹಿಸಲಿದ್ದಾರೆ.



ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘ ಹಮ್ಮಿಕೊಂಡ ರಂಗ ತರಬೇತಿ ಶಿಬಿರವನ್ನು ಡಾ.ಶಿವಾನಂದ ಶೆಟ್ಟರ್ ಉದ್ಘಾಟಿಸಿದರು. ಶಿಬಿರದ ನಿರ್ದೇಶಕ ಲಕ್ಷ್ಮಣ ಪೀರಗಾರ, ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಇದ್ದರು. ಶಂಭಯ್ಯ ಹಿರೇಮಠ, ಸಂಗಡಿಗರು ಹಾಡುಗಾರಿಕೆ ಪ್ರಾತ್ಯಕ್ಷಿಕೆ ನೀಡಿದರು.

ಕೂಡಲೇ ಘೋಷಣೆಗೆ ನಿಚ್ಚನಕಿ ಗ್ರಾಮಸ್ಥರ ಆಗ್ರಹ

3 ವಾರ್ಡ್‌ಗಳಾಗಿ ವಿಂಗಡಿಸಿ

ಚನ್ನಮ್ಮನ ಕಿತ್ತೂರು: ನಿಚ್ಚನಕಿ ಗ್ರಾಮದಲ್ಲಿರುವ ಎರಡು ವಾರ್ಡ್‌ಗಳಿಗೆ ಮತದಾರರು ಹೆಚ್ಚಿಗೆ ಇರುವ ಕಾರಣ ಅವುಗಳನ್ನು ಮೂರು ವಾರ್ಡ್‌ಗಳನ್ನಾಗಿ ಮಾಡಬೇಕೆಂದು ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದಿಂದ ಗ್ರಾಮ ಪಂಚಾಯತಿ ಎದುರು ವಿವಿಧ ಸಂಘಟನೆ, ಗ್ರಾಮಸ್ಥರು ಸೇರಿ ಪ್ರತಿಭಟನೆ ನಡೆಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಸ್ಥಳಕ್ಕೆ ತಹಶೀಲ್ದಾರ ಅವರು ಆಗಮಿಸಬೇಕೆಂದು ಪಟ್ಟು ಹಿಡಿದು ಭಾನುವಾರ ಪ್ರತಿಭಟನೆ ಮಾಡಿದರು.

ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ ಮಾತನಾಡಿ, ತಾಲೂಕಿನ ನಿಚ್ಚಣಕಿ ಗ್ರಾಮದ ವಾರ್ಡ್ ನಂ 1 ರಲ್ಲಿ 1073 ಮತದಾರರಿಗೆ ನಾಲ್ಕು ಗ್ರಾಪಂ ಸದಸ್ಯ ಕ್ಷೇತ್ರಗಳಿವೆ ಅದರಂತೆ ವಾರ್ಡ್ ನಂ 2 ರಲ್ಲಿ 1321 ಮತದಾರರಿಗೆ ಮೂರು ಗ್ರಾಪಂ ಸದಸ್ಯ ಕ್ಷೇತ್ರಗಳಿದ್ದು, ಇದು ದೋಷ ಪೂರಿತವಾಗಿದೆ. ಈಗ ಹೊಸ ಮತದಾರರ ಪಟ್ಟಿಯ ಪ್ರಕಾರ ಎರಡು ವಾರ್ಡ್‌ಗಳು ಸೇರಿ 2440 ಮತದಾರರ ಸಂಖ್ಯೆಯಾಗುತ್ತದೆ. ಈ ಸಂಖ್ಯೆಯ ಅನುಸಾರ ಮೂರು ವಾರ್ಡುಗಳನ್ನು ಮಾಡಬೇಕೆಂದು ತಹಶೀಲ್ದಾರರಿಗೆ ಏ 24 ರಂದು ಮನವಿಯನ್ನು ಸಲ್ಲಿಸಿ ಏಳು ದಿವಸ ಗಡವು ನೀಡಿದ್ದೇವು ಅದಕ್ಕೆ ಯಾವದೇ ಉತ್ತರ ಸಿಕ್ಕಿಲ್ಲ, ಮತ್ತು ಗ್ರಾಪಂ ಅಧಿಕಾರಿಗಳು ಮಾಹಿತಿಯನ್ನು ಒದಗಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೇವೆ ಎಂದರು. ನಮ್ಮ ಗ್ರಾಮಕ್ಕೆ ಈ ಮತದಾರರ ಸಂಖ್ಯೆಯನ್ನು ಅನುಸರಿಸಿ ಮೂರು ವಾರ್ಡಗಳನ್ನಾಗಿ ಬರುವ ಗ್ರಾಮ ಪಂಚಾಯಯಿ ಚುನಾವಣೆಗೆ ಅನ್ವಯವಾಗುಂತೆ ಕ್ರಮ ಜರುಗಿಸಬೇಕೆಂದು ಆಗ್ರಹ ಪಡಿಸಿದರು.



> ಏನೇ ವಾರ್ಡಗಳ ಸಮಸ್ಯೆಗಳಿದ್ದವರು ಮೇ 8ರ ಒಳಗಾಗಿ ಆನ್ ಲೈನ್‌ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು.
> ■ ಕಲಗೌಡ ಪಾಟೀಲ, ತಹಶೀಲ್ದಾರ್

ಸ್ಥಳಕ್ಕಾಗಮಿಸಿ ತಹಶೀಲ್ದಾರ ಕಲಗೌಡ ಪಾಟೀಲ ಮಾತನಾಡಿ, ರಾಜ್ಯಾದ್ಯಂತ ಇರುವ ಇಂತಹ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರವು ಆಯಾ ಜಿಲ್ಲೆಗಳಿಗೆ ದಿನಾಂಕ ನಿಗದಿ ಮಾಡಿದ್ದು, ಬೆಳಗಾವಿ ಜಿಲ್ಲೆಗೆ ಮೇ 13ರಂದು ಬೆಂಗಳೂರಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಬಹುಮಹಡಿ ಕಟ್ಟಡ ಕೊಠಡಿ ಸಂಖ್ಯೆ 229 ರಲ್ಲಿ ಬೆಳಿಗ್ಗೆ 11 ಗಂಟೆಗೆ ನಿಗದಿ ಮಾಡಿದ್ದು ನಿಮಗೂ ಬರಲು ಅವಕಾಶವಿದೆ. ನಿಮ್ಮ ಸಮಸ್ಯೆಗೆ ಇಲ್ಲಿ ಪರಿಹಾರ ದೊರಕಲಿದೆ ಎಂದರು ನಂತರ ಪ್ರತಿಭಟನೆಯನ್ನು ಹಿಂಪಡೆದರು.

ಎಂ.ಎಫ್.ಜಕಾತಿ, ಮಡಿವಾಳಪ್ಪ ವರಗನ್ನವರ, ವಿಜಯಕುಮಾರ ಶಿಂದೆ, ರಾಜು ಜಾಂಗಟಿ, ಬಸವರಾಜ ಮಹಾಂತನವರ, ಶಿವಾನಂದ ಚಿನ್ನನ್ನವರ, ಗುರಶಿದ್ದ ಜಾಂಗಟಿ, ಶಂಕರ ಹಳೆಮನಿ, ವಿಜಯ ಪೂಜಾರ, ಮಡಿವಾಳಪ್ಪ ವಕ್ಕುಂದ, ಶಂಕರ ಆಯಟ್ಟಿ, ಅಸ್ಕರಅಲಿ ಖಾನಬಾಯಿ, ಸಾಜೀದ ಜಮಾದಾರ, ಸಂಗಪ್ಪ ಬಾವಳ್ಳಿ, ಮಂಜು ಅಂಗಡಿ, ಯಲ್ಲಪ್ಪ ಅವರಾದಿ, ಫಕ್ಕೀರಪ್ಪ ಜಾಂಗಟಿ, ಶಿವಪುತ್ ನರಗುಂದ, ಶಂಕರ ಸರಪಳಿ, ರಾಚಯ್ಯ ತೊರಗಲ್ಮಠ ಸೇರಿಂದತೆ ಹಲವರು ಉಪಸ್ಥಿತರಿದ್ದರು.

ಬಿಸಿಲಿನ ಧಗೆಗೆ ಜನ ತತ್ತರ !

▶ ಆನಂದ ಬಿರಾದರ

ಹಲ್ಯಾಳ: ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಸಿಲಿನ ಧಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸೂರ್ಯನ ಪ್ರಖರತೆಗೆ ಜನ ತತ್ತರಗೊಂಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು, ಬಿಸಿಲಿನ ಹೊಡೆತಕ್ಕೆ ಜನ ಹೈರಾಣಾಗಿದ್ದಾರೆ.

ಶನಿವಾರ ಗ್ರಾಮದಲ್ಲಿ ಬಿಸಿಲಿನ ತಾಪ 40ಡಿಗ್ರಿ ಸೆಲ್ಸಿಯಸ್ ಇದ್ದು, ಬೆಳಿಗ್ಗೆ ಹತ್ತು ಗಂಟೆಯಾಗುತಿದ್ದಂತೆ ಬಿಸಿಲಿನ ಧಗೆ ಆರಂಭವಾಗುತ್ತಿದೆ. ಮಧ್ಯಾಹ್ನ 12 ರಿಂದ 4 ಗಂಟೆಯವರೆಗೆ ಉರಿಬಿಸಿಲಿನ ವಾತಾವರಣ ಇರುತ್ತಿದೆ. ಮಧ್ಯಾಹ್ನ ಗರಿಷ್ಠ ಬಿಸಿಲು ಇದ್ದಿದ್ದರಿಂದ ಅಕ್ಷರಶಃ ಜನ ನಲುಗಿ ಹೋಗಿದ್ದಾರೆ. ಹವಮಾನ ಇಲಾಖೆಯ ತಜ್ಞರ ಪ್ರಕಾರ ಮುಂದಿನ ದಿನಗಳಲ್ಲಿ ಗರಿಷ್ಠ ಬಿಸಿಲಿನ ತಾಪಮಾನ ಹೆಚ್ಚಾಗುವ ಸಾಧ್ಯತೆ ಇದೆ.

ಗ್ರಾಮದ ಇತಿಹಾಸದಲ್ಲೇ ಈ ವರ್ಷದ ಏಪ್ರಿಲ್ ತಿಂಗಳು ಅತ್ಯಂತ ಕಡು ಬೇಸಿಗೆಯ ಕಾಲವಾಗಿ ಮಾರ್ಪಟ್ಟಿತ್ತು. ಇದೀಗ ಮೇ ತಿಂಗಳು ಜನ ಸೂರ್ಯನ ತೀಕ್ಷ್ಣ ಕಿರಣಗಳಿಗೆ ಅಕ್ಷರಶಃ ತತ್ತರಿಸುವ ಸಾಧ್ಯತೆಯಿದೆ. ತಾಪಮಾನವು ಹಿಂದೆಂದೂ ಕಾಣದ ಮಟ್ಟಕ್ಕೆ ಏರಿಕೆಯಾಗಿ ಹೊಸ ದಾಖಲೆ ಬರೆದಿದೆ.

ಕಳೆದ 15 ದಿನಗಳಲ್ಲಿ ತಾಪಮಾನವು ಏರುತ್ತಲೇ ಸಾಗಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಬಿಸಿಲಿನ ಪ್ರಖರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಕಚೇರಿಗಳ ಸಮಯವನ್ನು ಬದಲಾವಣೆ ಮಾಡಬೇಕು ಎನ್ನುವ ಒತ್ತಾಯ ಹೆಚ್ಚಾಗುತ್ತಿದೆ.



> ಯಾವುದೇ ಕೆಲಸವಿದ್ದರೂ ಬಿಸಿಲಿನಲ್ಲಿ ಸಂಚರಿಸಬೇಡಿ. ಸಮೀಪದ ದೇವಸ್ಥಾನಕ್ಕೆ ಹೋಗಿ ವಿಶ್ರಾಂತಿ ಪಡೆಯಿರಿ ನಿಮ್ಮ ಕುಟುಂಬದವರಿಗೂ ಬಿಸಿಲಿನ ಸುರಕ್ಷತೆ ಬಗ್ಗೆ ತಿಳಿ ಹೇಳಿ.
> ■ ಅಭಿನವ ಗುರುಸಿದ್ಧ ಸ್ವಾಮೀಜಿ, ವೀರಕ್ತ ಮಠ (ಹಲ್ಯಾಳ)

> ನಮ್ಮ ಆರೋಗ್ಯವನ್ನು ನಾವೇ ಸುರಕ್ಷಿತವಾಗಿಟ್ಟುಕೊಳ್ಳಬೇಕು. ಮೇ ಮುಗಿಯುವ ವರೆಗೂ ಈ ಬಿಸಿಲಿನ ತಾಪಮಾನ ಕಡಿಮೆಯಾಗುವುದಿಲ್ಲ. ಹಿತಮಿತವಾಗಿ ಆಹಾರ ಸೇವಿಸಿ ಆರೋಗ್ಯವಾಗಿರಿ.
> ■ ಬಸಗೌಡ ಕಾಗೆ ,ತಾಲೂಕು ಆರೋಗ್ಯ ಅಧಿಕಾರಿ ಅಥಣಿ

> ರಣಬಿಸಿನಲ್ಲಿ ಮನೆಯಲ್ಲಿ ವಯಸ್ಸಾದ ತಂದೆ ತಾಯಿಗಳ ಜೊತೆಗೆ ಕಾಲ ಕಳೆಯಿರಿ. ಮಕ್ಕಳನ್ನು ಹೊರಗಡೆ ಬಿಡಬೇಡಿ. ಕ್ರೀಡೆಗೆ ಬೇಕಾದ ಸಲಕರಣೆ ಒದಗಿಸಿ ಸುರಕ್ಷಿತವಾಗಿರಿ.
> ■ ಪ್ರಶಾಂತ್ ಮುನ್ನೋಳಿ, ಡಿವೈಎಸ್ಪಿ

ಆಗಸ್ಟ್ 21ರಂದು ವಿಶೇಷ ಲೋಕ ಅದಾಲತ್

ಅಥಣಿ: ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ (ಸುಪ್ರೀಂ ಕೋರ್ಟ್) ದೀರ್ಘಕಾಲದಿಂದ ಬಾಕಿ ಉಳಿದಿರುವ ಸಾವಿರಾರು ಸಿವಿಲ್ ಪ್ರಕರಣಗಳನ್ನು ಶೀಘ್ರವಾಗಿ ಮತ್ತು ಸೌಹಾರ್ದಯುತವಾಗಿ ಬಗೆಹರಿಸಲು 'ಸ್ಪೆಷಲ್ ಲೋಕ ಅದಾಲತ್' ಸಮಾಧಾನ್ ಸಮಾರೋಪ ಎನ್ನುವ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 21, 22 ಮತ್ತು 23 ರಂದು ಈ ಅದಾಲತ್ ನಡೆಯಲಿದ್ದು, ತಾಲೂಕು ಕಾನೂನು ಸೇವಾ ಸಮಿತಿಯನ್ನು ಸಂಪರ್ಕಿಸಿ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಅಥಣಿಯ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾಯಮೂರ್ತಿ ನಾಮದೇವ ಸಾಲಮಂಟಪಿ ಕೋರಿದ್ದಾರೆ.

ರಾಜ್ಯ ಉಚ್ಚ ನ್ಯಾಯಾಲಯ ಈ ಕುರಿತು ನೀಡಿದ ಮಾಹಿತಿಯನ್ನು ಪತ್ರಿಕಾಗೋಷ್ಠಿಯಲ್ಲಿ ಹಂಚಿಕೊಂಡರು.

ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ನ್ಯಾಯಮೂರ್ತಿ ಓಂಕಾರ್ ಮೂರ್ತಿ. ಎಚ್ ಮಾತನಾಡಿ,

ಈ ವಿಶೇಷ ಅದಾಲತ್‌ನ ಪ್ರಮುಖ ವೈಶಿಷ್ಟ್ಯವೆಂದರೆ, ಪಕ್ಷಗಾರರು ತಮ್ಮ ಪ್ರಕರಣಗಳ ಇತ್ಯರ್ಥಕ್ಕಾಗಿ ದೆಹಲಿಗೆ ಹೋಗುವ ಅವಶ್ಯಕತೆಯಿಲ್ಲ. ತಾಲೂಕು, ಜಿಲ್ಲೆ ಹಾಗೂ ರಾಜ್ಯದಲ್ಲಿ ಎಲ್ಲೆಲ್ಲಿ ಎರಡು ಪಕ್ಷಗಳು ಮುಖಾಮುಖಿಯಾಗಿ ಚರ್ಚಿಸಿ ರಾಜಿ ಮಾಡಿ ಕೊಳ್ಳಲು ಸಾಧ್ಯವಿದೆಯೋ, ಅಲ್ಲಿಯೇ ಅವರಿಗೆ ಅವಕಾಶ ಮಾಡಿಕೊಡಲಾಗುವುದು. 'ನ್ಯಾಯ ನಿಮ್ಮ ಮನೆ ಬಾಗಿಲಿಗೆ' ಎನ್ನುವ ಆಶಯದೊಂದಿಗೆ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಹೇಳಿದರು.



ಸುಪ್ರೀಂ ಕೋರ್ಟ್ ಈಗಾಗಲೇ ರಾಜಿಗೆ ಯೋಗ್ಯವಿರುವ ರಾಜ್ಯದಲ್ಲಿರುವ ಸುಮಾರು 4,328 ಪ್ರಕರಣಗಳ ಮಾಹಿತಿ ನೀಡಿದ್ದು ಇದರ ಹೊರತಾಗಿ ಸಾರ್ವಜನಿಕರ ಗಮನದಲ್ಲಿರುವ ಅಥವಾ ಪಟ್ಟಿಯಲ್ಲಿ ಇಲ್ಲದ ಬಾಕಿ ಸಿವಿಲ್ ಪ್ರಕರಣಗಳನ್ನೂ ಇಲ್ಲಿ ಪ್ರಸ್ತಾಪಿಸಿ ಬಗೆಹರಿಸಿಕೊಳ್ಳಬಹುದು.

ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಬಾಕಿ ಇರುವ ಯಾರೇ ಆಗಲಿ, ವಕೀಲರ ಸಹಾಯವಿಲ್ಲದೆಯೂ ನೇರವಾಗಿ ಈ ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಬಹುದು. ಪ್ರತಿ ನ್ಯಾಯಾಲಯದ ನ್ಯಾಯಮೂರ್ತಿಗಳೇ ಈ ಪ್ರಕರಣಗಳಲ್ಲಿ ಮಧ್ಯಸ್ಥಿಕೆದಾರರನ್ನು ನೇಮಿಸಲಿದ್ದು, ಲೋಕ ಅದಾಲತ್ ನಲ್ಲಿ ಬಗೆ ಹರಿದ ಪ್ರಕರಣಗಳ ವರದಿಯನ್ನು ನೇರವಾಗಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಜ್ಯೋತಿರ್ಲಿಂಗ ವಿವಿಧ ಉದ್ದೇಶಗಳ ಸಹಕಾರಿಗೆ ₹71 ಲಕ್ಷ ಲಾಭ

ಮೂಡಲಗಿ : ನಗರದ ಜ್ಯೋತಿರ್ಲಿಂಗ ವಿವಿಧ ಉದ್ದೇಶಗಳ ಸಹಕಾರಿ ಸಂಘದ ಪ್ರಸಕ್ತ ಸಾಲಿನ ಸನ್ 2025-26ನೇ ಹಣಕಾಸು ವರ್ಷದಲ್ಲಿ 71 ಲಕ್ಷ ಲಾಭ ಗಳಿಸಿ ಪ್ರಗತಿಯ ಪಥದಲ್ಲಿ ಸಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಭೀಮಪ್ಪಾ ಅವರಾದಿ ಹೇಳಿದರು.

ಶುಕ್ರವಾರ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಮಾರ್ಚ ಅಂತ್ಯಕ್ಕೆ ಶೇರ ಬಂಡವಾಳ 33,88 ಲಕ್ಷ, ಕಾಯ್ದಿಟ್ಟ ನಿಧಿಗಳು 2,35, ಕೋಟಿ, ಠೇವುಗಳು 19,77 ಕೋಟಿ, ಗುಂತಾವಣೆಗಳು 6, 87 ಕೋಟಿ, ಸಾಲ ವಿತರಿಸಿದ್ದು 14,85 ಕೋಟಿ, ದುಡಿಯುವ ಬಂಡವಾಳ 23,54 ಕೋಟಿ, ವಾರ್ಷಿಕ ವಹಿವಾಟು, 87.57 ಕೋಟಿ ಹೊಂದಿ ಮಾರ್ಚ ಅಂತ್ಯಕ್ಕೆ ಸೊಸೈಟಿಯು 71,04, ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದರು.

ಉಪಾಧ್ಯಕ್ಷ ಪರಮಾನಂದ ಬಡ್ಡಿ ಮಾತನಾಡಿ, ನಿಪನಾಳ ಹಾಗೂ ಅರಬಾವಿಯಲ್ಲಿರು ಸೊಸೈಟಿಯ ಎರಡು ಶಾಖೆಗಳು ಪ್ರಗತಿಯಲ್ಲಿ ಇದ್ದು ಪ್ರಸ್ತುತ ಈ ಸಾಲಿನಲ್ಲಿ ಇನ್ನೂ ಎರಡು ಶಾಖೆಗಳನ್ನು ಪ್ರಾರಂಬಿಸುವ ಗುರಿ ಹೊಂದಲಾಗಿದೆ, ಶೇರುದಾರರಿಗೆ ಶೇ10ರಷ್ಟು ಲಾಭಾಂಶ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ, ನಿರ್ದೇಶಕರಾದ ಲಕ್ಷ್ಮಣ ಮಾಲಗಾರ ಮಲ್ಲಪ್ಪಾ ಮುತಾರಿ, ಈರಪ್ಪಾ ಬನ್ನೂರ, ನಿಂಗಪ್ಪಾ ಈರಪ್ಪನವರ, ಪ್ರಕಾಶ ಈರಪ್ಪನವರ, ಮಲ್ಲಪ್ಪಾ ಮಾಲಗಾರ, ಈರಪ್ಪ ಬಾಗಿ, ಲಕ್ಷ್ಮೀ ಕೊತಂಬರಿ, ಸುಜಾತಾ ಮಾಲಗಾರ, ಅನಿತಾ ಪೋಳ ಹಾಗೂ ಸಂಘದ ಮಾರ್ಗದರ್ಶಕರಾದ ಚನ್ನಬಸು ಬಡ್ಡಿ, ಬಸವರಾಜ ಮಾಲಗಾರ ಪ್ರಧಾನ ಕಾರ್ಯದರ್ಶಿ ವಿಠಲ ಕಮತೆ ಮತ್ತು ಸಂಘದ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಪೌರಕಾರ್ಮಿಕರಿಗೆ ಸನ್ಮಾನ

ರಾಯಬಾಗ: ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಯಬಾಗ ಪಟ್ಟಣದ ಪೌರಕಾರ್ಮಿಕರಿಗೆ ಮಾನ್ಯ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಬಾಗ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಮಹಾವೀರ ಅಣ್ಣಾ ಮೋಹಿತೆ ಅವರ ನೇತೃತ್ವದಲ್ಲಿ ರಾಯಬಾಗ ಪಟ್ಟಣದ ಪೌರಕಾರ್ಮಿಕರಿಗೆ ಬುದ್ಧ ಪೂರ್ಣಿಮೆ ಹಾಗೂ ಕಾರ್ಮಿಕರ ದಿನಾಚರಣೆ ನಿಮಿತ್ತ ಸನ್ಮಾನ ಮಾಡಿ ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ರಾಯಬಾಗ ಮತಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ದಿಲೀಪ್ ಜಮಾದಾರ್, ಹಾಜಿ ಮುಲ್ಲಾ, ಜ್ಯೋತಿ ಕೆಂಪಟ್ಟಿ, ಹರೀಶ್ ಕುಲಗೂಡೆ, ಕಿರಣ ಕಾಂಬಳೆ, ನಾಮದೇವ ಕಾಂಬಳೆ, ಅಶೋಕ ನಾಯಕ, ಸದಾ ಮುರಗುಡೆ, ಫಾರೂಕ್ ಮೊಮಿನ, ದಿಲೀಪ್ ಪಾಯನ್ನವರ, ನಾಗೇಂದ್ರ ಮಾರಾಸಕಾರ, ಇಲಾಯಿ ಶೇಖ, ಶೇಖರ್ ನಾಯಿಕ , ಚಂದ್ರಶೇಖರ ಭಂತೆ, ಲಕ್ಷ್ಮಣ ಕಾಂಬಳೆ , ಕಾಡೇಶ ಐಹೋಳೆ, ಲೋಕೇಶ್ ಕಾಂಬಳೆ, ವಿಷ್ಣು ಕಾಂಬಳೆ, ರಾಜು ಕಾಂಬಳೆ, ಪ್ರಶಾಂತ ಕಾಂಬಳೆ , ಪ್ರೇಮ ಕಾಂಬಳೆ, ಪ್ರದೀಪ ಕಾಂಬಳೆ, ಶೈಲಜಾ ಕರಿಭೀಮಗೋಳ, ತನುಜಾ ಶಿಂಗೆ, ರಾಯಬಾಗ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳಾದ ಎಸ್.ಆರ್. ಮಾಂಗ ಹಾಗೂ ಕಾರ್ಯಕರ್ತರು ಅಭಿಮಾನಿಗಳು ಉಪಸ್ಥಿತರಿದ್ದರು.



ಸಮಾಜಕ್ಕೆ ಒಳಿತಾಗುವ ಕಾರ್ಯ ಮಾಡಿರಿ:ಯತೀಶ್ವರಾನಂದ ಶ್ರೀ

ಕೊಕಟನೂರ: ಹಿಂದೆ ಶಿಕ್ಷಕರು ವಿದ್ಯಾರ್ಥಿಗಳ ನಡುವೆ ಅವಿನಾಭಾವ ಸಂಬಂಧ ಹೊಂದಿದ್ದು, ಜೀವನಕ್ಕೆ ಅಗತ್ಯವಿರುವ ವ್ಯಕ್ತಿತ್ವ, ಮೌಲ್ಯಗಳು ಮತ್ತು ಜೀವನದ ಜ್ಞಾನವನ್ನು ಕಲಿಸುತ್ತಿದ್ದರು. ಆದರೆ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಬಹುಪಾಲು ಅಂಕಗಳು ಶ್ರೇಣಿಗಳು, ಬ್ಯಾಂಕಗಳು ಮತ್ತು ಪ್ರಮಾಣ ಪತ್ರಗಳ ಸುತ್ತಲೇ ಸೀಮಿತವಾಗುತ್ತಿರುವದರಿಂದ ವಿದ್ಯೆ, ವಿನಯ ದೂರವಾಗುತ್ತಿದೆ ಎಂದು ಕಾಗವಾಡ ಗುರುದೇವಾಶ್ರಮದ ಯತೀಶ್ವರಾನಂದ ಸ್ವಾಮೀಜಿ ಹೇಳಿದರು.

ಅವರು ಸಮೀಪದ ಕೊಕಟನೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 2001-2002ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಶನಿವಾರ ಹಮ್ಮಿಕೊಂಡ ಸ್ನೇಹ ಸಮ್ಮಿಲನ ಹಾಗೂ ಗುರುವಂದನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾವು ಜೀವನದಲ್ಲಿ ಎಷ್ಟೇ ಕಲಿತು ದೊಡವರಾಗಿ ಬಂಗಾರ, ಬೆಳ್ಳಿ, ಆಸ್ತಿ ಗಳಿಸಿದರೆ ಸಾಲದು, ಹೆತ್ತವರನ್ನು ವೃದ್ಧಾಶ್ರಮದಲ್ಲಿ ಇಡದೇ ಆರೈಕೆ ಮಾಡಿ ಸುತ್ತ-ಮುತ್ತಲಿನ ಜನರನ್ನು ಸಮನಾಗಿ ಕಂಡು ಪ್ರೀತಿಯಿಂದ ನಡೆದು ಸಮಾಜಕ್ಕೆ ಒಳಿತಾಗುವ ಕಾರ್ಯ ಮಾಡಿ ಆದರ್ಶ ವ್ಯಕ್ತಿಗಳಾಗಿ ಬಾಳಬೇಕು ಎಂದು ತಿಳಿಸಿದರು.



ಶಿಕ್ಷಣಾಧಿಕಾರಿ ಆರೀಫ್ ಬಿರಾದಾರ ಮಾತನಾಡಿದರು.

ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿ ಪೃಥ್ವಿರಾಜ ಚವ್ಹಾಣ ಪ್ರಾಸ್ತವಿಕವಾಗಿ ಮಾತನಾಡಿದರು, ಕೆಪಿಸಿಸಿ ಸದಸ್ಯ ಶ್ಯಾಮರಾವ ಪೂಜಾರಿ, ಜಿಪಂ ಮಾಜಿ ಸದಸ್ಯ ಸಿದ್ಧಪ್ಪ ಮುದಕಣ್ಣವರ ಹಾಗೂ ನಿವೃತ್ತ ಶಿಕ್ಷಣಾಧಿಕಾರಿ ಎಸ್.ಎಲ್. ಬಜಂತ್ರಿ ಮಾತನಾಡಿದರು.

ಕಲಿತ ಶಾಲೆ'ಗೆ ಸ್ಮಾರ್ಟ ಬೋರ್ಡ ದೇಣಿಗೆ: ಬದುಕು ರೂಪಿಸಿ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಿದ ಈ ಶಾಲೆಗೆ 2000-2002ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೆಲ್ಲ ಸೇರಿ ಈಗಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ 2.5 ಲಕ್ಷ ರೂ ಮೊತ್ತದ ಡಿಜಿಟಲ್ ಬೋರ್ಡನ್ನು ಕಾಣಿಕೆಯಾಗಿ ನೀಡಿದರು.

ಮುಖ್ಯೋಪಾಧ್ಯಯ ಅನಿಲ ಮೇಲಿನಕೇರಿ ಕಾರ್ಯಕ್ರಮ ಉದ್ಘಾಟಿಸಿದರು, ಅದ್ವೈತಾನಂದ ಸ್ವಾಮೀಜಿ, ಮುಖಂಡರಾದ ಅಪ್ಪಾಸಾಬ ಅವತಾಡೆ, ಅಮಿತ ದೇಸಾಯಿ, ಗುರುಮೂರ್ತಯ್ಯ ಕಾಡದೇವರಮಠ, ವಿ.ಎಸ್. ಪಡತಾರೆ, ಆರ್.ಬಿ. ಮೈಶಾಳೆ, ಬಿ.ಎಂ. ಟೊಣಪೆ, ಎಂ.ಆರ್. ಹಲಗಿ, ಸಿ.ವಿ. ಅಡಿವರ, ಬಿ.ಬಿ. ನಡಗಾಂವ, ವಕೀಲ ಪವನ ಶೇಡಬಾಳ,

ಆರ್.ಜೆ ಮಾನಗಾಂವೆ ಸೇರಿದಂತೆ ಹಳೆಯ ವಿದ್ಯಾರ್ಥಿಗಳು ಇದ್ದರು, ಸೋಮಶೇಖರ ಶರಣ ಸ್ವಾಗತಿಸಿದರು, ಹಾವೇದ ಮೋಮಿನ್ ನಿರೂಪಿಸಿದರು, ಅನಿಲ ಚವ್ಹಾಣ ವಂದಿಸಿದರು.

ಗುರು ಪ್ರೇರಣಾ ಪೆನಲ್‌ಗೆ ಭರ್ಜರಿ ಗೆಲುವು

ಚಿಕ್ಕೋಡಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ (ರಿ) ಬೆಂಗಳೂರು ಅಡಿಯಲ್ಲಿ ಕಾರ್ಯನಿರ್ವಹಿಸುವ ಚಿಕ್ಕೋಡಿ ತಾಲ್ಲೂಕು ಕಾರ್ಯಕಾರಿ ಸಮಿತಿಗೆ ನಡೆದ 2026-31ರ ಅವಧಿಗೆ ಪಟ್ಟಣದಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಎನ್ ಜಿ ಪಾಟೀಲ ನೇತೃತ್ವದ ಗುರು ಪ್ರೇರಣಾ ಪೆನಲ್ ಭರ್ಜರಿ ಗೆಲುವು ಸಾಧಿಸಿದೆ.

ಚಿಕ್ಕೋಡಿ ತಾಲೂಕು ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ಗುರು ಪ್ರೇರಣಾ ಪೆನಲ್ ನ 10 ಅಭ್ಯರ್ಥಿಗಳು ಹಾಗೂ ಸರ್ವಧರ್ಮ ಸಮನ್ವಯ ಪೆನಲ್ ನ 4 ಅಭ್ಯರ್ಥಿಗಳು ಗೆಲುವು ಸಾಧಸಿಸಿದ್ದಾರೆ. ಪಟ್ಟಣದ ಇಂದಿರಾನಗರ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಬೆಳಿಗ್ಗೆ 8.30ರಿಂದ ಸಂಜೆ 4.30 ರವರೆಗೆ ಮತದಾನ ನಡೆಯಿತು. 9 ಪುರುಷ ಅಭ್ಯರ್ಥಿಗಳು ಹಾಗೂ 5 ಮಹಿಳಾ ಅಭ್ಯರ್ಥಿಗಳು ಆಯ್ಕೆಗೆ ನಡೆದ ಮತದಾನ ಪ್ರಕ್ರಿಯೆ ಶಾಂತವಾಗಿ ನಡೆಯಿತು. ತಡರಾತ್ರಿ ಮತ ಎಣಿಕೆ ಪೂರ್ಣಗೊಂಡಿತು.

ಚಿಕ್ಕೋಡಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ಒಟ್ಟು 685 ಮತಗಳ ಪೈಕಿ 636 ಮತಗಳು ಚಲಾವಣೆಯಾಗಿವೆ. ಶೇ. 92.8 ಮತದಾನ ನಡೆದಿದ್ದು, ಇವುಗಳಲ್ಲಿ 6 ಕುಲಗೆಟ್ಟ ಮತಗಳಾಗಿವೆ.



ಗುರು ಪ್ರೇರಣಾ ಪೆನಲ್ ನ ಎನ್ ಜಿ ಪಾಟೀಲ (396 ಮತ), ಎಸ್ ಎ ಖಡ್ಡ (362), ಪ್ರಭಾಕರ ಮಜಲಟ್ಟಿ (358), ಮಹಾವೀರ ಕಾಂಬಳೆ (341), ಡಿ ಎಚ್ ಕಾಂಬಳೆ (303), ವಿಶ್ವನಾಥ ಧುಮಾಳ (294), ಡಿ ಆರ್ ಭಲವಾದಿ (241), ಸಂಗೀತಾ ಗಿರಿಮಲ್ಲನವರ (349), ಶೈಲಶ್ರೀ ಜೋಶಿ (312) , ಸಿದ್ದವ್ವ ಬಡ್ಲಿ (268) ಮತಗಳನ್ನು ಪಡೆದುಕೊಂಡು ಗೆಲುವು ಸಾಧಿಸಿದ್ದಾರೆ. ಸರ್ವಧರ್ಮ ಸಮನ್ವಯ ಪೆನಲ್ ನ ಜಿ ಎಂ ಕಾಂಬಳೆ (396), ಎಸ್ ಎಸ್ ಧುಪದಾಳ (316), ಲತಾ ಯಾದಗೂಡೆ (276), ಸವಿತಾ ಧೋತರ (269) ಮತಗಳನ್ನು ಪಡೆದುಕೊಂಡು ಗೆಲುವಿನ ನಗೆ ಬೀರಿದ್ದಾರೆ. ಚಿಕ್ಕೋಡಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಕಾರ್ಯಕಾರಿ ಸಮಿತಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಎನ್ ಜಿ ಪಾಟೀಲ ನೇತೃತ್ವದ ಗುರು ಪ್ರೇರಣಾ ಪೆನಲ್ನಿಂದ ಗೆಲುವು ಸಾಧಿಸಿದ ಶಿಕ್ಷಕರು.ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಡಯಟ್ ನಿವೃತ್ತ ಪ್ರಾಚಾರ್ಯ ಎಂ ಪಿ ಜೇರಗಿಹಾಳ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಚಿಕ್ಕೋಡಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಕಾರ್ಯಕಾರಿ ಸಮಿತಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಎನ್ ಜಿ ಪಾಟೀಲ ನೇತೃತ್ವದ ಗುರು ಪ್ರೇರಣಾ ಪೆನಲ್ನಿಂದ ಗೆಲುವು ಸಾಧಿಸಿದ ಶಿಕ್ಷಕರು.

ಕಿರು ಸುದ್ದಿ

ಇಂದು ಶಿವಾನುಭವ ಕಾರ್ಯಕ್ರಮ

ಬಾದಾಮಿ: ಇಲ್ಲಿನ ಪ್ರವಚನ ಸಮಿತಿ ಹಾಗೂ ಅಕ್ಕನ ಬಳಗದ ಸಹಯೋಗದೊಂದಿಗೆ 122ನೇ ಶಿವಾನುಭವ ಕಾರ್ಯಕ್ರಮವನ್ನು ಮೇ 3ರಂದು ಭಾನುವಾರ ಸಂಜೆ 5.30 ಗಂಟೆಗೆ ನಗರದ ಅಕ್ಕಮಹಾದೇವಿ ಅನುಭಾವ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ವಚನ ಸಾಹಿತ್ಯದಲ್ಲಿ ಕಾಯಕ ತತ್ವ ಕುರಿತು ಕುಳಗೇರಿ ಕ್ರಾಸ್ ಜಿ.ಜಿ.ಹಕ್ಕಾಪಕ್ಕಿ ಪ್ರೌಢಶಾಲೆ ಶಿಕ್ಷಕಿ ಎಸ್.ಎಂ.ಅಂಗಡಿ ಅತಿಥಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೂತನ ಸಂಚಾಲಕ ಅಶೋಕಗೆ ಸನ್ಮಾನ



ಬೀಳಗಿ: ವಿಧಾನಸಭಾ ಮತಕ್ಷೇತ್ರದಿಂದ ಭಾರತೀಯ ಜನತಾ ಪಾರ್ಟಿ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ ಸಮಿತಿಗೆ ನೂತನವಾಗಿ ತಾಲೂಕು ಸಂಚಾಲಕರಾಗಿ ಆಯ್ಕೆಯಾದ ಅಶೋಕ ಚಲವಾದಿ ಅವರನ್ನು ಗೆಳೆಯರ ಬಳಗದಿಂದ ಸನ್ಮಾನಿಸಿ ಗೌರವಿಸಲಾಯಿತು. ವಹಿಸಿರುವ ಕೆಲಸ ಪ್ರಾಮಾಣಿಕವಾಗಿ ನಿಷ್ಠೆಯಿಂದ ನಿಭಾಹಿಸಿಕೊಂಡು ಸಾರ್ವಜನಿಕರ ಜೊತೆ ಒಳ್ಳೆಯ ಸಂಭಂದ ಹಾಗೂ ಎಲ್ಲ ಸಮುದಾಯದ ಸ್ನೇಹಿತರ ಜೊತೆ ಒಡನಾಟ ಹೊಂದಿಕೊಂಡಿರುವ ಯುವ ಮುಖಂಡ ಅಶೋಕ ಚಲವಾದಿ ಅವರನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ಹಾಗೂ ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಅವರು ಆಯ್ಕೆ ಮಾಡಿರುವುದು ನಮ್ಮೆಲ್ಲರಿಗೆ ಎಲ್ಲಿಲ್ಲದ ಸಂತೋಷವಾಗುತ್ತಿದೆ ಎಂದರು. ಸಾಮಾಜಿಕ ಹೋರಾಟಗಾರ ಸೋಮು ಚೂರಿ, ಮಹೇಶ ಕಾಜಗಾರ, ಬಿಜೆಪಿ ಯುವ ಮುಖಂಡ ಮಹೇಶ ನಾಗರಾಳ, ಗುರು ಪರಗೊಂಡ, ಯಲ್ಲಾಲಿಂಗ ಅಥಣಿ, ವಿನಾಯಕ ಯಳಗಂಟಿ ಇದ್ದರು.

ನೋವು ನಲಿವು ಕೃತಿ ಲೋಕಾರ್ಪಣೆ ಇಂದು

ಗುಳೇದಗುಡ್ಡ: ಪಟ್ಟಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಗುಳೇದಗುಡ್ಡ ತಾಲೂಕು ಘಟಕದ ಆಶ್ರಯದಲ್ಲಿ ಶಿಕ್ಷಕ ನಗರದ ಹಿರಿಯ ಚಿತ್ರ ಕಲಾವಿದ ಮಹಾದೇವ ಜಗತಾಪ ಅವರ ಚಿತ್ರಚೇತನದಲ್ಲಿ ಮೇ 3ರಂದು ಕವಿ, ಸಾಹಿತಿ, ಕಲಾವಿದ ಮಹದೇವ ಜಗತಾಪ ಅವರ ರಚನೆಯ ನೋವು ನಲಿವು ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಹಿರಿಯ ಸಾಹಿತಿ, ಸಂಶೋಧಕ ಡಾ.ವಿ.ಎ.ಬೆನಕನಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ, ಪ್ರಾಧ್ಯಾಪಕ ಡಾ.ಸಣ್ಣವೀರಣ್ಣ ದೊಡ್ಡಮನಿ ಕೃತಿ ಲೋಕಾರ್ಪಣೆಗೊಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಎಸ್.ಜಿ.ಕೋಟಿ, ಸಾಹಿತಿ ಡಾ.ರಾಜಶೇಖರ ಬಸುಪಟ್ಟದ ಆಗಮಿಸುವರು. ಪ್ರೊ.ಚಂದ್ರಶೇಖರ್ ಹೆಗಡೆ ಕೃತಿ ಅವಲೋಕನ ಮಾಡಲಿದ್ದಾರೆ. ಕವಿ, ಕೃತಿ ರಚನೆಕಾರ ಮಹಾದೇವ ಜಗತಾಪ ಆಶಯ ನುಡಿ ವ್ಯಕ್ತಪಡಿಸಲಿದ್ದಾರೆ. ಥೈಲೆಂಡ್ ದೇಶದ ಸ್ಪಿರಿಟ್ ಯೋಗ ತರಬೇತಿದಾರ ಮಾರುತಿ ಜಗತಾಪ ಅವರಿಗೆ ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಎಲ್ಲ ಸಾಹಿತಿಗಳು, ಸಾಹಿತ್ಯಾಸಕ್ತರು ನೋವು ನಲಿವು ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಗುಳೇದಗುಡ್ಡ ತಾಲೂಕು ಘಟಕದ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಜನಾಳ ತಿಳಿಸಿದ್ದಾರೆ.

ಅಪಘಾತ: ಪಾದಚಾರಿ ಸಾವು



ಮುಧೋಳ: ನಗರದ ಬಸರಡ್ಡಿ ದವಾಖಾನೆ ಹತ್ತಿರ ಶುಕ್ರವಾರ ಸಂಜೆ ವಾಯುವಿಹಾರ ಮಾಡಿ ವಾಪಸ್ ತೆರಳುತ್ತಿದ್ದಾಗ ವೇಗವಾಗಿ ಚಲಿಸುತ್ತಿದ್ದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಮಲಿಕಸಾಬ ರಾಜೇಸಾಬ ನದಾಫ್ ಆಸ್ಪತ್ರೆಗೆ ತೆರಳುವ ಮಧ್ಯ ಮಾರ್ಗದಲ್ಲೇ ಸಾವನಪ್ಪಿದ್ದಾರೆ. ಈ ಕುರಿತು ಅವರ ಪುತ್ರ ನೀಡಿದ ದೂರಿನ ಅನ್ವಯ ಮುಧೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಅವರು ತನಿಖೆ ಕೈಗೊಂಡಿದ್ದಾರೆ.

ನಿಧನ ಸುದ್ದಿ

ಹುಲಗಪ್ಪ ವಡ್ಡರ



ಕೆರೂರ: ಪಟ್ಟಣದ ಚಿನಗುಂಡಿ ಪ್ಲಾಟ್ ನಿವಾಸಿ ಹುಲಗಪ್ಪ ಯಮನಪ್ಪ ವಡ್ಡರ(46) ಶುಕ್ರವಾರ ನಿಧನರಾದರು, ಮೃತರಿಗೆ ಪತ್ನಿ, ಓರ್ವ ಪುತ್ರ ಇದ್ದಾರೆ.



ಬಾದಾಮಿ: ಎಸ್ಎಸ್ಎಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ನಗರದ ಈಶ್ವರಿ ಬಸವಂತಪ್ಪ ಹುಲ್ಲೂರ ವಿದ್ಯಾರ್ಥಿನಿ 625ಕ್ಕೆ 621 ಅಂಕ ಗಳಿಸುವ ಮೂಲಕ 99.36% ಅಂಕ ಗಳಿಸುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದು ಈ ವಿದ್ಯಾರ್ಥಿಯನ್ನು ಜೆಡಿಎಸ್ ಜಿಲ್ಲಾಧ್ಯಕ್ಷ ಹನುಮಂತ ಮಾವಿನಮರದ ಸನ್ಮಾನಿಸಿ, ಗೌರವಿಸಿದರು.

ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ

ಮುಧೋಳ: ಎಸ್ಎಸ್ಎಲ್ಸಿ ಹಾಗೂ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ.98ಕ್ಕಿಂತ ಹೆಚ್ಚು ಅಂಕ ಪಡೆದು ಮುಧೋಳ ಟಾಪರ್ಸ್ ಆದ ವಿದ್ಯಾರ್ಥಿಗಳನ್ನು ನಗರದ ಎಸ್‌ಡಿಪಿ ವತಿಯಿಂದ ಅಭಿನಂದನಾ ಸಮಾರಂಭದಲ್ಲಿ ಗೌರವ ಸನ್ಮಾನ ನೀಡಿ ಸತ್ಕರಿಸಲಾಯಿತು.

ಸ್ಥಳೀಯ ಖಾಸಗಿ ಹೋಟೆಲ್‌ದಲ್ಲಿ 2025-26ನೇ ಸಾಲಿನ ಎಸ್ಎಸ್ಎಲ್ಸಿಯಲ್ಲಿ ಟಾಪರ್ಸ್ ಆಗಿ ಪಾಸಾದ ಸಾಕ್ಷಿ ಮಲ್ಲಪ್ಪ ಹಕ್ಕಲಗಿ, ಬಸವರಾಜ ಮುತ್ತಪ್ಪ ಸಬಲಾದ, ಶಾರದಾ ಸಿದ್ದಪ್ಪ ಲದ್ದಿ, ಸಂದೇಶ ಶಂಕರ ಮರನೂರ, ಸ್ವಪ್ನಾ ಮಲ್ಲಯ್ಯ ಮಠಪತಿ, ಲಕ್ಷ್ಮೀ ಶಂಕ್ರಯ್ಯಪ್ಪ ಮೇಟಿ, ತನುಜಾ ಚಂದ್ರಕಾಂತ ಸುತಾರ ಹಾಗೂ ಇತರರನ್ನು ಗೌರವಿಸಿ ಸತ್ಕರಿಸಲಾಯಿತು.

ಎಸ್‌ಡಿಪಿಐ ತಾಲೂಕು ಅಧ್ಯಕ್ಷ ರಾಜು ಜಮಾದಾರ ಮಾತನಾಡಿ, ಸಾಧನೆ ಮಾಡಿರುವ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಹೆಚ್ಚಿಸುವದರ ಜೊತೆಗೆ ಇನ್ನಷ್ಟು ಉತ್ತಮ ಸಾಧನೆ ಮಾಡಲು ಅವರಿಗೆ ಸ್ಫೂರ್ತಿ ನೀಡುವ ಉದ್ದೇಶಿತ ಈ ಕಾರ್ಯಕ್ರಮಕ್ಕೆ ಪಾಲಕರು ಸಮೇತ ಆಗಮಿಸಿ ಮಕ್ಕಳಿಗೆ ಧೈರ್ಯ ತುಂಬಿದಕ್ಕೆ ಅವರು ಧನ್ಯವಾದ ಹೇಳಿದರು.

ಅಬೂಬಕರ ಸುರನಾಶಿ ಮಾತನಾಡಿದರು. ಈ ಸಂದರ್ಭದಲ್ಲಿ ಅಂಜುಮನ್ ಸಂಸ್ಥೆ ಸದಸ್ಯರಾದ ರೀಯಾಜ ಕಾಲೇಖಾನ, ರಫೀಕ ಪಠಾಣ, ಮುಬಾರಕ ಅಲ್ಲಾಖಾನ, ಮಹಿಬೂಬ ಸಾರವಾನ, ಸಮೀರಾ ಸಾರವಾನ ಇತರರಿದ್ದರು.



ಮುಧೋಳ: ಎಸ್ಎಸ್ಎಲ್ಸಿ ಹಾಗೂ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ.98ಕ್ಕಿಂತ ಹೆಚ್ಚು ಅಂಕ ಪಡೆದು ಮುಧೋಳ ಟಾಪರ್ಸ್ ಆದ ವಿದ್ಯಾರ್ಥಿಗಳನ್ನು ನಗರದ ಎಸ್‌ಡಿಪಿ ವತಿಯಿಂದ ಅಭಿನಂದನಾ ಸಮಾರಂಭದಲ್ಲಿ ಗೌರವ ಸನ್ಮಾನ ನೀಡಿ ಸತ್ಕರಿಸಲಾಯಿತು.

ಮೇ 4ರಂದು ತೋವಿವಿಯಲ್ಲಿ ಮತ ಎಣಿಕೆ | ಮೊಬೈಲ್‌ಗೆ ನಿರ್ಬಂಧ

ಮತ ಎಣಿಕೆಗೆ ಸಕಲ ಸಿದ್ಧತೆ: ಡಿಸಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಸಂಬಂಧಿಸಿದಂತೆ ಮೇ 4ರಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬೆಳಗ್ಗೆ 8 ರಿಂದ ಮತ ಎಣಿಕೆ ಕಾರ್ಯ ನಡೆಯಲಿದ್ದು, ಮತ ಎಣಿಕೆಗೆ ಸಕಲ ಸಿದ್ಧತೆ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತ ಎಣಿಕೆ ಕಾರ್ಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದ್ದು, ಜಿಲ್ಲಾಡಳಿತದಿಂದ ಎಲ್ಲ ರೀತಿಯ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮತ ಎಣಿಕೆ ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಗಲಿದ್ದು, ಅಭ್ಯರ್ಥಿಗಳು, ಚುನಾವಣಾ ಏಜೆಂಟರು ಹಾಗೂ ಮತ ಎಣಿಕೆ ಏಜೆಂಟರು ಅಂದು ಬೆಳಗ್ಗೆ 7 ಗಂಟೆಗೆ ಹಾಜರಿರಲು ತಿಳಿಸಲಾಗಿದೆ. ಭದ್ರತಾ ಕೊಠಡಿಯನ್ನು ಬೆಳಗ್ಗೆ 7 ಗಂಟೆಗೆ ಚುನಾವಣಾ ವೀಕ್ಷಕರ, ಅಭ್ಯರ್ಥಿಗಳ, ಏಜೆಂಟರ ಸಮ್ಮುಖದಲ್ಲಿ ತೆರೆಯಲಾಗುತ್ತಿದೆ ಎಂದರು.

ಇವಿಎಂ ಮತ ಎಣಿಕೆ ಕಾರ್ಯಕ್ಕಾಗಿ ನೆಲ ಮಹಡಿಯ ರೂಂನಂ.4ರಲ್ಲಿ 14 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಂಚೆ ಮತ ಪತ್ರಗಳ ಎಣಿಕೆಗಾಗಿ ನೆಲ ಮಹಡಿಯ 9ರ ಕೊಠಡಿಯಲ್ಲಿ ಒಂದು ಟೇಬಲ್ ಹಾಗೂ ಇಟಿಪಿಬಿಎಸ್ ಸ್ಕ್ಯಾನಿಂಗ್‌ಕ್ಕಾಗಿ ಕೊಠಡಿ ಸಂ.9 ರಲ್ಲಿ ಒಂದು ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ತಲಾ ಒಬ್ಬರು ಎಣಿಕೆ ಮೇಲ್ವಿಚಾರಕ, ಎಣಿಕೆ ಸಹಾಯಕ ಹಾಗೂ ಮೈಕ್ರೋ ಅಬ್ಸರವರ ನೇಮಕ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಓರ್ವ ಸಹಾಯಕ ಚುನಾವಣಾಧಿಕಾರಿಗಳು ಇರುತ್ತಾರೆ ಎಂದು ತಿಳಿಸಿದರು.

ಅಭ್ಯರ್ಥಿ, ಅಭ್ಯರ್ಥಿ ಏಜೆಂಟರಿಗೆ ಮತ ಎಣಿಕೆ ಪೂರ್ವ ದಿಕ್ಕಿನಲ್ಲಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಮತ ಎಣಿಕೆ ಏಜೆಂಟರಿಗೆ ಮುಖ್ಯ ದ್ವಾರದಲ್ಲಿ ಪ್ರವೇಶ ಇರುವುದಿಲ್ಲ, ಈ ವಾಹನಗಳಿಗೆ ಮುಖ್ಯ ದ್ವಾರದ 200 ಮೀಟರ್ ಮುಂಚಿತವಾಗಿ ಇರುವ ಜಿಲ್ಲಾ ಪಶು ಸಂಗೋಪನಾ ಆಸ್ಪತ್ರೆ ಎದುರುಗಡೆ ಹೋಗುವ ರಸ್ತೆ ಮುಖಾಂತರ ಮತ ಎಣಿಕೆ ಕೇಂದ್ರದಿಂದ ಸುಮಾರು 200 ಮೀ ಅಂತರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ನಿಷೇಧಾಜ್ಞೆ ಜಾರಿ

ಮೇ 4ರ ಬೆಳಗ್ಗೆ 6 ಗಂಟೆಯಿಂದ ಮೇ 5ರ ಬೆಳಗ್ಗೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ನ್ನು ಜಾರಿ ಮಾಡಿ ಆದೇಶಿಸಲಾಗಿದೆ. ಅಲ್ಲದೇ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ 10 ಕಿ.ಮೀ ವ್ಯಾಪ್ತಿಯಲ್ಲಿ ಮೇ 4ರ ಬೆಳಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ಮಧ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್, ಹೋಟೆಲ್, ಕ್ಲಬ್, ಡಾಬಾ ಮತ್ತು ಇನ್ನಿತರ ಸ್ಥಳಗಳಲ್ಲಿ ಮಧ್ಯ ಮಾರಾಟ ಹಾಗೂ ಸರಬರಾಜು ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ.

ಆರೋಗ್ಯ ಸಂರಕ್ಷಣೆಗೆ ಪೌರ ಕಾರ್ಮಿಕರ ಪಾತ್ರ ಮುಖ್ಯ: ಹುಂಡೇಕಾರ

ಲೋಕಾಪುರ: ಶ್ರಮಜೀವಿ ಕಾರ್ಮಿಕರ ಪರಿಶ್ರಮದಿಂದ ಜಗತ್ತು ಬೆಳೆದು ನಿಂತಿದೆ. ಕಾರ್ಮಿಕರಿಲ್ಲದೆ ಸಮಾಜದ ಚಕ್ರ ತಿರುಗದು ಎಂದು ನಿವೃತ್ತ ಪ್ರಾಚಾರ್ಯ ಎಸ್.ಎಂ.ಹುಂಡೇಕಾರ ಹೇಳಿದರು.

ಪಟ್ಟಣದ ಸಹನಾ ಪೌಂಡೇಶನ್ ಮತ್ತು ಸಹನಾ ಗೋಲ್ಡ ಹಾಗೂ ಸಹಾನ ಸೌಹಾರ್ದ ವಿವಿಧೋದ್ದೇಶಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ ಮತ್ತು ಬೌದ್ಧ ಪೂರ್ಣಿಮೆ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಗರ, ಪಟ್ಟಣಗಳ ಸ್ವಚ್ಛತೆ ಮತ್ತು ಆರೋಗ್ಯ ಸಂರಕ್ಷಣೆಯಲ್ಲಿ ಪೌರ ಕಾರ್ಮಿಕರ ಪಾತ್ರ ಮಹತ್ವದ್ದಾಗಿದ್ದು ಅವರ ಸೇವೆಯನ್ನು ಶ್ಲಾಘಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಡಾ.ಸಂತೋಷ ಶೆಟ್ಟರ ಮಾತನಾಡಿ, ಬಸವಣ್ಣನವರ ವಚನದಂತೆ ಕಾಯಕವೇ ಕೈಲಾಸ ಎಂದು ಭಾವಿಸಿ, ಮಳೆ, ಗಾಳಿ ಎನ್ನದೇ ಶ್ರಮಿಸುವ ಕಾರ್ಮಿಕರ ಸೇವೆ ಶ್ರೇಷ್ಠವಾದುದು, ಮನೆಗಳಿಂದ ತ್ಯಾಜ್ಯ ಸಂಗ್ರಹಿಸಿ, ಪಟ್ಟಣದೊಳಗಿನ ತ್ಯಾಜ್ಯ ತೆರವುಗೊಳಿಸಿ ಸ್ವಚ್ಚತೆಗೆ ಶ್ರಮಿಸುತ್ತಿರುವ ಪೌರ ಕಾರ್ಮಿಕರ ಶ್ರಮ ಅಪಾರ ಎಂದರು.

ಸಂಸ್ಥೆಯ ಅಧ್ಯಕ್ಷ ನಿಲೇಶ ಬನ್ನೂರ ಮಾತನಾಡಿ, ಪೌರ ಕಾರ್ಮಿಕರಿಗೆ ಕೃತಜ್ಞತೆ ಹಾಗೂ ಗೌರವ ಸೂಚಿಸುವ ದಿನಾಚರಣೆ ಇದಾಗಿದೆ, ಇಂದು ಅನೇಕ ಇಲಾಖೆಗಳ ಕಾರ್ಮಿಕರು ನೌಕರರು ಸಾರ್ವಜನಿಕರ ಸೇವೆ ಸಲ್ಲಿಸುತ್ತಿದ್ದಾರೆ, ಆದರೆ ಪೌರ ಕಾರ್ಮಿಕರ ಸೇವೆ ಶ್ರಮದಾಯಕ ಹಾಗೂ ಶ್ರೇಷ್ಠ ಸೇವೆ ಎಂದರು.

ಹಿರಿಯ ಕಾರ್ಮಿಕರಾದ ಚನ್ನಬಸಪ್ಪ ಮುರಗೋಡ ಹಾಗೂ ಉತ್ತಮ ಸೇವೆ ಸಲ್ಲಿಸಿದ ಪೌರ ಕಾರ್ಮಿಕರನ್ನು ಗುರುತಿಸಿ ಸನ್ಮಾನಿಸಲಾಯಿತು.

ಈ ವೇಳೆ ಬಸವರಾಜ ಅಂಗಡಿ, ಪತ್ರಕರ್ತರಾದ ಸಲಿಂ ಕೊಪ್ಪದ, ಮಹೇಶ ಹುಗ್ಗಿ, ಮಲ್ಲಪ್ಪ ಅಂಗಡಿ, ಚನ್ನಬಸಪ್ಪ ಹುಬ್ಬಳ್ಳಿ, ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕಿ ಉಮಾ ಗುಗ್ಗರಿ, ಜನರಲ್ ಮ್ಯಾನೇಜರ್ ವಿಜಯಾ ಪಾಟೀಲ, ರೂಪಾ ಕಗಲಗೊಂಬ, ಭಾಗ್ಯಲಕ್ಷ್ಮೀ ಮುದ್ದಾಪುರ, ಶಿವಾನಂದ ಅಂಗಡಿ, ಮುರಿಗೆಪ್ಪ ಮಹಾಲಿಂಗಪೂರ, ಚನ್ನಬಸು ಪಾಟೀಲ, ಸರಸ್ವತಿ ಡಿ.ಸಹನಾ ಪೌಂಡೇಸನ್ ಸಿಬ್ಬಂದಿ ಇದ್ದರು.



ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಹೇಳಿಕೆ

ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧವಿಲ್ಲ

ಬಾಗಲಕೋಟೆ: ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಪಕ್ಷವು ವಿರೋಧವಿಲ್ಲ ಎಂದು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧಿಸುತ್ತಿದೆ ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಕಾಂಗ್ರೆಸ್ ವಿರೋಧವಿಲ್ಲ, ಮಹಿಳಾ ಮೀಸಲಾತಿ ಜೊತೆಗೆ ಲೋಕಸಭೆ ಮತಕ್ಷೇತ್ರ ವಿಂಗಡಣೆ ಕೈ ಹಾಕಿರುವುದು ಖಂಡಿಸಿದರು.

ಲೋಕಸಭಾ ಮತ ಕ್ಷೇತ್ರ ವಿಂಗಡಣೆಯಲ್ಲಿ ಕೇಂದ್ರವು ತಾರತಮ್ಯ ಮಾಡಿದ್ದು, ಅದನ್ನು ಸರಿಪಡಿಸಬೇಕು. ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಪಕ್ಷವುಎಂದೆಂದಿಗೂವಿರೋಧಿಸಿಲ್ಲ, ಅದನ್ನು ನಾವು ಜಾರಿಗೆ ತಂದಿದ್ದೇವೆ ಎನ್ ಡಿಎ ಸರ್ಕಾರ ಮಹಿಳಾ ಮೀಸಲಾತಿಯಲ್ಲಿ ತಾರತಮ್ಯ ಮಾಡುತ್ತಿರುವುದು ನಮ್ಮ ಮೇಲೆ ಗೂಬೆ ಕೂರಿಸುವಂತಹ ಕೆಲಸ ಮಾಡುತ್ತಿದೆ ಎಂದರು.

ಪಂಚರಾಜ್ಯಗಳ ಚುನಾವಣೆಯಲ್ಲಿ ಇದರ ಲಾಭ ಪಡೆಯಬೇಕೆಂದು ಹುನ್ನಾರ ನಡೆಸಿತ್ತು. ಚುನಾವಣೆ ಬಳಿಕ ಕೇಂದ್ರ ಸರ್ಕಾರ ಮತ್ತೆ ಗ್ಯಾಸ್ ಸಿಲೆಂಡಿರ ದರ ಹೆಚ್ಚಳ ಮಾಡಿದ್ದು ಇದು ಜನಸಾಮಾನ್ಯರ ಮೇಲೆ ಹೊರೆ ಬಿದ್ದಂತಾಗಿದೆ ಎಂದು ಹೇಳಿದರು.

ಮುಂಬರುವ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ನಾನು ಅಖಾಡದಲ್ಲಿ ಇರುತ್ತೇನೆ ಎಂದು ವೀಣಾ ಕಾಶಪ್ಪನವರ್ ಹೇಳಿ, 2028 ರಲ್ಲಿರುವ ನಡೆಯುವ ವಿಧಾನಸಭೆ, 2029 ರಲ್ಲಿ ಲೋಕಸಭೆ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದು ಖಚಿತವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಸುಮಿತ್ರಾ ಗುಳಬಾಳ, ರೇಣುಕಾ ನ್ಯಾಮಗೌಡ, ಮೇನಕಾ ಲಮಾಣಿ, ವಿಜಯಲಕ್ಷ್ಮೀ ಪೂಜಾರ, ಅನುರಾಧ ದೊಡ್ಡಮನಿ ಇದ್ದರು.



ವಿಶೇಷ ಅಗತ್ಯವುಳ್ಳ ಎಸ್ಸೆಸ್ಸೆಲ್ಸಿ ಸಾಧಕ ಮಕ್ಕಳಿಗೆ ಗೌರವ ಸನ್ಮಾನ

ರನ್ನ ಬೆಳಗಲಿ: ಪಟ್ಟಣದ ಪಂಚಾಯತಿ ಕಾರ್ಯಾಲಯ ಆವರಣದಲ್ಲಿ ಮುಧೋಳ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಪಟ್ಟಣ ಪಂಚಾಯತಿ ಆಶ್ರಯದಲ್ಲಿ 2025-26ನೇ ಸಾಲಿನ ವಿಶೇಷ ಅಗತ್ಯವುಳ್ಳ ಎಸ್ಸೆಸ್ಸೆಲ್ಸಿ ಮಕ್ಕಳ ಫಲಿತಾಂಶ ಪ್ರಕಟಗೊಂಡಿದ್ದು, 18 ವಿದ್ಯಾರ್ಥಿಗಳಿಗೆ ಶಿಕ್ಷಣ ಇಲಾಖೆಯು ಗೌರವಿಸಿ ಸನ್ಮಾನಿಸಿದರು.

ವಿದ್ಯಾರ್ಥಿಗಳಾದ ಸುಶ್ಮಿತಾ ಗೌರವ್ವಗೋಳ, ಕೀರ್ತಿ ನಾಯಕ, ಲಕ್ಷ್ಮಿ ಹುಲ್ಯಾಳ ಮತ್ತು ಮಹಾಲಿಂಗಪುರ ನಗರದ ಮಲ್ಲಿಕಾರ್ಜುನ ಮೂಳೆಗಾವಿ, ವೈಷ್ಣವಿ ಅಮ್ಮನಗೆ, ಪ್ರೀತಿ ಗೌರೀಶ ನಾಯಕ ಎಲ್ಲಾ ಸಾಧಕ ವಿದ್ಯಾರ್ಥಿಗಳಿಗೆ ಎಸ್.ಎಂ.ಮುಲ್ಲಾ, ಬಿಇಒ ಎ.ಆರ್.ಭಬ್ಬಿ ಬಿ.ಆರ್‌ಸಿಓ ಮತ್ತು ಎಸ್.ಡಿ.ನೀಲಗುಂದ ಎಸ್ಎಸ್ಎಲ್ಸಿ ನೂಡಲ್‌ರವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಬಿಐಇಆರ್‌ಟಿಗಳಾದ ಎ.ಎಂ.ಕೆಲಬಾವಿ, ಕೃಷ್ಣ ಅರಿಕೇರಿ ಮತ್ತು ಸಿಆರ್‌ಪಿ ಬಸವರಾಜ ಬಳ್ಳಾರಿ, ಎಸ್.ಎಸ್.ಹೊಸಮನಿ ಅವರು ಸತ್ಕರಿಸಿ ಗೌರವಿಸಿದರು.



ಬಿ.ಎಂ.ಮಂತ್ರಿ ಬಿಐಇ ಆರ್‌ಟಿ ಪ್ರತಿ ವಿದ್ಯಾರ್ಥಿಗಳ ವ್ಯಯಕ್ತಿಕ ಮಾಹಿತಿ ಪಡೆದು ಮುಂದಿನ ಶಿಕ್ಷಣಕ್ಕೆ ಇಲಾಖೆಯಿಂದ ಪ್ರೋತ್ಸಾಹ ನೀಡುವುದಾಗಿ ತಿಳಿಸಿದರು. ನಮ್ಮೆಲ್ಲಾ ನ್ಯೂನಯತೆ ಗೆಲ್ಲುವ ಏಕೈಕ ಸಾಧನವೇ ಶಿಕ್ಷಣ. ಆದ್ದರಿಂದ ಶಿಕ್ಷಣದಿಂದ ಯಾರು ವಂಚಿತರಾಗಬೇಡಿ. ವಿಶೇಷ ಅಗತ್ಯವುಳ್ಳ ಸಾಧಕರು ಉನ್ನತವಾದ ಅಧಿಕಾರಿಗಳಾಗಿ ದೇಶಕ್ಕೆ ಆಸ್ತಿಯಾಗಿದ್ದಾರೆ ಎಂದು ಹೇಳಿದರು. ಮಹಾಲಿಂಗ ಸಮೀರ, ಉಮಾಶ್ರೀ ನೇಕಾರ, ರವಿ ಭಜಂತ್ರಿ, ರಾಮಣ್ಣ ಹುನ್ನೂರ, ಪೂನಂ ಕುಂಬಾರ ಮತ್ತು ಪಾಲಕರು ಉಪಸ್ಥಿತರಿದ್ದರು.

ಗ್ರಾಮ ದೇವತೆ ದರ್ಶನ ಪಡೆದ ಭಾಂಡಗೆ



ಕೆರೂರ: ಸ್ಥಳೀಯ ಎ.ಆರ್.ಹಿರೇಮಠ ಹೈಸ್ಕೂಲ್ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಗ್ರಾಮ ದೇವತೆಗಳ ದರ್ಶನಕ್ಕೆ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಬೇಟಿ ನೀಡಿ ದರ್ಶನ ಪಡೆದರು. ಒಂಬತ್ತು ವರ್ಷಗಳ ಬಳಿಕ ನಡೆದ ಗ್ರಾಮ ದೇವತೆಗಳ ಜಾತ್ರೆಯು ಜನರಿಗೆ ಅತಿ ಹೆಚ್ಚು ಸಂಸತವನ್ನು ನೀಡಿದ್ದು,ತಾಯಿಯು ಪಟ್ಟಣದ ಜನರಿಗೆ ಒಳ್ಳೆಯ ಆರೋಗ್ಯ ನೀಡಿ. ಈ ಬಾರಿ ಉತ್ತಮ ಮಳೆ ನೀಡಿ ರೈತರನ್ನು ಹರ್ಷದಾಯಕವನ್ನಾಗಿ ಮಾಡಲಿ. ದೇವಿಯ ದರ್ಶನದಿಂದ ಮನಸ್ಸಿಗೆ ನೆಮ್ಮದಿಯನ್ನು ತಂದಿದೆ ಎಂದರು. ಬಿಜೆಪಿ ಜಿಲ್ಲಾ ಅಧ್ಯಕ್ಷ ಶಾಂತಗೌಡ ಪಾಟೀಲ, ತಾಲೂಕು ಅಧ್ಯಕ್ಷ ನಾಗರಾಜ ಕಾಚಟ್ಟಿ, ನಗರ ಘಟಕದ ಅಧ್ಯಕ್ಷ ರಾಚಪ್ಪ ಶೆಟ್ಟರ, ಗುಂಡಣ್ಣ ಬೋರಣ್ಣವರ, ಮಹೇಶ ಮುಗಳಿ, ಶರಣು ಸಜ್ಜನ, ಹನಮಂತ ಪ್ರಭಾಕರ, ಜಯಶ್ರೀ ದಾಸಮನಿ ಇದ್ದರು.

ಅಹಿಂಸೆ ಸಂದೇಶ ಸಾರಿದ ಬುದ್ಧ

ಇಳಕಲ್: ವಿಶ್ವಕ್ಕೆ ಶಾಂತಿ ಮತ್ತು ಅಹಿಂಸೆಯ ಸಂದೇಶ ಸಾರಿದ ಭಗವಾನ್ ಗೌತಮ ಬುದ್ಧರ ಜಯಂತಿಯ ಪ್ರಯುಕ್ತ ತಾಲೂಕು ತಹಶೀಲ್ದಾರ್ ಕಾರ್ಯಾಲಯದಲ್ಲಿ ಬುದ್ಧ ಪೂರ್ಣಿಮೆ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ತಾಲೂಕು ತಹಶೀಲ್ದಾರ್ ಅಮರೇಶ ಪಮಾರ ಬುದ್ಧನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಬುದ್ಧನ ತತ್ವಗಳು ಮತ್ತು ವಿಚಾರಧಾರೆಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ ಎಂದರು.ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಕಟ್ಟಿಮನಿ, ಗಿರೀಶ ಅಚನೂರ,ಮಹದೇವ ಕಂಬಾಗಿ, ಮಹಾಂತೇಶ ನಾರಾಯಣಿ, ನಾಗೇಶ ಮುದುಗಲ,ಸಮಾಜ ಸೇವಕ ಉಮೇಶ ಶಿರೂರ, ರವಿ ಮದ್ನಾಳ ಇದ್ದರು.



ಪರಿಷ್ಕರಣೆಯಿಂದ ನಿಖರ ಮತದಾರರ ಸಂಖ್ಯೆ ಲಭ್ಯ

ಬಾದಾಮಿ: ಮತದಾರರ ಪಟ್ಟಿ ಪರಿಷ್ಕರಣೆಯಿಂದ ತಮ್ಮ ಮತಗಟ್ಟೆಯಲ್ಲಿರುವ ಪಟ್ಟಿಯು ನಿಜವಾದ ಅರ್ಹ ನಾಗರಿಕರನ್ನು ಪ್ರತಿಬಿಂಬಿಸುವಂತೆ ಹಾಗೂ ಅನರ್ಹ, ಮೃತ ಅಥವಾ ನಕಲಿ ಹೆಸರುಗಳನ್ನು ತೆಗೆದುಹಾಕುವಂತೆ ಖಚಿತಪಡಿಸುತ್ತದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಹೇಳಿದರು.

ನಗರದ ವೀರಪುಲಿಕೇಶಿ ಸಂಸ್ಥೆಯ ಒಳಾಂಗಣ ಕ್ರೀಡಾಂಗಣದಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಬಿಎಲ್ಎ 2 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಎಸ್ಐಆರ್ ಮಾಡುವುದರಿಂದ ಪಟ್ಟಿ ಶುದ್ದೀಕರಣ, ಅರ್ಹ ನಾಗರಿಕರನ್ನು ಪಟ್ಟಿಯಲ್ಲಿ ಒಳಗೊಂಡಿರುವುದು, ವಂಚನೆ ತಡೆಯುವುದು, ವಿಶ್ವಾಸಾರ್ಹತೆ ಬಲಪಡಿಸುವುದು, ಜನಸಂಖ್ಯೆ ಬದಲಾವಣೆಯನ್ನು ಪ್ರತಿಬಿಂಬಿಸುವುದು. 2002ರಲ್ಲಿ ನಮ್ಮ ರಾಜ್ಯದಲ್ಲಿ ಎಸ್ಐಆರ್ ನಡೆದಿದ್ದು, ಈಗ ಸದ್ಯದಲ್ಲಿಯೇ ಪರಿಷ್ಕರಣೆ ನಡೆಯಲಿದೆ. ಚುನಾವಣೆ ಅಧಿಕಾರಿಗಳು ಪ್ರತಿ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಬೂತಮಟ್ಟದ ಏಜೆಂಟರು ಕಾಳಜಿ ವಹಿಸಿ ಅರ್ಹ ಮತದಾರರು ಪಟ್ಟಿಯಿಂದ ಹೊರಹೋಗದಂತೆ ನಿಗಾ ವಹಿಸಬೇಕು ಎಂದು ಹೇಳಿದರು.

ಜೆಡಿಎಸ್ ರಾಜ್ಯ ವಕ್ತಾರ, ನ್ಯಾಯವಾದಿ ಪ್ರದೀಪಕುಮಾರ ಎಸ್.ಬಿ ಮಾತನಾಡಿ, ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತಕ್ಷೇತ್ರ ಜೆಡಿಎಸ್ ಪಕ್ಷದ ಪಟ್ಟಿಯಲ್ಲಿ ಎ ಸ್ಥಾನದಲ್ಲಿದೆ. ನೀವೆಲ್ಲರೂ ಚೆನ್ನಾಗಿ ಕೆಲಸ ಮಾಡಿ ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಸಂಘಟನಾ ಚತುರ ಹನಮಂತ ಮಾವಿನಮರದ ಅವರನ್ನು ಶಾಸಕರಾಗಿ ಆಯ್ಕೆ ಮಾಡಲು ಶ್ರಮಿಸಿರಿ ಎಂದರು.

ತಾಲೂಕು ಅಧ್ಯಕ್ಷ ಹುಚ್ಚೇಶ ಹದ್ದನ್ನವರ, ಬಸವರಾಜ ಕುಂಬಾರ, ಹನಮಂತ ಸಂಗಟಿ, ಶಿವು ಗೊರವರ, ಬಾದಾಮಿ ನಗರ ಘಟಕದ ಅಧ್ಯಕ್ಷ ಪ್ರಕಾಶ ಕೋಟಿ, ಜಿಲ್ಲಾ ಉಪಾಧ್ಯಕ್ಷ ಎಂ.ಎಸ್.ಹಿರೇಹಾರ, ಪ್ರಕಾಶ ಗಾಣಿಗೇರ, ಬಾಲು ಹುನಗುಂಡಿ, ಕೆರೂರ ನಗರ ಘಟಕದ ಅಧ್ಯಕ್ಷ ಟೋಪೇಶ ಬಾದಾಮಿ, ಗುಳೇದಗುಡ್ಡ ನಗರ ಘಟಕದ ಅಧ್ಯಕ್ಷ ರಾಘು ಚಳಗೇರಿ, ಈರಣ್ಣ ಶೇಖಾ ಉಪಸ್ಥಿತರಿದ್ದರು.



ಸಂಭ್ರಮದ ಲಕ್ಷ್ಮೀ ನರಸಿಂಹ ರಥೋತ್ಸವ

ಗುಳೇದಗುಡ್ಡ: ಪಟ್ಟಣದ ರಾವಜಿ ವಾಡದಲ್ಲಿನ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಲಕ್ಷ್ಮೀ ನರಸಿಂಹ ದೇವರ ಜಯಂತಿ ನಿಮಿತ್ತ ರಜತ ರಥೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಶುಕ್ರವಾರ ಬೆಳಗೆಗ ಲಕ್ಷ್ಮೀ ನರಸಿಂಹ ದೇವರ ದೇವಸ್ಥಾನದಲ್ಲಿ ಹೊಸ್ತಿಲ ಪೂಜೆ, ತೊಟ್ಟಿಲೋತ್ಸವ, ಪೂಜಾ ಕಾರ್ಯಕ್ರಮಗಳು ಸಡಗರ, ಸಂಭ್ರಮದಿಂದ ನಡೆದವು. ಪಂಡಿತ್ ಆದಿ ಶೇಷಾಚಾರ್ಯಯಲಗೂರ್ ಅವರುಶ್ರೀಲಕ್ಷ್ಮೀನರಸಿಂಹದೇವರಕುರಿತುಪುರಾಣ ಪ್ರವಚನ ಸಾದರ ಪಡಿಸಿದರು. ದೇವಸ್ಥಾನ ಅರ್ಚಕ ವೆಂಕಟೇಶ ಪಾರ್ವತೀಕರ ಅವರು ಶ್ರೀ ಲಕ್ಷ್ಮೀ ನರಸಿಂಹ ದೇವರಿಗೆ ಹಾಗೂ ದಾಮೋದರಾಚಾರ್ಯ ಜೋಶಿ ಅವರು ರಾಘವೇಂದ್ರಸ್ವಾಮಿಗಳ ಬೃಂದಾವನಕ್ಕೆ ಅವರು ವಿಶೇಷ ಪೂಜೆ, ಅಭಿಷೇಕ ನೆರವೇರಿಸಿದರು. ಬಳಿಕ ದೇವಸ್ಥಾನದ ಆವರಣದಲ್ಲಿ ರಜತ ರಥೋತ್ಸವ ಅಪಾರಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ಜರುಗಿತು. ರಥೋತ್ಸವದಲ್ಲಿ ಮಹಿಳೆಯರು ದೇವರ ಭಕ್ತಿ ಗೀತೆಗಳಿಗೆ ನೃತ್ಯ ಮಾಡಿ ಗಮನ ಸೆಳೆದರು. ಸುರೇಶ ಪರ್ವತೀಕರ, ಸತೀಶ ಪರ್ವತೀಕರ, ರಮೇಶ ಪರ್ವತೀಕರ, ಪ್ರಭಾಕರಭಟ್ ಜೋಶಿ, ಶ್ರೀಧರ ನರೇಗಲ್ಲ, ರಾಘವೇಂದ್ರ ಕಾರಕೂನ, ಶ್ಯಾಮರಾವ ಪದಕಿ, ಪ್ರಸನ್ ಅಂಬೇಕರ, ಮಹಾಲಿಂಗಪ್ಪ ಕರನಂದಿ, ವಿನೋದ ಅಂಬೇಕರ, ಸಂಜೀವ ಕಾರಕೂನ, ಡಾ.ವಿ.ಎನ್.ಡಾಣಾಕಶಿರೂರ ಇದ್ದರು.



ಗೌತಮ ಬುದ್ಧನ ಬೋಧನೆಗಳು ಮಾನವ ಕುಲಕ್ಕೆ ಆದರ್ಶ

ಬೀಳಗಿ: ಏಷ್ಯಾದ ಬೆಳಕು ಎಂದು ಹೆಸರಾದ ಗೌತಮಬುದ್ಧ ಬೌದ್ಧ ಧರ್ಮದಸ್ಥಾಪಕ. ಜಾತಿಪದ್ಧತಿಯನ್ನು ವಿರೋಧಿಸಿ ಸಮಾನತೆಯನ್ನು ಸಾರಿದ ಗೌತಮ ಬುದ್ಧರ ಬೋಧನೆಗಳು ಇಂದಿಗೂ ಮಾನವಕುಲಕ್ಕೆ ಶಾಂತಿಯ ಮಾರ್ಗದರ್ಶಿಯಾಗಿವೆ ಎಂದು ತಹಶೀಲ್ದಾರ್ ವಿನೋದ ಹತ್ತಳ್ಳಿ ಹೇಳಿದರು.

ಪಟ್ಟಣದ ತಾಲೂಕು ಆಡಳಿತ ಕಚೇರಿಯಲ್ಲಿ ಸರಳವಾಗಿ ಆಯೋಜಿಸಿದ್ದ ಬುದ್ಧ ಜಯಂತಿ ಅಧ್ಯಕ್ಷತೆ ವಹಿಸಿ ಗೌತಮ ಬುದ್ಧರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಗೌತಮ ಬುದ್ಧರು ಶಾಂತಿ ಮತ್ತು ಅಹಿಂಸೆಯ ಪ್ರತಿಪಾದಕರು. ಅಲ್ಲದೇ ಅವರೊಬ್ಬ ಮಹಾನ್ ದಾರ್ಶನಿಕರು ಎಂದು ಹೇಳಿದರು. ಜೀವನದ ಜರಾ, ಮರಣ, ರೋಗ ಮತ್ತು ಸನ್ಯಾಸಿಗಳನ್ನು ಕಂಡು, 29ನೇ ವಯಸ್ಸಿನಲ್ಲಿ ಸತ್ಯವನ್ನು ಹುಡುಕಲು ಮನೆ ಬಿಟ್ಟರು. ಬಿಹಾರದ ಬೋಧಗಯಾದಲ್ಲಿ ಅಶ್ವತ್ಥ ಮರದ ಕೆಳಗೆ ಧ್ಯಾನ ಮಾಡಿ, 35ನೇ ವಯಸ್ಸಿನಲ್ಲಿ ಜ್ಞಾನೋದಯ ಪಡೆದು ಬುದ್ಧರಾದರು ಎಂದರು.

ಜಗತ್ತು ದುಃಖಮಯವಾಗಿದೆ. ದುಃಖಕ್ಕೆ ಕಾರಣ ಆಸೆ, ತೃಷೆ. ಆಸೆಯನ್ನು ಗೆದ್ದರೆ ದುಃಖ ನಿವಾರಣೆಯಾಗುತ್ತದೆ. ಆಸೆ,ದುಃಖ ನಿವಾರಣೆಗೆ ಅಷ್ಟಾಂಗ ಮಾರ್ಗವೇ ದಾರಿ ಎಂದು ಬೋಧಿಸಿದ್ದಾರೆಂದು ಹೇಳಿದರು. ಜೀವನದ ದುಃಖಗಳಿಗೆ ಕಾರಣ ಮತ್ತು ಪರಿಹಾರ ಹುಡುಕಿ ಜ್ಞಾನೋದಯ ಪಡೆದರು. 'ನಾಲ್ಕು ಆರ್ಯ ಸತ್ಯಗಳು' ಮತ್ತು 'ಅಷ್ಟಾಂಗ ಮಾರ್ಗ'ಗಳ ಮೂಲಕ ಮಾನವಕುಲಕ್ಕೆ ಶಾಂತಿ, ಕರುಣೆ ಮತ್ತು ನಿರ್ವಾಣದ ದಾರಿಯನ್ನು ತೋರಿದ್ದಾರೆಂದು ತಿಳಿಸಿದರು.

ಸಮಾಜ ಕಲ್ಯಾಣ ಅಧಿಕಾರಿ ಸಿ.ಎಸ್. ಗಡ್ಡದೇವರಮಠ, ಪಿಎಸ್ಐಎನ್.ಟಿ.ದಡ್ಡಿಮನಿ,ಎಸ್.ಎ. ಎತ್ತಿನಮನಿ, ಮುಖಂಡರಾದ ಅನೀಲ ಗಚ್ಚಿನಮನಿ, ಮಹಾದೇವ ಹಾದಿಮನಿ, ಹನಮಂತ ಸೂಳಿಕೇರಿ, ಬಸವರಾಜ ಹಳ್ಳದಮನಿ, ಸಿದ್ದು ಮೇಟಿ, ಪಡಿಯಪ್ಪ ಕಳ್ಳಿಮನಿ, ಚಂದ್ರಶೇಖರ ಚೋಪ್ಡಾ, ಚಂದ್ರಶೇಖರ ನಡುವಿನಮನಿ, ಪುಂಡಲೀಕ ಟಕ್ಕಳಕಿ ಮತ್ತಿತರಿದ್ದರು.



ಕಿರುಸುದ್ದಿ

ಭಗವಂತನನ್ನು ಪೂಜಿಸಿದರೆ ಜೀವನ ಸಾರ್ಥಕ



◆ **ಆಲಮಟ್ಟಿ:** ನಾವು ನಿಂತ ನೆಲ ಕುಡಿಯುವ ನೀರು ತಿನ್ನುವ ಅನ್ನ ಉಸಿರಾಡುವ ಗಾಳಿ ಪರಮಾತ್ಮ ಕೊಟ್ಟ ಕೊಡುಗೆ. ಏನೆಲ್ಲವನ್ನು ಕೊಟ್ಟ ಭಗವಂತನನ್ನು ದಿನದ 24 ಗಂಟೆಯಲ್ಲಿ ಎರಡು ನಿಮಿಷ ಸ್ಮರಿಸಿ ಪೂಜಿಸಿದರೆ ಜೀವನ ಸಾರ್ಥಕಗೊಳ್ಳುತ್ತದೆ ಎಂದು ನಿಡಗುಂದಿಯ ರುದ್ರೇಶ್ವರ ಸಂಸ್ಥಾನ ಮಠದ ರುದ್ರಮುನಿ ಶ್ರೀಗಳು ಹೇಳಿದರು.

ಇಲ್ಲಿನ ಪುರವರ ಹಿರೇಮಠದ ಅನ್ನದಾನೇಶ್ವರ ಶಿವಯೋಗಿಗಳ ಜಾತ್ರಾಮಹೋತ್ಸವ ನಿಮಿತ್ತ ಜರುಗಿದ ಧರ್ಮ ಸಭೆಯಲ್ಲಿ ಮಾತನಾಡಿದರು. ಮುಖಂಡ ಸಂಗಮೇಶ ಬಬಲೇಶ್ವರ ಮಾತನಾಡಿ, ದೇಶ-ವಿದೇಶಗಳಲ್ಲಿ ಸುತ್ತೂರು ಮಠದ ಶೈಕ್ಷಣಿಕ ಉಸ್ತುವಾರಿ ವಹಿಸಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತಿರುವ ಆಲಮಟ್ಟಿ ಅನ್ನದಾನೇಶ್ವರ ಮಠದ ರುದ್ರಮುನಿ ದೇವರ ಕಾರ್ಯ ಶ್ಲಾಘನೀಯ ಎಂದರು. ಈ ಭಾಗದ ಹಲವಾರು ಮಠಗಳ ಪ್ರತಿಯೊಂದು ಕಾರ್ಯದಲ್ಲಿಯೂ ಮುಂಚೂಣಿಯಲ್ಲಿದ್ದು, ನಾಡಿನ ಮಠಗಳ ತಾಯಿ ಹೃದಯದ ಗುರುಗಳು ಇವರಾಗಿದ್ದಾರೆ ಎಂದರು. ಶ್ರೀ ಮಠದ ಪೀಠಾಧಿಪತಿ ಡಾ.ರುದ್ರಮುನಿ ಸ್ವಾಮೀಜಿ ಜಾತ್ರೆಯ ನೇತೃತ್ವ ವಹಿಸಿದ್ದರು. ಧಾರ್ಮಿಕ ಸಭೆಯಲ್ಲಿ ಮುತ್ತತ್ತಿ ಹಿರೇಮಠದ ಗುರುಲಿಂಗ ಶ್ರೀಗಳು, ಬಿಲ್‌ಕೆರೂರಿನ ಬಿಲ್ವಾಶ್ರಮ ಹಿರೇಮಠದ ಸಿದ್ದಲಿಂಗ ಶ್ರೀಗಳು, ಮುತ್ತತ್ತಿಯ ಗುರುಲಿಂಗ ಶ್ರೀ, ಬಿಲ್‌ಕೆರೂರಿನ ಸಿದ್ದಲಿಂಗ ಶ್ರೀ ಕೊಣ್ಣೂರಿನ ವಿಶ್ವಪ್ರಭುದೇವ ಶ್ರೀ, ಚುಂಚನಹಳ್ಳಿಯ ಚನ್ನಬಸವ ಶ್ರೀ, ಹುಲ್ಯಾಳದ ಹರ್ಷಾನಂದ ಶ್ರೀ, ಚಿಮ್ಮಲಗಿಯ ಸಿದ್ದರೇಣುಕ ಶ್ರೀ ನಂದವಾಡಗಿಯ ಅಭಿನವ ಚನ್ನಬಸವ ಶ್ರೀ, ಹುನಗುಂದದ ಅಮರೇಶ್ವರ ದೇವರು ಮಂಜುನಾಥ ಹಿರೇಮಠ ಇದ್ದರು.

ವಿದ್ಯಾರ್ಥಿಗಳಿಗೆ ಸನ್ಮಾನ



◆ **ಇಂಡಿ:** ಪಟ್ಟಣದ ಮಾಡೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಂಡಿ ತಾಲೂಕು ಮಟ್ಟದಲ್ಲಿ ಉರ್ದು ಮಾಧ್ಯಮದ ವಿದ್ಯಾರ್ಥಿಗಳಾದ ಉಮ್ಮೆರೋಮಾನ ಬಾಗವಾನ, ರುಕ್ಸಾನಾ ಬಾಗವಾನ ಹಾಗೂ ಮಹೇಕ ನದಾಫ ಅವರಿಗೆ ಸನ್ಮಾನಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕ ಮೊಹಮ್ಮದರಫೀಕ ಮುಲ್ಲಾ ಮಾತನಾಡಿ, ವಿದ್ಯಾರ್ಥಿಗಳ ಕಠಿಣ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಮತ್ತು ಪೋಷಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಹೇಳಿದರು. ಮುಫ್ತಿ ಅಬ್ದುಲ ರಹಮಾನ ಅರಬ ಧ್ಯಕ್ಷತೆ ವಹಿಸಿದ್ದರು. ಪರವೀಜ ಪಟೇಲ, ಸಿಆರ್‌ಪಿ ಇಂಡಿ ಉರ್ದು ಕ್ಲಸ್ಟರ ಅಲ್ಲಾಭಕ್ಷ ವಾಲಿಕಾರ, ಅಲಹಾಜ ನಿಸಾರಅಹ್ಮದ, ಬಾಗವಾನ ಜಾಕೀರ, ಶೇಖ್ ಇಮ್ತಿಯಾಜ ಸೌದಾಗರ, ಮುಖ್ಯ ಶಿಕ್ಷಕರಾದ ಮಹಮ್ಮದ ರಫೀಕ ಮುಲ್ಲಾ, ಅಬ್ದುಲ್ಲಾ ಪಟೇಲ, ಸಲಾವುದ್ದೀನ ನಾಗೂರ, ಮುಜೀಬುರ ರಹಮಾನ, ಅಫ್ಜಲಪೂರ ಶಿರಾಜಅಹ್ಮದ ಚಟ್ಟರ್ಕಿ, ಮಹಮ್ಮದ ರಫಿಕ ಆವಟಿ ಬಶೀರಅಹ್ಮದ ಗಾಲಿಬವಾಲೆ ಉಪಸ್ಥಿತರಿದ್ದರು.

ಕಾರ್ಮಿಕರು ದೇಶಾಭಿವೃದ್ಧಿಯ ಹರಿಕಾರರು



◆ **ವಿಜಯಪುರ:** ದೇಶದ ಆರ್ಥಿಕ ಪ್ರಗತಿಗೆ ಕಾರ್ಮಿಕ ಬಂಧುಗಳೇ ನೇರ ಕಾರಣರಾಗಿದ್ದಾರೆ. ಎಲ್ಲ ಜನರು ಸತ್ಯಶುದ್ಧ ಕಾಯಕವನ್ನು ಮಾಡುವವರೇ ಅಲ್ಲಿ ವ್ಯಷ್ಠಿ ಮತ್ತು ಸಮಷ್ಠಿಗಳು ಅಭಿವೃದ್ಧಿ ಹೊಂದುತ್ತವೆ. ಮಾಲೀಕರು ಮತ್ತು ದುಡಿದ ವರ್ಗದ ಮಧ್ಯೆ ಸೌಹಾರ್ದಯುತ ವಾತಾವರಣವಿದ್ದಾಗ ಮಾತ್ರ ಪ್ರಗತಿ ಸಾಧ್ಯ ಎಂದು ಕೆ.ಆರ್. ಅರಕೇರಿಮಠ ಹೇಳಿದರು. ನಗರದ ವೀರಶೈವ ಲಿಂಗಾಯತ ಮಹಾಸಭಾದ ಸಭಾಭವನದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಮ್ಮಿಕೊಂಡ ಕಾಯಕದಿನ ಮತ್ತು ದತ್ತಿ ಸಮಾರಂಭದಲ್ಲಿ ಅವರು ಮಾತನಾಡಿದರು. ಶಕುಂತಲಾ ಮೊಸಲಗಿ, ಗಂಗಾಧರ ಸಾಲಕ್ಕಿ, ಮ.ಗು. ಯಾದವಾಡ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ವಿ.ಸಿ.ನಾಗಠಾಣ ಮಾತನಾಡಿದರು. 40 ವರ್ಷಗಳಿಂದ ಸಮಗಾರ ಕಾಯಕ ಮಾಡುತ್ತಿರುವ ಶರಣ ಕಲ್ಲಪ್ಪ ಶಹಪೂರ ಅವರಿಗೆ ಕಾಯಕಶೀಲ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಿ.ಎಂ. ಪಾಟೀಲ, ಸಂಗೀತಾ ಮಠಪತಿ, ಎಸ್.ವೈ.ಗದಗ, ಬಿ.ಟಿ.ಈಶ್ವರಗೊಂಡ, ಸುಭಾಷ ಬೆಟಗೇರಿ, ಸೋಮನಗೌಡ ಪಾಟೀಲ, ಎಲ್.ಪಿ.ಬಿರಾದಾರ, ಬಿ.ಸಿ.ಸಾರವಾಡ, ಪರಿಷತ್ ಅಧ್ಯಕ್ಷ ಜಂಬುನಾಥ ಕಂಚ್ಯಾಣಿ, ಈರಣ್ಣ ತೊಂಡಿಕಟ್ಟಿ ಅಕ್ಕನ ಬಳಗದ ಸದಸ್ಯರು ಇದ್ದರು.



ವಿಜಯಪುರ: ಆರೋಗ್ಯದ ಶಿಕ್ಷಣ ಕಾರ್ಯಕ್ರಮದಲ್ಲಿ ತಮ್ಮನ್ನು ಬಳಸಿಕೊಳ್ಳಬೇಕು ಎಂದು ಜಿಲ್ಲಾ ವೈದ್ಯಕೀಯ ತಂತ್ರಜ್ಞಾನ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಸಂಘದ ಉಪಾಧ್ಯಕ್ಷ ಅರುಣ ಮನಗೂಳಿ, ಕಾರ್ಯದರ್ಶಿ ಕಾಂತು ಮೊಸಲೆ, ಸಂಜು ಬಾಗೇವಾಡಿ, ಸತೀಶ ಬಾಬಾನಗರ, ರಂಗಾಚಾರ್ಯ ಜಹಾಗಿರದಾರ, ಬಸು ರೇವಡಿಹಾಳ, ಸುನೀಲ ಹೆರಲಗಿ, ಡಿ.ಎಸ್.ಮಠ ಇದ್ದರು.

ಹಸಿವು ಮುಕ್ತ ಸಮಾಜ ಕಟ್ಟೋಣ

◆ **ವಿಜಯಪುರ:** ಹಸಿವು ಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ನಮ್ಮೆಲರ ಪಾತ್ರ ಮಹತ್ವದ್ದು, ಅದರಂತೆ ಇಂತಹ ಕಾರ್ಯಕ್ರಮದ ಮೂಲಕ ಎಲ್ಲ ಸ್ವಯಂ ಸೇವಕರು ಜಾಗೃತಿ ಮೂಡಿಸಲು ಪಣ ತೊಡಬೇಕಾಗಿದೆ ಎಂದು ಜಿಲ್ಲಾ ಎನ್‌ಎಸ್‌ಎಸ್ ನೋಡಲ್ ಅಧಿಕಾರಿ ಪ್ರೊ.ರಾಜು ಕಪಾಲಿ ಹೇಳಿದರು. ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ರಾಷ್ಟ್ರೀಯ ಸೇವಾ ಯೋಜನೆ ಆಶ್ರಯದಲ್ಲಿ ದತ್ತು ಗ್ರಾಮ ಅರಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಏಕ್ ಮುಟ್ಟಿ ಅನಾಜ್: ಮಾನವೀಯತೆಯತ್ತ ಒಂದು ಹೆಜ್ಜೆ ಎಂಬ ವಿಶೇಷ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಮಾಜದಲ್ಲಿ ಮಾನವೀಯತೆಯಿಂದ ಬದುಕಬೇಕು. ದಯೆ, ಸಾಮಾಜಿಕ ಜವಾಬ್ದಾರಿ ಮತ್ತು ಸಮುದಾಯ ಸೇವೆಯ ಮೌಲ್ಯಗಳನ್ನು ಎತ್ತಿ ಹಿಡಿಯಲು ಎಲ್ಲ ಎನ್‌ಎಸ್‌ಎಸ್ ಸ್ವಯಂಸೇವಕರು ಸಕ್ರಿಯವಾಗಿ ಇಂಥಹ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಂದಾಗಬೇಕು ಎಂದರು. ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಮಹೇಶ್‌ಕುಮಾರ ಕೆ. ಅವರು ಏಕ್ ಮುತ್ತಿ ಅನಾಜ್ ಅಭಿಯಾನಕ್ಕೆ 50 ಕೆಜಿ ಅಕ್ಕಿಯನ್ನು ದೇಣಿಗೆ ನೀಡಿದರು. ಎನ್‌ಎಸ್‌ಎಸ್ ಘಟಕ-1 ಮತ್ತು 2ರ ಕಾರ್ಯಕ್ರಮ ಅಧಿಕಾರಿ ಡಾ.ಮಿಲನ್ ರಾಠೋಡ್, ಡಾ.ತರನ್ನುಮ್ ಜಬೀನ್ ಖಾನ್, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ್ ಜ್ಯೋತಿ, ಸ್ವಯಂ ಸೇವಕರು ಇದ್ದರು.



ವಿಜಯಪುರ:ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ರಾಷ್ಟ್ರೀಯ ಸೇವಾ ಯೋಜನೆ ಆಶ್ರಯದಲ್ಲಿ ದತ್ತು ಗ್ರಾಮ ಅರಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಏಕ್ ಮುಟ್ಟಿ ಅನಾಜ್: ಮಾನವೀಯತೆಯತ್ತ ಒಂದು ಹೆಜ್ಜೆ ಎಂಬ ವಿಶೇಷ ಅಭಿಯಾನ ಕಾರ್ಯಕ್ರಮ ನಡೆಯಿತು.

ಕಾರ್ಯಕರ್ತರ ಸಮನ್ವಯ ಸಭೆ | ಸಚಿವ ಎಂ.ಬಿ.ಪಾಟೀಲ ಸಲಹೆ

ಪಕ್ಷದ ಒಗ್ಗಟ್ಟಿಗೆ ಕಾರ್ಯಕರ್ತರು ಶ್ರಮಿಸಲಿ

◆ **ದೇವರಹಿಪ್ಪರಗಿ:** ಮತ ಕ್ಷೇತ್ರದಲ್ಲಿ ಇನ್ನುಂದೆ ಕಾಂಗ್ರೆಸ್ ಬಣವಷ್ಟೇ, ಕಾರ್ಯಕರ್ತರ ಸಲುವಾಗಿ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಎಲ್ಲಾ ಮುಖಂಡರಲ್ಲಿ ಅರ್ಹತೆ ಇದೆ. ಪಕ್ಷದಲ್ಲಿ ಇರುವಂತಹ ಶಿಸ್ತೇ ಅಂತಿಮ. ಹೈಕಮಾಂಡ್ ಹೇಳಿದಂತೆ ಎಲ್ಲರೂ ನಡೆಯಬೇಕು ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಪಟ್ಟಣದ ಪ್ರದೇಶ ಪರದೇಶಿ ಮಠದ ಆವರಣದಲ್ಲಿ ನಡೆದ ಕಾಂಗ್ರೆಸ್ ಬೂತ್ ಮಟ್ಟದ ಕಾರ್ಯಕರ್ತರು, ಬಿಎಲ್‌ಒಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ಯೋಜನೆ ಜೊತೆ ಅಭಿವೃದ್ಧಿ ಯೋಜನೆಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಮೂಲಕ ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕರೆ ನೀಡಿದರು. ವಿಜಯಪುರ ಜಿಲ್ಲೆಯಲ್ಲಿ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಽಸಿದ್ದು, ದೇವರು ಹಿಪ್ಪರಗಿ ಹಾಗೂ ವಿಜಯಪುರ ನಗರ ಬರುವಂತ ದಿನಗಳಲ್ಲಿ ಗೆಲ್ಲುವ ಮೂಲಕ ಕಾರ್ಯಕರ್ತರ ಕನಸನ್ನು ನನಸು ಮಾಡೋಣ. ಎರಡು ಕ್ಷೇತ್ರಗಳಲ್ಲಿ ನಮ್ಮ ಶಾಸಕರು ಇಲ್ಲದ ಕಾರಣ ಕಾರ್ಯಕರ್ತರಿಗೆ ತೊಂದರೆಯಾಗಿದೆ. ಎಲ್ಲಾ ನಾಯಕರು ಇನ್ನುಂದೆ ಅಸಮಾಧಾನವನ್ನು ಮರೆತು ಪಕ್ಷದ ಗೆಲುವಿಗೆ ಶ್ರಮಿಸಬೇಕು ಎಂದು ಹೇಳಿದರು.

ಮಾಜಿ ಶಾಸಕರಾದ ಶರಣಪ್ಪ ಸುಣಗಾರ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ.ಪ್ರಭುಗೌಡ ಲಿಂಗದಳ್ಳಿ ಚಬನೂರ, ಆನಂದಗೌಡ ದೋಡಮನಿ, ಕೆಪಿಸಿಸಿ ಸದಸ್ಯರಾದ ಬಿ.ಎಸ್.ಪಾಟೀಲ ಯಾಳಗಿ, ಗಡಿ ಅಭಿವೃದ್ಧಿ ಪ್ರಾಽಕಾರದ ಮಾಜಿ ಅಧ್ಯಕ್ಷ ಸುಭಾಷ ಛಾಯಗೋಳ, ಮಾಜಿ ಜಿಪಂ ಸದಸ್ಯೆ ಗೌರಮ್ಮ ಮುತ್ತತ್ತಿ ಸೇರಿದಂತೆ ಹಲವಾರು ಜನ ಮುಖಂಡರು ಮಾತನಾಡಿ, ಮತಕ್ಷೇತ್ರದಲ್ಲಿ ಸುಮಾರು 15 ವರ್ಷದಿಂದ ನಮ್ಮ ಶಾಸಕರು ಇಲ್ಲದ ಕಾರಣ ಕಾರ್ಯಕರ್ತರು ಶೋಷಣೆಯಲ್ಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಕ್ಷೇತ್ರದ ಜವಾಬ್ದಾರಿಯುನ್ನು ತೆಗೆದುಕೊಂಡು, ಬರುವಂತ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡುವ ಮೂಲಕ,ಪಕ್ಷದ ಧ್ವಜವನ್ನು ಈ ಬಾರಿ ಹಾರಿಸೋಣ ಕ್ಷೇತ್ರದಲ್ಲಿ ಕಾರ್ಯಕರ್ತರ ದೊಡ್ಡ ಪಡೆಯಿದೆ ಹಾಗೂ ನಾವೆಲ್ಲರೂ ನಿಮ್ಮ ಜೊತೆ ಇರುತ್ತೇವೆ ಎಂದು ಹೇಳಿದರು.



ಜೆಪಿ ಹಾಗೂ ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಬಂದ ಮುಖಂಡರುಗಳನ್ನು ಶಾಲು ಹಾಕಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಎಲ್ಲ ಮುಖಂಡರು ಪಕ್ಷಕ್ಕೆ ಅದ್ದೂರಿಯಾಗಿ ಬರಮಾಡಿಕೊಂಡರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಬಸೀರ ಅಹ್ಮದ್ ಬೇಪಾರಿ ಬಾಳಾಸಾಹೇಬಗೌಡ ಪಾಟೀಲ, ಮಹಿಳಾ ಘಟಕದ ಜಿಲ್ಲಾಧ್ಯಕ್ಷ ರಮೀಜಾ ನದಾಫ್, ತಾಲೂಕಾಧ್ಯಕ್ಷೆ ಸರೀತಾ ನಾಯಕ,ತಾ.ಪಂ ಮಾಜಿ ಅಧ್ಯಕ್ಷೆ ಲಲಿತಾ ದೋಡಮನಿ, ಗ್ಯಾರಂಟಿ ಯೋಜನೆಯ ಅಧ್ಯಕ್ಷರಾದ ಸಾಹೇಬಗೌಡ ಬಿರಾದಾರ, ಮುಖಂಡರುಗಳಾದ ಅಶೋಕಗೌಡ ಪಾಟೀಲ, ಸಂಗಮೇಶ ಛಾಯಗೋಳ, ಪ್ರಕಾಶ ಗುಡಿಮನಿ,ಡಾ.ಗುರುರಾಜ ಗಡೇದ ಸೇರಿದಂತೆ ಕಾಂಗ್ರೆಸ್ ವಿವಿಧ ಘಟಕಗಳ ಪದಾಽಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ನೂತನ ಪತ್ರಿಕಾ ಭವನ ನಿವೇಶನಕ್ಕೆ ಮನವಿ

◆ **ದೇವರ ಹಿಪ್ಪರಗಿ:** ತಾಲೂಕು ಕೇಂದ್ರ ದೇವರ ಹಿಪ್ಪರಗಿ ಪಟ್ಟಣದಲ್ಲಿ ನೂತನವಾಗಿ ಪತ್ರಿಕಾ ಭವನ ನಿರ್ಮಿಸಲು ನಿವೇಶನ ಹಾಗೂ ಅಗತ್ಯ ಅನುದಾನ ದೊರಕಿಸಿಕೊಡಬೇಕೆಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕ ಅಧ್ಯಕ್ಷ ಸಂಗಮೇಶ ಉತ್ನಾಳ ಅವರ ನೇತೃತ್ವದಲ್ಲಿ ಪತ್ರಕರ್ತರು ಪಟ್ಟಣದಲ್ಲಿ ಸಚಿವ ಎಂ.ಬಿ.ಪಾಟೀಲರಿಗೆ ಮನವಿ ಸಲ್ಲಿಸಿದರು.

ಪತ್ರಕರ್ತರ ಮನವಿಗೆ ತಕ್ಷಣ ಸ್ಪಂದಿಸಿದ ಸಚಿವರು ಸ್ಥಳದಲ್ಲಿ ಉಪಸ್ಥಿತರಿದ್ದ ಪಟ್ಟಣ ಪಂಚಾಯಿತಿ ಮುಖ್ಯ ಅಽಕಾರಿ ಅಪ್ರೋಜ ಅಹ್ಮದ್ ಪಟೇಲ ಅವರನ್ನು ಕರೆದು ಪತ್ರಕರ್ತರ ಮನವಿಗೆ ಶೀಘ್ರವಾಗಿ ನಿವೇಶನ ದೊರಕಿಸಿಕೊಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

ಕಾನಿಪ ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಾನಂದ ಕುಂಬಾರ, ಉಪಾಧ್ಯಕ್ಷ ಶ್ರೀಧರ ನಾಡಗೌಡ ಮಂಜುನಾಥ ಬ್ಯಾಕೋಡ, ಖಜಾಂಚಿ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಕಾರ್ಯದರ್ಶಿ ಹುಸೇನ ಕೊಕಟನೂರ, ಈರನಗೌಡ ಪಾಟೀಲ, ಮಳೆಪ್ಪಗೌಡ ಬಿರಾದಾರ, ಅಶೋಕ ಗೊಲ್ಲರ, ಅಹ್ಮದ್ ಅಲಿ ಮುಲ್ಲಾ, ಸಾಯಿಬಣ್ಣ ಹಳ್ಳಿ ಸೇರಿದಂತೆ ತಾಲೂಕು ಪದಾಽಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.



ರಸ್ತೆ ಕಾಮಗಾರಿ ವಿಳಂಬ: ಪರದಾಟ

◆ **ಝಳಕಿ:** ಚಡಚಣ ತಾಲೂಕಿನ ಗೋಟ್ಯಾಳ ಗ್ರಾಮದಿಂದ ಲೋಣಿ ಬಿಕೆ ಗ್ರಾಮದವರಿಗೆ ಡಾಂಬರೀಕರಣ ರಸ್ತೆಯ ಕಾಮಗಾರಿಗೆ ಚಾಲನೆ ನೀಡಿ ವರ್ಷ ಕಳೆದರೂ ರಸ್ತೆ ಕಾಮಗಾರಿ ಇನ್ನೂ ಆಮೆಗತಿಯಲ್ಲಿ ಸಾಗುತ್ತಿದೆ ಎಂದು ಗ್ರಾಪಂ ಮಾಜಿ ಉಪಾಧ್ಯಕ್ಷ ಅಣ್ಣಾಸಾಬ ಶೇಖ ಹಾಗೂ ಸಾರ್ವಜನಿಕರು ಆರೋಪಿಸಿದರು. ಗೋಟ್ಯಾಳ ಗ್ರಾಮದಿಂದ ಲೋಣಿ ಬಿಕೆ ಗ್ರಾಮವರಿಗೆ ರಸ್ತೆ ಕಾಮಗಾರಿ ವಿಳಂಬವಾದವಾಗಿದೆ ಇಲ್ಲಿ ಸಾರ್ವಜನಿಕ ಬಹಳಷ್ಟು ತೊಂದರೆ ಅನುಭಸುತ್ತಿದ್ದಾರೆ ಇಲ್ಲಿ ರಸ್ತೆಯ ಮೇಲೆ ಬರೀ ಕಲ್ಲು ಹಾಕಿ ಸಮಾದಾನ ಮಾಡಿ ಬಿಟ್ಟಿದ್ದಾರೆ. ಉಳಿದ ಕೆಲಸ ಇನ್ನೂ ಅಪೂರ್ಣವಾಗಿದೆ. ಇನ್ನೂ ರಸ್ತೆ ಕಲ್ಲು ಗಳ ರಾಶಿ ರಾಶಿ ಹಾಗೆ ಉಳಿದಿದೆ ಬಿಟ್ಟಿದು ಎಂದು ಸಾರ್ವಜನಿಕ ಆರೋಪಿಸಿದ್ದಾರೆ. ಕೊಡಲೇ ಜನಪ್ರತಿನಿಽಗಳು ಹಾಗೂ ಅಽಕಾರಿಗಳು ಗಮನಹರಿಸಿ ರಸ್ತೆ ಕಾಮಗಾರಿ ಸಂಪೂರ್ಣ ಗೊಳಿಸಬೇಕು ಎಲ್ಲಾವಾದರೆ ರಸ್ತೆಗೆ ಇಳಿದು ಹೋರಾಟ ಮಾಡುತ್ತೇವೆ ಎಂದು ಗೋಟ್ಯಾಳ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿರಿಯರು ಕೋಪ ತೊರೆದು ಸಮಾಧಾನವಾಗಿರಲಿ

◆ **ಮುದ್ದೇಬಿಹಾಳ:** ಇಂದಿನ ಪೀಳಿಗೆಗೆ ಹಿರಿಯರ ಕಷ್ಟ-ಸುಖದ ಮಾತುಗಳನ್ನೂ ಸಹಿತ ಕೇಳಲು ವ್ಯವಧಾನವಿಲ್ಲ. ಅಂತಲೇ ಇಂದು ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿವೆ. ಹಿರಿಯರು ಕೋಪ ತಾಪ ತೊರೆದು ಸಮಾಧಾನಿಯಾಗಿರಬೇಕು. ಅಂದರೆ ಮಾತ್ರ ಮನೆಯವರ ಪ್ರೀತಿ ಅನುಪ ದೊರಕಿಸಿಕೊಳ್ಳಲು ಸಾಧ್ಯ ಎಂದು ಹಿರಿಯ ಸಾಹಿತಿ ಪ್ರೊ.ಬಿ.ಎಂ.ಹಿರೇಮಠ ನುಡಿದರು.

ಬಸವೇಶ್ವರ ವೃತ್ತದ ಹತ್ತಿರದ ನೌಕರ ಭವನದಲ್ಲಿ ಸರಕಾರಿ ನಿವೃತ್ತ ನೌಕರರ ಸಂಘ ಆಯೋಜಿಸಿದ್ದ, ನೂತನ ಪದಾಧಿಕಾರಿಗಳ ಪದಗ್ರಹಣ, ನಿಕಟಪೂರ್ವ ಪದಾಧಿಕಾರಿಗಳನ್ನು ಗೌರವಿಸಿ ಬೀಳ್ಕೊಡುವ ಮತ್ತು ಮಾಸಿಕ ಸಭೆಯ ಸಮಾರಂಭದಲ್ಲಿ ಅವರು ಮಾತನಾಡಿದರು. ದೇಹಕ್ಕೆ ವಯಸ್ಸಾದಂತೆ, ಅಂಗಾಗಂಗಳಲ್ಲಿ ಶಕ್ತಿ ಕುಂದಿ, ಚೈತನ್ಯ ಬತ್ತಲು ಪ್ರಾರಂಭಿಸುತ್ತೆ. ಇಂತಹ ಅವಸ್ಥೆಯಲ್ಲಿ ಮಕ್ಕಳು ಹಾಗೂ ಸೊಸೆಯಂದಿರ ಆಸರೆ ಅವಶ್ಯವಾಗಿ ಬೇಕೇ ಬೇಕಾಗುತ್ತೆ ಒಂದು ಮಾತು ಅಂದರೂ ಮನಸ್ಸಿಗೆ ಹಚ್ಚಿಕೊಳ್ಳದೇ ತಾಳ್ಮೆ ಸಹಿಸಿಕೊಂಡು ಹೋಗಬೇಕು.ಇಲ್ಲದಿದ್ದರೆ ಬದುಕು ದುಸ್ತರವಾಗುತ್ತದೆ ಎಂದರು.

ನೂತನ ಅಧ್ಯಕ್ಷ, ಹಿರಿಯ ಸಾಹಿತಿ ಅಶೋಕ ಮಣಿ ಮಾತನಾಡಿ, ನಿವೃತ್ತ ನೌಕರರ ಹಿತ ಕಾಪಾಡಲು.ಇಲಾಖೆಗಳಿಗೆ ಸಂಬಂಧಿದಂತೆ ಏನಾದರೂ ಸಮಸ್ಯೆಗಳು ತಮಗೆ ಬಂದರೆ ನಮ್ಮನ್ನು ಸಂಪರ್ಕಿಸಿರಿ, ಅಂತ ಸಮಸ್ಯೆ ನೀಗಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಲಾಗುವುದು. ಹಿರಿಯ ನಾಗರಿಕರಿಗೆ ರಿಯಾಯತಿ ದರದಲ್ಲಿ ರೇಲ್ವೆಗಳಲ್ಲಿ ಪ್ರಾಣಿಸಲು ಹಿಂದೆ ವ್ಯವಸ್ಥೆ ಮಾಡಲಾಗಿತ್ತು, ಆದರೆ ಇಂದು ಸ್ಥಗಿತ ಗೊಳಿಸಿದ್ದಾರೆ, ಅದನ್ನು ಮತ್ತೆ ಪುನರಾಂಭಿಸಲು ಸಂಘವು ಸಂಬಂಧಿಸಿದ ಇಲಾಖೆ ಹಾಗೂ ಸಚಿವಾಲಯಕ್ಕೆ ಮನವಿ ಪತ್ರ ಸಲ್ಲಿಸುತ್ತದೆ ಎಂದು ಭರವಸೆ ನೀಡಿದರು.

ಎಸ್.ಎ.ಬೇವಿನಗಿಡದ ಪ್ರಧಾನ ಕಾರ್ಯದರ್ಶಿ, ಬಿ.ಎಚ್.ಬಳಬಟ್ಟಿ ಕೋಶಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಮುಖ್ಯ ಅತಿಥಿ, ತಾಳಿಕೋಟೆಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಎಮ್ .ಹಿರೇಮಠ ಮಾತನಾಡಿದರು.

ಸಂಘದ ನಿಕಟಪೂರ್ವ ಅಧ್ಯಕ್ಷ ಎಂ.ವಿ.ಮಾಟಲದಿನ್ನಿ ಇದ್ದರು. ಸಂಘದ ಗೌರವಾಧ್ಯಕ್ಷ ಬಾಪುಗೌಡ ಪಂ.ಪಾಟೀಲ, ಉಪಾಧ್ಯಕ್ಷ ಸದಾಶಿವ ಮಾಗಿ ಉಪಸ್ಥಿತರಿದ್ದರು. ರಾಜಶೇಖರ ಮೇಗೇರಿ, ಎಂ.ಬಿ.ಸಗರಿ, ಮಹಾದೇವಿ ಕಂಠಿ, ಎಚ್. ಎಸ್.ಪಾಟೀಲ್ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.



ಪ್ರಜಾಸೌಧ ನಿರ್ಮಾಣ: 67ನೇ ದಿನಕ್ಕೆ ಮುಂದುವರಿದ ತೀವ್ರ ಹೋರಾಟ

◆ **ತಾಳಿಕೋಟೆ:** ಪಟ್ಟಣದ ವ್ಯಾಪ್ತಿಯಲ್ಲಿಯೇ ಪ್ರಜಾಸೌಧ ನಿರ್ಮಿಸಬೇಕೆಂಬ ಒತ್ತಾಯದೊಂದಿಗೆ ಆರಂಭವಾದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಶನಿವಾರಕ್ಕೆ 67ನೇ ದಿನಕ್ಕೆ ಕಾಲಿಟ್ಟು, ದಿನೇದಿನೇ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಮೈಲೇಶ್ವರ ಗ್ರಾಮದ ಸಮೀಪದ ದೂರದ ಪ್ರದೇಶಕ್ಕೆ ಕಚೇರಿಯನ್ನು ಸ್ಥಳಾಂತರಿಸುವ ಸರ್ಕಾರದ ನಿರ್ಧಾರಕ್ಕೆ ವಿರೋಧವಾಗಿ ನಡೆಯುತ್ತಿರುವ ಈ ಹೋರಾಟ ಇದೀಗ ಜನಾಂದೋಲನದ ರೂಪ ಪಡೆದುಕೊಂಡಿದೆ.

ಹೋರಾಟ ಸಮಿತಿಯ ಮುಖಂಡ ಮಹೇಶ ಚಲವಾದಿ ಮತನಾಡಿ, ಹೋರಾಟದ ಬೆನ್ನಿಗೆ ತಾಳಿಕೋಟೆ ತಾಲೂಕಿನ ಬಹುತೇಕ ಗ್ರಾಮಗಳ ಸಂಘಟನೆಗಳು ಮತ್ತು ನಾಗರಿಕರು ನಿಂತಿದ್ದು, ಹೋರಾಟಗಾರರಿಗೆ ಭಾರೀ ಬೆಂಬಲ ವ್ಯಕ್ತವಾಗಿದೆ. ಜನಸಾಮಾನ್ಯರ ಅನುಕೂಲವೇ ಆಡಳಿತದ ಮೂಲ ಧ್ಯೇಯವಾಗಬೇಕು. ಪಟ್ಟಣದ ಜನರನ್ನು ದೂರದ ಪ್ರದೇಶಗಳಿಗೆ ಅಲೆದಾಡುವಂತೆ ಮಾಡುವುದು ಸರಿಯಲ್ಲ ಎಂದು ಕಿಡಿಕಾರಿದರು.

ನ್ಯಾಯಕ್ಕಾಗಿ ಹೋರಾಡುವುದು ಪಾಪವಲ್ಲ, ಮಹಾತ್ಮ ಗಾಂಧೀಜಿ ಅವರ ಕಾಲದಿಂದಲೂ ಸತ್ಯಕ್ಕಾಗಿ ಹೋರಾಡಿದವರು ಜೈಲು ಸೇರಿದ್ದಾರೆ. ಹೀಗಾಗಿ ಯಾವುದೇ ಒತ್ತಡಕ್ಕೂ ಹೆದರದೆ ಹೋರಾಟ ಮುಂದುವರಿಸಬೇಕು ಎಂದು ಹೋರಾಟಗಾರರಲ್ಲಿ ಧೈರ್ಯ ತುಂಬಿದರು.

ಪಟ್ಟಣದ ವ್ಯಾಪ್ತಿಯಲ್ಲಿಯೇ ಪ್ರಜಾಸೌಧ ನಿರ್ಮಿಸಬೇಕು. ಈಗಾಗಲೇ ಲಭ್ಯವಿರುವ ಸರ್ಕಾರಿ ಜಾಗವನ್ನು ಬಳಸಿಕೊಳ್ಳಬೇಕು. ಸಾರ್ವಜನಿಕರಿಗೆ ಸುಲಭವಾಗಿ ತಲುಪುವ ಸ್ಥಳದಲ್ಲಿ ಕಚೇರಿ ಇರಬೇಕು ಹೋರಾಟ ಮತ್ತಷ್ಟು ತೀವ್ರಗೊಳ್ಳುವ ಸೂಚನೆ ಹೋರಾಟ ಸಮಿತಿ ಮುಂದಿನ ದಿನಗಳಲ್ಲಿ ಅಗತ್ಯವಿದ್ದರೆ ರಾಜ್ಯ ಮಟ್ಟದ ಹೋರಾಟಕ್ಕೂ ತಯಾರಿ ನಡೆಸಲಾಗುತ್ತಿದೆ. ಜನರ ಹಿತಕ್ಕಾಗಿ ಹೋರಾಟ ಯಾವ ಮಟ್ಟಕ್ಕೂ ತೆಗೆದುಕೊಂಡು ಹೋಗುವುದಾಗಿ ಸ್ಪಷ್ಟಪಡಿಸಿದ್ದಾರೆ. ಹೋರಾಟ ಸಮಿತಿ ಉಪಾಧ್ಯಕ್ಷ ಪರಶುರಾಮ ತಂಗಡಗಿ, ಮುತ್ತಪ್ಪ ಚಮಲಾಪುರ್, ಪ್ರಭುಗೌಡ ಬಳಗಾನೂರ, ಶಿರಸ ಕುಮಾರ ಹಚೇರಿ, ಅಮಿತಸಿಂಗ ಮನಗೂಳಿ, ದತ್ತು ಹೇಬಸೂರ್, ನಿತೀನ್ ವಿಜಾಪುರ್, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ದೇವೇಂದ್ರ ಹಾದಿಮನಿ, ಪ್ರಕಾಶ ಹಚೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ಮಯೂರ ಪಾಟೀಲ, ಸುರೇಶ್ ಹಚೇರಿ, ವಿಠ್ಠಲಸಿಂಗ ಹಚೇರಿ, ಮುದಕಪ್ಪ ಬಡಿಗೇರ ಉಪಸ್ಥಿತರಿದ್ದರು.



ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಸಚಿವ ಎಂ.ಬಿ.ಪಾಟೀಲ ಆರ್ಥಿಕ ನೆರವು

◆ **ವಿಜಯಪುರ:** ನೀಟ್ ಪಾಸಾಗಿ ಸರ್ಕಾರಿ ಕೋಟಾದಡಿ ಎಂಬಿಬಿಎಸ್ ಸೀಟು ಪಡೆದರೂ ಆರ್ಥಿಕ ಸಮಸ್ಯೆಯಿಂದಾಗಿ ಸಂಕಷ್ಟದಲ್ಲಿದ್ದ ಇಬ್ಬರು ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಹಣಕಾಸು ನೆರವು ನೀಡುವ ಮೂಲಕ ಸಹಾಯ ಹಸ್ತ ಚಾಚಿದರು.

ನಗರದ ತಮ್ಮ ಗೃಹ ಕಚೇರಿಯಲ್ಲಿ ಶನಿವಾರ ಇಬ್ಬರು ವಿದ್ಯಾರ್ಥಿಗಳಾದ ಆಲಮೇಲದ ಉದಯಕುಮಾರ ನಾರಾಯಣಕರ ಮತ್ತು ರತ್ನಾಪುರದ ಮನೋಹರ ಹರಗೆ ಅವರ ಎಂಬಿಬಿಎಸ್ ಕೋರ್ಸಿನ ಬೋಧನಾ ಶುಲ್ಕ, ಊಟ ಮತ್ತು ವಸತಿ (ಹಾಸ್ಟೇಲ್ ಮತ್ತು ಮೆಸ್) ಗೆ ಅಗತ್ಯವಾಗಿರುವ ಹಣದ ಚೆಕ್ ಅನ್ನು ಸಚಿವರು ವಿತರಿಸಿದರು.

ಬಳಿಕ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಶ್ರಮವಹಿಸಿ, ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಬೇಕು. ಶಿಕ್ಷಣಕ್ಕೆ ಅಗತ್ಯವಾಗಿರುವ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ಪೋಷಕರು ಮತ್ತು ಬಸವನಾಡು ವಿಜಯಪುರ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಹೇಳಿ ಶುಭ ಹಾರೈಸಿದರು.



ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ. ಆರ್.ವಿ. ಕುಲಕರ್ಣಿ ಮತ್ತು ಅಕೌಂಟ್ಸ್ ಸುಪರಿಂಟೆಂಡೆಂಟ್ ಎಸ್.ಎಸ್. ಪಾಟೀಲ, ವಿದ್ಯಾರ್ಥಿಗಳ ಪೋಷಕರು ಇದ್ದರು.

ಗುರುವಿನ ಮಾರ್ಗದರ್ಶನದಂತೆ ನಡೆದರೆ ಜೀವನ ಪಾವನ

◆ **ಬಸವನಬಾಗೇವಾಡಿ:** ನಾವು ಜನಿಸಿದ ಊರು, ನಮ್ಮನ್ನು ಹೆತ್ತ ತಾಯಿ ಮುಂದೆ ಇದ್ದರೆ ಮಾತ್ರ ಅದುವೇ ಸ್ವರ್ಗ ಎಂದು ಕಾಶಿ ಜ್ಞಾನ ಸಿಂಹಾಸನಾಧೀಶ್ವರ 1008 ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿ ಹೇಳಿದರು.

ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ನಡೆದ ಹಿರೇಮಠದ ಲಿಂ.ಶಿವಬಸವ ಶಿವಾಚಾರ್ಯ ಸ್ವಾಮೀಜಿಯವರ ಜನ್ಮ ಶತಮಾನೋತ್ಸವ ಸಮಾರಂಭದ ನಿಮಿತ್ತ ಧರ್ಮ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಾವೆಲ್ಲರೂ ಶಿವನ ಅಂಶಿಭೂತರು ನಾವೆಲ್ಲರೂ ಪರಮಾತ್ಮನಿಂದ ಬಂದವರು. ನಾವು ಕೂಡಾ ಪರಮಾತ್ಮನ ಹಾಗೇ ಆಗಬೇಕು. ಆತನನ್ನು ತಿಳಿದುಕೊಳ್ಳಲು ನಮಗೆ ಮನುಷ್ಯ ಜೀವನ ಕೊಟ್ಟಿದ್ದಾನೆ. ಬಸವಣ್ಣನವರು ಕೂಡಾ ಪರಮಾತ್ಮನನ್ನ ತಿಳಕೊಂಡರು ತಿಳಕೊಳ್ಳಬೇಕಾದರೆ ಗುರುವಿನ ಕಡೆಗೆ ಹೋದರು ತಮ್ಮ ಪರಿವಾರ ಬಿಟ್ಟರು, ಗುರುವಿನ ಮಾರ್ಗದರ್ಶನದಂತೆ ನಡೆದುಕೊಂಡರು ಜೀವನ ಪಾವನ ಮಾಡಿಕೊಂಡರು ಅವರ ಜೀವನವನ್ನು ಅಷ್ಟೇಲ್ಲ ಅನೇಕ ಜನರಿಗೆ ಜೀವನ ಪಾವನ ಮಾಡಿಕೊಳ್ಳಲಿಕ್ಕಿ ಮಾರ್ಗದರ್ಶನ ಮಾಡಿದರು ಎಂದರು.



ಮುಖಂಡ ಅಪ್ಪುಗೌಡ ಪಾಟೀಲ ಮನಗೂಳಿ ಮಾತನಾಡಿ, ಇದು ಪುಣ್ಯದ ಭೂಮಿ ಇಲ್ಲಿ ಜನಿಸಿದವರು ಪುಣ್ಯವಂತರು, ಜಗದ್ಗುರುಗಳು ಕಾಲಿರಿಸಿದ ನೆಲ ಯಾವುದೇ ತೊಂದರೆ ಮಾಡುವುದಿಲ್ಲ, ಧರ್ಮಮಾರ್ಗ ಹಿಡಿಯಬೇಕಾದರೆ ಪೂಜ್ಯರ ಆಶೀರ್ವಾದಬೇಕು, ತಂದೆ-ತಾಯಿ, ಗುರು ಹಿರಿಯರ ಸೇವೆ ಮಾಡಿದಲ್ಲಿ ಪುಣ್ಯಪ್ರಾಪ್ತಿಯಾಗುತ್ತದೆ ಎಂದರು.

ಮನಗೂಳಿ ಪಟ್ಟಕಂಥಿ ಹಿರೇಮಠದ ಡಾ.ಮಹಾಂತಲಿಂಗ ಶಿವಾಚಾರ್ಯರು ಮಾತನಾಡಿ, ಬಸವಣ್ಣನವರು ಜಾತ್ಯಾತೀತವಾಗಿ ಬದುಕಿದರೂ ಅವರಂತೆ ಶಿವಬಸವ ಶಿವಾಚಾರ್ಯರು ಬಾಳಿದರೂ, ಎಲ್ಲ ಶಾಸ್ತ್ರ ಓದಿದವಾವ ಗುರುವಾಗಲು ಸಾಧ್ಯ ಎಂದರು.

ಸಹಕಾರಿ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಕೆರೂರ ಚರಂತಿಮಠದ ಶಿವಕುಮಾರ ಶ್ರೀ ಮಾತನಾಡಿದರು. ಇಂಗಳೇಶ್ವರ ಹಿರೇಮಠದ ಬೃಂಗೀಶ್ವರಲಿಂಗ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಪ್ರವಚನ ಭಾಸ್ಕರ ಬಾಗೇವಾಡಿ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯರು, ಡೋಣುರ ಹಿರೇಮಠದ ಡಾ.ಸಿದ್ಧಲಿಂಗ ಶ್ರೀ, ಶಿವಕುಮಾರ ಸ್ವಾಮೀಜಿ, ಚಂದ್ರಶೇಖರಗೌಡ ಪಾಟೀಲ, ಜಿ.ಜಿ.ಬೇವೂರ ಇದ್ದರು. ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರಿಗೆ ಗುರಣ್ಣ ಬೇವೂರ ಕುಟುಂಬಸ್ಥರು ತುಲಾಭಾರ ನೆರವೇರಿಸಿದರು. ಡಿ.ಬಿ.ಬಾಗೇವಾಡಿ ಸ್ವಾಗತಿಸಿದರು. ಪಿ.ಎಸ್ .ಬಾಗೇವಾಡಿ ನಿರೂಪಿಸಿದರು. ಕೆ.ಎಸ್.ಬಾಗೇವಾಡಿ

ವಿದ್ಯಾರ್ಥಿಗಳು ಜ್ಞಾನದ ಹರಿವು ಹೆಚ್ಚಿಸಿಕೊಳ್ಳಲಿ: ಕಾಂಬಳೆ

◆ **ಸಿಂದಗಿ:** ಶಿಕ್ಷಣ ಹರಿಯುವ ನೀರಿನಂತೆ ನಿತ್ಯ ನೂತನವಾಗಿರುತ್ತದೆ. ವಿದ್ಯಾರ್ಥಿಗಳು ಪ್ರತಿದಿನ ಶೈಕ್ಷಣಿಕ ಕ್ಷೇತ್ರದಲ್ಲಾಗುತ್ತಿರುವ ಹೊಸ ಸಂಶೋಧನೆ, ಅನ್ವೇಷಣೆ ಕುರಿತು ತಿಳಿದುಕೊಂಡು ಜ್ಞಾನದ ಹರಿವು ಹೆಚ್ಚಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಪದಕ ಪುರಸ್ಕೃತ, ಸಿಂದಗಿ ಪಿಎಸ್‌ಐ ಶ್ರೀಕಾಂತ ಕಾಂಬಳೆ ಹೇಳಿದರು.

ನಗರದ ಸಾರಂಗಮಠದ ಲಿಂ.ಸಿದ್ಧಲಿಂಗ ಸ್ವಾಮೀಜಿ ಕಾನ್ಪರೆನ್ಸ್ ಹಾಲ್‌ನಲ್ಲಿ ಆಗಿ ಹುಣ್ಣಿಮೆಯ ನಿಮಿತ್ಯ ಚನ್ನವೀರ ಸ್ವಾಮೀಜಿ ಪ್ರತಿಷ್ಠಾನ ವತಿಯಿಂದ ಹಮ್ಮಿಕೊಂಡ 354ನೇ ಸದ್ವಿಚಾರ ಗೋಷ್ಠಿಯಲ್ಲಿ ಶ್ರೀಮಠದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶಾಲಾ ಕಾಲೇಜಿನಲ್ಲಿ 5-6 ಗಂಟೆ ಮಾತ್ರ ಮಕ್ಕಳಿರುತ್ತಾರೆ. ಉಳಿದ ಅವಧಿಯಲ್ಲಿ ಮಕ್ಕಳು ಮನೆಯಲ್ಲಿ ತಂದೆ-ತಾಯಿಯೊಂದಿಗೆ ಇರುತ್ತಾರೆ. ಹೀಗಾಗಿ ಮನೆಯ ವಾತಾವರಣಕ್ಕೆ ತಕ್ಕಂತೆ ಮಕ್ಕಳು ಬೆಳೆಯುತ್ತಾರೆ. ಮನೆಯಲ್ಲಿ ಪಾಲಕರು ಮಕ್ಕಳಿಗೆ ಮಾದರಿಯಾಗಿರಬೇಕು. ಮಕ್ಕಳ ಮುಂದೆ ನಮ್ಮ ನಡೆ-ನುಡಿ ಉತ್ತಮವಾಗಿರಬೇಕು ಎಂದರು.

ಸದ್ವಿಚಾರ ಗೋಷ್ಠಿಯ ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಸಾರಂಗಮಠ ಗಚ್ಚಿನಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಮಾತನಾಡಿ, ಸಾಧನೆ ಮಾಡಲು ಮನುಷ್ಯನಿಗೆ ಗುರಿ ಮುಖ್ಯ. ಅದನ್ನು ಸಂಪಾದನೆ ಮಾಡಲು ಪರಿಶ್ರಮ ಅತೀ ಪ್ರಮುಖವಾಗುತ್ತದೆ. ಮಹಿಳಾ ಮಹಾವಿದ್ಯಾಲಯ ಉತ್ತಮ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎನ್ನುವುದಕ್ಕೆ ಇಂದಿನ ಸಾಧನೆ ಮಾಡಿರುವ ವಿದ್ಯಾರ್ಥಿಗಳೇ ಉದಾಹರಣೆ. ಬಡತನವನ್ನು ಮೆಟ್ಟಿನಿಂತು ಸಾಧನೆ ಮಾಡುವುದೇ ನಿಜವಾದ ಸಾಧನೆ. ಸಾಧನೆಗೆ ಛಲ ಇದ್ದರೆ ಬದುಕು ಬಂಗಾರವಾಗುತ್ತದೆ. ಆಟದಲ್ಲಿಯೂ ವಿದ್ಯಾರ್ಥಿಗಳು ಸಾಧನೆ ಮಾಡಬೇಕು ಎಂದರು.



ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಜೆ.ಸಿ.ನಂದಿಕೋಲ, ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯದಿಂದ ನಡೆಯುವ 2024-2025ನೇ ಸಾಲಿನ ಪದ್ಮರಾಜ ಮಹಿಳಾ ಮಹಾವಿದ್ಯಾಲಯದ ಬಿ.ಎಸ್. ಡಬ್ ಲ್ಯೂ ಪದವಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ (ಚಿನ್ನದ ಪದಕ) ಪಡೆದ ವಿದ್ಯಾರ್ಥಿನಿ ಮೀನಾಜ ಗೋಲಗೇರಿ, ನಾಲ್ಕನೇ ಸ್ಥಾನ ಪಡೆದ ವಿದ್ಯಾರ್ಥಿನಿ ರಿಯಾನಾಬೇಗಂ ಬಂಕಲಗಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯಕ್ಕೆ ಬ್ಲೂ ಆಗಿ ಆಯ್ಕೆಯಾದ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ಸಿದ್ದಮ್ಮ ಬಿರಾದಾರ ಹಾಗೂ ಶೈಲಜಾ ಪಾಟೀಲ ಸನ್ಮಾನಿಸಿ ಗೌರವಿಸಲಾಯಿತು. ಅಶೋಕ ವಾರದ, ಅಶೋಕ ಬೂದಿಹಾಳ, ಡಾ.ರವಿ ಗೋಲಾ, ವಿಶ್ವಾನಾಥ ನಂದಿಕೋಲ, ಚನ್ನಪ್ಪ ಕತ್ತಿ, ಎಸ್.ಎಂ.ಪೂಜಾರಿ, ಭೀಮಾಶಂಕರ ಆರಳಗುಂಡಗಿ, ಡಾ.ನಾಗರಾಜ ಮುರಗೋಡ, ಮುಕ್ತಾಯಕ್ಕ ಕತ್ತಿ, ಮಂಗಳಾ ಈಳಗೇರ, ಭಾಗ್ಯಶ್ರೀ ನಂದಿಮಠ, ಹೇಮಾ ಕಾಸರ, ಭಾಗ್ಯ ಬಬಲೇಶ್ವರ, ಭೀಮಾಶಂಕರ ಪಾಸೋಡಿ, ಶಕುಂತಲಾ ಹಿರೇಮಠ, ಜಿ.ಎ.ನಂದಿಮಠ, ಸರೋಜಿನಿ ಹಿರೇಮಠ ಇದ್ದರು.

ಕಿರುಸುದ್ದಿ

ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಸಿಂಧನೂರು: ನಗರದಲ್ಲಿ ಜಲಶುದ್ಧಿ ಮಿಷನ್ ಎನ್ ಜಿಟಿ ಪರಿಸರ ಪರಿಹಾರ ನಿಧಿ ಅಡಿಯಲ್ಲಿ ಡಿಬಿಒಟಿ ಮಾದರಿಯಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ಮಾಣ, ಉನ್ನತೀಕರಣ ಭೂಮಿಪೂಜೆ ಕಾರ್ಯಕ್ರಮವನ್ನು ಶಾಸಕ ಹಂಪನಗೌಡ ಬಾದರ್ಲಿ ವಾರ್ಡ್ ನಂ.28ರಲ್ಲಿ ನೆರವೇರಿಸಿದರು.

ಒಳಚರಂಡಿ ವ್ಯವಸ್ಥೆ ಸುವ್ಯವಸ್ಥಿತವಾಗಿ ಆಗುವುದರಿಂದ ಪರಿಸರ ನೈರ್ಮಲ್ಯ ಕಾಪಾಡಿದಂತಾಗುತ್ತದೆ ಹಾಗೆಯೇ ಸಾರ್ವಜನಿಕರ ಆರೋಗ್ಯದ ಹಿತ ದೃಷ್ಟಿಯಿಂದಲೂ ಈ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಆದುದರಿಂದ ಸಾರ್ವಜನಿಕರು ಈ ಕಾಮಗಾರಿಗೆ ಸಹಕಾರ ನೀಡಬೇಕೆಂದು ವಿನಂತಿಸಿದರು.

ಈ ಕಾಮಗಾರಿಯೂ 11 ತಿಂಗಳುಗಳ ಅವಧಿಯಲ್ಲಿಯೇ ಮುಗಿಯಬೇಕೆಂಬ ನಿಯಮ ಇದ್ದುದರಿಂದ ವಾರ್ಡಿನ ಸರ್ವರ ಸಹಕಾರ ಅಗತ್ಯ ಎಂದು ಹೇಳುವುದರ ಜೊತೆಗೆ ಕನಕದಾಸ ವೃತ್ತದಿಂದ ನಾಗಪ್ಪ ವೃತ್ತದವರೆಗೆ ಚತುಷ್ಪಥ ರಸ್ತೆ ನಿರ್ಮಿಸಲಾಗುತ್ತದೆ. ಅದಕ್ಕೆ ಸುಮಾರು ಎರಡೂವರೆ ಕೋಟಿಯಿಂದ ಮೂರು ಕೋಟಿ ಹಣ ಬಿಡುಗಡೆಯಾಗಿದೆ. ತಕ್ಷಣ ಆ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗುತ್ತದೆ ಎಂಬ ಮಾಹಿತಿಯನ್ನು ನೀಡಿದರು. ವಾರ್ಡ್‌ಗಳ ಮುಖಂಡರು, ಪಕ್ಷದ ಮುಖಂಡರು ಇನ್ನಿತರರು ಪಾಲ್ಗೊಂಡಿದ್ದರು.

ಕಲಾದಗಿ ನೇಮಕ



ಕುಷ್ಟಗಿ: ಪಟ್ಟಣದ ತಾಲೂಕು ಒಕ್ಕಲುತನದ ಹುಟ್ಟುವಳಿ ಸಹಕಾರ ಸಂಘ ನಿಯಮಿತ ಆಡಳಿತ ಮಂಡಳಿಗೆ ಬುಡ್ನೆಸಾಬ್ ಮುರ್ತುಜಸಾಬ್ ಕಲಾದಗಿ ಅವರನ್ನು ನಾಮನಿರ್ದೇಶಿತ ಸದಸ್ಯರಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ನಟ ಸುದೀಪ್ ಸಿಂಧನೂರಿಗೆ



ಸಿಂಧನೂರು: ಬಸನಗೌಡ ಫೌಂಡೇಶನ್ ವತಿಯಿಂದ ಮೇ 3ರಂದು ಭವ್ಯ ಹಾಗೂ ಅರ್ಥಪೂರ್ಣ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಸಾವಿರಾರು ಜನರ ಸಮ್ಮುಖದಲ್ಲಿ ವಿಶೇಷ ಸಮಾರಂಭ ಜರುಗಲಿದೆ ಎಂದು ಫೌಂಡೇಶನ್ ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮದಲ್ಲಿ 'ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ', 5001 ಮುತ್ತೈದೆಯರಿಗೆ ಉಡಿ ತುಂಬುವ ಮಹೋತ್ಸವ ಹಾಗೂ ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅವರು ಶಾಸಕರಾದ ನಂತರ ಒಂದು ವರ್ಷದ ಸಾಧನೆಗಳ ಕುರಿತು ಸಾಧನಾ ಕೃತಿ ಅನಾವರಣ ಕಾರ್ಯಕ್ರಮ ನಡೆಯಲಿದೆ.

ಈ ಭವ್ಯ ಸಮಾರಂಭದ ಕಾರ್ಯಕ್ರಮಕ್ಕೆ ಇಂದು ಸಿಂಧನೂರಿಗೆ ಕನ್ನಡ ಚಿತ್ರರಂಗದ ಕರುನಾಡ ಅಭಿನಯ ಚಕ್ರವರ್ತಿ, ಖ್ಯಾತ ನಟ ಸುದೀಪ್ ಅವರು ಮುಖ್ಯ ಆಕರ್ಷಣೆಯಾಗಿ ಆಗಮಿಸಲಿದ್ದು, ಅಭಿಮಾನಿಗಳು ಹಾಗೂ ಸಾರ್ವಜನಿಕರಲ್ಲಿ ಅಪಾರ ಉತ್ಸಾಹ ಮನೆ ಮಾಡಿದೆ.

ಸಾಮಾಜಿಕ ಬದ್ಧತೆ, ಜನಸೇವೆ ಮತ್ತು ಸಂಸ್ಕೃತಿ ಸಂರಕ್ಷಣೆಯ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಕಾರ್ಯಕ್ರಮಕ್ಕೆ ಜಿಲ್ಲೆಯ ವಿವಿಧ ಭಾಗಗಳಿಂದ ಸಾವಿರಾರು ಜನರು ಭಾಗವಹಿಸುವ ನಿರೀಕ್ಷೆಯಿದೆ.

ಸಾಮೂಹಿಕ ವಿವಾಹದ ಮೂಲಕ ಅನೇಕ ಬಡ ಕುಟುಂಬಗಳಿಗೆ ನೆರವಾಗುವ ಕಾರ್ಯವನ್ನು ಫೌಂಡೇಶನ್ ಕೈಗೊಂಡಿದ್ದು, ಮುತ್ತೈದೆಯರಿಗೆ ಉಡಿ ತುಂಬುವ ಮೂಲಕ ಸಂಪ್ರದಾಯ ಮತ್ತು ಮಹಿಳಾ ಗೌರವಕ್ಕೆ ವಿಶೇಷ ಮಹತ್ವ ನೀಡಲಾಗುತ್ತಿದೆ.

ಬಸನಗೌಡ ಬಾದರ್ಲಿ ಅವರ ಒಂದು ವರ್ಷದ ಶಾಸಕೀಯ ಸಾಧನೆಗಳನ್ನು ಒಳಗೊಂಡ ಕೃತಿ ಅನಾವರಣಗೊಳ್ಳಲಿದ್ದು, ವಿವಿಧ ಗಣ್ಯರು, ರಾಜಕೀಯ ನಾಯಕರು, ಧಾರ್ಮಿಕ ಮುಖಂಡರು ಹಾಗೂ ಅಭಿಮಾನಿಗಳು ಭಾಗವಹಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಜಿಲ್ಲೆಯ ಸಾರ್ವಜನಿಕರು, ಅಭಿಮಾನಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಬಸನಗೌಡ ಫೌಂಡೇಶನ್ ಮನವಿ ಮಾಡಿದೆ.



ಸಿಂಧನೂರು: ನಗರದಲ್ಲಿ ಜಲಶುದ್ಧಿ ಮಿಷನ್ ಎನ್‌ಜಿಟಿ ಪರಿಸರ ಪರಿಹಾರ ನಿಧಿ ಅಡಿಯಲ್ಲಿ ಡಿಬಿಒಟಿ ಮಾದರಿಯಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ಮಾಣ, ಉನ್ನತೀಕರಣ ಭೂಮಿಪೂಜೆ ಕಾರ್ಯಕ್ರಮವನ್ನು ಶಾಸಕ ಹಂಪನಗೌಡ ಬಾದರ್ಲಿ ವಾರ್ಡ್ ನಂ.28ರಲ್ಲಿ ನೆರವೇರಿಸಿದರು.

ಸೊಳ್ಳೆ ಪರದೆ ಕಡ್ಡಾಯ ಬಳಸಿ: ಡಿಎಚ್‌ಒ

ರಾಯಚೂರು: ಸೋಂಕಿಗೆ ಒಳಪಡುವ ಅನಾಫಿಲಿಸ್ ಹೆಣ್ಣು ಸೊಳ್ಳೆಯಿಂದ ಮಲೇರಿಯಾ ರೋಗ ಹರಡುತ್ತದೆ. ಹಾಗಾಗಿ ಮಲಗುವಾಗ ಸೊಳ್ಳೆ ಪರದೆಗಳನ್ನು ಕಡ್ಡಾಯವಾಗಿ ಬಳಸಬೇಕೆಂದು ಡಿಎಚ್‌ಒ ಡಾ.ಸುರೇಂದ್ರ ಬಾಬು ಹೇಳಿದರು.

ಶನಿವಾರ ಜಿಲ್ಲೆಯ ಲಿಂಗಸುಗೂರು ತಾಲೂಕಿನ ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಲಿಂಗಸುಗೂರು ಇವರ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಿಶ್ವ ಮಲೇರಿಯಾ ದಿನಾಚರಣೆ ಚಾಲನೆ ನೀಡಿ ಮಾತನಾಡಿದರು.

ಮಲೇರಿಯಾ ರೋಗಕ್ಕೆ ತುತ್ತಾದ ವ್ಯಕ್ತಿಗೆ ಕಚ್ಚುವ ಸೊಳ್ಳೆಗಳು, ಆರೋಗ್ಯವಂತ ಮನುಷ್ಯನಿಗೆ ಕಚ್ಚಿದಾಗ ಮಲೇರಿಯಾ ರೋಗ ಹರಡುತ್ತದೆ. ಹಾಗಾಗಿ ಜ್ವರ ಬಂದಾಗ ತಕ್ಷಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ನೀರು ಸಂಗ್ರಹ ಪರಿಕರಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾ ಮತ್ತು ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಗಣೇಶ.ಕೆ ಮಾತನಾಡಿದರು. ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮರೇಶ ಪಾಟೀಲ, ಆಡಳಿತ ವೈದ್ಯಾಧಿಕಾರಿ ಡಾ.ಹನಮಂತರಾಯ ತಳ್ಳಳ್ಳಿ, ವೈದ್ಯಾಧಿಕಾರಿ ಡಾ.ರಾಜೇಶ್ವರಿ ಮುಖಂಡರಾದ ಆದೆಪ್ಪ, ಪೀರಸಾಬ್, ಬಸವರಾಜ್, ಹನುಮಂತ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಎಚ್.ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ ಸೇರಿದಂತೆ ಇತರರಿದ್ದರು.



ರಾಯಚೂರು: ಶನಿವಾರ ಜಿಲ್ಲೆಯ ಲಿಂಗಸುಗೂರು ತಾಲೂಕಿನ ಈಚನಾಳ ಪ್ರಾಥಮಿಕ ಅರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಲಿಂಗಸುಗೂರು ಇವರ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಿಶ್ವ ಮಲೇರಿಯಾ ದಿನಾಚರಣೆ ಆಚರಿಸಲಾಯಿತು.

ಮೂರು ವರ್ಷಗಳಲ್ಲಿ ಒಂದು ಮದುವೆಯೂ ಇಲ್ಲ
ಕಳೆಗುಂದಿದ ಮಾಂಗಲ್ಯ ಭಾಗ್ಯ!

▶ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ

ಮಸ್ಕಿ: ಮುಜರಾಯಿ ಇಲಾಖೆಯು ಶ್ರೀಸಾಮಾನ್ಯರಿಗಾಗಿ ಪರಿಚಯಿಸಿರುವ 'ಮಾಂಗಲ್ಯ ಭಾಗ್ಯ' (ಸಪ್ತಪದಿ ಹಿಂದಿನ ಹೆಸರು) ಯೋಜನೆಗೆ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂಬ ಶಂಕೆ ಉಂಟಾಗಿದೆ.

ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಇದುವರೆಗೂ ಒಂದೂ ವಿವಾಹ ನಡೆದಿಲ್ಲದಿರುವುದು ಬಡವರ ಮದುವೆ ಆಸೆಗೆ ತಣ್ಣೀರೆರಚಿದಂತಾಗಿದ್ದು ಸುಳ್ಳಲ್ಲ.

ಹೌದು ಆರಂಭದಲ್ಲಿ (2020ರಲ್ಲಿ) ಸಾಮೂಹಿಕ ವಿವಾಹ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು. ರಾಜ್ಯದ ಎಲ್ಲ 'ಎ' ಗ್ರೇಡ್ ದೇವಾಲಯಗಳಲ್ಲಿ ಈ ಯೋಜನೆ ಆರಂಭಿಸಲಾಯಿತು. ಎರಡು ಅಥವಾ ಮೂರು ತಿಂಗಳಿಗೊಮ್ಮೆ ಸಾಮೂಹಿಕ ವಿವಾಹಗಳನ್ನು ನಡೆಸುತ್ತಾ ಬರಲಾಯಿತು. ಆದರೆ ಕ್ರಮೇಣ ಯೋಜನೆಗೆ ಬೇಡಿಕೆ ಕಡಿಮೆಯಾಗುತ್ತಾ ಹೋಯಿತು. ಕೆಲವು ದೇವಾಲಯಗಳಲ್ಲಿ ಒಂದೂ ಅರ್ಜಿಗಳು ಬಾರದಿದ್ದರೂ ಇಲಾಖೆ ಆಗಿಂದಾಗ್ಗೆ ಅರ್ಜಿಗಳನ್ನು ಆಹ್ವಾನಿಸುತ್ತಾ ಬಂದಿತು. ಇತ್ತೀಚೆಗೆ ಪ್ರತಿಷ್ಠಿತ ಕೆಲ ದೇವಾಲಯಗಳಲ್ಲಿ ವಿವಾಹಗಳು ನಡೆದರೆ, ಉಳಿದಂತೆ ಹಲವು ದೇವಾಲಯಗಳಲ್ಲಿ ಯೋಜನೆ ಸ್ಥಗಿತಗೊಂಡಿದೆಯೇ? ನಿಜ ಕೋವಿಡ್ ಸಂದರ್ಭದಲ್ಲಿ ಎರಡು ವರ್ಷ ಯೋಜನೆ ಸ್ಥಗಿತಗೊಂಡಿತ್ತು. ನಂತರ 2022ರ ಅಂತ್ಯದಲ್ಲಿ ಪುನರಾರಂಭಿಸಲಾಯಿತು. 2023ರಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಸಪ್ತಪದಿ ಯೋಜನೆ 'ಮಾಂಗಲ್ಯ ಭಾಗ್ಯ'ವಾಗಿ ಬದಲಾಯಿತು. ಜತೆಗೆ, ಪ್ರತಿ ಜೋಡಿಗೆ ನೀಡುವ ನೆರವನ್ನು 55 ಸಾವಿರ ಬದಲಿಗೆ 63 ಸಾವಿರ ರೂ.ಗಳಿಗೆ ಏರಿಸಲಾಯಿತು.

ಚಿನ್ನದ ದರ ದುಬಾರಿಯಾದ ಹಿನ್ನೆಲೆಯಲ್ಲಿ ಅದಕ್ಕೆ ಅನುಗುಣವಾಗಿ ಹಣ ಹೆಚ್ಚಿಸಲಾಯಿತು ಎಂಬುದು ಮುಜರಾಯಿ ಇಲಾಖೆ ಅಧಿಕಾರಿಗಳು ಮಾತು.

ಇನ್ನು ಯೋಜನೆಯಡಿ ಮದುವೆ ಆಗಲು ಬಯಸುವವರು ದೇವಸ್ಥಾನಗಳಲ್ಲಿ ಒಂದು ತಿಂಗಳು ಮುಂಚಿತವಾಗಿ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ಇಲಾಖೆಯು ಪ್ರತಿ ಜೋಡಿಗೆ ವಧುವಿಗೆ 8 ಗ್ರಾಂನ ಚಿನ್ನದ ತಾಳಿ ಐದು ಸಾವಿರ ರೂ. ಪ್ರೋತ್ಸಾಹಧನ ನೀಡುತ್ತಿತ್ತು. ಈ ಯೋಜನೆಯ ಉದ್ದೇಶ ಬಡವರ ಪಾಲಿಗೆ ಸಂಜೀವಿನಿಯಾಗಿತ್ತು ಎಂಬುದು ಸುಳ್ಳಲ್ಲ. ಆದ್ದರಿಂದ ಸಂಬಂಧಿಸಿದ ಸಚಿವರು, ಅಧಿಕಾರಿಗಳು ಜಿಲ್ಲೆಯಲ್ಲಿ ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತಂದರೆ ಜಿಲ್ಲೆಯ ಬಡಜನರ ಬದುಕು ಹಸನಾದೀತು ಎಂಬುದೇ ಬುದ್ಧಿವಂತ ನಾಗರಿಕರ ಮನವಿಯಾಗಿದೆ.



> ಕಳೆದ 2023ರಿಂದ ಸ್ಕೀಂ ಬಂದಾಗಿದೆ. ಯಾವ ಜಿಲ್ಲೆ ಅನುಷ್ಠಾನ ಅಗ್ತಾ ಇಲ್ಲ. ಸಾಮೂಹಿಕ ವಿವಾಹ ಮಾಡ್ತಾ ಇದ್ದಾರೆ. ಆದರೆ ಮಾಂಗಲ್ಯ ಭಾಗ್ಯ ಕಾರ್ಯಕ್ರಮಕ್ಕೆ ದುಡ್ಡು ಕೊಡುವ ಸ್ಕೀಂ ಇಲ್ಲ.
> ■ ನಿತೀಶ ಕೆ. ಜಿಲ್ಲಾಧಿಕಾರಿ

ನಿಸ್ವಾರ್ಥ ಸೇವೆ ಭಕ್ತನ ನಿಜ ಲಕ್ಷಣ: ಗುರೂಜಿ

ಯಲಬುರ್ಗಾ: ಭಕ್ತನು ಆಹಂಕಾರ ವಿಲ್ಲದ, ನಿರ್ಲಿಪ್ತ, ಪ್ರೀತಿ ಮತ್ತು ಸಮರ್ಪಣಾ ಭಾವ ಹೊಂದಿದವನಾಗಿರಬೇಕು. ಲೌಕಿಕ ಜಗತ್ತಿನಲ್ಲಿ ಬದುಕುತ್ತಲೇ ದೇವರ ಚಿಂತನೆಯಲ್ಲಿರುವುದು, ಪರರ ಹಿತ ಬಯಸುವುದು, ನಿಸ್ವಾರ್ಥ ಸೇವೆ ಮಾಡುವುದು ಭಕ್ತನ ನಿಜವಾದ ಲಕ್ಷಣ ಎಂದು ಯೋಗ ಗುರು ಹರ್ಷಾನಂದ ಗುರೂಜಿ ಹೇಳಿದರು.

ತಾಲೂಕಿನ ಮಕ್ಕಳ್ಳಿ ಗ್ರಾಮದ ಶಿವಾನಂದ ಮಠದ ಆವರಣದಲ್ಲಿ ಬುದ್ಧ ಪೂರ್ಣಿಮೆ ನಿಮಿತ್ಯ 81ನೇ ಮಾಸಿಕ ಶಿವಾನುಭವ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಭಯದಿಂದ ಭಕ್ತಿ ಮಾಡದೆ, ಪ್ರೀತಿ ಮತ್ತು ನಂಬಿಕೆಯಿಂದ ಭಗವಂತನನ್ನು ಅಪ್ಪಿಕೊಳ್ಳಬೇಕು ಭಕ್ತನ ಲಕ್ಷಣಗಳು ಮತ್ತು ಸ್ವಭಾವ ನಿಷ್ಕಲ್ಮಶ, ಭಕ್ತಿಯು ಕೇವಲ ಆಚರಣೆಗಳಲ್ಲ, ಅದು ದೇವರ ಮೇಲಿನ ಅಚಲ ಪ್ರೀತಿ. ಸಂಸಾರದಲ್ಲಿದ್ದರೂ ಲೌಕಿಕ ಆಸೆಗಳಿಗೆ ಅಂಟಿಕೊಳ್ಳದೆ ದೇವರಲ್ಲಿ ಸಾಕ್ಷಾತ್ಕಾರದ ಗುರಿ ಹೊಂದಿರಬೇಕು ಎಂದರು.

ಶಿಕ್ಷಣ ಕಲಿತ ಮಕ್ಕಳು ಹಾಳಾಗಬಹುದು ಸಂಸ್ಕಾರ ಕಲಿತ ಮಕ್ಕಳು ಎಂದು ಹಾಳಾಗುವುದಿಲ್ಲ ಮನಸ್ಸಿಗೆ ಸಂತೋಷವಾಗಬೇಕು. ದೇಹಕ್ಕೆ ಸುಖವಾಗಬೇಕು ಮಕ್ಕಳು ಸಂಸ್ಕಾರವಂತರಾಗಬೇಕು ಅಂದಾಗ ನಿಮ್ಮ ಜೀವನದಲ್ಲಿ ನೆಮ್ಮದಿಯಿಂದ ಬದಕಲು ಸಾಧ್ಯ ನಿಮ್ಮಲ್ಲಿ ಜ್ಞಾನವಿಲ್ಲ ವೆಂದರೆ ಬದುಕಲು ಅಸಾಧ್ಯ ಮಕ್ಕಳಿಗೆ ಸಂಸ್ಕಾರದ ಜ್ಞಾನಬೇಕು ಎಂದರೆ ಶಿವಾನುಭವ ಗೋಷ್ಠಿಯಲ್ಲಿ ಪಾಲ್ಗೊಂಡಾಗ ಮಕ್ಕಳಿಗೆ ಸಂಸ್ಕಾರ, ವಿದ್ಯ, ಜ್ಞಾನ ಸಿಗುತ್ತದೆ ಎಂದು ಹೇಳಿದರು.

ಮಕ್ಕಳ್ಳಿಯ ಶಿವಾನಂದ ಸ್ವಾಮೀಜಿ, ಭೀಮಣ್ಣ ಹವಳಿ, ಶರಣಪ್ಪ ದಾನಕ್ಕೈ, ಮುದಿಯಪ್ಪ ಮಾತನಾಡಿದರು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಧಾರವಾಡದ ಆನಂದ ಗುರೂಜಿ, ಮಠದ ಧರ್ಮದರ್ಶಿ ಹನುಮಂತಪಜ್ಜ ಧರ್ಮರ, ಶರಣಯ್ಯ ಬಳಗಾನೂರ ಮಠ, ಮಳಿಯಪ್ಪಯ್ಯ ಶರಣರ, ಕಾವೇರಿ ನಾವಡೆ, ಅಂಬಿಕಾ ನಾವಡೆ, ಶರಣಪ್ಪ ಭೂತಲ್, ಶರಣಪ್ಪ ಹಳ್ಳಿಕೇರಿ, ಶಂಕರಗೌಡ ಮಾಲಿಪಾಟೀಲ, ಹನುಮಂತಪ್ಪ ಮದ್ಲಗಟ್ಟಿ, ದುರುಗಪ್ಪ ಮಕ್ಕಳ್ಳಿ, ದೇವರಾಜ ಹೊಸೂರು, ಅಲಿಸಾಬ ನದಾಫ್, ಶಂಕ್ರಪ್ಪ ಕೋಗಿಲೆ ಇದ್ದರು.



ಉಚಿತ ದಾಖಲಾತಿ ಪ್ರಾರಂಭ

ಬಳ್ಳಾರಿ: ನಗರದ ಕಂಟೋನ್ಮೆಂಟ್ ಪ್ರದೇಶದ ಶಾಂತಿಧಾಮ ಆವರಣದಲ್ಲಿರುವ ಸರ್ಕಾರಿ ಕಿವುಡು ಮಕ್ಕಳ ವಸತಿಯುತ ಪಾಠಶಾಲೆಯಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ 1ರಿಂದ 10ರವರೆಗೆ ಶ್ರವಣದೋಷವುಳ್ಳ ಬಾಲಕರಿಗೆ ಉಚಿತ ದಾಖಲಾತಿ ಪ್ರಕ್ರಿಯೆ ಆರಂಭವಾಗಿದೆ.

6 ವರ್ಷದಿಂದ 14 ವರ್ಷದೊಳಗಿನ ಶ್ರವಣದೋಷವುಳ್ಳ ಮಕ್ಕಳು ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಕಂಟೋನ್ಮೆಂಟ್ ಪ್ರದೇಶದ ಶಾಂತಿಧಾಮ ಆವರಣದಲ್ಲಿರುವ ಸರ್ಕಾರಿ ಕಿವುಡು ಮಕ್ಕಳ ಪಾಠಶಾಲೆಯ ಅಧೀಕ್ಷಕರ ಕಚೇರಿ ಅಥವಾ ದೂ.08392-297138, ಮೊ.9008485380, 9902106670 ಗೆ ಸಂಪರ್ಕಿಸಬಹುದು.

ಜೇವರ್ಗಿಯಲ್ಲಿ 73.75 ಕೋಟಿ ವೆಚ್ಚದ ಜಿಟಿಟಿಸಿ ಕೇಂದ್ರಕ್ಕೆ ಅನುಮೋದನೆ

ಕಲಬುರಗಿ: ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿ ಹೊಸ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಸ್ಥಾಪನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ಮಹತ್ವದ ನಿರ್ಧಾರವು ಸ್ಥಳೀಯ ಯುವಕರಿಗೆ ತಾಂತ್ರಿಕ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಅವಕಾಶಗಳನ್ನು ಒದಗಿಸುವುದರ ಮೂಲಕ ಪ್ರದೇಶದ ಅಭಿವೃದ್ಧಿಗೆ ಹೊಸ ದಿಕ್ಕು ತೋರಲಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ.ಅಜಯ್ ಸಿಂಗ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆಯಡಿ ಒಟ್ಟು 73.75 ಕೋಟಿ ವೆಚ್ಚದಲ್ಲಿ ಈ ಕೇಂದ್ರವನ್ನು ನಿರ್ಮಿಸಲಾಗುತ್ತದೆ. ಜೇವರ್ಗಿ ಪ್ರದೇಶದಲ್ಲಿ ದೀರ್ಘಕಾಲದಿಂದಲೂ ಅನುಭವವಾಗುತ್ತಿದ್ದ ತಾಂತ್ರಿಕ ಶಿಕ್ಷಣದ ಕೊರತೆ ಈ ಯೋಜನೆ ನಿವಾರಿಸಲಿದೆ. ಪ್ರಸ್ತಾವಿತ ಜಿಟಿಟಿಸಿ ಕ್ಯಾಂಪಸ್‌ನಲ್ಲಿ ಆಧುನಿಕ ತರಬೇತಿ ಬ್ಲಾಕ್‌ಗಳು, ಕಾರ್ಯಾಗಾರಗಳು, ವಿದ್ಯಾರ್ಥಿಗಳ ವಸತಿ ಸೌಲಭ್ಯ, ಸಿಬ್ಬಂದಿ ವಸತಿಗೃಹಗಳು ಮತ್ತು ಅತ್ಯಾಧುನಿಕ ಯಂತ್ರೋಪಕರಣಗಳನ್ನು ಒಳಗೊಂಡಿರಲಿವೆ ಎಂದರು.

ಈ ಕೇಂದ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಮತ್ತು ಮಷೀನ್ ಲರ್ನಿಂಗ್ (ಎಂಎಲ್) ಜೊತೆಗೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ನೀಡಲಾಗುತ್ತದೆ. ಇದಲ್ಲದೆ, ಉದ್ಯಮದ ಅಗತ್ಯಗಳಿಗೆ ಅನುಗುಣವಾಗಿ ಅಲ್ಪಾವಧಿಯ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನೂ ನಡೆಸಲಾಗುತ್ತದೆ.

ವಾರ್ಷಿಕವಾಗಿ 750ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಸಾಮರ್ಥ್ಯವನ್ನು ಈ ಕೇಂದ್ರ ಹೊಂದಿರಲಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಉದ್ಯಮ-ಸಂಯೋಜಿತ ಇನ್-ಪ್ಲಾಂಟ್ ತರಬೇತಿಯ ಜೊತೆಗೆ ತಿಂಗಳಿಗೆ 15,000 ರಿಂದ 25,000 ವರೆಗೆ ಸ್ಟೈಫಂಡ್ ಕೂಡ ನೀಡಲಾಗುತ್ತದೆ. ಈ ಯೋಜನೆ ಸಂವಿಧಾನದ 371(ಜೆ) ವಿಧಿಯಡಿ ಸಮಾನ ಅಭಿವೃದ್ಧಿ ಸಾಧಿಸುವ ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆ. ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದರೊಂದಿಗೆ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವುದಾಗಿ ನಿರೀಕ್ಷಿಸಲಾಗಿದ್ದು, ಈ ಯೋಜನೆಗೆ ಅನುಮೋದನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹಾಗೂ ಸಂಪುಟದ ಎಲ್ಲ ಸಚಿವರಿಗೆ ಡಾ.ಅಜಯ್ ಸಿಂಗ್ ಕೃತಜ್ಞತೆ ಸಲ್ಲಿಸಿದ್ದಾರೆ.



ಕನ್ನಡ ಶಾಲೆಗಳಲ್ಲಿ ಮೂಲಸೌಲಭ್ಯ ಕಲ್ಪಿಸಿ



ಮಾನ್ವಿ: ಪಟ್ಟಣದ ಸಿದ್ದಲಿಂಗಪ್ಪ ವಕೀಲರ ನಿವಾಸಕ್ಕೆ ಆಗಮಿಸಿದ ರಾಜ್ಯ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿದರು.

ವೀರಶೈವ ಲಿಂಗಾಯತ ಸಮಾಜದವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರವು 1910 ರಲ್ಲಿ ಗಡಿನಾಡ ಕನ್ನಡಿಗರ ಅಭಿವೃದ್ಧಿಗಾಗಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ ಕನ್ನಡ ಭಾಷಿಕರಿಗೆ ಅಗತ್ಯ ಮೂಲ ಸೌಕರ್ಯ, ಕನ್ನಡ ಶಾಲೆಗಳಲ್ಲಿ ಮೂಲಸೌಲಭ್ಯಗಳನ್ನು ನೀಡುವುದರ ಜೊತೆಗೆ ಕನ್ನಡ ಭಾಷಿಕರಿಗಾಗಿ ಕನ್ನಡ ಭವನಗಳನ್ನು ಕೂಡ ನಿರ್ಮಾಣ ಮಾಡಲಾಗಿದೆ. ರಾಜ್ಯದ ಗಡಿಯನ್ನು ಹಂಚಿಕೊಂಡಿರುವ 6 ರಾಜ್ಯಗಳಲ್ಲಿನ 19 ಜಿಲ್ಲೆಯ 63 ತಾಲೂಕುಗಳಲ್ಲಿ ಮಾನಸಿಕವಾಗಿ ಕನ್ನಡಿಗರಿದ್ದು ಅವರಿಗೆ ಅಗತ್ಯವಾದ ಎಲ್ಲಾ ಮೂಲಸೌಲಭ್ಯಗಳನ್ನು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಕಲ್ಪಿಸುತ್ತಿದೆ. ಗಡಿಯಲ್ಲಿರುವ ಸರಕಾರಿ, ಅನುದಾನಿತ ಕನ್ನಡ ಶಾಲೆಗಳಿಗೆ ಅಗತ್ಯವಿರುವ ಪುಸ್ತಕಗಳು, ಶುದ್ಧ ಕುಡಿಯುವ ನೀರಿನ ಘಟಕ, ಮೈದಾನ, ಕಾಂಪೌಡ್, ಕೋಠಡಿಗಳು, ಗ್ರಂಥಲಾಯ, ಪಿಠೋಪಕರಣ ಹಾಗೂ ಕನ್ನಡ ಭಾವನಗಳ ನಿರ್ಮಾಣಕ್ಕೆ ಅಗತ್ಯ ಅನುದಾನವನ್ನು ನೀಡಲಾಗುತ್ತಿದೆ. ಕೇರಳದಲ್ಲಿನ ಕಾಸರಗೋಡು ಹಾಗೂ ಮಹಾರಾಷ್ಟ್ರದಲ್ಲಿನ ಅಕ್ಕಲಕೋಟೆಯಲ್ಲಿ ಲಿಗಾಡೆ ತಾಯಿಯವರ ಹೆಸರಿನಲ್ಲಿ ಕನ್ನಡ ಭವನ ನಿರ್ಮಾಣ ಪೂರ್ಣಗೊಂಡಿದ್ದು ಎರಡು ರಾಜ್ಯದ ಮುಖ್ಯಮಂತ್ರಿಗಳಿಂದ ಕನ್ನಡ ಭವನವನ್ನು ಉದ್ಘಾಟಿಸಲಾಗುವುದು ಎಂದರು. ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಭಗತ್ ರಾಜ್ ಹಾಗೂ ಶಿವರೆಡ್ಡಿ ನವಲಿ ಮಾತನಾಡಿದರು. ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ, ಸಿದ್ದಲಿಂಗಪ್ಪ ವಕೀಲರು, ಹರಿಹಾರಪಾಟೀಲ, ಸೇರಿದಂತೆ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಭಾಗವಹಿಸಿದರು.

ದ್ಯಾಮಾಂಬಿಕಾ ದೇವಿ ಜಾತ್ರೆ ಅದ್ದೂರಿ

ಯಲಬುರ್ಗಾ: ತಾಲೂಕಿನ ಹುಣಸಿಹಾಳ ಗ್ರಾಮದ ಗ್ರಾಮದೇವತೆ ಶ್ರೀದ್ಯಾಮಾಂಬಿಕಾ ದೇವಿ ಜಾತ್ರೆ ಅದ್ಧೂರಿಯಾಗಿ ಜರುಗಿತು.

ಮೂರು ವರ್ಷಕ್ಕೊಮ್ಮೆ ನಡೆಯುವ ದೇವಿಯ ಜಾತ್ರಾ ಮಹೋತ್ಸವ ಅಂಗವಾಗಿ ಊರಲ್ಲಿ ಸಂಭ್ರಮ ಸಡಗರ ಮನೆ ಮಾಡಿತ್ತು.

ಜಾತ್ರೆ ಅಂಗವಾಗಿ ಶುಕ್ರವಾರ ಬೆಳಗ್ಗೆ ದೇವಿಗೆ ವಿಶೇಷ ಅಲಂಕಾರ, ಅಭಿಷೇಕದ ಪೂಜೆ ನೆರವೇರಿತು. ಕಾಯಿ ಕರ್ಪೂರ ಹಾಗೂ ನೈವೇದ್ಯ ಅರ್ಪಿಸಲಾಯಿತು.

ದೇವಿಗೆ ಉಡಿ ತುಂಬುವುದು ಸೇರಿ ವಿವಿಧ ಧಾರ್ಮಿಕ ಕಾರ್ಯಗಳು ಭಕ್ತಿಯಿಂದ ನಡೆದವು. ಭಕ್ತರು ಬೇಡಿಕೊಂಡ ಹರಕೆ ತೀರಿಸಿದರು. ಗ್ರಾಮದ ಪ್ರಮುಖ ಬೀದಿಯಲ್ಲಿ ದ್ಯಾಮಮ್ಮನ ಉತ್ಸವ ಮೂರ್ತಿಯ ಮೆರವಣಿಗೆಯು ಸೀಮೆಗೆ ತೆರಳಿ ವಾಪಸ್ಸು ದೇವಸ್ಥಾನಕ್ಕೆ ಆಗಮಿಸಿತು. ಹುಣಸಿಹಾಳ ಸೇರಿದಂತೆ ಸುತ್ತಲಿನ ಹಳ್ಳಿಗಳಾದ ನಿಲೋಗಲ್, ಗುನ್ನಾಳ, ಬೇವೂರು, ಮುರಡಿ, ನರಸಾಪುರ, ತರಲಕಟ್ಟಿ, ಕೋಳಿಹಾಳ, ಮ್ಯಾದನೇರಿ ಸೇರಿದಂತೆ ಹಲವು ಕಡೆಯಿಂದ ಆಗಮಿಸಿದ್ದ ಭಕ್ತರು ದೇವಿಯ ದರ್ಶನ ಪಡೆದು ಪುನೀತರಾದರು. ಒಂಬತ್ತು ದಿನಗಳ ಕಾಲ ನಡೆದುಬಂದ ಪುರಾಣ ಮಂಗಲಗೊಂಡಿತು.

ರಾತ್ರಿ ವೇಳೆ ನಡೆದ ಹಾಸ್ಯ ಸಂಜೆ, ಜನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾರ್ವಜನಿಕರಲ್ಲಿ ಮತ್ತಷ್ಟು ಖುಷಿಯ ಸಂಭ್ರಮ ತರಿಸಿತು.

ಗ್ರಾಮದ ಪ್ರಮುಖರಾದ ಹನುಮಂತ ತಳವಾರ್, ಅಯ್ಯನಗೌಡ ಕೆಂಚಮ್ಮನವರ್, ಶಿವಸಂಗಪ್ಪ ಹುಚನೂರ, ಗುರುರಾಜ ನೆಲಜೇರಿ, ಭೀಮನಗೌಡ ಪೊಲೀಸ್ ಪಾಟೀಲ್, ಹೇಮಣ್ಣಗೌಡ್ರ, ಶಿವಮೂರ್ತೆಪ್ಪ ಬಡಿಗೇರ್, ಚಂದ್ರಣ್ಣ ಬಡಿಗೇರ್, ರುದ್ರಪ್ಪ ಹುಚನೂರ, ಮೌನೇಶ ಬಡಿಗೇರ್, ಶಂಕ್ರಪ್ಪ ಬಡಿಗೇರ್, ಬಸಪ್ಪ ಹರಿಜನ ಸೇರಿದಂತೆ ಹಿರಿಯರು, ಯುವಕರು, ಮಹಿಳೆಯರು ಹಾಗೂ ಮಕ್ಕಳು ಭಾಗವಹಿಸಿದ್ದರು.



ಕಲಬುರಗಿ ಜಿಲ್ಲೆಯ ವಿವಿಧ ಪ್ರಕೋಷ್ಠಗಳಿಗೆ ನೇಮಕ



ಕಲಬುರಗಿ: ರಾಜ್ಯಾದ್ಯಂತ ಬಿಜೆಪಿ ಪಕ್ಷದ ಸಂಘಟನಾ ಪರ್ವದ ಭಾಗವಾಗಿ ಕಲಬುರಗಿ ಗ್ರಾಮಾಂತರ ಜಿಲ್ಲೆಯ ಭಾರತೀಯ ಜನತಾ ಪಕ್ಷದ ಜಿಲ್ಲಾ ಪ್ರಕೋಷ್ಠಗಳಿಗೆ ಸಂಚಾಲಕರು ಹಾಗೂ ಸಹ ಸಂಚಾಲಕರನ್ನು ಕೆಳಕಂಡಂತೆ ನಿಯುಕ್ತಿ ಮಾಡಿ ಆದೇಶ ಮಾಡಲಾಗಿದೆ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ತಿಳಿಸಿದರು.


ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಸಹಕಾರ ಪ್ರಕೋಷ್ಠಕ್ಕೆ ಸಂಚಾಲಕ ಭೀಮರೆಡ್ಡಿ ಗೌಡ ಕುರಾಳ, ಸಹ ಸಂಚಾಲಕರಾಗಿ ದತ್ತು ಹರನೂರ, ಅಸಂಘಟಿತ ಕಾರ್ಮಿಕರ ಪ್ರಕೋಷ್ಠಕ್ಕೆ ಸಂಚಾಲಕ ಭೀಮಾಶಂಕರ ಕುರಡೇಕರ್, ಸಹ ಸಂಚಾಲಕರಾಗಿ ಕಾಶಿನಾಥ್ ನೀಡಗುಂದಾ, ಹಾಲು ಉತ್ಪಾದಕರ ಪ್ರಕೋಷ್ಠಕ್ಕೆ ಸಂಚಾಲಕ ದಿವಾಕರ್ ಜಾಗೀರದಾರ್, ಸಹ ಸಂಚಾಲಕರಾಗಿ ಶಾಂತಕುಮಾರ್ ಮಳಖೇಡ, ಫಲಾನುಭವಿಗಳ ಪ್ರಕೋಷ್ಠಕ್ಕೆ ಸಂಚಾಲಕ ಸತೀಶ್ ಸಾಹುಕಾರ ಸೊರಡೆ, ಸಹ ಸಂಚಾಲಕರಾಗಿ ಸಂದೀಪ್ ಪ್ಯಾಟಿ, ಹಿರಿಯ ನಾಗರಿಕರ ಪ್ರಕೋಷ್ಠಕ್ಕೆ ಸಂಚಾಲಕ ಹಳ್ಳೆಪ್ಪಾಚಾರಿ ಜೋಶಿ, ಸಹ ಸಂಚಾಲಕರಾಗಿ ಮೋತಿರಾಮ ನಾಯಕ್ ನಿಯುಕ್ತಿ ಮಾಡಲಾಗಿದೆ.

ಅದೇ ರೀತಿ ಸಾಂಸ್ಕೃತಿಕ ಪ್ರಕೋಷ್ಠಕ್ಕೆ ಸಂಚಾಲಕ ಶಂಕರಪ್ಪ ಹಿಪ್ಪರಗಿ, ಸಹ ಸಂಚಾಲಕರಾಗಿ ವಿಶ್ವನಾಥ ತಿಳಗೋಳ, ನೇಕಾರರ ಪ್ರಕೋಷ್ಠಕ್ಕೆ ಹಣಮಂತ ಕಣ್ಣಿ, ಸಹ ಸಂಚಾಲಕರಾಗಿ ಶಾಂತಕುಮಾರ್ ಯಳಸಂಗಿ, ಮೀನುಗಾರರ ಪ್ರಕೋಷ್ಠಕ್ಕೆ ಸಂಚಾಲಕ ಭೀಮರಾಯ ಕೋಳಕೂರ, ಸಹ ಸಂಚಾಲಕರಾಗಿ ಪವನ್ ಜಾಫೂರಕರ್, ವ್ಯಾಪಾರ ವಾಣಿಜ್ಯ ಪ್ರಕೋಷ್ಠಕ್ಕೆ ಸಂಚಾಲಕ ರವೀಂದ್ರ ಮುತ್ತಿನ, ಸಹ ಸಂಚಾಲಕರಾಗಿ ವಿಶ್ವನಾಥ ಗೋಧಿ, ಪಂಚಾಯತ್ ರಾಜ್ ಗ್ರಾಮೀಣ ಪ್ರಕೋಷ್ಠಕ್ಕೆ ಸಂಚಾಲಕ ಶಿವಕುಮಾರ್ ಶರ್ಮಾ, ಸಹ ಸಂಚಾಲಕರಾಗಿ ಗೋವಿಂದ ಮುಡಗೋಲ್, ಕಾನೂನು ಪ್ರಕೋಷ್ಠಕ್ಕೆ ಸಂಚಾಲಕ ಎನ್.ಎಸ್.ಪಾಟೀಲ, ಸಹ ಸಂಚಾಲಕರಾಗಿ ರವೀಂದ್ರ ಭಂಟನಳ್ಳಿ, ಪ್ರಭುದ್ಧರ ಪ್ರಕೋಷ್ಠಕ್ಕೆ ಸಂಚಾಲಕ ಚಂದ್ರಕಾಂತ ಗೊಬ್ಬುರಕರ್, ಸಹ ಸಂಚಾಲಕರಾಗಿ ಮಲ್ಲಿಕಾರ್ಜುನ ಪಾಟೀಲ್ ನಿಯುಕ್ತಿ ಮಾಡಲಾಗಿದೆ.

ಅದೇ ರೀತಿ ವೃತ್ತಿಪರ ಪ್ರಕೋಷ್ಠಕ್ಕೆ ಸಂಚಾಲಕ ಚಂದ್ರಶೇಖರ ಅವಂಟಿ, ಸಹ ಸಂಚಾಲಕರಾಗಿ ಜೈ ಭೀಮ್ ಕಟ್ಟಿಮನಿ, ವೈದ್ಯಕೀಯ ಪ್ರಕೋಷ್ಠಕ್ಕೆ ಸಂಚಾಲಕ ಡಾ.ವೆಂಕಟರಾವ್ ಮಿಸ್ಕಿನ್, ಸಹ ಸಂಚಾಲಕರಾಗಿ ವಿವೇಕಾನಂದ ಪಾಟೀಲ್, ಆರ್ಥಿಕ ಪ್ರಕೋಷ್ಠಕ್ಕೆ ಸಂಚಾಲಕ ಶ್ರೀಕಾಂತ್ ನರೋಣೆ, ಸಹ ಸಂಚಾಲಕರಾಗಿ ವಿನೋದ್ ಪಾಟೀಲ ಸರಡಗಿ, ವಿವಿಧ ಭಾಷಿಕರ ಪ್ರಕೋಷ್ಠಕ್ಕೆ ಸಂಚಾಲಕ ಜ್ಯೋತಿ ಶರ್ಮಾ, ಸಹ ಸಂಚಾಲಕರಾಗಿ ಪ್ರಫುಲ್ ಬಾಬಳಸೂರೆ, ಕೈಗಾರಿಕಾ ಪ್ರಕೋಷ್ಠಕ್ಕೆ ಸಂಚಾಲಕ ಶಿವಕುಮಾರ್ ಪಾಟೀಲ, ಸಹ ಸಂಚಾಲಕರಾಗಿ ಮಲ್ಲಿಕಾರ್ಜುನ ಮರತೂರ, ಪೂರ್ವ ಸೈನಿಕರ ಪ್ರಕೋಷ್ಠಕ್ಕೆ ಸಂಚಾಲಕ ಮುರಗಣ್ಣ ಬೊಮ್ಮ, ಸಹ ಸಂಚಾಲಕರಾಗಿ ನಿಂಗಣ್ಣ ಬಿರಾದಾರ, ಶಿಕ್ಷಕರ ಪ್ರಕೋಷ್ಠಕ್ಕೆ ಸಂಚಾಲಕ ಮಂದನಾ ಜೈನ ಯಣಗುರೆ, ಸಹ ಸಂಚಾಲಕರಾಗಿ ಅಶೋಕ್ ಬಬಲಾದ, ಪಂಚಾಯತ್ ರಾಜ್ ನಗರ ಪ್ರಕೋಷ್ಠಕ್ಕೆ ಸಂಚಾಲಕ ರಾಣೋಜಿ ದೊಡ್ಡಮನಿ, ಸಹ ಸಂಚಾಲಕರಾಗಿ ಕಲ್ಯಾಣ ಕುಮಾರ್ ಚಿನಿವಾರ್ ನಿಯುಕ್ತಿ ಮಾಡಲಾಗಿದೆ.

ಜೊತೆಗೆ ಸಂಘಟನಾತ್ಮಕ ಪ್ರಕೋಷ್ಠಗಳಿಗೆ ಪ್ರಶಿಕ್ಷಣ ಪ್ರಕೋಷ್ಠಕ್ಕೆ ಸಂಚಾಲಕ ಧರ್ಮಣ್ಣಾ ಇಟಗಾ, ಸಹ ಸಂಚಾಲಕರಾಗಿ ಶಶಿಧರ್ ಸುಗೂರ, ಪ್ರಕಾಶನ ಪ್ರಕೋಷ್ಠಕ್ಕೆ ಸಂಚಾಲಕ ಅಮರಸಿದ್ದ ಕಿಣಗಿ ಸಹ ಸಂಚಾಲಕರಾಗಿ ದೊಡ್ಡಪ್ಪ ಪೂಜಾರಿ ಅವರನ್ನು ನಿಯುಕ್ತಿ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷರು ತಿಳಿಸಿದರು.

ನಿರಂತರ ಪರಿಶ್ರಮದಿಂದ ಸಾಧನೆ ಸಾಧ್ಯ: ಸಿಪಿಐ ವಿಶ್ವನಾಥ್



ಕುಷ್ಟಗಿ: ವಿದ್ಯಾರ್ಥಿಗಳು ಪರಿಶ್ರಮ ಪಡುವುದರೊಂದಿಗೆ ಸಾಧನೆ ಮಾಡಬಹುದು ಬಹಳ ಯಶಸ್ಸು ಗಳಿಸಲು ಯಾವುದೇ ತಾತ್ಕಾಲಿಕ ಮಾರ್ಗಗಳಿಲ್ಲ ಕಠಿಣ ಪರಿಶ್ರಮ ಪಡುವುದರೊಂದಿಗೆ ಮಾತ್ರ ಸಾಧ್ಯ ಎಂದು ಕುಷ್ಟಗಿ ವೃತ್ತ ನಿರೀಕ್ಷಕರಾದ ವಿಶ್ವನಾಥ್ ಹಿರೇಗೌಡರ್ ಹೇಳಿದರು.

ನಗರದ ಮಾತೋಶ್ರೀ ಹೊಳೆಯಮ್ಮ ಮಹಿಳಾ ಪದವಿ ಕಲಾ ಮಹಾವಿದ್ಯಾಲಯಲ್ಲಿ ಬಿಎ ಅಂತಿಮ ವರ್ಷದ ವಿದ್ಯಾರ್ಥಿನಿಯರು ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪ್ರತಿ ಹಳ್ಳಿಯಲ್ಲಿ ಅಕ್ರಮ ಮದ್ಯಪಾನ ಮಾರಾಟ ಮಾಡುವುದನ್ನು ತಡೆಗಟ್ಟಬೇಕು ಸಾಧ್ಯವಾದರೆ ಪೊಲೀಸ್ ಠಾಣೆಗೆ ಮತ್ತು ಅಬಕಾರಿ ಇಲಾಖೆಗೆ ದೂರು ಸಲ್ಲಿಸಬೇಕು ಎಂದು ಹೇಳಿದರು.

ಎನ್‌ಎಸ್‌ಎಸ್ ಜಿಲ್ಲಾ ನೋಡಲ್ ಅಧಿಕಾರಿ ಡಾ.ನಾಗರಾಜ ಹೀರಾ ಮಾತನಾಡಿ, ಅವಕಾಶ ಸಿಕ್ಕಾಗ ಪ್ರತಿ ಮಹಿಳೆಯು ಅದನ್ನು ಸದುಪಯೋಗ ಪಡಿಸಿಕೊಂಡು ಮುನ್ನುಗ್ಗಬೇಕು ಪ್ರತಿ ಮಹಿಳೆ ಶಿಕ್ಷಣ ಪಡೆದರೆ ನಮ್ಮ ಸಮಾಜ ಸುಧಾರಿಸಲು ಸಾಧ್ಯ ಎಂದರು.

ಉಪನ್ಯಾಸಕ ಶೇಖಬಾಬ್ ಮಾತನಾಡಿ, ಜಗತ್ತನ್ನು ಜಯಿಸಬೇಕಾದದ್ದು ದ್ವೇಷದಿಂದಲ್ಲ ಪ್ರೀತಿಯಿಂದ ಮಾತ್ರ ಜಗತ್ತನ್ನು ಜಯಿಸಬಹುದು ಪ್ರತಿ ವಿದ್ಯಾರ್ಥಿನಿಯು ಇತರರನ್ನು ಪ್ರೀತಿಯಿಂದ ಕಾಣಬೇಕೆಂದರು.

ಪಿಕಾರ್ಡ್ ಬ್ಯಾಂಕಿನ ನಿರ್ದೇಶಕರಾದ ಮಹಾಲಿಂಗಪ್ಪ ದೋಟಿಹಾಳ ಮಾತನಾಡಿ, ಪ್ರತಿ ಮಹಿಳೆಯು ಉನ್ನತ ಶಿಕ್ಷಣವನ್ನು ಪಡೆದುಕೊಂಡು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕೆಂದರು.

ಮಹಾವಿದ್ಯಾಲಯದ ಪ್ರಾಂಶುಪಾಲ ತಿಪ್ಪಣ್ಣ ಎಚ್.ಹುಲಿಯಾಪುರ ವಾರ್ಷಿಕ ವರದಿಯನ್ನು ಸಾದರಪಡಿಸಿ ಕನಿಷ್ಠ ಶುಲ್ಕ ಗರಿಷ್ಠ ಕಲಿಕೆ ಎಂಬ ತತ್ವದ ಅಡಿಯಲ್ಲಿ ಮಹಾವಿದ್ಯಾಲಯದಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯನ್ನು ಹಮ್ಮಿಕೊಂಡು ಪ್ರತಿ ವಿದ್ಯಾರ್ಥಿನಿಯನ್ನು ಸಾಮಾಜಿಕರಣಗೊಳಿಸುವುದರೊಂದಿಗೆ ಮಹಿಳಾ ಸಬಲೀಕರಣ ಗೊಳಿಸುವುದು ನಮ್ಮ ಗುರಿಯಾಗಿದೆ ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಡಿ.ಬಿ.ಗಡೆದ ಮಾತನಾಡಿದರು. ಹೊಳಿಯಮ್ಮ ಪದವಿ ಮಹಿಳಾ ಮಹಾವಿದ್ಯಾಲಯದ ಅಧ್ಯಕ್ಷ ಹನುಮಂತಪ್ಪ ಚೌಡ್ಕಿ ಅಧ್ಯಕ್ಷತೆ ವಹಿಸಿದ್ದರು. ಮಹಾವೀರ ಕ್ಲಾತ್ ಸೆಂಟರ್ ಕುಷ್ಟಗಿಯ ಮಾಲೀಕ ಅಭಿನಂದನ್ ಘೋಗಿ, ಸಿದ್ದರಾಮಪ್ಪ ವಂದಾಲಿ, ಮಹಾವಿದ್ಯಾಲಯದ ಖಜಾಂಚಿ ಸುಂದರ್ ಕುಮಾರ್ ಚೌಡ್ಕಿ ಮಹಾವಿದ್ಯಾಲಯದ ಉಪನ್ಯಾಸಕರಾದ ನಾಗರಾಜ್ ಹಳ್ಳಿಗುಡಿ, ಈರಮ್ಮ ಮಡಿವಾಳ, ಶರಣಪ್ಪ ಮಡಿವಾಳ, ಬಸಪ್ಪ ಪೂಜಾರಿ, ಮಂಜುನಾಥ್ ತಾಳಮರದ, ಶಿವಮಲ್ಲಮ್ಮ ಕಂದಕೂರ, ರಾಮಕೃಷ್ಣ ಬೇವೂರ್, ಸಮೀನಾ ಬೇಗಮ್, ಸಂಗಪ್ಪ ಬಿಳಿಯಪ್ಪನವರ್, ವಿಜಯಲಕ್ಷ್ಮಿ ಪಾಟೀಲ, ಸುಜಾತಾ ಹಡಪದ, ಶಿವನಮ್ಮ ವಣಗೇರಿ ಭಾಗವಹಿಸಿದ್ದರು.

ವಿದ್ಯಾರ್ಥಿನಿಯಾದ ರಾಜೇಶ್ವರಿ ಕವನ ವಾಚಿಸಿದರು.

ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ವಿದ್ಯಾರ್ಥಿನಿಯರಾದ ವಿಜಯಲಕ್ಷ್ಮೀ ಮತ್ತು ನೇತ್ರಾ ಪಾಟೀಲ್ ಸ್ವಾಗತಿಸಿದರು. ಸುಷ್ಮಿತಾ ಮುಳ್ಳೂರ ಮತ್ತು ಅನಿತಾ ನಿರೂಪಿಸಿದರು. ಲಕ್ಷ್ಮೀಬಾಯಿ ವಂದಿಸಿದರು.

ಕಿರುಸುದ್ದಿ

ಶಿವಾನುಭವ ಸಂಪದ ಕಾರ್ಯಕ್ರಮ



ಕುರುಗೋಡು: ಶಿವಾನುಭವ ಎಂದರೆ ಮಾನಸಿಕ ಸಂತೃಪ್ತಿ ನೀಡುವುದಾಗಿದೆ. ನಮ್ಮ ಮನದ ಮೈಲಿಗೆ ತೊಳೆಯಲು ಈ ಶಿವಾನುಭವ ಬೇಕೇ ಬೇಕು ಎಂದು ಕೊಟ್ಟೂರು ಶಾಖಾ ಮಠದ ನಿರಂಜನ ಪ್ರಭುಸ್ವಾಮೀಜಿ ತಿಳಿಸಿದರು.

ಪಟ್ಟಣದ ಕೊಟ್ಟೂರು ಸ್ವಾಮಿ ಮಠದಲ್ಲಿ ಶಿವಾನುಭವ ಸಂಪದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಶಿವಾನುಭವ ಮನಸ್ಸೆಂಬ ಬಟ್ಟೆ ತೊಳೆದು ಹೊಳೆವಂತೆ ಮಾಡುತ್ತದೆ ಎಂದು ತಿಳಿಸಿದರು. ಯಾರ ಹೃದಯದ ಅಂತರಂಗ ಸ್ವಚ್ಛವಾಗಿ ಇರುತ್ತದೆಯೋ, ಅಲ್ಲಿ ಶಿವ ವಾಸಿಸುತ್ತಾನೆ. ಹೃದಯವನ್ನು ಶುದ್ಧಿ ಮಾಡುವುದೇ ಈ ಶಿವಾನುಭವದ ಪರಮ ಉದ್ದೇಶ. ಇಂದು ನಾವು ಕುಟುಂಬಗಳಿಗೆ ಭಗವಂತನಿಗೆ ಅರ್ಪಿಸುವ ಶುದ್ಧ ಭಕ್ತಿ ದೊರೆಯುವ ದೃಢಸಂಕಲ್ಪ ಮಾಡೋಣ ಎಂದರು.

ವಿವಿಧ ತಾಲೂಕಿನ ಮಠಾಧೀಶರು ಪಟ್ಟಣ ಠಾಣೆ ಸಿಪಿಐ ಬಾಳನಗೌಡ ಮಾನಶೆಟ್ಟಿ ಹಾಗೂ ಮಠದ ಭಕ್ತರು ಇದ್ದರು.

100 ಹಾಸಿಗೆಗಳ ಇಎಸ್‌ಐ ಆಸ್ಪತ್ರೆಗೆ ಭೂಮಿಪೂಜೆ ಇಂದು

ಬಳ್ಳಾರಿ: ಸುಸಜ್ಜಿತ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ನಗರದ ಬೆಳಗಲ್ಲು ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗಲಿರುವ 100 ಹಾಸಿಗೆಗಳ ಇಎಸ್‌ಐ ಆಸ್ಪತ್ರೆಯ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಸಮಾರಂಭ ಮೇ 3ರಂದು ಬೆ.10.30ಕ್ಕೆ ವರ್ಚುವಲ್ ಮೂಲಕ ನಡೆಯಲಿದೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ, ಕ್ರೀಡೆ ಹಾಗೂ ಯುವಜನ ವ್ಯವಹಾರಗಳ ಸಚಿವ ಡಾ.ಮನ್ಸುಖ್ ಮಾಂಡವಿಯಾ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಆಸ್ಪತ್ರೆಗೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ: ಅಭ್ಯರ್ಥಿಗಳು ಆಯ್ಕೆ

ಹೂವಿನಹಡಗಲಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಚುನಾವಣೆ ಶುಕ್ರವಾರ ಪಟ್ಟಣದ ಸೊಪ್ಪಿನ ಕಾಳಮ್ಮ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಜರುಗಿತು.

2026–27ನೇ ಸಾಲಿನ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿಣಿ ಸಮಿತಿಗೆ 10 ಜನ ಶಿಕ್ಷಕರು ಆಯ್ಕೆ ಆಗಿದ್ದಾರೆ ಎಂದು ಮುಖ್ಯ ಚುನಾವಣಾಧಿಕಾರಿ ಎ.ಕೋಟೆಪ್ಪ ತಿಳಿಸಿದ್ದಾರೆ.

ಆಯ್ಕೆ ಆದವರು ವಿ.ಬಿ.ಜಗದೀಶ್ (297), ಉತ್ತಂಗಿ ಆನಂದ (270), ಜಿ.ಜಗದೀಶ (215), ಮೈಲಾರ ಕೋಟೆಪ್ಪ (208), ರೇಣುಕಾ ವೈ (188), ಚಂದ್ರಪ್ಪ ತಳವಾರ (182), ಮುಕ್ತಿಯಾರ್ ಅಹಮದ್ (176) ಮತಗಳನ್ನು ಪಡೆದಿದ್ದಾರೆ.

ಮಹಿಳಾ ಮೀಸಲಾತಿ ವಿಜೇತರು : ಎನ್.ಡಿ.ರೇಖಾ (273), ಅಂಜಿನಮ್ಮ ಎಚ್. (241), ಗೀತಾ ಪಾಟೀಲ (212) ಮತಗಳನ್ನು ಪಡೆದಿದ್ದಾರೆ.

ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ ಮುಖ್ಯ ಗುರುಗಳಾದ ಪಾಂಡ್ಯನಾಯ್ಕ್, ಇಸಿಓ ಮಿಟ್ಯಾನಾಯ್ಕ್, ಬಿಆರ್‌ಪಿ ಸಚಿನ್ ಆರಾಧ್ಯ ರಾಮಪ್ಪ ಕೋಟಿಹಾಳ ಇತರರು ಶಾಂತಿಯುತವಾಗಿ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು.

ಜು.11ರಂದು ರಾಷ್ಟ್ರೀಯ ಲೋಕ ಅದಾಲತ್

ವಿಜಯನಗರ: ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಜು.11ರಂದು ಬೆಳಿಗ್ಗೆ 10 ಗಂಟೆಯಿಂದ 5ರವರೆಗೆ ನ್ಯಾಯಲಯ ಆವರಣದಲ್ಲಿ 'ರಾಷ್ಟ್ರೀಯ ಲೋಕ ಅದಾಲತ್' ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರುತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದಅಪರಾಧಿಕ ಪ್ರಕರಣ, ಚೆಕ್‌ಅಮಾನ್ಯ, ಬ್ಯಾಂಕ್ ಪ್ರಕರಣ, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣ, ವೈವಾಹಿಕ ಅಥವಾಕೌಟುಂಬಿಕ, ಸಿವಿಲ್ ಹಾಗೂ ಇತರೆರಾಜಿಯಾಗಬಹುದಾದ ಪ್ರಕರಣಗಳನ್ನು ಲೋಕ್‌ಅದಾಲತ್ ಮೂಲಕ ಇತ್ಯರ್ಥಗೊಳಿಸಿಕೊಂಡು ಪರಿಹಾರ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರುಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದುತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಗರಿಬೊಮ್ಮನಹಳ್ಳಿ: ವಿಶ್ವಗುರು ಅಣ್ಣ ಬಸವಣ್ಣ ಹಾಗೂ ಡಾ.ಬಿ.ಆರ್.ಅಂಬೇಡ್ಕರ ಅವರ ಜಯಂತಿ ಅಂಗವಾಗಿ ಜಾತಿ ತಾರತಮ್ಯ ಅಸ್ಪೃಶ್ಯಾಚರಣೆ ಲಿಂಗ ತಾರತಮ್ಯ ಸಾಮಾಜಿಕ ಅಸಮಾನತೆ ವಿರೋಧಿಸಿ ಅಂಬೇಡ್ಕರ್ ವೃತ್ತದಲ್ಲಿ ದೇವದಾಸಿ ವಿಮೋಚನಾ ಸಂಘ, ಮಸಣ ಕಾರ್ಮಿಕ ಸಂಘ ದಲಿತ ಪರ ಸಂಘಗಳಿಂದ ಶವಯಾತ್ರೆ, ಸಮಾವೇಶ ಪ್ರತಿಕೃತಿ ದಹನ ಮಾಡಲಾಯಿತು.

ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ

ಕುರುಗೋಡು: ಜಿಲ್ಲಾಡಳಿತ ಜಿಲ್ಲಾ ಮತ್ತು ತಾಲೂಕು ಹಾಗೂ ಗ್ರಾಪಂ ಸಹಯೋಗದಲ್ಲಿ ಸಮೀಪದ ನೆಲ್ಲುಡಿ ಗ್ರಾಮದ ಅರಿವು ಕೇಂದ್ರದಲ್ಲಿ 15 ದಿನಗಳ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಕಾರ್ಯಕ್ರಮ ನಡೆಯಿತು.

ಈ ವೇಳೆ ನೆಲ್ಲುಡಿ ಗ್ರಾಪಂ ಪಿಡಿಒ ಅಪರಂಜಿ ಮಾತನಾಡಿ, ಮಕ್ಕಳಲ್ಲಿರುವ ಕೌಶಲ್ಯವನ್ನು ಹೊರತರಲು ಬೇಸಿಗೆ ಶಿಬಿರ ಸಹಾಯಕವಾಗಿದೆ ಅಲ್ಲದೆ ಸಮಯದ ಸದುಪಯೋಗಕ್ಕೆ ಉಪಯುಕ್ತ ವಾಗಿದ್ದು, ಮಕ್ಕಳಿಗೆ ಪ್ರಮಾಣಪತ್ರ ವಿತರಸಲಾಯಿತು.

ಬಳಿಕ ಮಾತನಾಡಿದ ಅವರು, ಮಕ್ಕಳಲ್ಲಿ ಓದುವ ಹವ್ಯಾಸ ರೂಢಿಸುವುದು, ನೈತಿಕ, ನಾಯಕತ್ವ ವಿಷಯ, ಅಂಕಿ-ಸಂಖ್ಯೆ, ವಿಜ್ಞಾನ ವಿಷಯ, ಕಾರ್ಯಯೋಜನೆ ರೂಪಿಸುವುದು, ಕೌಶಲ ಅಭಿವೃದ್ಧಿಪಡಿಸಿಕೊಳ್ಳುವುದನ್ನು ಶಿಬಿರದಲ್ಲಿ ಹೇಳಿಕೊಡಲಾಗುತ್ತದೆ. ವಿಜ್ಞಾನ, ಗಣಿತ ಚಟುವಟಿಕೆ ನಡೆಸಲು ಸ್ಥಳೀಯ ಶಿಕ್ಷಕರು, ಸ್ವಯಂಪ್ರೇರಿತ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳಲಾಗುವುದು. ಗ್ರಂಥಾಲಯದ ಪರಿಚಯ ಮಾಡಿಸುವುದು, ಎಲ್ಲರಿಂದಲೂ ಗಟ್ಟಿ ಓದು, ಬರೆಯುವ ಸಾಮರ್ಥ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹೆಚ್ಚಿಸುವ ಚಟುವಟಿಕೆ ಕೈಗೊಳ್ಳಬೇಕು ಎಂದು ಹೇಳಿದರು.ನಂತರ ತಾಲೂಕಿನ ಹಿರಿಯ ಗ್ರಂಥಪಾಲಕ ಎಚ್.ಅಮರೇಶ ಗೌಡ ಮಾತನಾಡಿ, ಮಕ್ಕಳು ಓದುವ ಹವ್ಯಾಸ ಕ್ರಿಯಾಶೀಲತೆ ಉತ್ತೇಜಿಸಿ ವ್ಯಕ್ತಿತ್ವ ರೂಪಿಸಲು ಗ್ರಾಪಂ ಮಟ್ಟದಲ್ಲಿ ಬೇಸಿಗೆ ಶಿಬಿರ ಆಯೋಜಿಸಲು ಮುಂದಾಗಿದ್ದೇವೆ ಎಂದರು. ಕಾರ್ಯದರ್ಶಿ ಮನೋಜ್‌ಕುಮಾರ್, ಗ್ರಂಥಪಾಲಕ ಅಂಬರೀಶ್ ಗೌಡ ಸ್ವಯಂಸೇವಕ ಸಿದ್ದನಗೌಡ, ಶಾಲೆಯ ಮುಖ್ಯಗುರು ಚಂದ್ರಶೇಖರ್ ಇತರರಿದ್ದರು.



ಕುರುಗೋಡು: ಜಿಲ್ಲಾಡಳಿತ ಜಿಲ್ಲಾ ಮತ್ತು ತಾಲೂಕು ಹಾಗೂ ಗ್ರಾಪಂ ಸಹಯೋಗದಲ್ಲಿ ಸಮೀಪದ ನೆಲ್ಲುಡಿ ಗ್ರಾಮದ ಅರಿವು ಕೇಂದ್ರದಲ್ಲಿ 15 ದಿನಗಳ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಕಾರ್ಯಕ್ರಮ ನಡೆಯಿತು. ನೆಲ್ಲುಡಿ ಗ್ರಾಪಂ ಪಿಡಿಒ ಅಪರಂಜಿ, ತಾಲೂಕಿನ ಹಿರಿಯ ಗ್ರಂಥಪಾಲಕ ಎಚ್.ಅಮರೇಶ ಗೌಡ, ಕಾರ್ಯದರ್ಶಿ ಮನೋಜ್‌ಕುಮಾರ್, ಗ್ರಂಥಪಾಲಕ ಅಂಬರೀಶ್ ಗೌಡ ಸ್ವಯಂಸೇವಕ ಸಿದ್ದನಗೌಡ, ಶಾಲೆಯ ಮುಖ್ಯಗುರು ಚಂದ್ರಶೇಖರ್ ಇತರರಿದ್ದರು.

ಬಿಎಸ್‌ವೈ ಅಭಿಮಾನೋತ್ಸವ | ಸಂಜೀವ್ ರೆಡ್ಡಿ ಹೇಳಿಕೆ

50 ಸಾವಿರ ಜನ ಭಾಗಿ ನಿರೀಕ್ಷೆ

ಹಗರಿಬೊಮ್ಮನಹಳ್ಳಿ: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ರಾಜ್ಯಾದ್ಯಂತ ಸ.ಸು.10 ಲಕ್ಷ ಜನ ಸೇರುವ ನಿರೀಕ್ಷೆ ಇದೆ ವಿಜಯನಗರ ಜಿಲ್ಲೆಯಿಂದ ಸ.ಸು.50 ಸಾವಿರ ಜನರು ಬರಲಿದ್ದಾರೆ ಎಂದು ವಿಜಯನಗರ ಜಿಲ್ಲೆಯ ಬಿಜೆಪಿ ಪಕ್ಷದ ಅಧ್ಯಕ್ಷ ಸಂಜೀವ್ ರೆಡ್ಡಿ ತಿಳಿಸಿದರು.

ಶನಿವಾರ ಬಿಜೆಪಿ ಪಕ್ಷದ ಕಚೇರಿಯಲ್ಲಿ ಕರೆಯ ಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಾವುಟ ಕಟ್ಟಲಿಕ್ಕೂ ಭಯ ಪಡುವಂತಹ ದಿನಮಾನಗಳಲ್ಲಿ ಬಿಜೆಪಿ ಪಕ್ಷವನ್ನು ಕಟ್ಟಲಿಕ್ಕಾಗಿ ರಾಜ್ಯಾದ್ಯಂತ ಸಂಚರಿಸಿ ಬಿಜೆಪಿ ಪಕ್ಷದ ಬೇರು ಮಟ್ಟದಲ್ಲಿ ಕಟ್ಟಿ ಬೆಳೆಸಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಅವರ ಅಧಿಕಾರ ಅವಧಿಯಲ್ಲಿ ಎಲ್ಲಾ ವರ್ಗದ ಜನರ ಏಳಿಗಾಗಿ ಶ್ರಮಿಸಿದರು. ಜನಪರ ರೈತಪರ ಹಲವು ಯೋಜನೆ ಜಾರಿಗೆತಂದರು. ಮಹಿಳೆಯರ ಶಿಕ್ಷಣವನ್ನು ಪ್ರೋತ್ಸಾಹಿಸಲುಉಚಿತಸೈಕಲ್‌ಜೊತೆಗೆಭಾಗ್ಯಲಕ್ಷ್ಮೀ ಬಾಂಡ್ ವಿತರಿಸುವ, ಮಠ, ಮಾನ್ಯಗಳನ್ನು ಅಭಿವೃದ್ಧಿ ಪಡಿಸಿದ ಇನ್ನಿತರ ಜನಪ್ರಿಯ ಯೋಜನೆಗಳ ಮೂಲಕ ಸಾರ್ಥಕ ಸೇವೆ ಮಾಡಿದ ಯಡಿಯೂರಪ್ಪ ಅವರಿಗೆ ಅವರ ಅಸಂಖ್ಯಾತ ಅಭಿಮಾನಿಗಳು ಬೆಂಬಲಿಗರು ಪಕ್ಷದ ಕಾರ್ಯಕರ್ತರು ಗೌರವ ಸಲ್ಲಿಸುವ ಈ ಕಾರ್ಯಕ್ರಮ ಪಕ್ಷಕ್ಕೆ ಶಕ್ತಿ ತುಂಬುವ ಕಾರ್ಯಕರ್ತರಿಗೆ ಸ್ಫೂರ್ತಿ ನೀಡುವ ಕಾರ್ಯಕ್ರಮ ಇದಾಗಿದ್ದು, ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಮಠಾಧೀಶರು, ಪಕ್ಷದ ಹಿರಿಯರು ಪಾಲ್ಗೊಳ್ಳುತ್ತಿದ್ದು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ತಿಳಿಸಿದರು.

ಪುರಸಭೆ ಅಧ್ಯಕ್ಷರ ಚುನಾವಣೆಯಲ್ಲಿ ಗೈರಾದ ಪಕ್ಷದ ಸದಸ್ಯರಿಗೆ ನೋಟಿಸ್ ನೀಡಲಾಗುವುದು. ಅವರ ಪ್ರತಿಕ್ರಿಯೆಯ ಬಳಿಕ ಕ್ರಮ ವಹಿಸಲಾಗುತ್ತದೆ ಎಂದರು.



> ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಯಡಿಯೂರಪ್ಪನವರ ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವರಾದ ಅಮಿತ್ ಷಾ ಆಗಮಿಸುತ್ತಿದ್ದು, ಕ್ಷೇತ್ರ ವ್ಯಾಪ್ತಿಯಲ್ಲಿ 15 ಸಾವಿರಕ್ಕೂ ಹೆಚ್ಚು ಜನರು ಬರುವ ನಿರೀಕ್ಷೆ ಇದ್ದು, ಇದಕ್ಕಾಗಿ ಪ್ರತಿ ಹಳ್ಳಿ ಹಳ್ಳಿಗೂ ವಾಹನ ಸೌಲಭ್ಯ ಕಲ್ಪಿಸಲಾಗುತ್ತದೆ. ಪಕ್ಷದ ಮುಖಂಡರು ಕಾರ್ಯಕರ್ತರು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.
>
> ■ ಬಲ್ಲಾಹುಣಸಿ ರಾಮಣ್ಣ, ಬಿಜೆಪಿ ಪಕ್ಷದ ಪರಾಜಿತ ಅಭ್ಯರ್ಥಿ

ಬಿಜೆಪಿ ಪಕ್ಷದ ಪರಾಜಿತ ಅಭ್ಯರ್ಥಿ ಬಲ್ಲಾ ಹುಣಸಿ ರಾಮಣ್ಣ ಮಾತನಾಡಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಪಕ್ಷಕ್ಕಾಗಿ ಹಗಲಿರುಳು ಸಲ್ಲಿಸಿದ ಸೇವೆ ಪಕ್ಷ ಕಟ್ಟಿ ಬೆಳೆಸಿದ ಪರಿ ಅವರ ಅವಧಿಯಲ್ಲಿ ತಂದ ಜನಪರ ಯೋಜನೆಗಳ ಸಾರ್ಥಕತೆಗೆ ಸಾರ್ವಜನಿಕ ಜೀವನಕ್ಕೆ ಬಂದು 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ನಡೆಯುವ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಸಮರ್ಪಣಾ ಮನೋಭಾವದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅವರಿಗೆ ಗೌರವ ಸಲ್ಲಿಸುವ ಕಾರ್ಯವನ್ನು ಮಾಡೋಣ ಎಂದರು.

ಮಂಡಲ ಅಧ್ಯಕ್ಷ ಬೆಣಕಲ್ ಪ್ರಕಾಶ್, ನಗರ ಘಟಕದ ಅಧ್ಯಕ್ಷ ಮಂಜುನಾಥ್ ಹಿರೇಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕನಕಪ್ಪ, ಪುರಸಭೆ ಸದಸ್ಯರಾದ ಬಣಕಾರ ಸುರೇಶ್, ನಾಗರಾಜು ಜನ್ನು, ನವೀನ್ ಕುಮಾರ್, ಮುಖಂಡರಾದ ರವೀಂದ್ರ ಗೌಡ ಸಂದೀಪ್ ಶಿವಮೊಗ್ಗ ವೀರಯ್ಯಸ್ವಾಮಿ, ದಿವಾಕರ,ಗಜಾಪುರದ ಮಂಜುನಾಥ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಕ್ಷೇತ್ರದ ಅಭಿವೃದ್ಧಿಗೆ ಸದಾ ಶ್ರಮಿಸುವೆ: ಶಾಸಕ

ಕೊಟ್ಟೂರು: ಹಗರಿಬೊಮ್ಮನಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಕೊಟ್ಟೂರು ತಾಲೂಕಿನ ಪ್ರತಿಯೊಂದು ಹಳ್ಳಿಗಳ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಹೇಳಿದರು.

ಕೊಟ್ಟೂರು ತಾಲೂಕಿನ ವಿವಿಧ ಗ್ರಾಪಂಗಳು ವ್ಯಾಪ್ತಿಯಲ್ಲಿ ಬರುವ ಅನೇಕ ಗ್ರಾಮಗಳಲ್ಲಿ ಮಂಜೂರಾಗಿರುವ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪಂಚಾಯತ್ ರಾಜ್, ಎಂಜಿನಿಯರಿಂಗ್ ಇಲಾಖೆ ವಿಜಯನಗರ ಜಿಲ್ಲೆ ಹಾಗೂ ಉಪ ವಿಭಾಗ ಹಗರಿಬೊಮ್ಮನಹಳ್ಳಿ ಇವರ ಸಹಯೋಗದೊಂದಿಗೆ ಹಗರಿಬೊಣಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು ತಾಲೂಕು ಸ.ಹಿ.ಪ್ರಾ.ಶಾಲೆ ಕುಡಿತಿನಮಗ್ಗಿ ಶಾಲೆಯ ಸಂಪರ್ಕ ರಸ್ತೆ ಮತ್ತು ಕಾಂಪೌಂಡ್ ಆವರಣದಲ್ಲಿ ಸಿ.ಸಿ. ಹಾಕುವ ಕಾರ್ಯಕ್ರಮವನ್ನು ಕೆ.ನೇಮಿರಾಜ ನಾಯ್ಕ ಅವರು ಭೂಮಿಪೂಜೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಿಸಿಆರ್ ಇನ್ಫ್ರಾಡೆವಲಪರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಗರಿಬೊಮ್ಮನಹಳ್ಳಿ, ಗುತ್ತಿಗೆದಾರರು ಈ ಕಾಮಗಾರಿಯ ಯೋಜನೆಯನ್ನು ಕೈಗೊಂಡಿದ್ದು ಯೋಜನೆಯ ಅಂದಾಜು ಮೊತ್ತ 22ರಿಂದ 80 ಲಕ್ಷಗಳಾಗಿದ್ದು ಶಾಲೆಯ ರಸ್ತೆ ಮತ್ತು ಕಾಂಪೌಂಡ್ ಆವರಣದಲ್ಲಿ ಸಿಸಿ ಹಾಕುವ ಕಾಮಗಾರಿಗೆ ವಿನಿಯೋಗಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗ್ರಾಮವನ್ನು ಸಂಚರಿಸಿ ಬಸವೇಶ್ವರ ದೇವಸ್ಥಾನದ ಅಭಿವೃದ್ಧಿಗೆ 4.50,000 ರೂ , ದುರ್ಗಮ್ಮ ದೇವಸ್ಥಾನದ ಹಿಂಭಾಗದಲ್ಲಿನ ಚರಂಡಿ ವ್ಯವಸ್ಥೆ, ಅಂಬೇಡ್ಕರ್ ಕಾಲೋನಿಯಲ್ಲಿ ಹೈಮಾಸ್ಟ್ ಲೈಟನ್ನು ಜೂನ್, ಜುಲೈ ತಿಂಗಳಲ್ಲಿ ಖಚಿತವಾಗಿ ಮಂಜೂರು ಮಾಡಲಾಗುತ್ತದೆ ಎಂದು ಮಾತನಾಡಿದರು.

ಎಸ್‌ಎನ್ ಅಧ್ಯಕ್ಷರಾದ ಪಿ.ದೇವೇಂದ್ರಪ್ಪ, ಹಿ.ಪ್ರಾ.ಶಾಲೆ ಕುಡಿತಿನ ಮಗ್ಗಿ ಶಾಲೆಯ ಸಿಬ್ಬಂದಿ ಎಚ್.ಎನ್.ಲಕ್ಷ್ಮೀ, ಕೆ.ಎಂ. ಬಸಯ್ಯ, ವಿ.ಕೊಟ್ರೇಶಪ್ಪ ಹಾಗೂ ಊರಿನ ಗಣ್ಯರು, ರೈತ ಬಾಂಧವರು, ಯುವಕರು ಉಪಸ್ಥಿತರಿದ್ದರು.



ಪರಿಸರ ಜಾಗೃತಿ ಮ್ಯಾರಥಾನ್ ಓಟಕ್ಕೆ ಚಾಲನೆ

ಹೂವಿನಹಡಗಲಿ: ಪಟ್ಟಣದ ಜೆಸಿಐ ರಾಯಲ್ ಹಡಗಲಿ ಹಾಗೂ ಸ್ಪೀಡ್ ಸ್ಕೇಟರ್ಸ್ ಅವರ ಸಹಯೋಗದಲ್ಲಿ ಪರಿಸರ ಜಾಗೃತಿ ಮ್ಯಾರಥಾನ್ ಓಟವನ್ನು ಗುರುವಾರ ಬೆಳಗ್ಗೆ ಆಯೋಜಿಸಲಾಗಿತ್ತು. ಹರಪನಹಳ್ಳಿ ರಸ್ತೆಯಿಂದ ಹನಕನಹಳ್ಳಿ ವರೆಗೆ ಸುಮಾರು ಐದು ಕಿಲೋಮೀಟರ್ ದೂರ ಮ್ಯಾರಥಾನ್ ಓಟ ನಡೆಯಿತು.


ಮಕ್ಕಳು ಸ್ಕೇಟಿಂಗ್ ಮೂಲಕ ಓಟದಲ್ಲಿ ಭಾಗವಹಿಸಿ ಪರಿಸರ ಉಳಿಸಿ, ಭವಿಷ್ಯ ಉಳಿಸಿ ಮರಗಳನ್ನು ನೆಡಿ, ಜೀವವನ್ನು ಬೆಳೆಸಿ ಎಂಬ ಘೋಷಣೆಗಳನ್ನು ಕೂಗುತ್ತಾ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಈ ಮ್ಯಾರಥಾನ್ ಓಟವು ಪರಿಸರ ಸಂರಕ್ಷಣೆಯ ಮಹತ್ವವನ್ನು ಜನರಿಗೆ ಮನವರಿಕೆ ಮಾಡುವಲ್ಲಿ ವಿಶೇಷ ಗಮನ ಸೆಳೆಯಿತು.

ಮ್ಯಾರಥಾನ್‌ಗೆ ಹಿತೇಶ್ ಕುಮಾರ್ ಚವ್ಹಾಣ ಚಾಲನೆ ನೀಡಿ ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಜೆಸಿಐ ರಾಯಲ್‌ನ ಪೂರ್ವ ಅಧ್ಯಕ್ಷ ಎಸ್. ದ್ವಾರಕೇಶ್ ರೆಡ್ಡಿ ಮಾತನಾಡಿ, ಪರಿಸರಹಾನಿಯ ಪರಿಣಾಮಗಳು ದಿನೇ ದಿನೇ ಹೆಚ್ಚುತ್ತಿದ್ದು, ಇಂತಹ ಕಾರ್ಯಕ್ರಮಗಳು ಜನರಲ್ಲಿ ಜಾಗೃತಿ ಮೂಡಿಸಲು ಸಹಕಾರಿಯಾಗುತ್ತವೆ.ನಾವು ಪ್ರತಿದಿನ ಮಾಡುವ ಸಣ್ಣ ಸಣ್ಣ ಕೆಲಸಗಳು ಪರಿಸರದ ಮೇಲೆ ದೊಡ್ಡ ಪರಿಣಾಮ ಬೀರುತ್ತವೆ. ಮರಗಳನ್ನು ಕಡಿಸುವ ಬದಲು ನೆಡುವುದು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ನೀರನ್ನು ವ್ಯರ್ಥ ಮಾಡದೇ ಉಳಿಸುವುದು, ಕಸವನ್ನು ಸರಿಯಾಗಿ ವಿಂಗಡಿಸಿ ತ್ಯಜಿಸುವುದು ಪರಿಸರ ರಕ್ಷಣೆಗೆ ನೆರವಾಗುವ ಸರಳ ಮಾರ್ಗಗಳು.

ವೈದ್ಯರಾದ ಡಾ. ಉಮೇಶ್ ಜೆ.ಡಿ. ಮಾತನಾಡಿ, ಮಕ್ಕಳಲ್ಲಿ ಪರಿಸರದ ಬಗ್ಗೆ ಪ್ರೀತಿ ಮತ್ತು ಕಾಳಜಿ ಬೆಳೆಸುವುದು ಅತ್ಯಂತ ಮುಖ್ಯವಾಗಿದೆ. ಚಿಕ್ಕವಯಸ್ಸಿನಿಂದಲೇಪರಿಸರ ಸಂರಕ್ಷಣೆಯ ಅಭ್ಯಾಸ ಬೆಳೆಸಿದರೆ ಮುಂದಿನ ಪೀಳಿಗೆ ಆರೋಗ್ಯಕರ ಸ್ವಚ್ಛ ಪರಿಸರದಲ್ಲಿ ಬದುಕಲು ಸಾಧ್ಯವಾಗುತ್ತದೆ ಎಂದರು.

ಜೆಸಿಐನ ಕೋಡಿಹಳ್ಳಿ ವಿನಾಯಕ, ಸಂತೋಷ ಕೊಟಗಿ, ವಿನಾಯಕ ಹೆಚ್.ಕೆ., ರಫೀನಾ ಬೇಗಂ ಬಿ.ಹೆಚ್., ವೈದ್ಯರಾದ ಆನಂದ, ಶಿಕ್ಷಕರಾದ ಕೊಟ್ರೇಶ್, ತರಬೇತುದಾರ ವಿಮಲ್ ಜೈನ್, ಪತ್ರಕರ್ತ ದಯಾನಂದ ಎಂ, ಸೇರಿದಂತೆ ಸ್ಥಳೀಯ ಗಣ್ಯರು, ಜೆಸಿಐ ಸದಸ್ಯರು, ಪೋಷಕರು, ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮುಂದುವರಿದ ಅಕ್ರಮ ಜಮೀನು ತೆರವು ಕಾರ್ಯಾಚರಣೆ

ಬಳ್ಳಾರಿ: ಜಿಲ್ಲಾಡಳಿತದಿಂದ ಸರ್ಕಾರದ ಜಾಗ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿದಿದ್ದು, ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು 15.5 ಎಕರೆ ಜಮೀನನ್ನು ಜಿಲ್ಲಾಡಳಿತ ಶನಿವಾರ ಸ್ವಾಧೀನಕ್ಕೆ ಪಡೆದುಕೊಂಡಿದೆ.

ಈಗಾಗಲೇ ಸರ್ಕಾರದ ಜಾಗ ಎಂದು ಗುರುತಿಸಲಾಗಿದ್ದ ಬಳ್ಳಾರಿ ಗ್ರಾಮಾಂತರ ವ್ಯಾಪ್ತಿಯ ಸರ್ವೆ ನಂ.977ರ 9.20 ಎಕರೆ, ಸರ್ವೆ ನಂ.976ರ 4.72 ಎಕರೆ ಮತ್ತು ಸರ್ವೆ ನಂ.813ರ 1.13 ಎಕರೆ ಸೇರಿದಂತೆ ಒಟ್ಟು 15.05 ಎಕರೆ ಜಮೀನುಗಳನ್ನು ಶನಿವಾರ ಸ್ವಾಧೀನಕ್ಕೆ ಪಡೆದಿದೆ.

ಬಹುತೇಕ ಪ್ರಭಾವಿಗಳು ಸರ್ಕಾರದ ಜಮೀನನ್ನು ಅಕ್ರಮವಾಗಿ ಜಮೀನನ್ನು, ಖಾಲಿ ನಿವೇಶನಗಳನ್ನು ಅತಿಕ್ರಮಿಸಿದ್ದರು. ಅದನ್ನು ಗುರುತಿಸಿ, ಯಾರ ಮುಲಾಜಿಲ್ಲದೇ ತೆರವು ಕಾರ್ಯಾಚರಣೆಗೆ ಜಿಲ್ಲಾಡಳಿತ ಮುಂದಾಗಿದೆ. ಬಹುತೇಕ ಎಲ್ಲ ಕಡೆಗಳಲ್ಲೂ ಸರ್ಕಾರಿ ಸ್ಥಳದಲ್ಲಿ ಸರ್ಕಾರಿ ಜಮೀನು ಎಂದು ನಾಮಫಲಕ ಅಳವಡಿಸಿದ್ದರೂ, ಪ್ರಭಾವಿಗಳು ಯಾರ ಭಯವೂ ಇಲ್ಲದೇ ಜಮೀನು ಸೇರಿದಂತೆ ವಿವಿಧ ಸ್ಥಳಗಳನ್ನು ವಶಕ್ಕೆ ಪಡೆದಿದ್ದರು. ಅನೇಕ ಬಾರಿ ನೋಟಿಸ್ ನೀಡಿ ಎಚ್ಚರಿಸಿದ್ದರೂ ಕ್ಯಾರೇ ಎಂದಿರಲಿಲ್ಲ ಎಡಿಸಿ ಮಹಮ್ಮದ್ ಝುಬೇರ್ ಎನ್., ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ಬಳ್ಳಾರಿ ತಾಲೂಕು ತಹಶೀಲ್ದಾರ್ ಟಿ.ರೇಖಾ ಅವರ ನೇತೃತ್ವದ ಅಧಿಕಾರಿಗಳ ತಂಡ ಪೊಲೀಸರ ನೆರವಿನೊಂದಿಗೆ ತೆರವುಗೊಳಿಸಿ ವಶಕ್ಕೆ ಪಡೆದಿದೆ.



ತಾಲೂಕು ಶಿಕ್ಷಕರ ಸಂಘದ ಚುನಾವಣೆ: ಸದಸ್ಯರ ಆಯ್ಕೆ

ವಿಜಯನಗರ: ಹೊಸಪೇಟೆ ತಾಲೂಕು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಕಡ್ಲಿ ವೀರಭದ್ರೇಶ್, ಮಾರ್ಗದಪ್ಪ, ಬಸವರಾಜ್ ಕೆ., ಗುರುಬಸವರಾಜ್ ಸೇರಿದಂತೆ ಮತ್ತಿತರರು ಮರು ಆಯ್ಕೆಯಾಗಿದ್ದಾರೆ.



ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಡ್ಲಿ ವೀರಭದ್ರೇಶ(311), ಮಾರ್ಗದಪ್ಪ ಕೆ.(289), ಬಸವರಾಜ್ ಕೆ.(280), ಗುರುಬಸವರಾಜ್ ಎಚ್.ಎಂ.(270), ಜಾಕೀರ್ ಹುಸೇನ್.(252), ಬಿ.ಕೆ ಹೇಮರೆಡ್ಡಿ.(242), ಕೆ.ಕುಮಾರಸ್ವಾಮಿ (240), ಟಿ.ವಿಶ್ವನಾಥ್ (236) ಹಾಗೂ ಮಹಿಳಾ ಮೀಸಲು ಕ್ಷೇತ್ರದಿಂದ ಕಣಕ್ಕಿಳಿದಿದ್ದ ರೇಷ್ಮಾ ಕೆ.(341), ರೂಪಾ ಡಿ.ಟಿಕಾರೆ(307), ಉಷಾರಾಣಿ ತೆಗ್ಗಿನಮಠದ(285), ಎಲ್. ವಿಜಯಕುಮಾರಿ ಅವರು 213 ಮತಗಳೊಂದಿಗೆ ಜಯಭೇರಿ ಬಾರಿಸಿದ್ದಾರೆ.

ಚುನಾವಣೆಯಲ್ಲಿ ಒಟ್ಟು 12 ಸ್ಥಾನಕ್ಕೆ 21 ಜನರು ಸ್ಪರ್ಧೆ ಮಾಡಿದ್ದರು. ಹೊಸಪೇಟೆಯ ಪಿಬಿಎಸ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶುಕ್ರವಾರ ಬೆಳಗ್ಗೆ 8.30 ರಿಂದ ಸಂಜೆ 4 ಗಂಟೆ ವರೆಗೆ ದಿನವಿಡೀ ಮತದಾನ ನಡೆಯಿತು. ಒಟ್ಟು 609 ಮತದಾರರ ಪೈಕಿ 502 ಜನ ಶಿಕ್ಷಕರು ಉತ್ಸಾಹದಿಂದ ಬಂದು ತಮ್ಮ ಹಕ್ಕು ಚಲಾಯಿಸಿದ್ದರು. ಮತದಾನದ ಬಳಿಕ ಸಂಜೆ ಎಣಿಕೆ ಕಾರ್ಯ ನಡೆಯಿತು.

ಬುದ್ಧನ ಆದರ್ಶ ಪಾಲನೆಯಿಂದ ವಿಶ್ವಶಾಂತಿ ಸಾಧ್ಯ

ವಿಜಯನಗರ: ಜಗತ್ತಿಗೆ ಶಾಂತಿ ಅಹಿಂಸೆ ಮತ್ತು ಕರುಣೆಯ ಸಂದೇಶ ಸಾರಿದ ಬುದ್ಧರ ಆದರ್ಶಗಳನ್ನು ನಮ್ಮ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಾಂತಿ ಸನ್ಮಾರ್ಗದಲ್ಲಿ ನಡೆದಾಗ ಮಾತ್ರ ವಿಶ್ವಶಾಂತಿ ಸಾಧ್ಯ ಎಂದು ಎಡಿಸಿ ಇ.ಬಾಲಕೃಷ್ಣ ಬಣ್ಣಿಸಿದರು.

ನಗರದ ಜಿಪಂ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ಶ್ರೀಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಬುದ್ಧನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.



ಬುದ್ಧರ ವಿಚಾರಗಳು ಇಂದಿನ ಜಾಗತಿಕ ಸಂಘರ್ಷಗಳು ದೇಶದ ಆಂತರಿಕಭಿನ್ನಾಭಿಪ್ರಾಯಗಳುಮತ್ತು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಅತ್ಯಂತ ಪ್ರಸ್ತುತವಾಗಿವೆ. ರಾಜವಂಶದಲ್ಲಿ ಹುಟ್ಟಿ, ಸಕಲ ಸುಖ–ಸೌಲಭ್ಯಗಳಿದ್ದರೂ ಸಿದ್ಧಾರ್ಥನು ಅವೆಲ್ಲವನ್ನೂ ತ್ಯಜಿಸಿ ಬುದ್ಧನಾದದ್ದು ಸಮಾಜದ ಪರಿವರ್ತನೆಗಾಗಿ. ಅವರ ಈ ಚಿಂತನೆಗಳು ದೇಶ, ವಿದೇಶಗಳಲ್ಲಿ ಪಸರಿಸಿವೆ. ಅಶೋಕ ಚಕ್ರವರ್ತಿಯು ಬುದ್ಧನ ಶಾಂತಿ ಸಂದೇಶದಿಂದ ಪ್ರಭಾವಿತನಾಗಿ ಬೌದ್ಧಧರ್ಮ ಪ್ರಸಾರ ಮಾಡಿದನು. ಅದು ಇಂದಿಗೂ ನಮ್ಮ ರಾಷ್ಟ್ರ ಧ್ವಜದಲ್ಲಿ ಗೌರವಿಸಲ್ಪಡುತ್ತಿದೆ. ಈ ನಿಟ್ಟಿನಲ್ಲಿ ಬುದ್ಧನ ವಿಚಾರಗಳನ್ನು ಕೇವಲ ಕೇಳುವುದಕ್ಕಿಂತ, ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಬದುಕಿನ ಸಾರ್ಥಕತೆಗೆ ದಾರಿಯಾಗಲಿದೆ ಎಂದರು.

ಉಪನ್ಯಾಸಕಿ ಡಾ.ಉಮಾ ಅವರು ವಿಶೇಷ ಉಪನ್ಯಾಸ ನೀಡಿ, ರಾಜಕುಮಾರ ಸಿದ್ಧಾರ್ಥನು ಜಗತ್ತಿನ ದುಃಖಕ್ಕೆ ಮೂಲ ಕಾರಣವನ್ನು ಹುಡುಕುತ್ತಾ ಹೊರಟು, ಬೋಧಗಯಾದಲ್ಲಿ ಆರು ವರ್ಷಗಳ ಕಠಿಣ ತಪಸ್ಸಿನ ನಂತರ ಜ್ಞಾನೋದಯ ಪಡೆದು 'ಬುದ್ಧ'ನಾದನು. ಧ್ಯಾನವೆಂದರೆ ಏನನ್ನೋಪಡೆಯುವುದಲ್ಲ, ಬದಲಿಗೆ ನಮ್ಮೊಳಗಿನ ಕೋಪ, ಭಯ ಮತ್ತು ಅಹಂಕಾರವನ್ನು ಕಳೆದುಕೊಂಡು ಶಾಂತಿಯನ್ನು ಪಡೆಯುವುದು. ಇಂದಿನ ಸಮಾಜದಲ್ಲಿ ಶಾಂತಿ ಮತ್ತು ಸತ್ಯ ನೆಲೆಸಲು ಬುದ್ಧ, ಬಸವಣ್ಣ ಮತ್ತುಅಂಬೇಡ್ಕರ್‌ಅವರ ಆದರ್ಶಗಳು ಹಾಗೂ ಬೋಧನೆಗಳೇ ಕಾರಣ.

ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ, ಬೌದ್ಧಧರ್ಮದ ಅಸ್ತಿತ್ವ ಮತ್ತು ಶಿಸ್ತು ಈ ಮೂರು ತತ್ವಗಳ ಮೇಲೆ ನಿಂತಿದೆ. ಮನುಷ್ಯನು ಅಹಂಕಾರವನ್ನು ತ್ಯಜಿಸಿ, ಸನ್ಮಾರ್ಗದಲ್ಲಿ ನಡೆದರೆ ಮಾತ್ರ ಸತ್ಯವನ್ನು ಗೆಲ್ಲಲು ಸಾಧ್ಯ ಎಂದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ, ತಹಶೀಲ್ದಾರ್ ಎಂ.ಶೃತಿ, ಜಿಪಂ ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ, ಸಮಾಜದ ಮುಖಂಡ ಸೋಮಶೇಖರ್ ಬಣ್ಣದಮನಿ ಸೇರಿದಂತೆ ಮತ್ತಿತರರು ಇದ್ದರು.


ಕ್ಲಿನಿಕ್‌ಗೆ ನೋಂದಣಿ ಕಡ್ಡಾಯ: ಡಿಸಿ

ಬಳ್ಳಾರಿ: ವೈದ್ಯಕೀಯ ಪದವಿ ಪಡೆದ ನಂತರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳದೇ ಕ್ಲಿನಿಕ್ ಅಥವಾ ಆಸ್ಪತ್ರೆಗಳನ್ನು ಆರಂಭಿಸುವ ವೈದ್ಯರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಜಿಲ್ಲಾ ನೋಂದಣಿ ಮತ್ತು ಕ'ುಂದ'ುಕೊರ'ತೆಗ'ಳ' ಸಭೆ'ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

> **ಜಿಲ್ಲಾ ನೋಂದಣಿ, ಕುಂದು ಕೊರತೆಗಳ ಸಭೆ**

ನೋಂದಣಿ ಕಡ್ಡಾಯ, ಉಲ್ಲಂಘಿಸಿದರೆ ದಂಡ: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ಮತ್ತು 2009ರ ತಿದ್ದುಪಡಿ ನಿಯಮಗಳ ಪ್ರಕಾರ, ಯಾವುದೇ ವೈದ್ಯರು ಕ್ಲಿನಿಕ್, ಪಾಲಿ ಕ್ಲಿನಿಕ್, ನರ್ಸಿಂಗ್ ಹೋಮ್ ಅಥವಾ ಪ್ರಯೋಗಾಲಯಗಳನ್ನು ಆರಂಭಿಸುವ ಮೊದಲು ಜಿಲ್ಲಾಧಿಕಾರಿಗಳಿಂದ ಕಡ್ಡಾಯವಾಗಿ ಕೆಪಿಎಂಇ ನೋಂದಣಿ ಪ್ರಮಾಣಪತ್ರ ಪಡೆಯಬೇಕು.



ನೋಂದಣಿ ಮಾಡಿಕೊಳ್ಳದೆ ಅಥವಾ ನವೀಕರಣ ಮಾಡದೆ ಸಂಸ್ಥೆ ನಡೆಸುತ್ತಿದ್ದರೆ, ಅಂತಹ ಕೇಂದ್ರಗಳಿಗೆ ಪ್ರತಿ ವರ್ಷಕ್ಕೆ 25,000 ರೂ.ಗಳಂತೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದ ಅವರು, ಕಾಯ್ದೆಯ ಕಲಂ 19, 20, 21 ಹಾಗೂ 22 ರಡಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ನಕಲಿ ವೈದ್ಯರ ವಿರುದ್ಧ ಎಫ್‌ಐಆರ್: ಜಿಲ್ಲೆಯಲ್ಲಿ ಅಧಿಕೃತ ವೈದ್ಯಕೀಯ ಪದವಿ ಇಲ್ಲದೆ ಸಾರ್ವಜನಿಕರ ಆರೋಗ್ಯದೊಂದಿಗೆ ಚೆಲ್ಲಾಟವಾಡುವ ನಕಲಿ ವೈದ್ಯರ ಮೇಲೆ ತೀವ್ರ ನಿಗಾ ಇರಿಸಲಾಗಿದೆ. ಅಂತಹವರ ವಿರುದ್ಧ ನೇರವಾಗಿ ಎಫ್.ಐ.ಆರ್ ದಾಖಲಿಸಬೇಕು ಎಂದು ಆರೋಗ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

> **ಕಟ್ಟಡ ಮಾಲೀಕರಿಗೆ ಸೂಚನೆ**
>
> ತಮ್ಮ ಮನೆ ಅಥವಾ ಮಳಿಗೆಗಳನ್ನು ಆಸ್ಪತ್ರೆ, ಕ್ಲಿನಿಕ್ ಅಥವಾ ಲ್ಯಾಬ್‌ಗಳಿಗೆ ಬಾಡಿಗೆ ನೀಡುವ ಮುನ್ನ ಮಾಲೀಕರು ಎಚ್ಚರಿಕೆ ವಹಿಸಬೇಕು. ಬಾಡಿಗೆದಾರರ ಅಧಿಕೃತ ವೈದ್ಯಕೀಯ ಪ್ರಮಾಣಪತ್ರಗಳನ್ನು ಪರಿಶೀಲಿಸಿದ ನಂತರವೇ ಬಾಡಿಗೆ ಒಪ್ಪಂದ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಜಿಲ್ಲೆಯ ಆರೋಗ್ಯ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಮತ್ತು ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ಖಾತ್ರಿಪಡಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಸಭೆಯಲ್ಲಿ ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಸೇರಿದಂತೆ ಜಿಲ್ಲೆಯ ಎಲ್ಲ ತಾಲ್ಲೂಕು ಆರೋಗ್ಯ ಅಧಿಕಾರಿಗಳು, ನೋಂದಣಿ ಮತ್ತು ಕುಂದು ಕೊರತೆ ಪರಿಹಾರ ಸಮಿತಿ ಸದಸ್ಯರು ಉಪಸ್ಥಿತರಿದ್ದರು.